# ಬಿ.ಎಸ್ಸಿ
# ಎರಡನೇ ಸೆಮಿಸ್ಟರ್

ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
BE BOUNDLESS

**2021**

# ಪರಿವಿಡಿ

## ಭಾಗ ೧ – ಕನಸು

೧. ಕಾವ್ಯ – ಕಲ್ಕಿ– ಡಾ. ಕೆ. ವಿ. ಪುಟ್ಟಪ್ಪ....................................................೨–೩
೨. ಸಣ್ಣ ಕಥೆ – ಸುಳ್ಳು ಸ್ವಪ್ನ – ಕೊಡಗಿನ ಗೌರಮ್ಮ....................................೪–೬
೩. ಪ್ರಬಂಧ – ಕನಸುಗಳ ಶಕ್ತಿ – ಡಾ. ಎ. ಪಿ. ಜೆ. ಅಬ್ದುಲ ಕಲಾಂ
– ಕನ್ನಡಕ್ಕೆ ಅನುವಾದ : ಜಿ. ಎಮ್. ಮಧ್ಯಸ್ಥ....................................೭–೧೭
೪. ಓದು ಪಠ್ಯ : ಕನಸು ಮತ್ತು ಹಗಲುಗನಸು
– ವಿಶ್ವಕೋಶ : ಮೈಸೂರು ವಿ ವಿ ..............................................೧೮–೩೯

## ಭಾಗ ೨ – ಯುದ್ಧ

೧. ಭರತ–ಬಾಹುಬಲಿ ಯುದ್ಧ ಪ್ರಸಂಗ – ಗದ್ಯಾನುವಾದ
– ಕೆ. ಎಲ್. ನರಸಿಂಹಶಾಸ್ತ್ರಿ.......................................................೪೧–೪೪
೨. ಕಥೆ – ನಿಜಾಮರ ದರ್ಬಾರ, ರಜಾಕಾರರ ಕಾರಬಾರ
– ಜಂಬಣ್ಣ ಅಮರಚಿಂತ..............................................................೪೫–೫೬
೩. ಪ್ರಬಂಧ ಅಣುಚಳಿಗಾಲ : ಅಡಗಲು ಸ್ಥಳವೆಲ್ಲಿ
– ನಾಗೇಶ್ ಹೆಗಡೆ .......................................................................೫೭–೬೬
೪. ಓದು ಪಠ್ಯ – ಬಲಾಚ್ಯುತರ ಪುಣ್ಯಪ್ರಭಾವೋದಯ (ಪಂಪ ಪುರಾಣ)
– ಡಾ. ಪಿ.ವಿ. ನಾರಾಯಣ............................................................೬೭–೯೩

## ಭಾಗ ೩ – ಮಾನವೀಯತೆ

೧. ಕಾವ್ಯ – ಒಡಕು – ಗಂಗಾಧರ ಚಿತ್ತಾಲ.......................................೯೫–೯೬
೨. ಕಥೆ – ಧರ್ಮ – ಬೆಸಗರಹಳ್ಳಿ ರಾಮಣ್ಣ....................................೯೭–೧೦೪
೩. ಲೇಖನ – ಜಾತಿಗಳ ಹುಟ್ಟು ಮತ್ತು ಬೆಳವಣಿಗೆ
– ಬಿ. ಆರ್. ಅಂಬೇಡ್ಕರ್ ಅನುವಾದ : ಸಿದ್ಧಲಿಂಗಯ್ಯ..........೧೦೫–೧೧೦
೪. ಓದು ಪಠ್ಯ – ಸೈಕಲ್ ರಿಕ್ಷಾದವನ ಮಗ ಐಎಎಸ್ ಮಾಡಿದ
– ಎ. ಆರ್. ಮಣಿಕಾಂತ್ ....................................................೧೧೧–೧೨೦

## ಭಾಗ ೪ – ವೈಜ್ಞಾನಿಕ ಸಂಶೋಧನೆ

೧. ಕಾವ್ಯ – ಇಪ್ಪತ್ತನೆಯ ಶತಮಾನದ ಕೊಲಂಬಸ್
– ಕೆ.ಎಸ್. ನಿಸಾರ್ ಅಹಮದ್...............................................೧೨೨–೧೨೪
೨. ಪ್ರಬಂಧ – ಕಳಚುವುದು ಹೇಗೆ? – ಪ್ರಸನ್ನ.............................೧೨೫–೧೩೭
೩. ಲೇಖನ – ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ?
– ಡಾ. ಎಚ್. ನರಸಿಂಹಯ್ಯ (ತೆರೆದಮನ) ...........................೧೩೮–೧೪೨
೪. ಓದು ಪಠ್ಯ – ಶತಮಾನದ ಮಹಿಳಾ ವಿಜ್ಞಾನಿಗಳು
– ನೇಮಿಚಂದ್ರ......................................................................೧೪೭–೧೫೬

# ಭಾಗ ೧ – ಕನಸು

## ಆಶಯ:

"ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು,
ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಡೆಯಲಾಗುವುದಿಲ್ಲ"

– ಡಾ. ಗಿರೀಶ್ ಕಾರ್ನಾಡ್
ನಾಟಕ : ಯಯಾತಿ

ಕನಸುಗಳು ಮನುಷ್ಯನ ಬದುಕಿನ ಆಶಾಕಿರಣ. ಅವನ ಬದುಕಿನ ಪ್ರತಿಹೆಜ್ಜೆಯನ್ನು ಮುನ್ನೆಡೆಸುವ ಸ್ಫೂರ್ತಿಯ ಚಿಲುಮೆ ಈ ಕನಸುಗಳು. ಕನಸುಗಳನ್ನು ಎರಡು ವಿಧವಾಗಿ ವರ್ಗೀಕರಿಸಬಹುದು. ೧. ಜಾಗೃತ ಮನಸ್ಸಿನ ಕನಸುಗಳು ೨. ಸುಪ್ತ ಮನಸ್ಸಿನ ಕನಸುಗಳು. ಭಾರತದ ಮಾಜಿ ರಾಷ್ಟ್ರಪತಿಗಳು ಮತ್ತು ಖ್ಯಾತ ವಿಜ್ಞಾನಿಗಳೂ ಆದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ "ನಿದ್ದೆಯಲ್ಲಿ ಕಾಣುವಂತದ್ದು, ನಿದ್ದೆಗೆಡುವಂತೆ ಮಾಡುವುದಿದೆಯಲ್ಲ. ಅದೇ ನಿಜವಾದ ಕನಸು" ಎಂದು ಕನಸಿನ ಸ್ವರೂಪವನ್ನು ಕುರಿತು ವಿವರಿಸಿದ್ದಾರೆ.

ಕುವೆಂಪು ಅವರ 'ಕಲ್ಕಿ' ಕವಿತೆಯು ಅವರ ಮನಸ್ಸಿನಲ್ಲಿ ಉಂಟು ಮಾಡಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ತಾರತಮ್ಯಗಳ ಪ್ರತಿಕ್ರಿಯೆಯಾದರೆ, ಕೊಡಗಿನ ಗೌರಮ್ಮ ಅವರ 'ಸುಳ್ಳು ಸ್ವಪ್ನ' ಕಥೆಯು ಕಟ್ಟಿಕೊಂಡ ಪ್ರೇಮದ ಕನಸು ವ್ಯರ್ಥವಾದ ಬಗೆಯನ್ನು ವಿವರಿಸುತ್ತದೆ. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ 'ಕನಸುಗಳ ಶಕ್ತಿ' (ಅನುವಾದಿತ) ಜೀವನ ಪ್ರೇರಣೆ ಮತ್ತು ಸಾಧನೆಯ ಬಗ್ಗೆ ಚರ್ಚಿಸುತ್ತದೆ. 'ಕನಸು ಮತ್ತು ಹಗಲುಗನಸು' ಎಂಬ ಪ್ರಬಂಧವು ಕನಸುಗಳ ಮನೋವೈಜ್ಞಾನಿಕ ವಿವರಣೆಯಾಗಿದೆ.

ಒಟ್ಟಾರೆ 'ಕನಸು' ಎಂಬ ವಿಷಯವನ್ನು ಅಮೂಲಾಗ್ರವಾಗಿ ಕನ್ನಡ ಸಾಹಿತ್ಯದ ವಿವಿಧ ರೂಪಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ದೀಪದ ಬೆಳಕಿನಲ್ಲಿ ನಿಮ್ಮ ಅನುಭವದ ಮೂಲಕ ಮತ್ತಷ್ಟು ವಿವರಿಸುವಿರೆಂದು ಹಾಗೂ ಕನಸುಗಳ ಸಾಕಾರ ಮಾಡಿಸುವಿರೆಂದು ಭಾವಿಸುತ್ತೇನೆ

– ಡಾ. ಬಿ. ಸಿ. ರಾಜಕುಮಾರ್

# ೧. ಕಾವ್ಯ
# ಕಲ್ಕಿ

**– ಡಾ. ಕೆ. ವಿ. ಪುಟ್ಟಪ್ಪ**

ನಿದ್ದೆಯ ಲೋಕದಿ ಕನಸಿನ ಬೀದಿ
ತಿರುಗಿದೆ, ತೊಳಲಿದೆ, ತಪ್ಪಿತು ಹಾದಿ!
ಮುಂದೆ ಕಾಣೆಸಿತೊಂದು ಅರಣ್ಯ,
ಅನಂತವಾದುದು ವನ ವಿಸ್ತೀರ್ಣ
ಹೆಮ್ಮರಗಳು ಕಿಕ್ಕಿರಿದುವು ಅಲ್ಲಿ,
ಬಿಡುವಿಲ್ಲದೆ ಹೆಣೆದಿದ್ದವು ಬಳ್ಳಿ;
ಮುಳ್ಳಿನ ಪೊದೆಗಳು, ಗರಗಸವಳ್ಳಿ,
ಪ್ರೇತದಂತೆ ಪಾಪಾಸಿನ ಕಳ್ಳಿ!
    ನುಗ್ಗಿದೆ ನಾನಾ ಹಳುವಿನಲಿ;
    ಆ ಕನಸಿನ ಹೆಗ್ಗಾಡಿನಲಿ.
ಅಲ್ಲಿದ್ದುದು ಬೆಳೆಕೆಂಬುವುದಲ್ಲ.
    ಕತ್ತಲು ಅಲ್ಲ!
ಬೆಳಕೋ ಕತ್ತಲೊ ಶಿವನೇ ಬಲ್ಲ!
    ಶಿವನೇ ಬಲ್ಲ!
ಪ್ರೇತಗಳಂದದಿ ಭೀತಿಯ ಛಾಯೆ
    ಸುಳಿಸುಳಿದಾಡಿತು ಅಲ್ಲಿ,
    ಆ ಘೋರ ಕಾನನದಲ್ಲಿ!
ನಡೆದೇ ನಡೆದೇ ನಡೆದೂ ನಡೆದೆ,
  ಸಾಹಸ ಬಿಡದೆ, ಎದೆಗೆಡದೆ
    ಸುತ್ತಲು ಮೌನ!
    ಶ್ಮಶಾನ ಮೌನ!
ಕಾಡನು ದಾಟಿದೆ: ಮುಂಗಡೆ ಬೆಟ್ಟ;
ಶಿಖರವೊ ನಿಂತಿದೆ ಮುಗಿಲಿನ ಮುಟ್ಟ!
ಹತ್ತೀ ಹತ್ತೀ ಹತ್ತೀ ಹತ್ತಿ

ಕಡೆಯಲಿ ಸಿಕ್ಕಿತು ನಡುನೆತ್ತಿ!
ನೋಡಿದೆನಲ್ಲಿ
ನಡುನೆತ್ತಿಯಲಿ!––
ಯಾವುದೊ ಊರು ಆ ಊರು?
ಬರಿ ಮಾಯದ ಊರು!
ಧನಿಕರ ಮನೆಗಳು ಒಂದೆಡೆ ನಿಂತಿವೆ,
ಬಡವರ ಗುಡಿಸಲು ಒಂದೆಡೆ ನಿಂತಿವೆ
ಜ್ಯೋತಿಯ ಮಣಿದೀಪಗಳಲ್ಲಿ;
ಕತ್ತಲು, ಕಗ್ಗತ್ತಲು ಇಲ್ಲಿ!
ಹಾಡಿನ ನುಣ್ದನಿಯತ್ತ,
ಗೋಳಿನ ನೀಳ್ದನಿಯಿತ್ತ.
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರುಗುವರಲ್ಲಿ!
ಆ ಕಡೆ ಉದ್ಯಾನ,
ಈ ಕಡೆ ಶ್ಮಶಾನ!
ಪೀತಾಂಬರಗಳ ಹೊದೆಯುವರಲ್ಲಿ,
ಕೌಪೀನಕೆ ಚಿಂದಿಯು ಸಿಗದಿಲ್ಲಿ!
ನೋಡುತ ನೋಡುತ ನೋಡುತ್ತಿದ್ದೆ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ;
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಿಲುಗಳಿಗೇ ಬೆಂಕಿಯು ಬಿದ್ದು
ಧಗಧಗ ಧಗಧಗ ಹೊತ್ತಿದುದು,
ಭುಗಿಭುಗಿಲೆನ್ನುತ ಮುತ್ತಿದುದು!
ಮುಗಿಲಿನವರೆಗೂ ಬಾನಿನ ವರೆಗೂ
ದಿಕ್ಕು ದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಬಾಚಿ!
ಬಡವರ ಸಿಟ್ಟದು ಏನು ಪಿಶಾಚಿ?
ಬಡಬಾಗ್ನಿಯೆ ತಲೆತಗ್ಗಿತು ನಾಚಿ!

ಶ್ರೀಮಂತರ ಸೌಧಂಗಳ ನೆತ್ತಿ
ಸೀದುದು ಬಡಹೊಟ್ಟೆಯ ಉರಿಹೊತ್ತಿ!
ದೂರದ ಆ ಗಿರಿಶೀಖರದ ಮೇಲೆ
ನನಗೂ ತಟ್ಟಿತು ಬೆಂಕಿಯ ಜ್ವಾಲೆ!
ಕೇಳಿಸಿತೊಡನೆಯೆ ಹಾಹಾಕಾರ!
    ಮಕ್ಕಳುಮರಿಗಳ ಚೀತ್ಕಾರ!
ಗರ್ಭಿಣಿ ಸ್ತ್ರೀಯರು, ಬಾಣಂತಿಯರು,
ನವ ವಧುಗಳು ಮೇಣ್ ಶ್ರೀಮಂತೆಯರು;
ಹುಡುಗರು, ಮುದುಕರು, ಕುಂಟರು, ಕಿವುಡರು;
ಬಡವರ ಗೋಳನು ಕೇಳದ ಕಿವುಡರು;
ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಬಡವರ ಹಸಿವೆಗೆ ಮೌಢ್ಯವ ಕೊಟ್ಟು
    ಸುಖಸಂಪತ್ತನು ಕೊಂಡವರು,
    ಮೃಷ್ಟಾನ್ನವನೇ ಉಂಡವರು;
ಗುರುಗಳು ಶಿಷ್ಯರು ಮನೆಗಳು ಮಠಗಳು
ಎಲ್ಲರು ಬೆಂದರು ಬಡಬಾಗ್ನಿಯಲಿ,
ಬಡವರ ಬಗ್ಗರ ಜಠರಾಗ್ನಿಯಲಿ,
ಬಡವನ ಜಠರಾಗ್ನಿಯೇ ಬಡಬಾಗ್ನಿ!
ಬಡವನೆ ಕಲಿಯುಗದಂತ್ಯದ ಕಲ್ಕಿ!

    ನೋಡುತಲಿದ್ದೆ;
    ನೋಡುತಲಿದ್ದೆ!
ಕಣ್ಮರೆಯಾಯಿತು ಆ ದೃಶ್ಯ!
ಏನಿದು ಈ ದೃಶ್ಯ?
    ರಕ್ತದ ಜಲಪಾತ!
    ನರಮಾಂಸದ ನಾತ!
ಧುಮುಧುಮುಕುತಲಿದೆ ರಕ್ತದ ರಣಧುನಿ!
ಹೊರ ಹೊಮ್ಮುತ್ತಿದೆ ನರರಾರ್ತಧ್ವನಿ!
ಗಗನವು ರಕ್ತ! ಭೂಮಿಯು ರಕ್ತ!
ನೋಡಿದರೆತ್ತಲು ರಕ್ತ! ರಕ್ತ!

ಅಯ್ಯೋ ರಕ್ತ!
ಧುಮುಕುವ ಶೋಣಿತ ಗಿರಿಝರಿಯಲ್ಲಿ

## ಕವಿ ಪರಿಚಯ

ಕುವೆಂಪು(ಜನನ:೨೯–೧೨–೧೯೦೪ ನಿಧನ:೧೧–೧೧–೧೯೯೪): ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಕನ್ನಡದ ಅಗ್ರ ಮಾನ್ಯ ಕವಿ, ಕಾದಂಬರಿಕಾರ, ನಾಟಕಕಾರ, ಕಥೆಗಾರ, ವಿಮರ್ಶಕ, ಚಿಂತಕ, ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು ರಚನೆ ಮಾಡದ ಪ್ರಕಾರವಿಲ್ಲವೇನೊ ಎನ್ನುವಷ್ಟರ ಮಟ್ಟಿಗೆ ಅವರ ಸಾಹಿತ್ಯ ಪ್ರತಿಭೆ ದೈತ್ಯವಾದುದು. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ರಚನೆ ಹಾಗೆಯೇ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಎಂಬ ಎರಡು ಕಾದಂಬರಿಗಳನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕಿದೆ.

**ಪ್ರಶಸ್ತಿಗಳು:** ಭಾರತಿಯ ಜ್ಞಾನಪೀಠ ಪ್ರಶಸ್ತಿ (ಶ್ರೀ ರಾಮಯಾಣ ದರ್ಶನಂ– ೧೯೬೭), ಕರ್ನಾಟಕ ರತ್ನ (೧೯೯೨), ಪದ್ಮಭೂಷಣ (೧೯೫೮), ಪದ್ಮವಿಭೂಷಣ (೧೯೮೮), ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ (೧೯೫೫) ಹೀಗೆ ಹಲವು ಪ್ರಶಸ್ತಿಗಳ ಮೂಲಕ ಕನ್ನಡ ಸಾಹಿತ್ಯ ಮತ್ತು ಭಾಷೆಗೆ ರಾಷ್ಟ್ರೀಯ ಮನ್ನಣೆಯನ್ನು ತಂದು ಕೊಟ್ಟವರು ಕುವೆಂಪು. ಕನ್ನಡ ಸಾಹಿತ್ಯಕ್ಕೆ ಮೊದಲ ಭಾರತಿಯ ಜ್ಞಾನಪೀಠ ಪ್ರಶಸ್ತಿ (೧೯೬೭) ತಂದು ಕೊಟ್ಟ ಹಿರಿಮೆ ಕುವೆಂಪು ಅವರದು. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ, ಮುಖ್ಯಸ್ಥರಾಗಿ ಉಪಕುಲಪತಿಗಳಾಗಿ ನಿವೃತ್ತಿ ಹೊಂದಿದವರು ಕುವೆಂಪು.

## ಶಬ್ದಾರ್ಥ ವಿವರಣೆ:

**ಕಲ್ಕಿ:** ವಿಷ್ಣುವಿನ ಹತ್ತನೆಯ ಅವತಾರ ಹಾಗೂ ಕೊನೆಯ ಅವತಾರ (ಗರುಡ ಪುರಾಣ) ಸಾಹಿತ್ಯದಲ್ಲಿ ಉಲ್ಲೇಖವಾಗಿದೆ. ಕಲಿ ಮಹಾಪುರುಷನ ಪ್ರಭಾವದಿಂದ ಜನರಲ್ಲಿ ಧರ್ಮ, ದಯೆ ಮೊದಲಾದ ಗುಣಗಳು ಅಳಿದು ಅಧರ್ಮ ಅತಿ ಹೆಚ್ಚಾದಾಗ ವಿಷ್ಣು ಕಲ್ಕಿಯಾಗಿ ಅವತರಿಸಿ ಅಶ್ವಾರೂಢನಾಗಿ ಖಡ್ಗ ಹಿಡಿದು ಮ್ಲೇಚ್ಛ ಸಮೂಹವನ್ನು ಸಂಹರಿಸಿ ಜಗತ್ತಿನಲ್ಲಿ ಧರ್ಮ ಸಂರಕ್ಷಣೆ ಮಾಡಿ ಶಾಂತಿ, ನ್ಯಾಯ, ಧರ್ಮಗಳನ್ನು ನೆಲೆಗೊಳಿಸಿ ಸತ್ಯಯುಗ ಸ್ಥಾಪಿಸುತ್ತಾನೆಂದು ನಂಬಿಕೆ.

ಕಲ್ಕಿ ಕವಿತೆಯನ್ನು ಕುವೆಂಪು ಅವರ ಪಾಂಚಜನ್ಯ (೧೯೩೩) ಕವನ ಸಂಕಲನದಿಂದ ಆರಿಸಿ ಕೊಳ್ಳಲಾಗಿದೆ. ಇದು ಅವರ ಎರಡನೆಯ ಕವನ ಸಂಕಲನ.

**ಪ್ರಶ್ನೆಗಳು:**

೧. ಸಮಾಜದ ಬಗ್ಗೆ ಕವಿಯಲ್ಲಿ ಕಾಣುವ ಕಳಿಕಳಿ ಈ ಕವಿತೆಯಲ್ಲಿ ಹೇಗೆ ಪ್ರತಿಬಿಂಬಿತವಾಗಿದೆ?

೨. ಕಲ್ಕಿ ಕವಿತೆಯಲ್ಲಿ ಅಭಿವ್ಯಕ್ತಿಗೊಂಡಿರುವ ಅಸಮಾನತೆಯನ್ನು ಚಿತ್ರಿಸಿ.

೩. ನಿರೂಪಕನ ಕನಸಿನ ಸ್ವರೂಪವನ್ನು ವಿವರಿಸಿ.

೪. ಕಲ್ಕಿ ರೂಪವನ್ನು ಚಿತ್ರಿಸಿ.

೫. "ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಕ್ರಾಂತಿಗೆ ಎಡೆಕೊಡುತ್ತವೆಯೇ" ಈ ಹೇಳಿಕೆಯನ್ನು ಈ ಕವಿತೆ ಹಿನ್ನಲೆಯಲ್ಲಿ ಚರ್ಚಿಸಿ.

೬. ಕಲ್ಕಿಯ ಆಗಮನದ ಪ್ರಸಂಗವನ್ನು ವಿವರಿಸಿ.

# ೨. ಸಣ್ಣಕಥೆ
# ಸುಳ್ಳು ಸ್ವಪ್ನ

**– ಕೊಡಗಿನ ಗೌರಮ್ಮ**

೨೬–೫–೨೮

ಕಾಲ ಕಳೆಯುವುದೊಂದು ದೊಡ್ಡ ಭಾರ. ಅದನ್ನು ಹೊರುವ ಕಷ್ಟವನ್ನು ಬರೆಯಲಾರೆ. ಮಾತಾಡಲು ಯಾರೂ ಇಲ್ಲ. ಓದಲು ನನಗೆ ಬೇಕಾದ ಪುಸ್ತಕವಿಲ್ಲ. ಇದ್ದರೂ ಹೇಗೆ ತಾನೆ ಓದಲಿ? ಅವನ ಮನೆಯಿಂದ ಬರುವಾಗ ನನ್ನ ಪುಸ್ತಕವನ್ನು ಮರೆತು ಬಂದಿರುವೆನು. ಪುಸ್ತಕವು ಮರೆತು ಹೋಯ್ತು – ಹೋಗಲಿ, ಆದರೆ ಅದಕ್ಕೂ ಹೆಚ್ಚಿನದನ್ನು ತರಲಾರದೆ ಬಂದಿರುವೆನು. ಶಾಂತೆಯ ಕಾಗದ ಬಂದಿದೆ. ಬೇಕಾದ ಹಾಗೆ ಬರೆದಿರುವಳು. ಆದರದು ನನ್ನ ಉರಿಯುವ ಹೃದಯನ್ನು ತಂಪುಮಾಡಬಲ್ಲುದೇ?ಮನಸ್ಸಿಗೆ ಸುಖ ಕೊಡಬಲ್ಲುದೆ? ಯಾರೊಡನೆ ಹೇಳಲಿ......ಹೇಳುವಂತಹ ಮಾತುಗಳಲ್ಲಿ.....ಏನು ಮಾಡಲಿ.....

ಜ್ಞಾಪಕಶಕ್ತಿಯನ್ನು ದೇವರು ಮನುಷ್ಯನಿಗೆ ಕೊಡಬಾರದಿತ್ತೆಂದು ತೋರುವುದು. ಎಷ್ಟು ಕ್ರೂರಿ! ಎಂತಹ ಹಠಮಾರಿ! ತಪ್ಪಿಸಿಕೊಳ್ಳಲು ನನ್ನ ಪ್ರಯತ್ನವೆಲ್ಲವೂ ನಿಷ್ಫಲ. ಯಾವ ರೀತಿಯಿಂದಲೂ ಜ್ಞಾಪಕವು ಬಂಧಿಸಿರುವ ಬಲೆಯಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ನಮ್ಮ ಮನೆಯ ಸುತ್ತಮುತ್ತ ಸೃಷ್ಟಿ ತನ್ನ ಸೌಂದರ್ಯದ ಬೀಡನ್ನು ಕಟ್ಟಿದೆ. ಅದರ ವೈಭವಪೂರ್ಣವಾದ ಸೌಂದರ್ಯವನ್ನು ನೋಡಹೊರಟರೆ ತಾನೆ ಜ್ಞಾಪಕದ ಕ್ರೂರತ್ವವು ತಪ್ಪುವುದೆ? ಇಲ್ಲ – ಸಾಧ್ಯವಿಲ್ಲ. ಇನ್ನಾವುದನ್ನು ಮೊರೆಹೋಗಲಿ? ಪುಸ್ತಕವನ್ನೇ? ಅದೂ ಆಯಿತು. ಒಣ ಪುಸ್ತಕಕ್ಕೂ ಚಿಗುರು ಜ್ಞಾಪಕಕ್ಕೂ ಎಲ್ಲಿಯ ಸಾಟಿ? ಅಮ್ಮ, ಅಣ್ಣ, ಲಲಿತ, ನಾಡಿದ್ದು ಊರಿಗೆ ಹೋಗುವರು. ಮನೆಯಲ್ಲಿ ನಾನು ಮಾತ್ರ. ಜ್ಞಾಪಕದ ಹಬ್ಬ ನನ್ನನ್ನು ಕುಯಿದು ತಿನ್ನಬಹುದು. ವಿಶ್ವ ನಿಯಮವೇ ಹೀಗೇನು ಕಷ್ಟ – ಎತ್ತ ನೋಡಿದರೂ ಕಷ್ಟ ಯಾವನಿಗೂ ಸುಖವಿಲ್ಲ. ನನಗೂ ಒಂದು ತರದ

ಕಷ್ಟಬೇಡವೆ? ಬೇಕು! ಹಾಗಾದರೆ ನಾನೇಕೆ ದುಃಖಿಸಲಿ? ಹೇಳಿದರೆ ಪ್ರಯೋಜನವೇನು? ಸುಮ್ಮನಿರುವುದೇ ಮೇಲೆಂದು ತೋರುವುದು. ಆದರೆ, ಸುಮ್ಮನೆಂತಿರಲಿ?

೩–೬–೨೮

ಮನೆಯವರೆಲ್ಲರೂ ಊರಿಗೆ ಹೋಗಿರುವರು. ಮನೆಯಲ್ಲಿ ನಾನೂ ಅಕ್ಕ ಇಬ್ಬರೇ. ಅಕ್ಕನಿಗೆ ಮನೆಗೆಲಸ, ಅದು ಮುಗಿದೊಡನೆ ರಾಮಾಯಣ. ನನಗೆ ಸದಾ ನೆನಪಿನ ಹಬ್ಬ.... ಮರೆಯಲು ನೆನಸಿದಂತೆಲ್ಲಾ ಹೆಚ್ಚುತ್ತಿರುವ ನೆನಪು.... ನಿನ್ನೆ ತಾನೆ ಅವನ ಕಾಗದವು ಬಂದಿದೆ. ಎಂತಹ ಒರಟು ಒಕ್ಕಣೆ.....ಪಾಪ! ನನ್ನ ಹೃದಯಾಂತರಾಳದಲ್ಲಿ ಉರಿಯುತ್ತಿರುವ ಬೆಂಕಿಯನ್ನು ಅವನು ಹೇಗೆ ತಾನೆ ತಿಳಿಯಬಲ್ಲನು? ಅವನ ಕಾಗದವು ಒರಟಾದರೂ ಅದರಲ್ಲಿ ಸವಿ ಇತ್ತು. ತುಟಿಗಳು ಡೊಂಕಾದರೂ ಒಲವಿನ ಮುತ್ತು – ಆ ಮುತ್ತಿನಲ್ಲಿ ನಲಿವು ಡೊಂಕೇ? ಅವನನ್ನು ಪ್ರೀತಿಸುವ ನನಗೆ ಅವನ ಕಾಗದವು ಒರಟಾದರೂ ಸವಿ ಕಮ್ಮಿಯಾಗುವುದೇ?

ಅವನು ವಾರಕ್ಕೊಮ್ಮೆ ನನಗೆ ಬರೆಯುವನು; ಪ್ರತಿ ನಿಮಿಷ ಅವನ ಕಾಗದ ಬಂದರೂ ನನಗೆ ತೃಪ್ತಿಯಿಲ್ಲ. ಇನ್ನು ವಾರಕ್ಕೊಂದು ಬಾರಿ ಬರೆಯುವ ನಾಲ್ಕು ಗೆರೆಗಳಿಂದ ನನ್ನ ಹೃದಯದ ತಾಪವು ಶಾಂತವಾಗುವುದೇ? ಏನನ್ನು ಯೋಚಿಸುತ್ತಿರುವೆ ಎಂದು ಅಕ್ಕ ಕೇಳುತ್ತಾಳೆ. ನಾನೇನೆಂದು ಪ್ರತ್ಯುತ್ತರ ಕೊಡಲಿ? ಸುಳ್ಳು ಹೇಳಲೇ? ಸ್ವಾಭಾವಿಕವಾಗಿ ನಾನು ಸುಳ್ಳು ಹೇಳುವುದು ಅಪರೂಪ. ಆದರೀಗ ಹೇಳದಿದ್ದರಾಗುವುದೇ? ಅಕ್ಕನಿಗೆ ನಾನೆಂದರೆ ಬಲು ಪ್ರೀತಿ. ನಾನು ಸ್ವಲ್ಪ ಬೇಸರಪಟ್ಟು ಕೊಂಡರೆ ಅವಳಿಗೆ ಬಲು ಬೇಸರವಾಗುವುದು. ಅಂತಹ ಪ್ರೀತಿಪಾತ್ರಳಾದ ಅಕ್ಕನನ್ನು ವಂಚಿಸುವುದು ನನಗೆ ನಾಚಿಕೆಯಾಗುವುದು....ಏನು ಮಾಡಲಿ?....

ಕೃಪಾ ನಾಲ್ಕು ಗಂಟೆಗೆ ಬರುವಳಂತೆ. ಬಂದರೆ ಅವನ ಸುದ್ದಿ ಅವಳಿಂದ ತಿಳಿದುಕೊಳ್ಳಬಹುದು. ಆದರೆ ಅವಳೊಡನೆ ಹೇಗೆ ಕೇಳಲಿ? ಕೇಳಿದರೆ ನನ್ನ ಮಾತುಗಳಿಂದ ನನ್ನ ಮನಸ್ಸನ್ನವಳು ಊಹಿಸಿದರೆ! ಇಲ್ಲ ಕೃಪಾ ಆ ತರದ ಆಲೋಚನೆಗಳಿಗೆ ಎಡೆಕೊಡತಕ್ಕವಳಲ್ಲ – ಅವಳೊಡನೆ ಹೇಗಾದರೂ ಕೇಳಿಯೇ ಬಿಡುವನು – ಕೇಳದೆ ಹೇಗೆ ತಾನೆ ಇರಲಿ....

ಅಯ್ಯೋ! ನಾಲ್ಕು ಗಂಟೆ ಬೇಗ ಬರಬಾರದೆ? ಪ್ರತಿಯೊಂದು ನಿಮಿಷವು ಒಂದೊಂದು ಯುಗವಾಗಿ ಏಕೆ ಬೆಳೆಯುತ್ತಿದೆ.

೪–೬–೨೮

ಕೃಪಾ ಬಂದೂ ಆಯಿತು. ಅವಳೊಡನೆ ಕೇಳಿಯೂ ಆಯಿತು. ನಿನ್ನೆ ರಾತ್ರಿಯೆಲ್ಲ ಅದೇ ಸುದ್ದಿ.... ಕೃಪೆಗೆ ಹೇಳಿ ಹೇಳಿ ಬೇಸರ ಬಂದು ಹೋಗಿದೆ. ನನಗೆ...ಅದರೆ ನನಗೆ... ಕೇಳಿದಷ್ಟೂ ತೃಪ್ತಿಯಿಲ್ಲ. ಇನ್ನೊಮ್ಮೆ ಕೇಳಲೇ – ಕೇಳಿದರೆ ಅವಳೇನೆಂದು ತಿಳಿದುಕೊಳ್ಳುವಳು! ಏನಾದರೂ ತಿಳಿದುಕೊಳ್ಳಲಿ – ಕೇಳಿಯೇ ಬಿಡುವೆನು... ಬೇಡ.... ಕೇಳಲಾರೆ.... ಉರಿಯುವ ಹೃದಯವೇ ಸ್ವಲ್ಪ ಸಹಿಸು... ಕೃಪಾ ಕೂಗುತ್ತಿರುವಳು.... ಏಕಿರಬಹುದು.... ನನಗೊಂದು ಕಾಗದವಿದೆಯಂತೆ. ಯಾರದಾಗಿರಬಹುದು! ಅವನದೇ? ಅಲ್ಲದೆ ಹೋದರೆ.... ನನ್ನ ಆಸೆಗೆ ಎಂತಹ ಆಘಾತ! ಹೌದು – ಅವನದೇ.... ಏನೆಂದು ಬರೆದಿರುವನು? ಬರುವನಂತೆ... ನಾಳೆ ಬರುವನಂತೆ.... ಹೃದಯವೇ ಸಂತೋಷದಿಂದ ಬಿರಿಯದಿರು.... ನಾಳೆ! ಎಂದಿಗೆ ನಾಳೆಯಾಗುವುದು! ಈ ದಿನ ಬೇಗನೆ ಏಕೆ ಮುಗಿಯುವುದಿಲ್ಲ.... ನಿದ್ರೆಗೂ ನನ್ನ ಮೇಲೆ ದಯವಿಲ್ಲವೇಕೆ?......

೬–೬–೨೮

ಎರಡು ದಿನಗಳೆಷ್ಟು ಬೇಗ ಕಳೆದುಹೋದವು? ಭಾರವಾದ ಸಮಯವು. ಹೊರಲಾರದಾದ ಸಮಯವು ಅವನಿದ್ದ ಎರಡು ದಿನ ಎಷ್ಟು ಬೇಗ ಹಾರಿಹೋಯಿತು? ಆ ಎರಡು ದಿನಗಳು ಮುಗಿಯದೆ ಇರಬಾರದಿತ್ತೆ.... ಕಳೆದ ಆ ಸುಖಮಯವಾದ ದಿನಗಳು ಇನ್ನು ಮುಂದೆ ಬರುತ್ತವೆಯೇ.... ಬರದಿದ್ದರೇನು! ....ಆ ನೆನಪು, ಆ ಸವಿ ಸ್ಮೃತಿಯು ಸದಾ ಹೃದಯದಲ್ಲಿ ಜಾಗ್ರತವಾಗಿಯೇ ಇರುವುದು....

ನಿನ್ನೆ ದಿನವನ್ನು ನೆನಸಿಕೊಂಡರೆ ನನ್ನ ಮನಸಿನಲ್ಲಾಗುವ ಭಾವನೆಗಳನ್ನು ಬರೆಯಲಾರೆ.... ಹೇಗೆ ತಾನೆ ಬರೆಯಲಿ? ಬರೆದು ಪೂರೈಸುವುದಾದರೂ ಹೇಗೆ? ಬರೆದಂತೆ ಹೆಚ್ಚುವುದು – ದೇವಾ! ಅಂತಹ ದಿನಗಳು ಇನ್ನೂ ಬರುವವೇ?

ನಾನು ಆ ದಿನ ಐದು ಗಂಟೆ ಹೊಡೆಯುವ ಮೊದಲೇ ಹಾಸಿಗೆಯನ್ನು ಬಿಟ್ಟು ಎದ್ದಿದ್ದೆ. ಬೆಳೆಕೂ ಇನ್ನೂ ಸರಿಯಾಗಿ ಹರಿದಿರಲಿಲ್ಲ. ಎದ್ದು ಮುಖ ತೊಳೆದುಕೊಂಡು ಬರುವಾಗ ನಾನು ನೆಟ್ಟು ಪ್ರೀತಿಯಿಂದ ಬೆಳೆಸಿದ ಮಲ್ಲಿಗೆಯ ಗಿಡದಿಂದ ಹೂ ಕುಯಿದು ಬೊಗಸೆಯಲ್ಲಿ ತರುತ್ತಿದ್ದೆ. ಬರುವಾಗ ಇದಿರಾದ, ಅವನೂ ಎದ್ದು ಮುಖ ತೊಳೆಯಲಿಕ್ಕೆ ಬರುತ್ತಿದ್ದ. ನೋಡಿದೊಡನೆ ನನ್ನ ಮನಸ್ಸಿನಲ್ಲೇನಾಯಿತೋ ಹೇಳಲಾರೆ.... ಹೇಳಲು ಪ್ರಯತ್ನಿಸಿದಷ್ಟೂ ಹೇಳುವುದು ಅತಿಕಷ್ಟವಾಗಿ ತೋರುತ್ತದೆ.... ನನ್ನ ಆಗಿನ ಮನಸ್ಸಿನ ಭಾವವು ಬರೆವಣಿಗೆಗೆ ನಿಲುಕುವಂತಹದಲ್ಲ. ಯಾವಾಗಲೂ ನನಗೆ ಅವನನ್ನು ನೋಡಿದಾಗ ಹಾಗಾಗುವುದು. ಎಷ್ಟೆಷ್ಟು ಮುಚ್ಚಿಡಲು ಪ್ರಯತ್ನಿಸಿದರೂ ನನ್ನ ಕಣ್ಣುಗಳು ಹೃದಯಾಂತರಾಳದಿಂದ ಆ ಭಾವನೆಗಳನ್ನು ಹೊರಗೆಡವಿ ಬಿಡುವುವು... ನನ್ನನ್ನು ನೋಡಿ 'ಬೆಳಗಾಗುವ ಮೊದಲೇ ಏಕೆ ಎದ್ದೆ!' ಎಂದು ಕೇಳಿದ. ನನ್ನ ಬಾಯಿಂದ ಮಾತುಗಳು ಹೊರಡಲಿಲ್ಲ. ಕೈಯಲ್ಲಿದ್ದ ಆಗ ತಾನೆ ಕುಯಿದ ಮಲ್ಲಿಗೆಯ ಮೊಗ್ಗೆಗಳನ್ನು ಅವನ ಮುಖಕ್ಕೆರಚಿ ಅಲ್ಲಿಂದ ಓಡಿ ಹೊಗಿಬಿಟ್ಟೆ. ನನ್ನ ವಿಚಿತ್ರ ವ್ಯವಹಾರವನ್ನು ನೋಡಿ ಅವನೇನು ಗ್ರಹಿಸಿದನೋ ತಿಳಿಯದು.... ಸಾಯಂಕಾಲ ನಾವೆಲ್ಲರು ತಿರುಗಾಡುವುದಕ್ಕೆ ಹೊರಟೆವು. ಅಂದಿನ ಸಾಯಂಕಾಲ ಸೃಷ್ಟಿಯು ಸೌಂದರ್ಯದಿಂದ ಇನ್ನಾವಾಗಲೂ ಮೆರೆದಿದ್ದುದನ್ನು ನಾನು ನೋಡಿರಲಿಲ್ಲ. ಬಹುಶಃ ನನ್ನೊಡನೆ ಅವನಿದ್ದುದರಿಂದ ಪ್ರಕೃತಿಯು ಅಂದು ನನ್ನ ಕಣ್ಣುಗಳಿಗೆ ಅಷ್ಟು ಮನೋಹರವಾಗಿ ತೋರಿರಬಹುದು. ಹೀಗೆಂದಿಗೂ ಹೇಳಲಾರೆ..... ಆದರೆ ಆ ಸಾಯಂಕಾಲವು ಎಂದೆಂದಿಗೂ ನನ್ನ ಮನಸ್ಸಿನಿಂದ ಮಾಯವಾಗಲಾರದು... ಕೃಪಾ ಮತ್ತು ಅಕ್ಕ ಸ್ವಲ್ಪ ಮುಂದೆ ಹೋಗುತ್ತಿದ್ದರು. ನಾವಿಬ್ಬರೂ ಜೊತೆಯಲ್ಲಿ ಸ್ವಲ್ಪ ಹಿಂದಿನಿಂದ ಹೋಗುತ್ತಿದ್ದೆವು. ಕೃಪೆಯೂ ಅಕ್ಕನೂ ಏನೇನು ಮಾತುಗಳನ್ನಾಡುತ್ತಿದ್ದರೋ ತಿಳಿಯದು – ಅವನ ಮಾತುಗಳೆಲ್ಲ ಕೇಳುತ್ತಲಿದ್ದರೂ ಮನಸ್ಸೆಲ್ಲವೂ ಬೇರೆ ಕಡೆ ಇದ್ದುದರಿಂದ ಮಾತುಗಳ ಅರ್ಥವಾಗುವ ಸಂಭವವಿರಲಿಲ್ಲ. ಹೋಗುತ್ತಿದ್ದಂತೆಯೇ ಅವನು ನಿಂತ. ನಾನೂ ಅವನೊಡನೆ ನಿಂತೆ. ಅಕ್ಕನೂ ಕೃಪೆಯೂ ಮುಂದೆ ಹೋಗುತ್ತಿದ್ದವರು ನಾವು ನಿಂತುದನ್ನು ನೋಡಲಿಲ್ಲ. ಮಾತನಾಡುತ್ತ ಇನ್ನೂ ಮುಂದೆ ಹೋದರು. ಎಷ್ಟು ಹೊತ್ತು ನಾವಿಬ್ಬರು ಹಾಗೆ ನಿಂತಿದ್ದೆವೋ ತಿಳಿಯದು. ಕೊನೆಗೆ ಅವನೇ ಮೌನಭಂಗಮಾಡಿ ಕೇಳಿದ: 'ಸರಸ, ಬೆಳಗ್ಗೆ ಹಾಗೇಕೆ ಮಾಡಿದೇ?' ನಾನೂ ಮಾತನಾಡಲಿಲ್ಲ. 'ಸರಿಸಿ, ಮಾತೇಕೆ

ಆಡುವುದಿಲ್ಲ – ನೀನೇಕೆ ಹಾಗೆ ಮಾಡಿದೆಯೋ ನನಗೆ ತಿಳಿಯದು. ಆದರೆ, ಅದರಿಂದ ನನ್ನ ಮೇಲಾದ ಪರಿಣಾಮ.... ಸರಸ.... ನನ್ನ ಸರಸ'..... ಮುಂದವನ ಬಾಯಿಯಿಂದ ಮಾತುಗಳು ಹೊರಡಲಿಲ್ಲ. ನನ್ನನ್ನು ತನ್ನೆಡಗೆ ಎಳೆದುಕೊಂಡು ಮುತ್ತಿನ ಮಳೆಯನ್ನು ಸುರಿಸಿಬಿಟ್ಟ. ಎಷ್ಟು ಹೊತ್ತು ಹಾಗೆಯೇ ಕಳೆಯಿತೋ ಹೇಳಲಾರೆ.... ದೂರದಿಂದ ಅಕ್ಕನು ಕೂಗುವುದು ಕೇಳಿದೊಡನೆ ಅವನು ನನ್ನ ಕೈಬಿಟ್ಟ – ನಾನು ನಿಲ್ಲಲಾರದೆ ಕುಳಿತುಬಿಟ್ಟೆ. ಆಗವನು ಪ್ರೇಮಪೂರ್ಣವಾದ ಸ್ವರದಿಂದ ಹೇಳಿದ: 'ನನ್ನ ಸರಸಾ, ಕ್ಷಮಿಸು' ಇದಕ್ಕೆ ನಾನು ಉತ್ತರ ಕೊಡುವ ಮೊದಲೇ ಅಕ್ಕ ಬಂದಳು. ಹೆಚ್ಚೇನೂ ಮಾತನಾಡದೆ ನಾವು ಮನೆಗೆ ಬಂದೆವು.

ರಾತ್ರಿ ಊಟವಾಯಿತು. ಕೃಪಾ ಅಡಿಕೆಲೆಯನ್ನು ತಂದಿಟ್ಟುಕೊಂಡು ತಿನ್ನುತ್ತಾ 'ನೀನೇಕೆ ತೆಗೆದುಕೊಳ್ಳುವುದಿಲ್ಲ ಸರಸೀ' ಎಂದಳು. ನಾನೆರಡು ಎಲೆಗಳಿಗೆ ಸುಣ್ಣಹಾಕಿ ಒಂದನ್ನು ಬಾಯಿಯಲ್ಲಿಟ್ಟುಕೊಂಡೆ. ಅಷ್ಟರಲ್ಲಿ ಅವನು ಅಲ್ಲಿಗೆ ಬಂದ. ಕೃಪೆಯು ಅಡಕೆಲೆಯ ತಟ್ಟೆಯನ್ನು ಒಳಗಿಡಲು ಹೋದಾಗ ನನ್ನ ಕೈಲಿದ್ದ ಎಲೆಯನ್ನು ನಾನವನ ಕೈಗಿತ್ತೆ. ಆಗವನು ನನ್ನ ಕೈಗಳೆರಡನ್ನೂ ಹಿಡಿದುಕೊಂಡು 'ಕ್ಷಮೆಯ ಗುರುತೇ ಇದು?' ಎಂದು ಕೇಳಿದ. 'ಅಪರಾಧ ಮಾಡಿದರಲ್ಲವೇ ಕ್ಷಮೆ?' ಎಂದು ನಾನಂದೆ. ಅವನು ನನ್ನ ಮಾತು ಕೇಳಿ 'ಸರಸ, ದೇವರು ನಿನ್ನನ್ನು ಕಾಪಾಡಲಿ – ಇದೇ ನನ್ನ ಪ್ರಾರ್ಥನೆ' ಎಂದು ಹೇಳಿ, ನನ್ನೆರಡು ಕೈಗಳನ್ನೂ ತನ್ನ ಕಣ್ಣಿಗೊತ್ತಿಕೊಂಡು ಹೊರಗೆ ಹೊರಟುಹೋದ.

ಮರುದಿನ ಬೆಳಿಗ್ಗೆ ನಾನು ಮುಖ ತೊಳೆಯುವುದಕ್ಕೆ ಹೋದಾಗ ಅವನು ಮಲ್ಲಿಗೆಯ ಮಂಟಪದ ಹತ್ತಿರ ನಿಂತಿದ್ದ. ನನ್ನನ್ನು ನೋಡಿ 'ಹೂ ಕುಯಿದು ಕೊಡಲೇ ಸರಸ' ಎಂದು ಕೇಳಿದ. ನಾನು ಮುಖ ತೊಳೆದುಕೊಳ್ಳುವಾಗ ಅವನು ಹೂವೆಲ್ಲಾ ಕುಯಿದು ಒಂದು ಎಲೆಯ ದೊನ್ನೆಯಲ್ಲಿಟ್ಟು ಮುಖ ತೊಳೆದೊಡನೆ ನನ್ನ ಕೈಗೆ ಕೊಟ್ಟ.... ನಾನೇನು ಹೇಳಬೇಕೆಂದು ತೋರಲಿಲ್ಲ.... ಅವನ ಮುಖವನ್ನು ನೋಡಿದೆ.... ನೆಟ್ಟ ದೃಷ್ಟಿಯಿಂದ ನನ್ನನ್ನು ನೋಡುತ್ತಾ 'ಸರಸಿ, ಹತ್ತು ಗಂಟೆಗೆ ನಾನು ಹೊರಡುವೆನು. ನಿನ್ನನ್ನು ಬಿಟ್ಟು ಹೇಗಿರಲಿ ಹೇಳು? ಕಾಗದ ಬರೆಯುವೆಯಾ?' ಎಂದು ಕೇಳಿದ. ನನಗೆ ಮಾತನಾಡಲಾಗಲಿಲ್ಲ. ಕಣ್ಣೀರು ತುಂಬಿ ಕಣ್ಣೇ ಕಾಣಿಸಲಿಲ್ಲ. ಆಗವನು ತನ್ನ ಕೈ ಚೌಕದಿಂದ 'ನನ್ನ

ಕಣ್ಣುಗಳನ್ನೊರೆಸಿ ಅಳಬೇಡ ಸರಸಾ. ನೀನತ್ತರೆ ನನಗೆ ಬಹಳ ದುಃಖವಾಗುವುದು. ನಿನ್ನ ಪ್ರತಿಯೊಂದು ತೊಟ್ಟು ಕಣ್ಣೀರೂ ನನ್ನ ಹೃದಯವನ್ನು ಚುಚ್ಚುವುದು. ಕಾಗದವನ್ನು ಬರೆಯುತ್ತೇನೆಂದು ನಗುತ್ತಾ ಹೇಳು' ಎಂದ. ಅದಕ್ಕೆ ನಾನೇನು ಹೇಳಿದೆನೋ ಅದೀಗ ನನಗೆ ಜ್ಞಾಪಕವಿಲ್ಲ. ಏನಾದರೇನು, ನಾನು ಏನೆಂದರೇನು? ಅವನು ನನ್ನನ್ನು ಪ್ರೀತಿಸುತ್ತಾನೆ. ಅದಕ್ಕಿಂತಲೂ ಹೆಚ್ಚು ನನಗೆ ಇನ್ನೇನುಬೇಕು?

೮-೧೦-೩೦

ಮದುವೆ! ಮದುವೆಯಿಂದ ಎಷ್ಟು ಮಂದಿ ಸಂತೋಷದಿಂದ ಹಿಗ್ಗುವರು; ಸುಖದ ಹೆದ್ದಾರಿ ಮದುವೆಯಂತೆ! ನಿಜವೇ?

ತಾವು ಪ್ರೀತಿಸುವವರನ್ನು ಪಡೆದ ವಧುಗಳಿಗೆ ನಿಜವಿರಬಹುದು. ನನಗೆ?.... ಆದರೆ ನನಗೆ? ಮದುವೆಯೆಂದರೆ ಸಾಯುವುದಕ್ಕಿಂತಲೂ ಕಷ್ಟವಾಗಿ ತೋರುವುದೇಕೆ? ಯಾರೊಡನೆ ಕೇಳಲಿ? ಕೇಳಿದರೂ ಹೇಳುವವರಾರು? ದೇವರನ್ನು ಬೇಡಲೆ? ದೇವರಿದ್ದರಲ್ಲವೇ ಬೇಡುವುದು? ಇದ್ದುದಾಗಿದ್ದರೆ.... ಅಯ್ಯೋ ದೇವರನ್ನೇಕೆ ದೂಷಿಸಲಿ? ಅಣ್ಣನಿಗೆ ದಯವೇ ಇಲ್ಲವೇಕೆ? ಯಾರನ್ನು ಮೊರೆಹೋಗಲಿ? ಅಮ್ಮನಂತೂ ಈ ಲೋಕದಲ್ಲೀಗ ಇಲ್ಲ – ಅಕ್ಕ? ಅಕ್ಕನ ಮಾತು ಕೇಳುವವರಾರು? ಅವನು ವರನಾಗದ ಮದುವೆಯಲ್ಲಿ ನಾನು ವಧುವಾಗುವುದು ಹೇಗೆ? ಅವನೇನು ತಿಳಿದುಕೊಳ್ಳುವನು? ನಿನ್ನೆ ದಿನ ಬಂದಿರುವ ಅವನ ಕಾಗದವನ್ನು ಒಡೆಯಲೇ? ಧೈರ್ಯ ಬರುವುದಿಲ್ಲವೇಕೆ? ಏನಾದರೂ ಇರಲಿ, ಓದಿಬಿಡುವುದು.... ಅಯ್ಯೋ.... ಅವನು ಬರೆದಿರುವುದೇನು? ನನ್ನ ಮುಂದಿನ ಜೀವವು ಸುಖ ಸಂತೋಷಪೂರ್ಣವಾಗಿರಲೆಂದು ದೇವರಲ್ಲಿ ಅವನ ಬೇಡಿಕೆಯಂತೆ! ಸುಖ! ಸಂತೋಷ! ಎಂತಹ ಹಾಸ್ಯಾಸ್ಪದ.... ಅವನಿಲ್ಲದ ಮೇಲೆ ಸುಖವೇ? ಅವನೂ ನನ್ನನ್ನು ತಿಳಿಯಲಾರನೇನು? ಹೇಗವನನ್ನು ಮರೆಯಲಿ? ಆಂದಿನ ಸಾಯಂಕಾಲ.... ನಾವಾಡಲು ಹೋದ ಸಾಯಂಕಾಲ... ಅದನ್ನು ಮರೆಯವುದು ನನ್ನಿಂದ ಸಾಧ್ಯವೇ? ಮಲ್ಲಿಗೆಯ ಹೂವನ್ನು ಕೊಯಿದು ಕೈಲಿಟ್ಟು 'ಕಾಗದ ಬರೆಯುತ್ತಿರು' ಎಂದು ಹೇಳುವಾಗ ಚಿತ್ರಿತವಾದ ಅವನ ಸ್ನೇಹಪೂರ್ಣ ಮುಖ, ಪ್ರೇಮವನ್ನು ಹೊರಚೆಲ್ಲುತ್ತಿದ್ದ ಕಣ್ಣುಗಳು.. ಅದೆಲ್ಲವನ್ನೂ ಹೇಗೆ ತಾನೆ ನನ್ನ ಹೃದಯದಿಂದ ಹೊರದೂಡಲಿ?...

ಅಯ್ಯೋ...ಅವನ ಕಾಗದಗಳು... ಪ್ರತಿ ಶಬ್ದದಿಂದಲೂ ಉಕ್ಕುತ್ತಿರುವ ಪ್ರೇಮ... ಹೀಗಾಗುವುದೆಂದು ಯಾರಿಗೆ ತಿಳಿದಿತ್ತು? ನನಗೇಕೆ ಹುಚ್ಚು ಹಿಡಿಯುವುದಿಲ್ಲ!

೭–೪–೩೧

ಲತ್ತೆಯ ಪೆಟ್ಟುಗಳನ್ನು ಸಹಿಸಬಹುದು; ಲೇಖನಿಯ ಒದೆಗಳನ್ನು ಸಹಿಸುವುದು ಕಷ್ಟ ಅದರಲ್ಲಿಯೂ ಅವನ ಬರೆಯಲ್ಪಟ್ಟ ಮಾತುಗಳನ್ನು ಓದುವಾಗ ನನ್ನ ಕಲ್ಲಿನಂಥ ಹೃದಯವೂ ಕರಗಿಹೋಗುತ್ತಿದೆ. ಮದುವೆಯ ದಿನ ನಾನು ಮನಸ್ಸಿನಲ್ಲಿ ಮಾಡಿಕೊಂಡ ದೃಢ ಪ್ರತಿಜ್ಞೆಯೂ ಅವನ ಕಾಗದವನ್ನು ಓದಿದೊಡನೆ ಓಡಲು ಯತ್ನಿಸುತ್ತಿದೆಯೇಕೆ? 'ನೀನೆಂಥ ಕ್ರೂರಿ ಸರಸಿ, ನನ್ನ ಕಾಗದಗಳೊಂದಕ್ಕೂ ಪ್ರತ್ಯುತ್ತರವನ್ನೇ ಬರೆಯಲಿಲ್ಲವೇಕೆ?' ಎಂದು ಬರೆದಿರುವನು... ಹೌದು, ನಾನು ಕ್ರೂರಿ...ಅಣ್ಣನು ನನ್ನ ಮೇಲೆ ನಡೆಯಿಸಿದ ಕ್ರೂರತನದ ಪ್ರತಿಫಲವಾಗಿ ನಾನವನಿಗೆ ಕ್ರೂರಿ... ಇದೀಗ ಇಂದಿನ ನ್ಯಾಯ. ಏನು ಮಾಡಲಿ? ಏನೆಂದು ಬರೆಯಲಿ? ಬರೆಯದೆ ಇರಲೆ? ಅವನೇನೆಂದು ತಿಳಿದುಕೊಳ್ಳುವನು? ಈ ತರಹ ಸಂಕಟವನ್ನು ಅನುಭವಿಸುವುದಕ್ಕೇ ನನ್ನ ಜನ್ಮವಾಯಿತೇನು? ನಾನೇಕೆ ಸಾಯುವುದಿಲ್ಲ? ಬಾವಿಗೆ ಹಾರಲೆ? ಹಾರಲಾರೆ...

ನನ್ನನ್ನು ತನ್ನ ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವ ಅಕ್ಕನಿರುವಳು – ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನೋಡುವ ಪತಿ ಇರುವರು. ಅವರ ಅಷ್ಟೊಂದು ಪ್ರೀತಿಯ ಪ್ರತಿಫಲವಾಗಿ ಕೊಡಲು ನನ್ನಲ್ಲೇನಿದೆ?.... ಇದ್ದುದನೆಲ್ಲಾ ಅವನಿಗೆ ಬಲು ದಿನಗಳ ಹಿಂದೆಯೇ ಅರ್ಪಿಸಿಬಿಟ್ಟಿರುವೆನು.... ಇನ್ನಿರುವುದೇನು? ಅವರಿಗಾಗಿ ಭಕ್ತಿಯಿಂದ ಚಿಕ್ಕ ದೊಡ್ಡ ಕೆಲಸಗಳನ್ನು ಜಾಗರೂಕತೆಯಿಂದ ಮಾಡುವೆನು. ಆದರೆ ಯಾವುದು ಮುಖ್ಯವೋ ಅದು ಮಾತ್ರ ನನ್ನೆಡೆಯಲ್ಲಿಲ್ಲ. ಏನು ಮಾಡಲಿ?.... ಸಾಯಲಾರೆ.... ಬದುಕಲಾರೆ.... ಏನು ಮಾಡಲಿ?.... ಏನು ಮಾಡಲಿ.... ಕೇಳುವುದು ಯಾರೊಡನೆ....

೧೮–೧೧–೩೧

ನಾಳೆ ಅವನಿಗೆ ಮದುವೆಯಂತೆ! ಆಗಲಿ....ನನಗೇನು? ನಾನೇಕೆ ಅಯ್ಯೋ ಅನ್ನಬೇಕು? ಮೂರು ವರುಷಗಳಿಂದಲೂ ಅವನಿಗೆ ಬೇಗ ಮದುವೆಯಾಗಲಿ ನನ್ನನವನು ಮರೆಯಲಿ ಎಂದು ಪ್ರಾರ್ಥಿಸುತ್ತಿದ್ದ ನಾನು ಇಂದೇಕೆ ಅವನ ಮದುವೆಯ ವರ್ತಮಾನ ಕೇಳಿ ದುಃಖಿತಳಾಗಬೇಕು? ನನಗಾಗಿ ಅವನೇಕೆ ಮದುವೆಯಾಗದಿರಬೇಕು? ನಾನು ಮನಸ್ಸನ್ನು

ಎಷ್ಟೆಷ್ಟು ಕಾರಣಗಳನ್ನು ಕೇಳಿಕೊಂಡರೂ ಹೃದಯಾಂತರಾಳದಿಂದ ಸಣ್ಣ ದನಿಯೊಂದು 'ಅಯ್ಯೋ' ಎನ್ನುವುದೇಕೆ? ಆಗಲಿ.... ಅವನು ಮದುವೆಯಾಗಲಿ.... ಪರಮಾತ್ಮನು ಅವರಿಬ್ಬರನ್ನೂ ಕಾಪಾಡಲಿ.... ಅವರ ಸಂಸಾರವು ಸುಖಮಯವಾಗಲಿ....

೨೧–೩–೩೪

ನಾಳೆ ಆವನು ಹೆಂಡತಿಯನ್ನೂ ಮಗುವನ್ನು ಕರೆದುಕೊಂಡು ಬರುವನಂತೆ. ದೇವಾ, ಅವನು ಬಂದಾಗ ಅವನ ಹೆಂಡತಿಯ ಇದಿರಿನಲ್ಲಿ ನನ್ನ ಅಧೈರ್ಯ ಪ್ರಕಟವಾಗದಂತೆ ಅನುಗ್ರಹಿಸು. ಹೃದಯವೇ ಸ್ವಲ್ಪ ಶಾಂತವಾಗು.... ಮನಸ್ಸೇ ಉದ್ವೇಗವನ್ನು ಸಹಿಸಿಕೋ. ಅವನೊಡನೆ ಏನೆಂದು ಮಾತಾಡಲಿ.... ಈ ಮುಖವನ್ನು ಅವನಿಗೆ ಹೇಗೆ ತೋರಿಸಲಿ? ಪರಮಾತ್ಮ – ನನ್ನ ಕಣ್ಣುಗಳು ನಾಳೆ ಅವನಿದಿರಿನಲ್ಲಿ ನನ್ನ ಹೃದಯದ ಗುಟ್ಟನ್ನು ಹೊರಗೆಡವದಂತೆ ಕಾಪಾಡು....

೧೩–೩–೩೪

ಅವನು ಹೆಂಡತಿ ಮಗುವಿನೊಡನೆ ಬಂದು ಕುಳಿತಿರುವನು. ಹೇಗೆ ಹೋಗಿ ಅವನಿಗೆ ಮುಖ ತೋರಿಸಲಿ! ಏನೆಂದು ಮಾತಾಡಲಿ! ಹೇಗೆ ಹೊರಗೆ ಹೋಗಲಿ? ಹೋಗದೆ ಇರಲಾಗುವುದೇ? .... ಅವನು ಹೇಳುತ್ತಿರುವುದೇನು? 'ಚೆನ್ನಾಗಿರುವೆಯಾ ಸರಸಿ?' .... ಹೌದಪ್ಪ ಚೆನ್ನಾಗಿರುವೆನು. ನೀನು ಹೆಂಡತಿಯನ್ನೂ ಮಗುವನ್ನೂ ಕರೆತಂದುದು ಬಲು ಸಂತೋಷವಾಯಿತು... ಮಗುವಿನ ಹೆಸರೇನು? ಪ್ರಭೆ ಎಂತಲೇ – ಚೆನ್ನಾಗಿದೆ.... ನನ್ನ ಪ್ರೀತಿಯ ಹೆಸರದು.... ಬಾಮ್ಮಾ ಪ್ರಭಾ.... ಮಗು ಎಷ್ಟು ಮುದ್ದಾಗಿದೆ? ನಾನು ಕರೆದೊಡನೆಯೇ ನಗುತ್ತ ನನ್ನೆಡಗೆ ಬರುತ್ತಿರುವಳಲ್ಲ. ಅವನ ಅದೇ ಆ ವಿಶಾಲವಾದ ಕಣ್ಣುಗಳು – ಅದೇ ಮೂಗು – ಅದೇ ಕೆಂಪು ತುಟಿಗಳು – ಅವನೇ ಮಗುವಿನ ನಿರ್ಮಲ ಕಣ್ಣುಗಳಿಂದ ನೋಡುತ್ತಿರುವನೇನು? ಅವನ ಹೆಂಡತಿ – ಅವಳು ಅವನಿಗೆ ಅನುರೂಪಳಾದ ಪತ್ನಿ.... ಅವಳ ನಗುಮುಖ.... ಹೌದು, ಅವಳವನಿಗೆ ಅನುರೂಪಳಾದ ಪತ್ನಿ ಅವನ ಮುಖದಲ್ಲಿ ಸುಖ ಸಂತೋಷ ನಲಿದಾಡುತ್ತಿವೆ. ಅವನು ಸುಖಿ. ದೇವರವನನ್ನು ಸದಾ ಹಾಗಿಟ್ಟಿರಲಿ....ಅವನ ಹೆಂಡತಿಯನ್ನು ಮಗುವನ್ನೂ ಪರಮಾತ್ಮನು ಕಾಪಾಡಲಿ....ಇದೇ ನನ್ನ ಪ್ರಾರ್ಥನೆ.

ನಾನು! ದುಃಖಮಯವಾದ ಪ್ರಪಂಚದಲ್ಲಿ ನಾನೇಕೆ ಸುಖವನ್ನು ಬಯಸಬೇಕು? ಸುಖ ಪಡೆಯಲು ನನಗಾವ ಅಧಿಕಾರವೂ ಇಲ್ಲ.... ಆದರೆ, ದೇವಾ! ನನಗೆ ಜ್ಞಾಪಕವನ್ನು ಮಾತ್ರ ಕೊಡಬೇಡ. ನೆನಪು ಬೀಸಿರುವ ಬಲೆಯಿಂದ ನನ್ನನ್ನು ಬಿಡಿಸು. ಮರೆಯಲು ಪ್ರಯತ್ನಿಸಿದಷ್ಟೂ ಚಿಗುರುವ ಜ್ಞಾಪಕದ ಹಿಡಿತದಿಂದ ನನ್ನನ್ನು ಪಾರುಮಾಡು.... ನನಗೇಕೆ ಹುಚ್ಚು ಹಿಡಿಯುವುದಿಲ್ಲ...

❑

# ೩. ಪ್ರಬಂಧ
# ಕನಸುಗಳ ಶಕ್ತಿ

**– ಡಾ. ಎ. ಪಿ. ಜೆ. ಅಬ್ದುಲ ಕಲಾಂ**
**– ಕನ್ನಡಕ್ಕೆ ಅನುವಾದ : ಜಿ. ಎಮ್. ಮಧ್ಯಸ್ಥ**

ಪ್ರ : ಸರ್, ಕನಸು ಕಾಣಿರಿ ಎಂಬ ನಿಮ್ಮ ಪ್ರೇರಣೆಯಿಂದ ಉತ್ತೇಜಿತನಾದ ನಾನು ದೊಡ್ಡ ಕನಸುಗಳನ್ನು ಕಾಣಲು ಆರಂಭಿಸಿದೆ. ಮಿತಿಯೇ ಇಲ್ಲದ ಲೋಕ ಹಾಗೂ ಅದರಲ್ಲಿ ನನಗೆ ಯಾವುದೇ ಅಡ್ಡಿ – ಆತಂಕವಿಲ್ಲದ ಸನ್ನಿವೇಶದ ಕನಸು ಕಂಡೆ. ಯಾವ ಉದ್ಯೋಗ ಲಭ್ಯವಿದೆಯೆಂದು ವರ್ಗೀಕೃತ ಜಾಹೀರಾತುಗಳನ್ನು ನೋಡುವ ಗೋಜಿಗೇ ನಾನು ಹೋಗಲಿಲ್ಲ. ನಾನು ಅತ್ಯಂತ ವಿಶಿಷ್ಟ ವ್ಯಕ್ತಿಯಾಗುವೆನೆಂದು ಕಲ್ಪಿಸಿಕೊಂಡೆ, ನನ್ನಲ್ಲಿ ಆಸೆ, ಭರವಸೆ, ನಿರೀಕ್ಷೆಗಳು ತುಂಬಿಕೊಂಡಿದ್ದುವು. ನನ್ನನ್ನು ಹಿಡಿಯುವವರು ಯಾರೂ ಇಲ್ಲ ಆಂದುಕೊಂಡೆ. ಒಂದಲ್ಲ ಒಂದು ದಿನ ನಾನು ಬಲುದೊಡ್ಡ ವ್ಯಕ್ತಿಯಾಗುವೆನೆಂದು ಭಾವಿಸಿದೆ. ಆಗ ನನಗೆ ಒಂದು ಆಘಾತ ಬಂದೆರಗಿತು. ಅದು ಬಲು ಸೂಕ್ಷ್ಮ ರೂಪದಲ್ಲಿತ್ತು. ಅದು ಬಂದಾಗ ನನಗೆ ಏನೂ ಅನ್ನಿಸಲಿಲ್ಲ: ಚೂರು ಚೂರೇ ಆಗಿ ಅದು ನನ್ನನ್ನು ಆವರಿಸತೊಡಗಿತು. ನಿಧಾನವಾಗಿ ವಾಸ್ತವ ಏನು ಎಂಬುದು ಆರಿವಾಯಿತು. ಈಗ ನಾನು ಯಾರು ಎಂಬುದನ್ನು ಆದು ವ್ಯಾಖ್ಯಾನಿಸುತ್ತದೆ. ನನ್ನ ಅರಿವೆಗೇ ಬಾರದೆ, ನಾನು ಗಮನಿಸದೇನೇ ನಾನು ನನ್ನ ಕನಸುಗಳನ್ನು ಕಳೆದುಕೊಂಡಿದ್ದೆ. ನಾನೀಗ ತೃಪ್ತಿಹೊಂದಿದ್ದೇನೆ. ಇನ್ನಷ್ಟು ಬೇಕು ಎಂಬ ಆಶಾವಾದವನ್ನು ನಾನೀಗ ಬಿಟ್ಟುಕೊಟ್ಟಿದ್ದೇನೆ. ಅಷ್ಟೇ ಏಕೆ, ಇದಕ್ಕಿಂತ ಚೆನ್ನಾದುದು ಬೇರೆ ಇದೆ ಎಂಬ ನಂಬಿಕೆಯನ್ನೇ ನಾನೀಗ ಕಳೆದುಕೊಂಡಿದ್ದೇನೆ. ನಾನು ನನ್ನ ಸುತ್ತಲ ಪ್ರಪಂಚಕ್ಕೆ ಶರಣಾದೆ; ನಾನು ಏನಾಗಿದ್ದೇನೆಯೋ ಅದೇ ನನ್ನ ಪ್ರಾಪ್ತಿ ಎಂಬ ತೀರ್ಮಾನಕ್ಕೆ ಬಂದಿದ್ದೇನೆ. ನಾನು ಈಗ ಇರುವ ಸ್ಥಿತಿ ಕೆಟ್ಟದು ಎಂದೇನೂ ಅಲ್ಲ – ಅದರಿಂದ ನನಗೆ ಸಂಪಾದನೆಯಿದೆ; ನನ್ನ ಜೀವನಕ್ಕೆ ಅದು ಸಾಕಾಗುತ್ತದೆ;

ಆದರಿಂದ ನನಗೆ ಸುಭದ್ರತೆ ಇದೆ: ಜೀವನ ಯಾಪನೆಗೆ ಏನೂ ತೊಂದರೆಯಿಲ್ಲ. ಆದರೆ ಒಮ್ಮೆ ಶರಣಾಗತಿ, ಈ ಹೊಂದಾಣಿಕೆಯ ರುಚಿ ಕಂಡುಕೊಂಡ ಮೇಲೆ ಇದುವೇ ನನ್ನ ಕತೆಯಾಗಲಿ ಎಂದು ನಿರ್ಧರಿಸಿದೆ. ಯಾಕೆ ಹೋರಾಡಬೇಕು? ಯಾಕೆ ಪೈಪೋಟಿ? ಕೈಗೂಡದ ಕನಸುಗಳನ್ನು ಇಟ್ಟುಕೊಂಡು ಯಾಕೆ ಗೋಳಿಡಬೇಕು? ನಾನು ಅರ್ಧಕ್ಕೇ ಬಿಟ್ಟುಹೋದವನಾದ ಕಾರಣ ನನ್ನ ಮುಂದೆ ಈಗ ಅಡ್ಡಿ–ಆತಂಕಗಳು ಯಾವುದೂ ಇಲ್ಲ. ಯಾವ ಕಷ್ಟಗಳೂ ಇಲ್ಲ. ಯಾವ ಹೋರಾಟವೂ ಇಲ್ಲ, ಯಾವ ನೋವು ಕೂಡಾ ಇಲ್ಲ. ದೊಡ್ಡ ಕನಸುಗಳನ್ನು ಬೆನ್ನಟ್ಟುವುದನ್ನು ಬಿಟ್ಟು ನಾನು ಅದಕ್ಕಿಂತ ಬಹಳ ಸಣ್ಣದಕ್ಕೆ ತೃಪ್ತನಾಗುವ ನಿರ್ಧಾರ ತಳೆದೆ. ಆದರೆ ನನ್ನ ಒಳಮನಸ್ಸಿನ ಆಳದಲ್ಲಿ ಇದು ಹೀಗಾಗಬಾರದಿತ್ತು ಎಂಬ ಭಾವವಿದೆ; ತುಡಿತವಿದೆ. ಡಾ. ಕಲಾಂ ಸರ್, ಹೇಳಿರಿ, ನಾನು ಮತ್ತೆ ಕನಸು ಕಾಣುವುದು ಸಾಧ್ಯವೆ?

ಕನಸುಗಳೆಂದರೆ ಅವು ನಿದ್ರೆಯಲಿ ಕಾಣಿಸುವವುಗಳಲ್ಲ; ಬದಲಾಗಿ ನಿಮ್ಮನ್ನು ನಿದ್ರಿಸಲು ಬಿಡದಂತಹವು. ಆದರೆ ನಿಮ್ಮ ಕನಸುಗಳನ್ನು ಸಾಕಾರಗೊಳಿಸಿ ಬೇಕಾದರೆ ನೀವು ಅತ್ಯಂತ ಜಾಗೃತರಾಗಿ ಇರಬೇಕಾಗುತ್ತದೆ.

ಇಡೀ ಮಾನವ ಕುಲದ ಚರಿತ್ರೆಯಲ್ಲಿ ಇಂದು ಇರುವಷ್ಟು ಅವಕಾಶಗಳು ಹಿಂದೆ ಎಂದೂ ಇರಲಿಲ್ಲ. ಹಿಂದಿನ ಇಪ್ಪತ್ತು ಶತಮಾನಗಳ ಮಾನವ ವಿಕಾಸದ ಚರಿತ್ರೆಯಲ್ಲಿ ಹಿಂದೆಂದೂ ಸಾಧ್ಯವಾಗದಂತಹ ಅನುಭವಗಳನ್ನು ಇಂದು ಇಪ್ಪತ್ತೊಂದನೆಯ ಶತಮಾನವು ಸೃಜಿಸುತ್ತಿದೆ. ತಂತ್ರಜ್ಞಾನ ಹಾಗೂ ಅವಿಷ್ಕಾರಗಳು ಮಾನವ ಕುಲವನ್ನು ಮುಂದು–ಮುಂದಕ್ಕೆ ತಳ್ಳುತ್ತಿರುವುದರಿಂದ ಮಾನವನ ಸಾಮರ್ಥ್ಯವು ಅದ್ಭುತವಾದ ರೀತಿಯಲ್ಲಿ ಬೆಳೆಯುತ್ತಿದೆ. ಆದರೆ ಈ ಅನುಭವಗಳನ್ನು ಪಡೆಯುವುದಕ್ಕೆ ನಮಗಿರುವ ಕಾಲಾವಕಾಶ ಮಾತ್ರ ಬದಲಾಗದೆ ಹಿಂದಿನಂತೆಯೇ ಇದೆ.

ಇಂದಿನ ಯುವ ಜನತೆಯು ಎದುರಿಸುತ್ತಿರುವ ಸಂದಿಗ್ಧ ಮನಸ್ಥಿತಿಯ ಕಾರಣವು ಅದೇ ಆಗಿದೆ. ಇಂದಿನ ಪ್ರಪಂಚದ ಅತ್ಯಂತ ವಿಶಾಲವ್ಯಾಪ್ತಿಯ ಅನುಭವಗಳನ್ನು ಪಡೆಯಲು ಯುವ ಜನ ತಹತಹಿಸುತ್ತಿದ್ದಾರೆ; ಅವರು ಇದನ್ನು ಪಡೆಯಲೂ ಬೇಕು. ಆದರೆ ಪ್ರಪಂಚವು ವ್ಯಾಪಕವಾಗಿ

ವಿಸ್ತಾರಗೊಳ್ಳುತ್ತಿರುವುದರಿಂದ ಅವರು ಹೆಚ್ಚು ಹೆಚ್ಚಾಗಿ ಸಂಕುಚಿತವೂ ವಿಶೇಷ ಜ್ಞಾನಗಳ ವಲಯವೂ ಆಗಿರುವ ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕಾಗತ್ತಿದೆ. ಇದು ಸರಿ ಎಂದು ನಾನು ಭಾವಿಸುವುದಿಲ್ಲ. ಪ್ರಪಂಚದಲ್ಲಿನ ಪ್ರತಿಯೊಬ್ಬ ಯುವಕ-ಯುವತಿ ತಾವು ಆಶಿಸುವ ಲೋಕಕ್ಕೆ ಸಮನಾದ ವಿಸ್ತೃತ ಅನುಭವಗಳನ್ನು ಪಡೆದುಕೊಳ್ಳಬೇಕೆಂಬುದು ನನ್ನ ಕನಸು. ಆದರೆ ಅದು ಹೇಗೆ ಸಾಧ್ಯ?

ಇದನ್ನು ಸಾಧ್ಯವಾಗಿಸಲು ಎರಡು ದಾರಿಗಳಿವೆ, ಒಂದನೆಯದು ನಮ್ಮ ಕೈಯಲ್ಲಿನ ಕಾಲವನ್ನು ಹೆಚ್ಚಿಸುವುದು. ಇನ್ನೊಂದು ನಮಗೆ ದೊರೆವ ಸಮಯದಲ್ಲಿ ನಮ್ಮ ಕಾರ್ಯದ ಪ್ರಮಾಣವನ್ನು ಅಧಿಕಗೊಳಿಸಿ ಸಾಧಿಸುವುದು. ದೀರ್ಘಾಯುಷ್ಯ ಹಾಗೂ ಅರಿವಿನ ಹೆಚ್ಚಳ - ಇವೆರಡು ಜೀವನದ ಗುರಿಗಳನ್ನು ನಮ್ಮ ಯುವಜನರು ಸಾಧಿಸಬೇಕೆಂದು ನಾನು ಬಯಸುತ್ತೇನೆ. ಇವೆರಡನ್ನು ಸಾಧಿಸುವ ಬಗೆಯನ್ನು ತಿಳಿದು ಕೊಳ್ಳುವುದರಿಂದ ಬೇರೆಲ್ಲಾ ಸಾಧನೆಗಳ ಮಹಾದ್ವಾರವು ತೆರೆದು ಕೊಳ್ಳುವುದು. ಈ ಜಗಿತಕ್ಕಾಗಿಯೇ ಮಾನವ ಕುಲ ಕಾಯುತ್ತಿದೆ; ಇದು ಸಾಧ್ಯವಾದರೆ ಅದು ನಮ್ಮನ್ನು ನಮ್ಮ ವಿಕಾಸದ ಮುಂದಿನ ಹಂತಕ್ಕೆ ಕರೆದೊಯ್ಯುವುದು. ಹಾಗಿದ್ದರೆ, ಇದನ್ನು ಮಾಡುವುದು ಎಂತು? ನನ್ನಲ್ಲಿ ಎರಡು ಸಲಹೆಗಳಿವೆ;

ಮೊದಲನೆಯದಾಗಿ, ಸರಳವೂ ಸದಾಚಾರವುಳ್ಳದ್ದೂ ಆದ ಬದುಕನ್ನು ಸಾಗಿಸಿರಿ; ಇದರಿಂದ ಮನುಷ್ಯ ವೃದ್ಧಾಪ್ಯ ತಲುಪಿದರೂ ಆರೋಗ್ಯಶಾಲಿಯಾಗಿರುವನು. ಈ ಮೂಲಕ ನೀವು ಬಯಸಿದ ಅನುಭವಗಳೆಲ್ಲವನ್ನೂ ಪಡೆಯಲು ನಿಮಗೆ ಸಾಧ್ಯವಾಗುವಂತೆ ಹೆಚ್ಚಿನ ಕಾಲಾವಕಾಶ ದೊರೆಯುವುದು. ವರ್ಷಗಳು ಸರಿದಂತೆ, ಇಳಿ ವಯಸ್ಸು ಕಾಣಿಸಿಕೊಳ್ಳುತ್ತದೆ; ವೃದ್ಧಾಪ್ಯಸಂಬಂಧಿ ರೋಗಗಳು- ಅಲ್ಜೀಮರ್ಸ್, ಪಾರ್ಕಿನ್‌ಸನ್, ಕ್ಯಾನ್ಸರ್, ಹೃದಯ ವ್ಯಾಧಿ ಮುಂತಾದವು ಕಂಡುಬರತೊಡಗುತ್ತವೆ. ಈ ವಿಷಯದಲ್ಲಿ ಒಂದು ಮಹತ್ವದ ಅಂಶವೆಂದರೆ ಈ ಪೈಕಿ ಹಲವು ರೋಗಗಳು ಉಲ್ಬಣ ಸ್ಥಿತಿಗೆ ಬರುವ ದಶಕಗಳ ಮೊದಲೇ ಶರೀರದಲ್ಲಿ ಹುಟ್ಟಿಕೊಳ್ಳುತ್ತವೆ, ಇವುಗಳ ಬೀಜಾರೋಪಣವು ಯೌವನದ ಕಾಲದಲ್ಲೇ ಆಗಿರುತ್ತದೆ. ಆದ್ದರಿಂದ ನಾವು ಆರೋಗ್ಯವಂತರಾಗಿರೋಣ ಎಂಬ ಆಂದೋಲನವೊಂದನ್ನು ಪ್ರಾರಂಭ ಮಾಡಲು ಇದು ಸಕಾಲವಾಗಿರುತ್ತದೆ.

ಪ್ರತಿಯೊಬ್ಬ ಯುವ ವಯಸ್ಕನೂ ಆರೋಗ್ಯಕರ ಆಹಾರ ಸೇವನೆ, ಆರೋಗ್ಯಕರ ಬದುಕಿನ ಆಚರಣೆ ಹಾಗೂ ಆರೋಗ್ಯಕರ ವಿಚಾರಗಳನ್ನು ಮಾಡಬೇಕು. ನಿಮ್ಮ ಬದುಕು ದೇವರು ಕೊಟ್ಟ ವರ; ಅದನ್ನು ಈ ಲೋಕದ ಬೇರಾವ ಸಂಪತ್ತು ಸಹಾ ಸರಿಗಟ್ಟಲಾರದು. ಆದ್ದರಿಂದ ಅದನ್ನು ಕೆಟ್ಟ ವ್ಯಸನಗಳಿಂದಲೂ ಕೆಟ್ಟ ಚಾಳಿಗಳಿಂದಲೂ ವ್ಯರ್ಥಗೊಳಿಸುವುದೇಕೆ? ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಿ, ಕೆಟ್ಟ ಚಾಳಿಗಳಿಂದ ದೂರವಿರಿ, ಉತ್ತಮವಾದ ಶಿಕ್ಷಣವನ್ನು ಪಡೆಯಿರಿ, ಅತ್ಯುತ್ತಮ ಕೌಶಲಗಳನ್ನು ಕರಗತ ಮಾಡಿಕೊಳ್ಳಿ. ಅರ್ಹರಿಗೂ ಸಮರ್ಥರಿಗೂ ಅನೇಕಾನೇಕ ಅವಕಾಶಗಳು ಕಾದು ಕುಳಿತಿದೆ; ಅವುಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಿರಿ; ನಿಮ್ಮ ಭವಿಷ್ಯವನ್ನು ಭದ್ರಮಾಡಿಕೊಳ್ಳಿ.

ಎರಡನೆಯದಾಗಿ, ನಿಮ್ಮ ಜೀವನದ ಹೊಣೆಗಾರಿಕೆಯನ್ನು ವಹಿಸಿಕೊಳ್ಳಿ. ನಿಮ್ಮ ಪೋಷಕರ ಯೋಗಕ್ಷೇಮವನ್ನು ನೋಡಿಕೊಳ್ಳುವುದರಿಂದ ಇದನ್ನು ಪ್ರಾರಂಭಿಸಿರಿ. ಇಸ್ಲಾಂ ಧರ್ಮದಲ್ಲಿ ದೇವರ ಮೇಲಿನ ನಂಬಿಕೆಯ ನಂತರದ ಮನುಷ್ಯನ ಅತಿ ಮಹತ್ವದ ಹೊಣೆಗಾರಿಕೆಯೆಂದರೆ ಪೋಷಕರ ಹಿತವನ್ನು ನೋಡಿಕೊಳ್ಳುವುದು. ಪ್ರವಾದಿ ಮಹಮ್ಮದರು ಹೀಗೆ ಹೇಳಿದರು: 'ಸ್ವರ್ಗವು ತಾಯ ಕಾಲ ಬುಡದಲ್ಲಿದೆ'. ಇದನ್ನು ಇಸ್ಲಾಂನಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ತಾಯಿಯು ಮಕ್ಕಳಿಗೆ ಧಾರ್ಮಿಕ ಆಚರಣೆಗಳು, ಉತ್ತಮ ಗುಣ ನಡತೆ ಹಾಗೂ ವಿದ್ಯೆಯನ್ನು ಹೇಳಿಕೊಡುವ ಮೂಲಕ ಅವರಿಗೆ ಸ್ವರ್ಗ ಪ್ರಾಪ್ತಿಯಾಗುವಂತೆ ಮಾಡಬೇಕು ಎಂಬುದು ಅವುಗಳಲ್ಲಿ ಒಂದು. ಜೀವನ ಪರ್ಯಂತವೂ ತಾಯಿ ಸೇವೆ ಮಾಡಿದರೆ ಮಕ್ಕಳಿಗೆ ಸ್ವರ್ಗ ದೊರೆಯುವುದು ಎಂಬುದು ಇನ್ನೊಂದು ವ್ಯಾಖ್ಯಾನವಾಗಿದೆ. ಏನೇ ಇದ್ದರೂ ಧರ್ಮವು ತಾಯಿಗೆ ನೀಡುವ ಬಲು ದೊಡ್ಡ ಮಹತ್ವದ ಸ್ಥಾನವನ್ನು ಇವೆರಡೂ ವ್ಯಾಖ್ಯಾನಗಳು ತೋರಿಸುತ್ತವೆ. ನೀವು ನಿಮಗೆ ಜನ್ಮಕೊಟ್ಟ ತಂದೆ ತಾಯಂದಿರ ಯೋಗಕ್ಷೇಮ ನೋಡಿಕೊಳ್ಳುವುದರ ಜತೆಗೆ ನಿಮ್ಮ ಜೀವನದ ಹೊಣೆಗಾರಿಕೆಗಳನ್ನೂ ಹೊತ್ತುಕೊಳ್ಳಲು ಸಿದ್ಧರಾದರೆ ಆಗ ಇಡಿ ಪ್ರಪಂಚವೇ ನಿಮ್ಮ ಬೆಂಬಲಕ್ಕೆ ನಿಲ್ಲುವುದು. ಈ ಸರಳವಾದ ಆದರೂ ಗಾಢವಾದ ಸತ್ಯದ ಬಗ್ಗೆ ಯಾವ ಸಂದೇಹವೂ ಬೇಡ.

ಆದರೆ ಹೆಚ್ಚು ಸಮಯವನ್ನು ಗಳಿಸಿಕೊಳ್ಳುವುದು ಹಾಗೂ ನಿಮ್ಮ ಜೀವನದ ಹೊಣೆಗಾರಿಕೆಗಳನ್ನು ನಿರ್ವಹಿಸುವುದು – ಇಷ್ಟು ಮಾತ್ರವೇ ಸಾಲದು. ಇಂದು

ನಿಮ್ಮ ಮುಂದೆ ಕಾಯುತ್ತಿರುವ ಅಪರಿಮಿತವಾದ ಅವಕಾಶಗಳು ಮತ್ತು ಅನುಕೂಲಗಳನ್ನು ಸದುಪಯೋಗ ಪಡಿಸಿಕೊಳ್ಳಲು ಇನ್ನೂ ಎರಡು ವಿಷಯಗಳು ಬೇಕಾಗುತ್ತವೆ; ಅವುಗಳೇ ನಂಬಿಕೆ ಹಾಗೂ ದೃಢ ಸಂಕಲ್ಪ. ಜೀವನದ ಅವಕಾಶಗಳನ್ನು ಬಳಸಿ ಮುನ್ನಡೆಸಲು ಬೇಕಾದ ಎರಡು ಮುಖ್ಯ ಚಕ್ರಗಳೆಂದರೆ ನಂಬಿಕೆ ಹಾಗೂ ದೃಢ ಸಂಕಲ್ಪ. ಅವುಗಳಿಲ್ಲದೆ ಜೀವನದ ನೈಜ ಅರ್ಥವನ್ನು ಅರಿಯುವುದು ಅಸಾಧ್ಯ. ನಮ್ಮ ಪ್ರಯತ್ನದ ಫಲ ಏನಾಗುವುದು ಎಂಬ ಬಗ್ಗೆ ಖಚಿತ ಭರವಸೆಯಿಲ್ಲದಿದ್ದರೂ ನಮ್ಮೆಲ್ಲಾ ಶಕ್ತಿಯೊಡನೆ ಗುರಿಸಾಧನೆಗಾಗಿ ಹೋರಾಡುವ ಛಲ ನಮ್ಮಲ್ಲಿ ಉಂಟಾಗುವುದಕ್ಕೆ ಮುಖ್ಯ ಕಾರಣವಾಗಿರುವುದು ನಂಬಿಕೆಯೇ ಆಗಿದೆ. ದೃಢ ಸಂಕಲ್ಪವೆಂಬುದು ಮನಶ್ಶಕ್ತಿಯನ್ನು ಬೆಳೆಸುತ್ತದೆ; ಮನಶ್ಶಕ್ತಿಯೇ ಯಶಸ್ಸಿಗೆ ಆಧಾರವಾಗಿದೆ. ದೃಢಸಂಕಲ್ಪವೊಂದಿದ್ದರೆ ಯಾವ ಕಾರ್ಯವೂ ಅಸಾಧ್ಯವಲ್ಲ ಎಂದು ನಮ್ಮ ವೇದೋಪನಿಷತ್ತುಗಳು ಹೇಳುತ್ತವೆ. ದೃಢಸಂಕಲ್ಪಕ್ಕೆ ಅಡ್ಡಿ–ಆತಂಕಗಳೇನೂ ಬರಲಿಲ್ಲವೆಂದಾದರೆ ಮಾನವ ಪ್ರಯತ್ನವು ಬಯಸಿದ ಫಲವನ್ನು ಪಡೆದೇ ತೀರುವುದು.

ಏನೇ ಸಂಭವಿಸಿದರೂ ನಾನು ನಿರ್ಧರಿಸುವ ಕಾರ್ಯವನ್ನು ಮಾಡಿಯೇ ತೀರುವೆನೆಂಬ ನಿರ್ಧಾರವನ್ನು ಕೈಗೊಳ್ಳಿ. ನೀವು ದೃಢ ಸಂಕಲ್ಪವನ್ನು ಮಾಡಿದ್ದೇ ಆದರೆ ಮಾರ್ಗದಲ್ಲಿ ಯಾವುದೇ ಅನ್ಯಾಕರ್ಷಣೆಗಳೂ ಅಡ್ಡಿಗಳೂ ಉಂಟಾದರೂ ನಿಮ್ಮ ಆಯ್ಕೆಯ ಮಾರ್ಗದಲ್ಲಿ ಏಕಾಗ್ರಚಿತ್ತದಿಂದ ಮುನ್ನಡೆಯುವಿರಿ. ನಿಮ್ಮ ಅಗತ್ಯಗಳಿಗೆ ಅನುಸಾರವಾಗಿ ನಿಮ್ಮ ಜೀವನದ ಸ್ಥಿತಿ–ಗತಿಗಳನ್ನಾಗಲಿ ಪ್ರಪಂಚದ ಸ್ಥಿತಿ–ಗತಿಗಳನ್ನಾಗಲಿ ಬದಲಾಯಿಸುವುದು ಸುಲಭವಲ್ಲ. ಆದರೆ ನಿಮ್ಮಲ್ಲಿ ಶಕ್ತಿ ಹಾಗೂ ದೃಢ ಸಂಕಲ್ಪಗಳಿದ್ದಲ್ಲಿ, ನೀವು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬಲ್ಲಿರಿ; ಯಾರಿಗೆ ಗೊತ್ತು, ಕೆಲವೊಮ್ಮೆ ನಿಮಗೆ ಪ್ರಪಂಚದ ಸ್ಥಿತಿ – ಗತಿಗಳನ್ನೇ ಬದಲಿಸಲೂ ಸಾಧ್ಯವಾಗಬಹುದು.

**ಜೀವನದಲ್ಲಿ ಯಶಸ್ಸು ಪಡೆದು ಫಲಗಳನ್ನು ಸಾಧಿಸಲು ನೀವು ಮೂರು ಬಲಶಾಲಿಯಾದ ಶಕ್ತಿಗಳನ್ನು ಅರಿತುಕೊಂಡು ಹತೋಟಿಗೆ ತೆಗೆದುಕೊಳ್ಳಬೇಕು – ಅವುಗಳೆಂದರೆ ಬಯಕೆ, ನಂಬಿಕೆ ಹಾಗೂ ನಿರೀಕ್ಷೆಗಳು – ಎಪಿಜೆ ಅಬ್ದುಲ್ ಕಲಾಂ**

ನೀವು ಕೃಷಿ ಮಾಡಬೇಕಾದ ಇನ್ನೊಂದು ಉತ್ತಮ ಗುಣವೆಂದರೆ ಸಹನಾಶೀಲತೆ, ಯಾರೊಬ್ಬರು ದೃಢ ಸಂಕಲ್ಪ, ಪ್ರಾಮಾಣಿಕ ಪ್ರಯತ್ನಶೀಲತೇ, ಸಹನಶೀಲತೆ, ಕಾಲಕ್ಲಪ್ತತೆ ಹಾಗೂ ಎಲ್ಲರನ್ನೂ ಆದರಿಸುವ, ಪ್ರೀತಿಸುವ ಗುಣಗಳಿಗೆ ಹೆಚ್ಚು ಗಮನ ಕೊಡಬೇಕು. ನಕಾರಾತ್ಮಕ ಶಕ್ತಿಗಳು ಮನಸನ್ನು ಪ್ರವೇಶಿಸಿ ಹತೋಡಿಗೆ ತೆಗೆದುಕೊಳ್ಳದಿರುವಂತೆ ಸದಾ ಎಚ್ಚರದಿಂದಿರಿ. ಅಡೆ–ತಡೆ ಬಂದಾಗಲೆಲ್ಲ ಸಹನೆಯಿಂದ ವ್ಯವಹರಿಸಲು ಕಲಿಯಬೇಕು. ನೀವು ನಿಮ್ಮ ಮನಸ್ಸಿನ ಆಳವನ್ನು ಅಳೆಯ ಹೊರಟಾಗ ಬಲು ಸಹನೆಯನ್ನು ಹೊಂದರಬೇಕು. ಆ ಕಾರ್ಯದಲ್ಲಿ ನೀವು ಮರಳಿ–ಮರಳಿ ಯತ್ನಮಾಡುವಂತಹ ಕಠಿಣ ಪರಿಶ್ರಮಿಯಾದರೆ ಅಂತಿಮವಾಗಿ ಅಜ್ಞಾನದ ಕತ್ತಲೆಯು ದೂರವಾಗಿ ಬೆಳಕು ಕಾಣಿಸುವುದು. ನಿಮಗೆ ತಿಳಿಯಬೇಕಾಗಿರುವ ಎಲ್ಲವನ್ನೂ ತಿಳಿಯುವ ಸಮಯವು ಬಂದೇ ಬರುವುದು. ನಮ್ಮೆಲ್ಲರೊಳಗೂ ಉರಿಯುತ್ತಿರುವ ಸೂಕ್ಷ್ಮವಾದ ಆದರೆ ಚಿರಂತವಾದ ಆತ್ಮದ ಜ್ಯೋತಿಯನ್ನು ಎಂದೂ ನಂದಿಹೋಗಲು ಬಿಡಬಾರದು.

'ನಾನು ಮತ್ತೆ ಕನಸನ್ನು ಕಾಣುವುದು ಸಾಧ್ಯವೇ?' ಎಂಬ ನಿಮ್ಮ ಪ್ರಶ್ನೆಗೆ ನನ್ನ ಉತ್ತರ; ಕಷ್ಟಕಾಲ ಬಂದಾಗ ಆಶಾವಾದಿಯೂ ಛಲಗಾರನೂ ಆಗಿರಿ. ನೀವು ಎಷ್ಟೇ ವಯಸ್ಸಿನವರಾಗಿದ್ದರೂ ಈಗ ನೀವು ಯಾವ ಸ್ಥಿತಿಯಲೇ ಇದ್ದರೂ ನಿಮ್ಮ ಕನಸುಗಳನ್ನು ಬಿಡಬೇಡಿ. ಉತ್ತಮ ನಾಳೆಗಾಗಿ ಕನಸು ಕಾಣುವುದು ಎಂದೂ ಬಿಡಬೇಡಿ. ನಿಮ್ಮ ನಂಬಿಕೆ ಅಚಲವಾಗಿರಲಿ, ನಿಮ್ಮ ವೃತ್ತಿ ಕೌಶಲಗಳನ್ನು ಸಾಣೆಗೆ ಹಿಡಿಯರಿ, ಆವಿಷ್ಕಾರಗಳನ್ನು ಬರಮಾಡಿಕೊಳ್ಳಿ, ಶ್ರಮದಿಂದ ದುಡಿಯಿರಿ ಹಾಗೂ ಉತ್ತಮ ಚಾರಿತ್ರ್ಯವನ್ನು ರೂಢಿಸಿಕೊಳ್ಳಿ. ನನ್ನ ಬದುಕಿನ ಅತ್ಯಂತ ಆಹ್ಲಾದಕರ ಅನುಭವಗಳು ನನಗೆ ನನ್ನ ಕನಸುಗಳಿಂದಲೂ ನಿಷ್ಕಲಂಕಿತ ನಿರೀಕ್ಷೆಗಳಿಂದಲೂ ದೊರೆತಿವೆ. ನಿಮಗೆ ದೊರೆಯುವ ಅವಕಾಶಗಳನ್ನು ನೀವು ಹೃದಯಪೂರ್ವಕವಾಗಿ ಬರಸೆಳೆದುಕೊಂಡು ಕಾರ್ಯವೆಸಗಿದರೆ ನೀವೂ ಸಹ ದೊಡ್ಡ ಸಾಧನೆಗಳನ್ನು ಮಾಡಿದ ಅನುಭವವನ್ನು ನಿಮ್ಮದಾಗಿಸಿಕೊಳ್ಳುವಿರಿ.

**ನಾನು ಯುವಜನರಿಗೆ ಸೂಚಿಸ ಬಯಸುವ ಎರಡು ಮಹತ್ವದ ಧ್ಯೇಯಗಳೆಂದರೆ ಒಂದು ನಮ್ಮ ಕೈಯಲ್ಲಿರುವ ಕಾಲವನ್ನು ಹೆಚ್ಚಿಸುವುದು – ಇನ್ನೊಂದು ನಮಗೆ ದೊರೆತ ಸಮಯದಲ್ಲಿ ನಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಿಸಿಕೊಂಡು ಅತ್ಯಧಿಕ ಕಾರ್ಯಗಳನ್ನು ಮಾಡುವುದು. – ಡಾ. ಎ.ಪಿ.ಜೆ. ಅಬ್ದುಲ್ ಕಲಾಂ**

**ಶಬ್ದಗಳ ಅರ್ಥ:**

ಅಲ್ಜೀಮರ್ಸ್ : ಮೆದುಳಿಗೆ ಸಂಬಂಧಿಸಿದ ಕಾಯಿಲೆ
ಪಾರ್ಕಿನ್‌ಸನ್ : ನರವ್ಯವಸ್ಥೆಯಲ್ಲಿ ಅಸ್ತವ್ಯಸ್ತತೆ
ಬೀಜಾರೋಪಣ : ಹುಟ್ಟುವಿಕೆ
ಕಾಲಕ್ಲಪ್ತ : ಸಮಯವನ್ನು ಬೆರೆಸಿದ

**ಪ್ರಶ್ನೆಗಳು:**

೧. ಕನಸುಗಳು ಹೇಗಿರಬೇಕು?
೨. ಲೇಖಕರು ಯುವ ಜನಾಂಗಕ್ಕೆ ಸೂಚಿಸುವ ಧ್ಯೇಯಗಳಾವುವು?
೩. ನಮ್ಮನ್ನು ನಾವು ಹೇಗೆ ಕೃಷಿ ಮಾಡಬೇಕೆಂದು ಲೇಖಕರು ಹೇಳುತ್ತಾರೆ?
೪. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಹೇಳುವ ಕನಸುಗಳ ಸ್ವರೂಪವನ್ನು ವಿವರಿಸಿ.
೫. ಆರೋಗ್ಯವಂತರಾಗಿರಲು ಲೇಖಕರು ನೀಡುವ ಸಲಹೆಗಳಾವುವು?
೬. ಪ್ರಪಂಚದ ವಿಶಾಲವ್ಯಾಪ್ತಿಯ ಅನುಭವ ಪಡೆಯಲು ಯುವ ಜನಾಂಗ ಹೇಗೆ ರೂಪಿಸಿಕೊಳ್ಳಬೇಕು? ವಿವರಿಸಿ.
೭. ಅಪರಿಮಿತ ಅವಕಾಶ ಮತ್ತು ಅನುಕೂಲಗಳನ್ನು ಸದುಪಯೋಗ ಪಡಿಸಿಕೊಳ್ಳಲು ಯುವಜನಾಂಗ ಯಾವ ಮಾರ್ಗವನ್ನು ಅನುಸರಿಸಬೇಕು?
೮. ಕಷ್ಟಕಾಲದಲ್ಲಿ ಮನುಷ್ಯನು ಹೇಗೆ ಛಲಗಾರನೂ ಆಶಾವಾದಿಯೂ ಆಗಿರಬೇಕೆಂದು ಲೇಖಕರು ವಿವರಿಸುತ್ತಾರೆ?

# ೪. ಓದು ಪತ್ಯ
# ಕನಸು ಮತ್ತು ಹಗಲುಗನಸು

**– ವಿಶ್ವಕೋಶ : ಮೈಸೂರು ವಿ ವಿ**

**ಕನಸು ಮತ್ತು ಹಗಲುಕನಸು:** ನಿದ್ರೆಯ ಸಮಯದಲ್ಲಿ ಉದ್ಭವಿಸುವ ಭಾವರೂಪ ರಾಗಸರಣಿಯೇ. ನಿದ್ರಿಸುವ ವ್ಯಕ್ತಿಗೆ ನಿಜವೆಂಬಂತೆ ಭಾಸವಾಗುವ ಮಾನಸಿಕ ಪ್ರಕ್ರಿಯೆಯೇ ಕನಸು; ಸ್ವಪ್ನ (ಡ್ರೀಮ್). ಎಚ್ಚರವಾಗಿರುವಾಗಲೇ ಹಲವರು ಕಟ್ಟಿಕೊಳ್ಳುವ ಆಪ್ಯಾಯಕರವೂ ಹಲವೊಮ್ಮೆ ಭ್ರಾಂತಿಮಯವೂ ಆದ ಕಲ್ಪನಾವಿಲಾಸವೇ ಹಗಲುಗನಸು(ಡೇ ಡ್ರೀಂ). ಕನಸು ಕಾಣುವುದು ಮನಸ್ಸಿನ ಮುಖ್ಯ ಲಕ್ಷಣಗಳಲ್ಲೊಂದು. ಇದರ ಇತಿಹಾಸ ಮಾನವನ ಅವತರಣಿಕೆಯಷ್ಟೇ ಪ್ರಾಚೀನವಾದದ್ದು. ಜಾಗೃತ, ಸ್ವಪ್ನ ಮತ್ತು ಸುಷುಪ್ತ ಎಂಬುದಾಗಿ ಮನಸ್ಸಿಗೆ ಮೂರು ಅವಸ್ಥಾವಿಶೇಷಗಳಿವೆ. ಸ್ವಪ್ನಾವಸ್ಥೆಯಲ್ಲಿನ ಮಾನಸಿಕ ಕ್ರಿಯೆಯೇ ಕನಸು. ಬಹಳ ಹಿಂದೆಯೇ ಭಾರತಿಯ ದಾರ್ಶನಿಕರೂ ಋಷಿಗಳೂ ಕನಸಿನ ರಚನೆಯನ್ನು. ಅರ್ಥವನ್ನು ಉದ್ದೇಶವನ್ನು ಹಾಗೂ ಮನುಷ್ಯನ ಜೀವನದಲ್ಲಿ ಅದಕ್ಕಿರುವ ಪ್ರಾಮುಖ್ಯವನ್ನು ಕೂಲಂಕುಷವಾಗಿ ಚರ್ಚಿಸಿದ್ದಾರೆ. ಹಿಂದೂ, ಜೈನ ಮತ್ತು ಬೌದ್ಧ ದಾರ್ಶನಿಕರೂ ತಮ್ಮ ವಿಶೇಷ ಜ್ಞಾನದ ಸಹಾಯದಿಂದ ಹಾಗೂ ನಿಷ್ಠೆಯಿಂದ ಕೂಡಿದ ಅವಿರತ ಪರಿಶ್ರಮದಿಂದ ಮನಸ್ಸಿನ ರಚನೆಯನ್ನು ವಿವರಿಸುವುದಕ್ಕೂ ಇದರ ಆಧಾರದ ಮೇಲೆ ಕನಸನ್ನು ಸಮರ್ಪಕವಾಗಿ ವಿಶ್ಲೇಷಿಸುವುದಕ್ಕೂ ಶಕ್ತರಾಗಿದ್ದರು. ಆದರೆ ಇಂದು ಯಾವುದೂ ಮನೋವಿಜ್ಞಾನ ವೆನಿಸಿಕೊಂಡಿದೆಯೆ ಅದು ಪೂರ್ಣವಾಗಿ ಪಾಶ್ಚಾತ್ಯರದಾಗಿದ್ದು ಕೇವಲ ಒಂದು ಶತಮಾನದ ಕಿರಿಯ ವಿಜ್ಞಾನವಾಗಿದೆ. ಕಕನಸಿನ ಬಗ್ಗೆ ಬಹಳ ಹಿಂದೆಯೇ ಮೂಡಿದ ಅಭಿಪ್ರಾಯಗಳನ್ನು ಆಧುನಿಕ ವಿಜ್ಞಾನದ ವಿಚಾರಧಾರೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಪ್ರಯತ್ನ ಅತಿಶಯವಾದ ಉಪಯುಕ್ತತೆಯಿಂದ ಕೂಡಿದೆ.

ಕನಸು ಕಾಣುವುದೂ ನಿದ್ರೆ ಎಚ್ಚರಗಳಷ್ಟೇ ಸ್ವಾಭಾವಿಕವಾದ ಮಾನಸಿಕ ಕ್ರಿಯೆ. ಆದರೆ, ಮಾನವ ಇನ್ನೂ ಅನಾಗರಿಕ ದೆಸೆಯಲ್ಲಿದ್ದಾಗ.

ಅವನಲ್ಲಿನ್ನೂ ಯೋಚನಾಶಕ್ತಿ ಬೆಳೆದಿರಲಿಲ್ಲವಾಗಿ ಕನಸಿನಲ್ಲಿ ನಡೆದ ಅನುಭವಗಳನ್ನು ನಿಜವೆಂದೇ ಆತ ಭ್ರಮಿಸುತ್ತಿದ್ದನಲ್ಲದೆ, ಕನಸಿಗೂ ನೈಜತೆಗೂ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳಲು ಅಸಮರ್ಥನಾಗಿದ್ದ. ತನ್ನ ಆದಿವಾಸಿ ಸಹಚರನೊಬ್ಬ ವಿಲಕ್ಷಣವಾಗಿ ನಡೆದುಕೊಂಡಿದ್ದನ್ನು ಹ್ಯಾಟ್ಕ್ಲಿಫ್ ಎಂಬ ಮನೋವಿಜ್ಞಾನಿ ವಿವರಿಸಿದ್ದಾನೆ. ಆ ಆದಿವಾಸಿ ಹಿಂದಿನ ರಾತ್ರಿ ಕಂಡಿದ್ದ ಕನಸೇ ಆತನ ವಿಲಕ್ಷಣ ನಡತೆಗೆ ಕಾರಣವಾಗಿತ್ತು. ಅದೊಂದು ಕನಸು ಎಂಬ ಭಾವನೆಯೇ ಅವನಲ್ಲಿ ಮೂಡಿರಲಿಲ್ಲ. ಆದರೆ ಕಾಲ ಕ್ರಮದಲ್ಲಿ ಕನಸೇ ಬೇರೆ, ನಮ್ಮ ನಿಜಜೀವನದಲ್ಲಿನ ಅನುಭವಗಳೇ ಬೇರೆ ಎಂಬ ಸತ್ಯ ಮಾನವನಿಗೆ ಗೋಚರವಾಯಿತು. ಕನಸು ಒಂದು ರೀತಿಯ, ಪರಲೋಕದಿಂದ ಬರುವ, ಅಮಾನುಷ ಸಂದೇಶವೆಂದೇ ಆಗಿನವರ ಭಾವನೆಯಾಗಿತ್ತು. ಅವರ ಅಭಿಪ್ರಾಯವನ್ನು ಭಯಾನಕ ಸ್ವಪ್ನಗಳು ಭೂತಪ್ರೇರಿತವೂ ಸುಖಸ್ವಪ್ನಗಳು ದೈವಪ್ರೇರಿತವೂ ಆಗಿದ್ದವು. ಅಂದಿನ ಮಾನವ ತನ್ನ ಕನಸುಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದನಲ್ಲದೆ ಅದರ ಮೂಲಕ ಬರುವ ಸಂದೇಶಗಳನ್ನು ಎಳ್ಳಷ್ಟೂ ತಪ್ಪದೆ ಪಾಲಿಸಬೇಕೆಂದು ತಿಳಿದಿದ್ದ. ಇಂದಿಗೂ ಅನೇಕ ಹಳ್ಳಿಗಾಡು ಜನರಲ್ಲಿ ಇಂಥ ಮೂಢನಂಬಿಕೆಗಳು ಪ್ರಬಲವಾಗಿ ಮನೆಮಾಡಿರುವುದನ್ನು ಕಾಣಬಹುದು.

ಮನುಷ್ಯನಲ್ಲಿ ಆಲೋಚನಾಶಕ್ತಿ ಕುದುರಿದಂತೆ ಹಾಗೂ ನಾಗರಿಕತೆ ಬೆಳೆದಂತೆ, ಆತ ಕನಸಿನ ಮೂಲದ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿದ. ಅನೇಕ ಪಾಶ್ಚಾತ್ಯ ದಾರ್ಶನಿಕರು ಮನಸ್ಸಿನ ಅಗಾಧ ಆಳವನ್ನು ಹೊಕ್ಕು ಮನಸ್ಸಿನ ವಿಶೇಷ ಕ್ರಿಯೆಯಾದ ಕನಸಿನ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಇವು ಯಾವುವೂ ಪ್ರಯೋಗಗಳ ಮೇಲೆ ನಿರ್ಧಸಿದವಲ್ಲ.

ಕನಸಿನ ಕ್ರಮಬದ್ಧ ಹಾಗೂ ವೈಜ್ಞಾನಿಕ ಪರಿಶೀಲನೆ ಸಿಗ್ಮಂಡ್ ಫ್ರಾಯ್ಡನ ನೇತೃತ್ವದಲ್ಲಿ ಮನೋವಿಶ್ಲೇಷಣ ಸಿದ್ಧಾಂತದ ಒಂದು ಭಾಗವಾಗಿ ಅರಂಭವಾಯಿತು. ಫ್ರಾಯ್ಡ್ ತನ್ನ ದಿಗ್ಭ್ರಮೆಗೊಳಿಸುವಂಥ ಸಂಶೋಧನೆಗಳಿಂದ ವಿಜ್ಞಾನ ಕ್ಷೇತ್ರದಲ್ಲೇ ದೊಡ್ಡ ವಿಚಾರಕ್ರಾಂತಿ ಯೊಂದನ್ನು ಎಬ್ಬಿಸಿದ. ಇದು ಡಾರ್ವಿನ್ನ ವಿಕಾಸವಾದಕ್ಕೆ ಸರಿದೊರೆಯಾಗಿತ್ತು. ಫಾಯ್ಡ್‌ನ ಮನೋವಿಶ್ಲೇಷಣ ಧರ್ಮ ಗುರುಗಳೂ ಪುರೋಹಿತವರ್ಗದವರೂ ಮನುಷ್ಯನ ಮತ್ತು ಅವನ ಸ್ವಭಾವದ ಬಗ್ಗೆ

ಮೂಡಿಸಿದ್ದ ಸಾತ್ತ್ವಿಕ ಮತ್ತು ಅದರ ಆವಿರ್ಭಾವದ ವಿವಿಧ ಹಂತಗಳನ್ನೂ ವಿವರಿಸಿದ್ದು ಫ್ರಾಯ್ಡನ ಮಹತ್ತರ ಸಾಧನೆಗಳಲ್ಲೊಂದು. ೨೦ನೆಯ ಶತಮಾನದ ಆದಿಯಲ್ಲಿ ಫ್ರಾಯ್ಡ್ ಪ್ರಕಟಿಸಿದ ಡ್ರೀಮ್ ಇಂಟರ್ಪ್ರಿಟೇಷನ್ (ಸ್ವಪ್ನದ ಅರ್ಥವಿವರಣೆ) ಎಂಬ ವೈಜ್ಞಾನಿಕ ಗ್ರಂಥ ವಿಶ್ವಪ್ರಸಿದ್ಧವಾಗಿದೆ.

ಪ್ರಾಯ್ಡ್ ವಿಶಾಲಾರ್ಥದಲ್ಲಿ ಎರಡು ಮುಖ್ಯ ಮೂಲಪ್ರವೃತಿಗಳನ್ನು (ಇನ್ಸ್ಟಿಂಕ್ಟ್) ಗುರುತಿಸಿದ. ಮೊದಲನೆಯದು ಲೈಂಗಿಕ ಪ್ರವೃತ್ತಿ. ಎರಡನೆಯದು ನಾಶಾತ್ಮಕ ಪ್ರವೃತ್ತಿ. ಫ್ರಾಯ್ಡನ್ ಮತದಲ್ಲಿ ಈ ಎರಡು ಮೂಲಪ್ರವೃತ್ತಿಗಳು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇದ್ದೇ ಇವೆ. ವ್ಯಕ್ತಿಯ ಎಲ್ಲ ಹೋರಾಟವೂ ನಡವಳಿಕೆಯೂ ಸುಖಾಪೇಕ್ಷೆಯನ್ನು ಕುರಿತಂಥವೇ. ಕನಸಿಗೆ ಸಂಬಂಧಿಸಿದಂತೆಯೂ ಈ ವಿಚಾರಗಳು ಬಹಳ ಮಟ್ಟಿಗೆ ಹೊಂದಿಕೊಳ್ಳುತ್ತವೆ.

ಶೈಶವಾವಸ್ಥೆಯಲ್ಲಿ ಹಸಿವು, ಭಯ, ಉತ್ಸುಕತೆ ಮುಂತಾದ ಅನೇಕ ಮೂಲ ಪ್ರವೃತ್ತಿಗಳೊಂದಿಗೆ ಬೆರೆತು ಲೈಂಗಿಕ ಪ್ರವೃತ್ತಿ ರೂಪವನ್ನು ತಳೆದು ಕ್ರಿಯಾಶೀಲವಾಗಿರುತ್ತದೆ. ಇದು ಮುಂದೆ ಶಿಶುವಿನಲ್ಲಿ ಅದರ ದೇಹಕ್ಕೂ ಮನಸ್ಸಿಗೂ ತೃಪ್ತಿಯನ್ನುಂಟುಮಾಡುವ ರೀತಿಯಲ್ಲಿ ದೇಹದ ವಿವಿಧ ಭಾಗಗಳಲ್ಲಿ ಕೇಂದ್ರೀಕೃತವಾಗುತ್ತದೆ. ಉದಾಹರಣೆಗೆ ತುಟಿ, ಸ್ತನಾಗ್ರ, ಕೆನ್ನೆ, ತೊಡೆ ಮುಂತಾದುದೆಲ್ಲ ಶಿಶುವಿನ ಲೈಂಗಿಕ ಪ್ರವೃತ್ತಿಯನ್ನು ಪೂರೈಸುವ ಸಾಧನೆಗಳಾಗುತ್ತವೆ. ವಯಸ್ಕರ ದೃಷ್ಟಿ ಕೋನದಿಂದ ನೋಡುವುದಾದರೆ ಶಿಶುವನ್ನು ನೀಚ, ಅನೀತಿಯುತ ಗುಣಗಳಿಂದ ಕೂಡಿದ ಬಹುರೂಪಿ ವಕ್ರ (ಪಾಲಿಮಾರ್ಫಸ್ ಪರ್ವರ್ಸ್) ಎನ್ನಬೇಕಾಗುತ್ತದೆ.

ಕಾಲಕ್ರಮದಲ್ಲಿ ಶಿಶು ಬೆಳೆದಂತೆ ಅದು ಸಮಾಜದ ಪ್ರಭಾವಕ್ಕೊಳಪಟ್ಟು ಅದರಲ್ಲಿ ಅಹಂ ರೂಪುಗೊಳ್ಳುತ್ತದೆ. ಹೊಸದಾಗಿ ಮೂಡಿದ ಅಹಮಿಗೂ ಹಿಂದಿನಿಂದ ಬಂದ ಲೈಂಗಿಕ ಪ್ರವೃತ್ತಿಗೂ ಘರ್ಷಣೆ ಅನಿವಾರ್ಯ. ಇದರಲ್ಲಿ ಅಹುಮಿಗೇ ಗೆಲುವಾಗುತ್ತದೆ. ಲೈಂಗಿಕ ಪ್ರವೃತ್ತಿಗಳು ಪ್ರಕಟಗೊಳ್ಳಲು ಅಹಂ ಅವಕಾಶ ಕೊಡುವುದಿಲ್ಲ. ಅವುಗಳನ್ನು ಅದುಮಿಡುತ್ತವೆ. ಇದು ಸು. ೬ನೆಯ ವರ್ಷದ ವೇಳೆಗೆ ಪೂರ್ಣವಾಗಿ ನಾಶವಾಗಿ ಹೋದಂತೆ ತೋರುತ್ತದೆ. ಆದರೆ ನಿಜವಾಗಿಯೂ ಇದು ನಾಶವಾಗುವುದಿಲ್ಲ. ಇದರ ಅಲ್ಪಾಂಶ, ಪ್ರೀತಿ ಕೋಮಲ ಸ್ವಭಾವ ಮುಂತಾದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ.

ವ್ಯಕ್ತಿ ತಾರುಣ್ಯಾವಸ್ಥೆಯನ್ನು ಪ್ರವೇಶಿಸುತ್ತಲೆ, ಹುದುಗಿದ್ದ ಲೈಂಗಿಕ ಪ್ರವೃತ್ತಿ ಪುನಃ ಕ್ರಿಯಾಶೀಲವಾಗುತ್ತದೆ. ಆದರೆ ಲೈಂಗಿಕ ಪ್ರವೃತ್ತಿ ಪ್ರಕಟಗೊಳ್ಳದಿರುವಂತೆ ಅಹಂ ನಿರ್ಬಂಧಿಸುತ್ತದೆ. ಹೀಗೆ ಅಹಂನಿಂದ ನಿರ್ಬಂಧಿಸಲ್ಪಟ್ಟಿದ್ದರೂ ಕ್ರಿಯಾಶೀಲವಾಗಿರುವ ಈ ಲೈಂಗಿಕ ಪ್ರವೃತ್ತಿಯ ಸುಪ್ತಚೇತನ ರೂಪಗೊಳ್ಳುವುದಕ್ಕೆ ಕಾರಣ. ಹೀಗೆ ಶೈಶವಾಸ್ಥೆಯಲ್ಲಿನ ಲೈಂಗಿಕ ಪ್ರವೃತ್ತಿ ದಮಿಸಲ್ಪಡುವುದೇ ಸುಪ್ತಚೇತನ ಅವಿರ್ಭಾವಕ್ಕೆ ಕಾರಣ. ಹೀಗೆ ಶುರುವಾದ ಸುಪ್ತಚೇತನ ಕ್ರಮೇಣ ಘರ್ಷಣೆಗಳ ಪರಿಣಾಮದಿಂದ ವೃದ್ಧಿಗೊಳ್ಳುತ್ತ ಹೋಗುತ್ತದೆ.

ದಮಿಸಲ್ಪಟ್ಟ ಇಂಥ ಅನೇಕ ಮಾನಸಿಕ ಚಟುವಟಿಕೆಗಳಲ್ಲಿ ಈಡಿಪ್ಲೆಕ್ಸ್ (ನೋಡಿ–ಈಡಿಪಸ್–ಕಾಂಪ್ಲೆಕ್ಸ್) ಒಂದು. ಇದು ಶಿಶುವಿನಲ್ಲಿ ಅದು ಮೊಲೆಯುಣ್ಣುವ ವಯಸ್ಸಿನಲ್ಲೆ ತನ್ನ ತಾಯಿಯ ಬಗ್ಗೆ ಮೂಡಿಬರುತ್ತದೆ. ಈ ಭಾವನೆ ವ್ಯಕ್ತಿಯ ತಾರುಣ್ಯಾವಸ್ಥೆಯಲ್ಲಿ ವಿಶೇಷವಾಗಿದ್ದು. ತನ್ನ ತಾಯನ್ನೇ ಕಾಮಿಸುವ ಸುಪ್ತಚೇತನದ ಇಚ್ಛೆಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ.

ಫ್ರಾಯ್ಡ್‌ನ ಸಿದ್ಧಾಂತದ ಮುಖ್ಯಾಂಶಗಳು ಕೆಳಕಂಡಂತಿದೆ:

೧. **ಸುಪ್ತಚೇತನ:** ವ್ಯಕ್ತಿಯ ಮನಸ್ಸಿನ ಭಾಗ ಸುಪ್ತಚೇತನ ದಲ್ಲಡಗಿರುವುದಲ್ಲದೆ. ಪ್ರಮುಖ ನಿರ್ಧಾರಗಳು ಸಹ ಸುಪ್ತಚೇತನದಲೇ ಅಡಕವಾಗಿರುತ್ತದೆ. ನಮ್ಮ ಚೇತನಾವಸ್ಥೆ ಇಡೀ ಮನಸ್ಸಿನ ಎಲ್ಲೋ ಒಂದು ಅಲ್ಪಾಂಶ. ಸಮಾಜ ಮತ್ತು ನೈತಿಕತೆಯ ದೃಷ್ಟಿಯಿಂದ ನೋಡಿದಾಗ ಸುಪ್ತಚೇತನದಲ್ಲಿ ತುಂಬಿರುವ ವಿಚಾರಗಳು ನಿಂದಾತ್ಮಕವಾಗಿದೆ. ಏಕಂದರೆ ವ್ಯಕ್ತಿ ಹುಟ್ಟುತ್ತಲೇ ಪಾಶವೀ ಗುಣಗಳಿಂದ ಕೂಡಿರುತ್ತಾನೆ. ಮುಂದೆ ಅನೇಕ ಕಹಿ ಅನುಭವಗಳು ಸೇರುತ್ತ ಹೋಗುತ್ತವೆ. ಇಡೀ ಮನಸ್ಸಿನ ಯಾವ ಒಂದು ಭಾಗವನ್ನು ಚೇತನದ ಸಹಾಯದಿಂದ ಗುರುತಿಸಲು ಸಾಧ್ಯವೋ ಆ ಭಾಗವೇ ಅಹಂ. ಸುಪ್ತಚೇತನದಲ್ಲಿ ಅಡಗಿರುವ ಲೈಂಗಿಕ ಪ್ರವೃತ್ತಿಯೂ ದುಷ್ಟ, ಅನೈತಿಕ, ಅಸಾಮಾಜಿಕ ವಿಚಾರಗಳೂ ಅಹಂಗೆ ಭಯಂಕರವಾಗಿ ಕಾಣುತ್ತವೆ.

೨. **ರೋಧಕ (ಸೆನ್ಸರ್):** ಅನಾರೋಗ್ಯಕಾರಿ ಅಥವಾ ಅಸೌಖ್ಯಕಾರಿ ಇಚ್ಛೆಗಳು ರೋಧಕದ ನಿರ್ಬಂಧಕ್ಕೊಳಪಟ್ಟು ಸುಪ್ತಚೇತನದಲ್ಲಿ ಬಂಧಿತವಾಗಿರುತ್ತವೆ. ವ್ಯಕ್ತಿ ಎಚ್ಚರವಾಗಿರುವಾಗ ರೋಧಕದ ಕ್ರಿಯೆ ಎಷ್ಟು

ದಕ್ಷತೆಯಿಂದ ಕೂಡಿರುತ್ತದೆಂದರೆ. ಸುಪ್ತಚೇತನದಲ್ಲಿರುವ ಯಾವ ವಿಷಯವನ್ನೂ ಅದು ಚೇತನಕ್ಕೆ ಬಿಡುವುದಿಲ್ಲ. ಸುಪ್ತಚೇತನಲ್ಲಿರುವ ವಿಷಯದ ಬಗ್ಗೆ ವ್ಯಕ್ತಿಗೆ ಏನೂ ತಿಳಿಯುವುದಿಲ್ಲ. ಆದರೂ ದಮಿಸಲ್ಪಟ್ಟ ಹಾಗೂ ಗುಪ್ತವಾಗಿರುವ ಸುಪ್ತಚೇತನದ ವಿಷಯಗಳು ಮಾತಾಡು ವಾಗಲೂ ಬರೆವಣಿಗೆಯಲ್ಲೂ ಹಗಲುಗನಸುಗಳೇ ಮುಂತಾದ ಅನೇಕ ರೂಪಗಳಲ್ಲಿ ಸಂದರ್ಭಾನುಸಾರ, ಸುಪ್ತಚೇತನದಿಂದ ಚೇತನಕ್ಕೆ ನುಸುಳಿಕೊಂಡು ಬಂದುಬಿಡುತ್ತವೆ.

ಚೇತನ ಅನೇಕ ವೇಳೆ ನಿರ್ವಿಕಾರವಾಗಿರುತ್ತದೆ. ಪ್ರಬಲಶಕ್ತಿಗಳಿಂದ ಸುಪ್ತಚೇತನ ಮತ್ತು ರೋಧಕಗಳ ನಡುವಣ ಘರ್ಷಣೆಗೆ ಚೇತನ ಬಲಿಯಾಗಿ ಅನೇಕ ಬಾರಿ ಕಷ್ಟಗಳಿಗೂ ಗುರಿಯಾಗುತ್ತದೆ. ಸುಪ್ತಚೇತನದಲ್ಲಿದ ವಿಷಯ ಪ್ರಕಟಗೊಳ್ಳಲು ಪ್ರಯತ್ನಿಸಿದರೆ ರೋಧಕ ಅಡ್ಡಿಬರುತ್ತದೆ. ಆದರೆ ನಿದ್ರಾವಸ್ಥೆ ರೋಧಕದ ಸಮರ್ಪಕತೆಯನ್ನೂ ಎಚ್ಚರಿಕೆಯನ್ನೂ ಕುಗ್ಗಿಸಿ ಸುಪ್ತಚೇತನದ ವಿಷಯಗಳು ಚೇತನವನ್ನು ನಿರಾತಂಕವಾಗಿ ಪ್ರವೇಶಿಸಲು ಅನುಕೂಲ ಮಾಡಿಕೊಡುತ್ತದೆ. ಆದರೂ ಸ್ವಪ್ನದಲ್ಲೂ ರೋಧಕದ ದಕ್ಷತೆಯನ್ನು ಕಾಣಬಹುದು.

ಸುಪ್ತಚೇತನದಲ್ಲಿರುವ ಲೈಂಗಿಕ ಆಸೆಗಳು ಅಸಮರ್ಪಕ ರೋಧಕವನ್ನು ಸುಲಭವಾಗಿ ಮೋಸಗೋಳಿಸಿ ಚೇತನವನ್ನು ಪ್ರವೇಶಿಸುತ್ತವೆ. ಸುಪ್ತಚೇತನದಲ್ಲಿನ ನಿಂದಾತ್ಮಕ ಅವ್ಯಕ್ತವಿಷಯ (ಲೇಟೆಂಟ್ ಕಂಟೆಂಟ್) ಆಗ ಚಿತ್ರಗಳ ರೂಪದಲ್ಲಿ ವ್ಯಕ್ತವಿಷಯವಾಗಿ (ಮ್ಯಾನಿಫೆಸ್ಟ್ ಕಂಟೆಂಟ್) ಕಾಣಿಸಿಕೊಳ್ಳುತ್ತದೆ. ಅಸಮರ್ಪಕ ರೋಧಕವನ್ನು ಮೋಸಗೊಳಿಸುವುದಕ್ಕಾಗಿಯೇ ಅದು ಈ ವೇಷ ತಳೆಯುತ್ತದೆ. ಹೀಗೆ ಚಿತ್ರರೂಪದಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿವಿಷಯ (ಸ್ವಪ್ನ) ಎಷ್ಟು ಸಂಕೀರ್ಣವಾಗಿರುತ್ತದೆ ಎಂದರೆ, ರೋಧಕಕ್ಕೆ ಅದರ ಹಿಂದಿರುವ ಅರ್ಥ ತತ್ಕ್ಷಣ ಹೊಳೆಯುವುದಿಲ್ಲ. ಆದ್ದರಿಂದ ಯಾವುದು ಕನಸು ಎನಿಸಿಕೊಳ್ಳುತ್ತದೋ ಅದು ಸುಪ್ತಚೇತನಕ್ಕೂ ರೋಧಕಕ್ಕೂ ನಡುವಣ ಸಮನ್ವಯ.

ಸ್ವಪ್ನದ ರಚನೆಯಲ್ಲಿ ಚೇತನವೂ ತನಗರಿವಿಲ್ಲದೆಯೇ ತನ್ನ ನೆರವು ನೀಡುತ್ತಿರುತ್ತದೆ. ಹೇಗೆಂದರೆ ಸುಪ್ತಚೇತನದ ವಿಷಯಗಳು

ಪ್ರಕಟಗೊಳ್ಳಲು. ಚೇತನಾವಸ್ಥೆಯಲ್ಲಿ ಗ್ರಹಿಸಿದ ಅನುಭವಗಳೇ ಸಾಧನಗಳಾಗುತ್ತವೆ. ಶೈಶವದ ಬಹುರೂಪಿ ವಕ್ರಗಾಮಿಗಳಾದ ಅನೈತಿಕ ಲೈಂಗಿಕ ಸಂಬಂಧ, ಸಮೀಪವರ್ತಿಗಳ ಮರಣ ಮುಂತಾದ ಇಚ್ಛೆಗಳು ನಿದ್ರಿತವ್ಯಕ್ತಿಯಲ್ಲಿ ನೇರವಾಗಿಯೇ ಕಾಣಿಸಿಕೊಂಡರೆ ಅದು ಅವನ ನಿದ್ರೆಯನ್ನು ಭಂಗಿಗೊಳಿಸಬಹುದು ಅಥವಾ ಅವನ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರಬಹುದು. ವ್ಯಕ್ತಿಯನ್ನು ಇದರಿಂದ ತಪ್ಪಿಸುವುದಕ್ಕಾಗಿ, ಸುಪ್ತಚೇನದ ವಿಷಯಗಳು ಚೇತನಕ್ಕೆ ಒಪ್ಪಿಗೆಯಾಗುವ ಮಾರ್ಗದಲ್ಲಿ ವೇಷ ಮರೆಸಿಕೊಂಡು ಕಾಣಿಸಿಕೊಳ್ಳುತ್ತವೆ. ಹೀಗೆ ಸುಪ್ತಚೇತನದ ಯಾವ ವಿಷಯ ಚೇತನಕ್ಕೆ ಬರಲು ಹೋರಾಟ ನಡೆಸಿರುವುದೋ ಅದನ್ನೆ ಫ್ರಾಯ್ಡ್ ಇಚ್ಛೆ ಎಂದು ಕರೆದಿದ್ದಾನೆ.

ವ್ಯಕ್ತಿ ಎಚ್ಚರವಾಗಿರುವಾಗ ರೋಧಕ ಎಷ್ಟು ಪ್ರಬಲವಾಗಿರುತ್ತದೆಂದರೆ. ಸುಪ್ತಚೇತನ ಇಚ್ಛೆಗಳ ಅರಿವು ಆತನಿಗೆ ಸ್ವಲ್ಪವೂ ಇರುವುದಿಲ್ಲ. ಆದರೆ ನಿದ್ರಾವಸ್ಥೆಯಲ್ಲಿ ಸುಪ್ತಚೇತನದ ವಿಷಯಗಳು ಚೇತನದ ರಂಗವನ್ನು ಪ್ರವೇಶಿಸುತ್ತವೆ. ಆದರೆ ರೋಧಕ ಆಗಲೂ ಸಾಕಷ್ಟು ಎಚ್ಚರವಾಗಿರುವುದರಿಂದ ಕನಸುಗಳು ವಿಕೃತಗೊಂಡು ಕಾಣಿಸಿಕೊಳ್ಳುತ್ತವೆ.

ಯಾವುದು ಕನಸೋ ಅದನ್ನು ವ್ಯಕ್ತವಿಷಯ ಎಂದು ಕರೆಯಲಾಗಿದೆ. ವ್ಯಕ್ತವಿಷಯ ಯಾವುದರಿಂದ ಪ್ರೇರೇಪಿತವಾಗಿಯೇ, ವ್ಯಕ್ತವಿಷಯದಲ್ಲಿ ಯಾವುದು ಸ್ಪಷ್ಟವಾಗಿ ಕಂಡುಬರುವುದಿಲ್ಲವೋ ಅದು ಅವ್ಯಕ್ತವಿಷಯ. ಆದ್ದರಿಂದ ವ್ಯಕ್ತ ವಿಷಯದ ಅವ್ಯಕ್ತವಿಷಯವನ್ನು ತಿಳಿಯುವುದೇ ಸ್ವಪ್ನವಿಶ್ಲೇಷಣೆ. ವ್ಯಕ್ತವಿಷಯಕ್ಕೂ ಅವ್ಯಕ್ತವಿಷಯಕ್ಕೂ ನಡುವೆ ಇರಬಹುದಾದ ತರ್ಕಬದ್ಧ ಸಂಬಂಧವನ್ನು ಹುಡುಕುವುದರ ಜೊತೆಗೆ ಸ್ವಪ್ನಿಯ ಮನಸ್ಸಿನಲ್ಲಿ ಆತನ ಸ್ವಪ್ನಕ್ಕೆ ಸಂಬಂಧಿಸಿದಂತೆ ಅಡಗಿರುವ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದೂ ವಿಶ್ಲೇಷಣೆಯ ಉದ್ದೇಶ. ಫ್ರಾಯ್ಡ್‌ನ ಪ್ರಕಾರ ಸ್ವಪ್ನದಲ್ಲಿ ಮುಖ್ಯವಾದ ಭಾವನೆ ವಿಲಕ್ಷಣವಾಗಿಯೂ ಅನಪೇಕ್ಷಿತ ರೀತಿಯಲ್ಲೂ ಅಲ್ಲದೆ ತರ್ಕವಿರುದ್ಧವಾಗಿಯೂ ಇರುತ್ತದೆ.

ನಿದ್ರಾವಸ್ಥೆಯಲ್ಲಿ ಹೊರಗಿನಿಂದ ಬರುವ ಪ್ರಚೋದನೆಗಳಿಗೆ ಮನಸ್ಸು ತೋರುವ ಪ್ರತಿಕ್ರಿಯೆಯೇ ಕನಸು. ಆದರೆ ಈ ಪ್ರತಿಕ್ರಿಯ ಇಡೀ ಸ್ವಪ್ನದಲ್ಲಿ ಎಲ್ಲೋ ಸ್ವಲ್ಪ ಭಾಗ ಮಾತ್ರ. ಕೇವಲ ಪ್ರಚೋದನೆಯನ್ನೇ ಯಥಾವತ್

ಪ್ರತಿನಿಧಿಸುವುದೇ ಕನಸಲ್ಲ. ಅದಕ್ಕೆ ಬದಲಾಗಿ ಅದು ಪ್ರಚೋದನೆಯ ಸುತ್ತ ಒಂದು ಕಥೇಯನ್ನು ಹೆಣೆಯುತ್ತದೆ. ಆ ಕಥೆಯಲ್ಲಿ ಮೂಲಪ್ರಚೋದನೆ ಸ್ಪಷ್ಟವಾಗಿ ಕಾಣಿಸಿಕೊಳ್ಳಬಹುದು. ಅಥವಾ ಕಾಣಿಸಿಕೊಳ್ಳದಿರಬಹುದು. ಪ್ರಚೋದನೆಗಿಂತ, ಪ್ರಚೋದನೆ ಉಂಟು ಮಾಡುವ ಸಂಗತಿಗಳು ಸ್ವಪ್ನದ ವ್ಯಕ್ತವಿಷಯದಲ್ಲಿ ಪ್ರಧಾನ ಪಾತ್ರವಹಿಸುತ್ತವೆ.

ಅವ್ಯಕ್ತ ವಿಷಯ ವ್ಯಕ್ತವಿಷಯವಾಗಿ ರೂಪುಗೊಳ್ಳುವ ವಿಧಾನದಲ್ಲಿ ಅನೇಕ ಹಂತಗಳುಂಟು. ಇವನ್ನು ಫ್ರಾಯ್ಡ್ ಸ್ವಪ್ನರಚನೆ (ಡ್ರೀಂವರ್ಕ್) ಎಂದು ಕರೆದಿದ್ದಾನೆ.

೩. **ಸಂಕ್ಷೇಪಣೆ:** ಅವ್ಯಕ್ತ ವಿಷಯದಲ್ಲಿ ಅನೇಕ ವಿಷಯಗಳಿರುತ್ತವೆ. ಆದರೆ ಅಷ್ಟೂ ವ್ಯಕ್ತವಿಷಯದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಮುಖ್ಯವಾದ ಕೆಲವು ಅಂಶಗಳು ಮಾತ್ರ ಕಾಣಿಸಿಕೊಳ್ಳುತ್ತವೆ. ಆದ್ದರಿಂದ ನಾವು ಕಾಣುವ ಕನಸು ಅದರ ಹಿಂದಿರುವ ಅವ್ಯಕ್ತವಿಷಯದ ಒಂದು ಸಂಕ್ಷಿಪ್ತ ವಿವರಣೆ. ಈ ಸಂಕ್ಷೇಪಣೆಯ ಕಾರ್ಯ ಅನೇಕ ರೀತಿಗಳಲ್ಲಿ ನಡೆಯುತ್ತದೆ. ಅವುಗಳಲ್ಲಿ ಮುಖ್ಯವಾದವು ಇವು: ಎ. ಅವ್ಯಕ್ತವಿಷಯದಲ್ಲಿನ ಕೆಲವು ಅಮುಖ್ಯ ಸಂಗತಿಗಳು ವ್ಯಕ್ತವಿಷಯದಲ್ಲಿ ಬಿಟ್ಟುಹೋಗುತ್ತವೆ. ಬಿ. ಅವ್ಯಕ್ತವಿಷಯದಲ್ಲಿನ ಬೇರೆ ಬೇರೆ ಅಂಶಗಳಿರುತ್ತವೆ. ಆದರೆ ಆ ಎಲ್ಲ ಅವ್ಯಕ್ತವಿಷಯಗಳ ಸ್ವಲ್ಪ ಭಾಗಗಳು ಮಾತ್ರ ವ್ಯಕ್ತವಿಷಯದಲ್ಲಿ ಕಾಣಿಸಿಕೊಳ್ಳುತ್ತವೆ. ಸಿ. ಸಮಾನ ಅಂಶಗಳಿಂದ ಕೂಡಿದ ಅನೇಕ ಆವ್ಯಕ್ತವಿಷಯಗಳು ಪರಸ್ಪರ ಮಿಶ್ರಗೊಂಡು ವ್ಯಕ್ತವಿಷಯದಲ್ಲಿ ಒಂದೇ ಕಥೆಯ ರೂಪದಲ್ಲಿ ವ್ಯಕ್ತಗೊಳ್ಳುತ್ತವೆ. ಡಿ. ಕೊನೆಯದಾಗಿ ಯಾವುದಾದರೊಂದು ಪ್ರಧಾನ ಇಚ್ಛೆಯ ಸುತ್ತ ಅನೇಕ ಬೇರೆ ಬೇರೆ ಅವ್ಯಕ್ತವಿಷಯಗಳು ಹೆಣೆದುಕೊಂಡಿರುತ್ತವೆ. ಆದ್ದರಿಂದ ಒಂದು ಕನಸನ್ನು ವಿಶ್ಲೇಷಿಸಿದಾಗ ಇನ್ನೂ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಸುಪ್ತಚೇತನದಲ್ಲಿ ಅಡಗಿರುವ ವಿಷಯಗಳನ್ನು ಕಾಣಬಹುದು.

ಆಧುನಿಕ ಕಲಾಕಾರ ಚಿತ್ರವನ್ನು ಬಿಡಿಸುವಾಗ ಎಲ್ಲ ಸೂಕ್ಷ್ಮ ಭಾಗಗಳನ್ನೂ ವಿವರವಾಗಿ ಚಿತ್ರಿಸಲು ಹೋಗುವುದಿಲ್ಲ. ಅವು ವೀಕ್ಷಕನ ಕಲ್ಪನೆಗೆ ಸೇರಿದ್ದು. ಇದೇ ರೀತಿಯಲ್ಲಿ ಸ್ವಪ್ನಗಳಲ್ಲೂ ಅವ್ಯಕ್ತವಿಷಯಗಳು ಸೂಚ್ಯವಾಗಿಯೂ ವಿವರವಾಗಿಯೂ ಇರುವುದಿಲ್ಲ. ಅವ್ಯಕ್ತವಿಷಯದಲ್ಲಿ

ಪ್ರಧಾನವಾಗಿರುವ ಇಚ್ಛೆ ವ್ಯಕ್ತವಿಷಯದಲ್ಲಿ ಗೌಣವಾಗಿರುತ್ತದೆ; ಅವ್ಯಕ್ತವಿಷಯದಲ್ಲಿ ಗೌಣವಾಗಿರುವ ಇಚ್ಛೆ ವ್ಯಕ್ತವಿಷಯದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ವಿಷಯಪಲ್ಲಟನೆ ಎಂದು ಹೆಸರು.

**೪. ನಾಟಕೀಕರಣ (ಡ್ರಾಮಟೈಸೇಷನ್):** ಅವ್ಯಕ್ತವಿಷಯಲ್ಲಿರುವ ಆಲೋಚನೆಗಳು ವ್ಯಕ್ತವಿಷಯದಲ್ಲಿ ಚಿತ್ರಗಳು ರೂಪದಲ್ಲಿ ಪರಿವರ್ತಿಸಲ್ಪಡುವುದೇ ನಾಟಕೀಕರಣ. ಇದು ಸ್ವಪ್ನರಚನೆಯ ಮೂರನೆಯ ಲಕ್ಷಣ. ಕನಸಿಗೆ ತನ್ನಲ್ಲಿರುವ ಅಭಿಪ್ರಾಯವನ್ನು ತರ್ಕಬದ್ಧವಾಗಿ ವ್ಯಕ್ತಪಡಿಸಲು ಸರಿಯಾದ ಯಾವ ಸಾಧನವೂ ಇಲ್ಲ. ಆದ್ದರಿಂದ ಅವ್ಯಕ್ತಭಾವನೆಗಳು ಚಿತ್ರಗಳ ರೂಪದಲ್ಲಿ ಪ್ರಕಟಗೊಳ್ಳುತ್ತದೆ.

**೫. ಸಂಕೇತನಿರ್ಮಾಣ (ಸಿಂಬಲೈಸೇಷನ್):** ಮತ್ತೊಂದು ಮುಖ್ಯ ಲಕ್ಷಣ. ಸ್ವಪ್ನಾಲೋಚನೆಯೆಲ್ಲವೂ ಸಂಕೇತಗಳ ಮೂಲಕವೇ ಪ್ರಕಟಗೊಳ್ಳುತ್ತದೆ. ಅದರಲ್ಲೂ ವಿಶೇಷವಾಗಿ ಸುಪ್ತಚೇತನದಲ್ಲಿ ಅಡಕವಾಗಿರುವ ಲೈಂಗಿಕ ಭಾವನೆಗಳು ಸಾಂಕೇತಿಕವಾಗಿಯೇ ಪ್ರಕಟಗೊಳ್ಳುತ್ತವೆ. ಮಕ್ಕಳನ್ನು ಪಡೆಯಬೇಕು. ಅವನ್ನು ಪಾಲಿಸಬೇಕು ಎಂಬ ಬಂಜೆಯ ಆಸೆಗಳು ಸ್ವಪ್ನದಲ್ಲಿ ಆಕೆ ಮುದ್ದು ಹಾಗೂ ಸಾಕುಪ್ರಾಣಿಗಳೊಂದಿಗಿರುವಂತೆ ಕಂಡು ಬರಬಹುದು. ತಂದೆ ತಾಯಿ, ಸಹೋದರ ಸಹೋದರಿ ಜನನ ಮರಣ ಮುಂತಾದ ಅನೇಕ ವಿಷಯಗಳೂ ಸಂಕೇತಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇಂಥ ಅನೇಕ ಸಂಕೇತಗಳನ್ನು ಫ್ರಾಯ್ಡ್ ವಿವರಿಸಿದ್ದಾನೆ. ಕೆಲವು ಉದಾಹರಣೆಗಳು ಇವು. ಮನೆ ಮಾನವನ ಆಕೃತಿ ಸೂಚಕ; ನುಣುಪುಗೋಡೆ ಪುರುಷಸೂಚಕ; ಮನೆಗೆ ಉಪ್ಪರಿಗೆಯ ಮೊಗಸಾಲೆಯಿದ್ದರೆ ಅದು. ಸ್ತ್ರೀ ಸೂಚಕ; ನೀರು ಜನನಕ್ಕೆ ಸಂಬಂಧಪಟ್ಟ ಭಾವನೆಗಳ ಪ್ರತೀಕ; ಮನೆಯ ಮುಂದಿನ ಮೆಟ್ಟಲುಗಳನ್ನು ಇಳಿಯುತ್ತಿರುವಂತೆ ಕಂಡರೆ ಅದು ಸಾವಿನ ಸೂಚನೆ; ಸವಾರಿಯೂ ಬೆಟ್ಟದ ಪ್ರದಕ್ಷಿಣೆಯೂ ಕನಸುಗಾರನ ಮಹತ್ವಾಕಾಂಕ್ಷೆಯ ದ್ಯೋತಕ. ಬಹಳ ಹೆಚ್ಚಿನ ಸಂಕೇತಗಳು ಲೈಂಗಿಕತೆಯತ್ತಲೇ ಬೆಟ್ಟು ಮಾಡುತ್ತವೆ. ಉದಾಹರಣೆಗೆ ಮರಗಳು, ಸೀಸದ ಕಡ್ಡಿ, ಕತ್ತಿ, ಭರ್ಜಿ, ಚಾಕು, ಛತ್ರಿ. ಹಾವು ಮುಂತಾದವೆಲ್ಲ ಪುರುಷನ ಲಿಂಗದ ಸಂಕೇತ.

ಹಣ್ಣು, ಚೀಲ, ಖಾಲಿಸೀಸೆ, ಮೇಜಿನ ಡ್ರಾಯರು, ಅಲಮಾರು ಮುಂತಾದವೆಲ್ಲ ಯೋನಿಯ ಸಂಕೇತ. ರೈಲಿನಲ್ಲಿ (ವಾಹನದಲ್ಲಿ)

ಪ್ರಯಾಣ. ಗೋಡೆಯ ಮೇಲೆ ಕುಳಿತ ಭಂಗಿ, ಕುದುರೆ ಅಥವಾ ಸೈಕಲ್ ಸವಾರಿ, ಶಿಲುಬೆಯ ದೃಶ್ಯ – ಇವು ಸಂಭೋಗ ಕ್ರಿಯೆಯ ಸೂಚನೆ. ಎತ್ತು, ಕುದುರೆ, ನಾಯಿ ಮತ್ತು ಕೆಲವು ಧಾರ್ಮಿಕ ಸಂಕೇತಗಳೂ ಲೈಂಗಿಕ ಭಾವನೆಗಳನ್ನೇ ಸಂಕೇತಿಸುತ್ತವೆ. ಯಾರೋ ಕೈಯಲ್ಲಿ ಚಾಕು ಹಿಡಿದು ತಿವಿಯಲು ಬಂದಂತೆ ಹೆಣ್ಣುಮಕ್ಕಳು ಕಾಣುವ ವ್ಯಾಕುಲಪೂರ್ಣ ಸ್ವಪ್ನಗಳೂ ಲೈಂಗಿಕ ಇಚ್ಛೆಯ ಪ್ರತೀಕವೇ. ವಯಸ್ಸಾದ ಹೆಂಗಸನ್ನು ಸಮೀಪಿಸುತ್ತಿರುವಂತೆ ಕಂಡರೆ ಅದು ಸ್ವಪ್ನಿಯ ಈಡಿಪಸ್ ಕಾಂಪ್ಲೆಕ್ಸನ್ನು ಸೂಚಿಸುತ್ತದೆ. ಹೀಗೆ ಅಸಂಖ್ಯ ಸಂಕೇತಗಳ ಮೂಲದ ವ್ಯಕ್ತಿಯ ಅಸಭ್ಯ, ದುಷ್ಟ ಹಾಗೂ ಅನೈತಿಕ ಭಾವನೆಗಳು ಸ್ವಪ್ನದಲ್ಲಿ ಪರೋಕ್ಷವಾಗಿ ಪ್ರಕಟಗೊಳ್ಳುತ್ತವೆ.

**೬. ಪುನರ್ನಿರ್ಮಾಣ (ಸೆಕಂಡರಿ ಇಲ್ಯಾಬೊರೇಷನ್):** ಇದು ಸ್ವಪ್ನ ರಚನೆಯ ಇನ್ನೊಂದು ಕ್ರಿಯೆ. ಸುಪ್ತಚೇತನದಲ್ಲಿ ಅಡಕವಾಗಿರುವ ಅನಾರೋಗ್ಯಕಾರಿ ಇಚ್ಛೆಗಳು ಚೇತನಕ್ಕೂ ಬಂದು, ಚೇತನದ ಸಮತೋಲವನ್ನು ಕೆಡಿಸದಂತೆ ನೋಡಿಕೊಳ್ಳುವುದು ರೋಧಕದ ಮುಖ್ಯ ಕರ್ತವ್ಯ.

ಕನಸುಗಳು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಚಿತ್ರಗಳಾದರೂ ಈ ಚಿತ್ರಗಳು ತರ್ಕಬದ್ಧವಾಗಿಯಾಗಲಿ, ಕ್ರಮಬದ್ಧವಾಗಿಯಾಗಲಿ ಜೋಡಿಸಲ್ಪಟ್ಟಿರುವುದಿಲ್ಲ. ಈ ಜೋಡಣೆಯ ಮತ್ತು ಸಂಪಾದನೆ (ಎಡಿಟಿಂಗ್) ಕೆಲಸವನ್ನು ಸ್ವಪ್ನದ ಪುನರ್ನಿರ್ಮಾಣ ಕ್ರಿಯೆ ನಿರ್ವಹಿಸುತ್ತದೆ. ಇದು ನಿರ್ವಹಿಸುವ ಮತ್ತೊಂದು ಕರ್ತವ್ಯವೆಂದರೆ, ಅವ್ಯಕ್ತ ವಿಷಯಗಳೆಲ್ಲವನ್ನೂ ಈ ರೀತಿ ಕಥೆಯ ರೂಪಕ್ಕೆ ಒಳಪಡಿಸವ ಕ್ರಿಯೆ ಅನುಚೇತನದ ಹಂತದಲ್ಲಿ ನಡೆಯುತ್ತದೆ.

ಇದೇ ಪುನರ್ನಿರ್ಮಾಣಕ್ರಿಯೆ ಕನಸನ್ನು ವಾಲ್ಟ್ ಡಿಸ್ನಿಯ ವ್ಯಂಗ್ಯಚಿತ್ರಗಳಿಗೆ ಹೋಲಿಸಬಹುದು. ಇಲ್ಲಿ ಚಿತ್ರಕ್ಕಿಂತ ಅದರ ಹಿಂದೆ ಅಡಗಿರುವ ಅರ್ಥ ಮುಖ್ಯ. ಆದ್ದರಿಂದಲೇ ವಿಶ್ಲೇಷಕನಿಗೆ ವ್ಯಕ್ತವಿಷಯ ಗೌಣ. ಅವನ ದೃಷ್ಟಿ ಯಾವಾಗಲೂ ಅವ್ಯಕ್ತವಿಷಯದ ಕಡೆಗೇ ಇರುತ್ತದೆ. ಹೀಗೆ ಕನಸು ಅವ್ಯಕ್ತವಿಷಯದ ಅಸ್ಪಷ್ಟ ಹಾಗೂ ವಿಕೃತರೂಪ. ಈ ದೃಶ್ಯಗಳನ್ನು ವಿಭಜಿಸಿ ಅದರ ಹಿಂದೆ ಅಡಕವಾಗಿರುವ ಭಾವನೆಗಳನ್ನು

ಅರ್ಥ ಮಾಡಿಕೊಳ್ಳುವುದೇ ವಿಶ್ಲೇಷಕನ ಕೆಲಸ. ಕನಸುಗಳು ಭೌತಿಕ ಹಾಗೂ ಮಾನಸಿಕ ಪ್ರಚೋದನೆಗಳೆರಡರಿಂದಲೂ ಉಂಟಾಗುತ್ತವೆ. ಭೌತಿಕ ಪ್ರಚೋದನೆಗಳು ವ್ಯಕ್ತಿ ನಿದ್ರಿಸುತ್ತಿರುವಾಗ ಅವನ ಇಂದ್ರಿಯಗಳೊಂದಿಗೆ ಸಂಪರ್ಕವೇರ್ಪಡಿಸಿಕೊಂಡಾಗ ಆತನಲ್ಲಿ ಕನಸನ್ನುಂಟು ಮಾಡುತ್ತವೆ.

ನಿದ್ರಿಸುತ್ತಿರುವ ವ್ಯಕ್ತಿಯ ಕಿವಿಯ ಬಳಿ ನೊಣ ಗುಯ್ ಗುಟ್ಟುತ್ತ ಹಾರಾಡುತ್ತಿದ್ದರೆ ಅದು ಅವನಲ್ಲಿ ಜಲಪಾತದ ಸ್ವಪ್ನವನ್ನೊ ಬಿರುಗಾಳಿಯ ಸ್ವಪ್ನವನ್ನೊ ಉಂಟು ಮಾಡಬಹುದು. ಒಬ್ಬ ವಿದ್ಯಾರ್ಥಿ ಚಲನಚಿತ್ರದ ಎರಡನೆಯ ಪ್ರದರ್ಶನ ನೋಡಿ ಕೊಠಡಿಗೆ ಹಿಂದಿರುಗಿದ. ಆ ವೇಳೆಗೆ ಆತನ ಸ್ನೇಹಿತ ಕೊಠಡಿಯ ಬಾಗಿಲು ಮುಚ್ಚಿ ಮಲಗಿದ್ದ. ವಿದ್ಯಾರ್ಥಿ ಎರಡು ಮೂರು ಬಾರಿ ಬಾಗಿಲನ್ನು ಮೆತ್ತಗೆ ತಟ್ಟಿದರೂ ಸ್ನೇಹಿತನಿಗೆ ಎಚ್ಚರವಾಗಲಿಲ್ಲ. ಅನಂತರ ಕಿಟಕಿಯ ಬಳಿ ಬಂದು. ಮಲಗಿದ್ದ ಸ್ನೇಹಿತನ ಮುಖದ ಮೇಲೆ ಕೈಲಿದ್ದ ಟಾರ್ಚಿನಿಂದ ಬೆಳಕು ಬೀರಿ, ಕಿಟಕಿಯ ಬಾಗಿಲುಗಳನ್ನು ಜೋರಾಗಿ ಬಡಿದ. ಇದರಿಂದ ಮಲಗಿದ್ದ ಸ್ನೇಹಿತ ಗಾಬರಿಗೊಂಡವನಾಗಿಯೂ ದಿಗ್ಭ್ರಾಂತನಾಗಿಯೂ ಎದ್ದುಕೂತ. ಒಂದು ಕ್ಷಣ ಆತನಿಗೆ ಏನೂ ತೋಚಲಿಲ್ಲ. ಅನಂತರ ಎದ್ದು ಬಾಗಿಲು ತರೆದ. ಭಯಂಕರವಾದ ಗುಡುಗು, ಮಿಂಚು, ಬಿರುಗಾಳಿಗಳಿಂದ ಕೂಡಿದ ಮಳೆಗೆ ಸಿಕ್ಕಿಕೊಂಡಿದ್ದಂತೆ ತನಗೊಂದು ಕನಸಾಯಿತೆಂದು ಆತ ಸ್ವಲ್ಪ ಹೊತ್ತಿನ ಅನಂತರ ವಿವರಿಸಿದ. ಬಾಗಿಲು ಬಡಿತದ ಸದ್ದು. ಟಾರ್ಚ್ ಬೆಳಕು–ಬಾಹ್ಯ ಪ್ರಚೋದನೆಯಿಂದಾಗಿ ಆತನಿಗೆ ಈ ಬಗೆಯ ಕನಸಾಯಿತು.

ಇದೇ ರೀತಿಯಲ್ಲಿ ಅಜೀರ್ಣ, ಮಲಬದ್ಧತೆ ದೇಹದ ಅಂಗಾಂಗಗಳಲ್ಲಿನ ಅಸೌಖ್ಯ. ಸುತ್ತಮುತ್ತ ನಡೆಯುತ್ತಿರುವ ಸದ್ದುಗದ್ದಲ ಮುಂತಾದ ಅನೇಕ ಬಾಹ್ಯ ಪ್ರಚೋದನೆಗಳು ನಿದ್ರಿಸುವ ವ್ಯಕ್ತಿಯಲ್ಲಿ ಕನಸುಗಳನ್ನುಂಟುಮಾಡುತ್ತವೆ. ಆದರೂ, ಬಹು ಹೆಚ್ಚಿನ ಕನಸುಗಳು ಭೌತಿಕ ಪ್ರಚೋದನೆಗಳಿಗಿಂತ ಮಾನಸಿಕ ಪ್ರಚೋದನೆಗಳಿಂದಲೇ ಉತ್ಪನ್ನವಾಗುತ್ತವೆ. ಉದಾಹರಣೆಗೆ, ಈಡೇರದ ಬಯಕೆಗಳು, ಭಯ, ಉದ್ವಿಗ್ನತೆ, ವಿರೋಧ, ತುಮುಲತೆ ಮುಂತಾದವೆಲ್ಲ ಕನಸುಗಳಿಗೆ ಕಾರಣವಾದ ಮಾನಸಿಕ ಪ್ರಚೋದನೆಗಳು. ಇವುಗಳಿಂದ ಉತ್ಪನ್ನವಾಗುವ ಕನಸುಗಳಲ್ಲಿ ಹಲವು ವಿಧಗಳಿವೆ. ಮುಖ್ಯವಾದ ಕೆಲವನ್ನು ಮುಂದೆ

ಸೂಚಿಸಿದೆ; (i) ವ್ಯಕ್ತಿ ಎಚ್ಚರವಾಗಿದ್ದಾಗ ಏನನ್ನು ಕುರಿತು ಯೋಚಿಸುತ್ತಿದ್ದನೋ ಅದರ ಬಗ್ಗೆ ನಿರ್ಣಯಕ್ಕೆ ಬಂದಿರುವಂತೆ ಅಥವಾ ಸಮಸ್ಯೆಗೆ ಪರಿಹಾರ ದೊರಕಿದಂತೆ ಕೆಲವು ಬಾರಿ ಕನಸುಗಳಾಗುತ್ತವೆ. ಇವು ಸಮಸ್ಯೆ ಪರಿಹಾರ ಸ್ವಪ್ನಗಳು. (ii) ಆತ್ಮವಿಮರ್ಶೆ ಅಥವಾ ಆತ್ಮಕಥೆಯಿಂದ ಕೂಡಿದ ಸ್ವಪ್ನಗಳು. (iii) ವರ್ಣಸ್ವಪ್ನಗಳು; ಸಾಮಾನ್ಯವಾಗಿ ಹೆಚ್ಚಿನ ಸ್ವಪ್ನಗಳು ಕಪ್ಪು–ಬಿಳುಪು ಚಿತ್ರಗಳಿಂದ ಮಾತ್ರ ಕೂಡಿರುತ್ತವೆ. ಅಪರೂಪಕ್ಕೆ ಸ್ವಪ್ನಗಳು ವರ್ಣರಂಜಿತವಾಗಿರುವುದೂ ಉಂಟು. (iv) ವಿವರಣಾತ್ಮಕ ಸ್ವಪ್ನಗಳು: ಇಂಥ ಸ್ವಪ್ನಗಳು ದೊಡ್ಡವಾಗಿದ್ದು ವೈವಿಧ್ಯದಿಂದಲೂ ವಿಶೇಷವಾದ ವಿವರದಿಂದಲೂ ಕೂಡಿರುವುದಲ್ಲದೆ ಕರಿಚ್ಛೇದ ಮತ್ತು ಅಂಕಗಳಲ್ಲಿ ವಿಭಜಿತವಾಗಿರುತ್ತವೆ. (v) ಶಬ್ದಚಮತ್ಕಾರದ ಮೇಲೆ ಆಧಾರಿತವಾಗಿರುವ ಕನಸುಗಳು. (vi) ಉದ್ದಿಶ್ಯಪೂರ್ಣ ಸ್ವಪ್ನಗಳು. (vii) ಭವಿಷ್ಯಸೂಚಕ ಸ್ವಪ್ನಗಳು: ತನ್ನ ಗಂಡ ಸೆನೇಟಿನಲ್ಲಿ ಕೊಲೆಯಾದಂತೆ ಸೀಸರನ ಪತ್ನಿ ಕಂಡಳೆಂದು ಹೇಳಲಾದ ಸ್ವಪ್ನವೊಂದು ಉದಾಹರಣೆ. ಆಕೆ ತಡೆದರೂ ಕೇಳದೆ ಸೀಸರ್ ಸೆನೇಟಿಗೆ ಹೋದ ಕನಸು ನಿಜವಾಯಿತು. (viii) ಸಮಕಾರಕ (ಕಾಂಪೆನ್ಸೇಟರಿ) ಸ್ವಪ್ನಗಳು: ವ್ಯಕ್ತಿಗಳು ವಾಸ್ತವ ಜೀವನದಲ್ಲಿ ದೋಷಗಳನ್ನೂ ನೈಚ್ಯಭಾವ ಸಂಕೀರ್ಣವನ್ನೂ (ಇನ್ಫೀರಿಯಾರಿಟಿ ಕಾಂಪ್ಲಕ್ಸ್) ಪಡೆದಿರುತ್ತಾರೆ. ಆದರೆ ಕನಸುಗಳಲ್ಲಿ ಇವೆಲ್ಲವನ್ನೂ ಜಯಿಸಿರುತ್ತಾರೆ. ಉದಾಹರಣೆಗೆ ತೊದಲುವ ದೋಷದಿಂದ ಕೂಡಿರುವಾತ ಕನಸಿನಲ್ಲಿ ಸರಾಗವಾಗಿ ಭಾಷಣ ಮಾಡುತ್ತಿರುವಂತೆ ಕಾಣಬಹುದು. (ix) ಸೈನಿಕರ ಯುದ್ಧಸ್ವಪ್ನಗಳು: ಎಚ್ಚರವಾಗಿದ್ದಾಗ ಪಡೆದ ಅನುಭವ ಸನ್ನಿವೇಶಗಳೇ ಕನಸಿನಲ್ಲೂ ಕಾಣಿಸಿಕೊಳ್ಳುತ್ತವೆ. (x) ಉದ್ವಿಗ್ನತಾಪೂರ್ಣ ಸ್ವಪ್ನಗಳು: ಸಾಂಸಾರಿಕ ಸಾಮಾಜಿಕ ಭಯಗಳು. ಲೈಂಗಿಕ ಜೀವನದ ಅತೃಪ್ತಿ ಮುಂತಾದ ಭಯಗಳು ಉದ್ವಿಗ್ನತಾಪೂರ್ಣ ಸ್ವಪ್ನಗಳನ್ನು ಉಂಟುಮಾಡುತ್ತವೆ. ತಾರುಣ್ಯಾವಸ್ಥೆಯಲ್ಲಿರುವ ಹೆಂಗಸರ ಮತ್ತು ಗಂಡಸರ ಹೆಚ್ಚಿನ ಸ್ವಪ್ನಗಳ ಹಿನ್ನಲೆಯಲ್ಲಿ ಇದನ್ನು ಕಾಣಬಹುದು.

ಉದ್ವಿಗ್ನತೆ ಕಾಣಿಸಿಕೊಳ್ಳುವ ರೀತಿ ಅನೇಕ ವಿಧ. ಉದಾಹರಣೆಗೆ, ಪರೀಕ್ಷೆಗೆ ಕುಳಿತಿರುವಂತೆ. ಪ್ರಶ್ನೆ ಪತ್ರಿಕೆಗಳು ಬಹಳ ಕಠಿಣವಾಗಿರುವಂತೆ ಕಂಡುಬಂದು ಅದರಿಂದ ಮನಸ್ಸು ಉದ್ವಿಗ್ನವಾಗಬಹುದು; ಅಥವಾ

ಕೊಲೆಯಾದಂತೆ. ಇಲ್ಲವೆ ಕೊಲೆ ಮಾಡಿದಂತೆ ಕಂಡುಬಂದು ಭಯಕಾರಕವಾಗಬಹುದು. ವ್ಯಕ್ತಿಯಲ್ಲಿ ಗುಪ್ತವಾಗಿರುವ ಹೆದರಿಕೆಗಳೂ ಅಧಿಕ ಪ್ರಮಾಣದ ಭಯಗಳೂ ನಿದ್ರಿಸುವ ವ್ಯಕ್ತಿಯಲ್ಲಿ ಭಯಂಕರ ಸ್ವಪ್ನಗಳನ್ನು (ನೈಟ್‌ಮೇರ್) ಉಂಟುಮಾಡುತ್ತವೆ.

ಮಗು ಎಲ್ಲಿ ಸತ್ತುಹೋಗುತ್ತದೋ ಎಂಬ ತಾಯಿಯ ಅತಿ ಭಯದಿಂದ ಅವಳಿಗೆ ಮಗು ಸತ್ತುಹೋಗಿರುವಂತೆಯೇ ಸ್ವಪ್ನವಾಗಬಹುದು. ಇಲ್ಲಿ ಅದು ಅವಳ ಇಚ್ಛೆಯನ್ನು ತೋರಿಸುವುದಿಲ್ಲ. ಅದಕ್ಕೆ ಬದಲು ಅವಳಲ್ಲಿ ಅಡಗಿರುವ ಭಯವನ್ನು, ಉದ್ವಿಗ್ನತೆಯನ್ನು ಸೂಚಿಸುತ್ತದೆ. (xi) ಈಡೇರದೆ ಉಳಿದುಕೊಂಡ ಬಯಕೆಗಳು ಕನಸಿನಲ್ಲಿ ಪುರೈಸಬಹುದು. (xii) ನಿದ್ರಾರಕ್ಷಕ ಸ್ವಪ್ನಗಳು: ಹಲವು ಕನಸುಗಳು ನಿದ್ರಾರಕ್ಷಕಗಳು. ಉದಾಹರಣೆಗೆ. ನಿದ್ರೆಯಲ್ಲಿರುವಾಗ ವ್ಯಕ್ತಿಗೆ ಬಾಯಾರಿಕೆಯಾಗಬಹುದು: ಅಥವಾ ಮೂತ್ರಕೋಶ ತುಂಬಿದ್ದು, ಮೂತ್ರವಿಸರ್ಜನೆ ಮಾಡಬೇಕೆನಿಸಬಹುದು. ಆದರೂ ನಿದ್ರೆಯಿಂದ ಎಚ್ಚರಗೊಂಡು ಅಡುಗೆಮನೆಗೋ ಬಚ್ಚಲುಮನೆಗೋ ಎದ್ದುಹೋಗಲು ಮನಸ್ಸು ಒಪ್ಪುವುದಿಲ್ಲ. ಅಂಥ ಸಂದರ್ಭಗಳಲ್ಲಿ ಆ ಇಚ್ಛೆ ಕನಸಿನರೂಪದಲ್ಲಿ ಕಾಣಿಸಿಕೊಂಡು ಅದರಲ್ಲಿ ಪೂರೈಕೆಯಾಗುತ್ತದೆ. ಉದಾಹರಣೆಗೆ, ಹೇರಳವಾಗಿ ನೀರು ಕುಡಿಯುತ್ತಿರುವಂತೆ ಅಥವಾ ಮೂತ್ರವಿಸರ್ಜನೆ ಮಾಡುತ್ತಿರುವಂತೆ ಕನಸಿನಲ್ಲಿ ಕಂಡುಬರುತ್ತದೆ. ಇದರಿಂದಾಗಿ ನಿದ್ರಿತ ವ್ಯಕ್ತಿಯ ತಕ್ಷಣದ ಆಸೆ ಪೂರೈಸಿದಂತಾಗುವುದರಿಂದ ಆತ ನಿದ್ರೆಯಿಂದ ಎಚ್ಚರಗೊಳ್ಳಬೇಕಾದ ಅವಶ್ಯಕತೆಯಿರುವುದಿಲ್ಲ. (xiii)ಕೆಲವು ಸಮಯಗಳಲ್ಲಿ ಒಂದೇ ಕನಸು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಆಗಾಗ್ಗೇ ಕಾಣಿಸಿಕೊಳ್ಳುತ್ತಿರುತ್ತದೆ. ಸ್ವಪ್ನಿ ಯಾವುದೋ ಸಮಸ್ಯೆಗೆ ಪರಿಹಾರ ದೊರಕದೆ ತೊಳಲಾಡುತ್ತಿರುವುದಕ್ಕೆ ಇದು ಸೂಚನೆ. (xiv) ವ್ಯಕ್ತಿ ಒಮ್ಮೊಮ್ಮೆ ಕನಸಿನಲ್ಲಿ ಕೂಗಲು ಪ್ರಯತ್ನಿಸಬಹುದು. ಆದರೆ ಧ್ವನಿಯು ಹೊರಡುವುದಿಲ್ಲ. ಓಡಿಹೋಗಲು ಪ್ರಯತ್ನಿಸಿದಲ್ಲೂ ಕಾಲುಗಳು ನೆಲಕ್ಕೆ ಅಂಟಿಕೊಳ್ಳುತ್ತವೆ. ಉಸಿರು ಕಟ್ಟಿದಂತಾಗುತ್ತದೆ. ಹೀಗೆ ಅನೇಕ ರೀತಿಯಲ್ಲಿ ಸ್ವಪ್ನದಲ್ಲಿ ಚಟುವಟಿಕೆಗಳಿಗೆ ತಡೆಯೊದಗುತ್ತದೆ. ಇಂಥ ಸ್ವಪ್ನಗಳು ಸ್ವಪ್ನಿಯಲ್ಲಿರುವ ಇಡ್ ಮತ್ತು ಆದಿಅಹಂಗಳ ನಡುವಿನ ಘರ್ಷಣೆಯನ್ನು ಸೂಚಿಸುತ್ತವೆ. (xv) ಕೊನೆಯದಾಗಿ ಕೆಲವು ಸಾಧಾರಣ ಸ್ವಪ್ನಗಳನ್ನು ಉದಾಹರಿಸಬಹುದು:

ಹಾರಾಡುತ್ತಿರುವಂತೆ, ಈಜುತ್ತಿರುವಂತೆ, ಬೀಳುತ್ತಿರುವಂತೆ, ಸವಾರಿ ಮಾಡುತ್ತಿರುವಂತೆ, ಹತ್ತುತ್ತಿರುವಂತೆ, ಪ್ರಯಾಣ ಮಾಡುತ್ತಿರುವಂತೆ, ರೈಲು ಬಸ್ಸು ತಪ್ಪಿದಂತೆ, ಬೆತ್ತಲೆಯಾಗುವಂತೆ, ಪ್ರಣಯ ಕ್ರೀಡೆಯಲ್ಲಿರುವಂತೆ, ಸಾಹಸಕೃತ್ಯಗಳನ್ನು ಮಾಡುತ್ತಿರುವಂತೆ. ಇವೆಲ್ಲ ಸಾಧಾರಣವಾಗಿ ಎಲ್ಲರಲ್ಲೂ ಹೆಚ್ಚು ಪ್ರಮಾಣದಲ್ಲಿ ಕಂಡುಬರುವ ಸ್ವಪ್ನಗಳಾಗಿವೆ. ಕನಸಿನ ಕೆಲವು ಸಾಮಾನ್ಯ ಲಕ್ಷಣಗಳಿವು: ಎಚ್ಚರವಾಗಿರುವಾಗ ವ್ಯಕ್ತಿ ಹೊರವಿಶ್ವವನ್ನು ಹೇಗೆ ಜ್ಞಾನೇಂದ್ರಿಯಗಳ ಮೂಲಕ ತಿಳಿಯುತ್ತಾನೆಯೋ ಹಾಗೆಯೇ ಕನಸನ್ನು ಆ ಮೂಲಕವೇ ತಿಳಿಯುತ್ತಾನೆ. ಸ್ವಪ್ನಗಳು ಹೆಚ್ಚಾಗಿ ತಿಳಿಯಬರುವುದು ದೃಶ್ಯೇಂದ್ರಿಯದ ಮೂಲಕವೇ. ಶ್ರವಣೇಂದ್ರಿಯದ ಮೂಲಕ (ಅಂದರೆ ಕನಸಿನಲ್ಲಿ ದೃಶ್ಯಭಾಗವಿರದೆ ಕೇವಲ ಶಬ್ದಗಳು ಮಾತ್ರ ಕೇಳಿಬರುತ್ತವೆ) ತಿಳಿಯಬರುವ ಸ್ವಪ್ನಗಳೂ ಸಾಕಷ್ಟು ಸಂಖ್ಯೆಯಲ್ಲಿರುತ್ತವೆ.

ಇದೇ ರೀತಿಯಲ್ಲಿ ಕೇವಲ ಘ್ರಾಣೇಂದ್ರಿಯದ ಮೂಲಕವೂ ಕನಸುಗಳನ್ನು ಅನುಭವಿಸಬಹುದು. ಅಂದರೆ ಕೇವಲ ವಾಸನೆಗಳು. ತಿಳಿದುಬರುತ್ತವೆಯೇ ವಿನಾ ಶಬ್ದಭಾಗವಾಗಲಿ, ದೃಶ್ಯಭಾಗವಾಗಲಿ ಇರುವುದಿಲ್ಲ. ಇಂಥ ಕನಸುಗಳು ಬಹಳ ವಿರಳ. ಮಕ್ಕಳು ತಮ್ಮ ಐದನೆಯ ವರ್ಷದ ಒಳಗೆ ಅಂಧರಾದರೆ ಮುಂದೆ ಅವರ ಕನಸುಗಳಲ್ಲಿ ದೃಶ್ಯಭಾಗ ಮಾಯವಾಗಿದ್ದು ಅವು ಶಬ್ದ ಮತ್ತು ವಾಸನೆಗಳಿಂದ ಮಾತ್ರ ಕೂಡಿರುತ್ತವೆ.

**ಹಗಲುಗನಸು:** ಹಗಲುಗನಸಿಗೂ ಕನಸಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಹಗಲುಗನಸಿನಲ್ಲಿ ದೃಶ್ಯಭಾಗಗಳಿರುವುದಿಲ್ಲ. ಅಲ್ಲದೆ, ಆಸೆಗಳೂ ಆಕಾಂಕ್ಷೆಗಳೂ ಅವುಗಳ ನೇರರೂಪದಲ್ಲಿ ಹೆಚ್ಚು ಸ್ಪಷ್ಟತೆಯಿಂದ ಪ್ರಕಟಗೊಳ್ಳುತ್ತವೆ.

ಚಾರ್ಲ್ಸ್ ಲ್ಯಾಂಬನ ಡ್ರೀಂ ಚಿಲ್ಡ್ರನ್ ಎಂಬ ಕೃತಿ ಹಗಲುಗನಸಿನ ಕೊಡುಗೆ. ಕನ್ನಡ ಪ್ರಬಂಧಕಾರ ಎ. ಎನ್. ಮೂರ್ತಿರಾಯರು ಹಗಲುಗನಸುಗಳು ಎಂಬ ಅಭಿದಾನದಲ್ಲಿ ಒಂದು ಪ್ರಬಂಧವನ್ನೇ ನೇಯ್ದಿದ್ದಾರೆ. ಹಗಲುಗನಸಿನಲ್ಲಿ ಆಶಾವಾದವೂ ದೃಢಭಾವನೆಗಳೂ ಭಗ್ನಮನೋರಥಗಳೂ ನಿರಾಶೆಗಳೂ ಸ್ಪಷ್ಟವಾಗಿ ಪ್ರತಿಫಲಿಸುತ್ತವೆ. ನಿತ್ಯದ ಅನೇಕ ತೊಂದರೆಗಳೂ ಅಸಹಾಯಕತೆಗಳೂ ವ್ಯಕ್ತಿಯನ್ನು ದುಃಖಿತನನ್ನಾಗಿಯೂ ನಿರಾಶನನ್ನಾಗಿಯೂ ಮಾಡುತ್ತದೆ. ಇದೇ

ಭಾವನೆಯೆ ಅವನಲ್ಲಿ ಬಹಳ ಕಾಲ ಉಳಿದರೆ, ಅದು ಅವನ ಮಾನಸಿಕ ಸಮತೋಲವನ್ನು ಕೆಡಿಸಬಹುದು.

ಇದರಿಂದ ತಪ್ಪಿಸಿಕೊಳ್ಳಲು ಹಾಗೂ ವಾಸ್ತವಿಕತೆಯಲ್ಲಿರುವ ಅಸಮರ್ಪಕತೆಯಿಂದ ತಪ್ಪಿಸಿಕೊಂಡು ತನ್ನ ಈಡೇರದ ಬಯಕೆಗಳನ್ನು ಪೂರೈಸಿಕೊಳ್ಳಲು ಹಗಲುಗನಸಿನ ಮೊರೆಹೋಗುತ್ತಾನೆ. ಹಗಲು ಗನಸುಗಳೆಲ್ಲ ವ್ಯಕ್ತಿಯ ಸುತ್ತಲೇ ಹೆಣೆಯಲ್ಪಟ್ಟಿದ್ದು ವ್ಯಕ್ತಿಯೇ ಅದರ ಪ್ರಧಾನ ಪಾತ್ರಧಾರಿ. ಪ್ರತಿಯೊಂದು ಮಗುವಿನಲ್ಲೂ ಉತ್ಸಾಹವೂ ಸಾಹಸಪ್ರಿಯತೆಯೂ ಎಲ್ಲರ ಮುಂದೆಯೂ ತನ್ನ ಪ್ರಭಾವವನ್ನು ತೋರಿಸಿಕೊಳ್ಳಬೇಕೆಂಬ ಆಸೆಯೂ ಇರುತ್ತದೆ. ಇಂಥ ಮನೋಭಾವಗಳಲ್ಲಿ ಕೆಲವಂಶಗಳು ಹಗಲುಗನಸುಗಳಲ್ಲಿ ಸಾರ್ಥಕ ಹೊಂದುತ್ತವೆ.

ತಿರುಕನ ಕನಸು ಒಂದು ಉದಾಹರಣೆ. ಜನರನ್ನು ಆಕರ್ಷಿಸಲು ಅಶಕ್ತಳಾಗಿರುವ ಕುರೂಪಿ ಹೆಂಗಸು ತನ್ನ ಹಗಲುಗನಸಿನಲ್ಲಿ ತನ್ನನ್ನು ಸುರಸುಂದರಿಯಂತೆ ಚಿತ್ರಿಸಿಕೊಂಡು. ಸುತ್ತಮುತ್ತ ಹತ್ತಾರು ಆರಾಧಕರು ಅಂಗಲಾಚುತ್ತಿರುವಂತೆ ಕಲ್ಪಿಸಿಕೊಳ್ಳಬಹುದು. ಹಗಲುಗನಸುಗಳು ಎಲ್ಲ ವಯಸ್ಸಿನವರಲ್ಲೂ ಕಂಡುಬರುತ್ತವೆ. ಆದರೆ ತಾರಾಣ್ಯಾವಸ್ಥೆಯಲ್ಲಿ ವಿಶೇಷ. ಆಗಿನ ಹೆಚ್ಚಿನ ಹಗಲುಗನಸುಗಳೆಲ್ಲ ವ್ಯಕ್ತಿಯ ಭವಿಷ್ಯತ್ತು. ಸಾಹಸ, ಪ್ರಣಯ, ಸುಖದ ನಿರೀಕ್ಷೆ, ಗತವೈಭವ ಮುಂತಾದವನ್ನು ವಿಶೇಷವಾಗಿ ಒಳಗೊಂಡಿರುತ್ತವೆ.

ಹಗಲುಗನಸು ವಾಸ್ತವಿಕತೆ ಹಾಗೂ ನೈಜತೆಯ ನಿರ್ಬಂಧದಿಂದ ಪೂರ್ಣವಾಗಿ ಮುಕ್ತವಾಗಿರುತ್ತದೆ. ಹಗಲುಗನಸಿನಲ್ಲಿ ವ್ಯಕ್ತಿಯ ಕಲ್ಪನೆಗಳು ಮೇರೆಯಿಲ್ಲದೆ ಮೈದಾನದಲ್ಲಿ ಅನಂತ ರೂಪಗಳಲ್ಲಿ ಪ್ರಕಟಗೊಳ್ಳುತ್ತವೆ. ಕಾದಂಬರಿಗಳನ್ನು ಓದುವಾಗಲೂ ಇದನ್ನು ಗಮನಿಸಬಹುದು. ಅನೇಕ ವೇಳೆ ಓದುವಾಗಲೂ ಇದನ್ನೂ ಗಮನಿಸಬಹುದು. ಅನೇಕ ವೇಳೆ ಓದುಗ ತನ್ನ ವ್ಯಕ್ತಿತ್ವವನ್ನು ಮರೆತು. ಕಾದಂಬರಿಯ ನಾಯಕ ನಾಯಕಿಯರಲ್ಲಿ ಒಂದಾಗಿರುತ್ತಾನೆ. ಆದ್ದರಿಂದಲೇ ಕಥೆ ಚಲನಚಿತ್ರಗಳು ವಿಶೇಷ ಪ್ರೀತಿಗೆ ಪಾತ್ರವಾಗಿವೆ. ಹಗಲುಗನಸಿಗೂ ಒಂದು ಮಿತಿ ಇರಬೇಕು; ಆಗ ಮಾತ್ರ ಅದು ವ್ಯಕ್ತಿಯ ಜೀವನದಲ್ಲಿ ಉಪಯುಕ್ತ ಪಾತ್ರವಹಿಸುತ್ತದೆ. ಹಗಲುಗನಸು ಒಂದು ರೀತಿಯ ಮನೋವಿಹಾರ. ಒಂದು ರೀತಿಯ ಅವ್ಯಕ್ತ ಹಾಗೂ ಅವರ್ಣನೀಯವಾದ–ಅದರೆ ತೋರಿಕೆಯ–ಉತ್ಸಾಹ, ಶಕ್ತಿ.

ಆಶಾಭಾವನೆ ಮತ್ತು ಭಾವೋದ್ರೇಕಗಳಿಂದ ಕೂಡಿರುತ್ತದೆ. ಈ ರೀತಿಯ ಶಕ್ತಿಸಂಚಯನದಿಂದ ವ್ಯಕ್ತಿಯ ನಿತ್ಯಜೀವನದಲ್ಲಿಯ ಚಟುವಟಿಕೆಗಳಿಗೆ ಒಂದು ರೀತಿಯ ಉತ್ತೇಜನ ದೊರಕುತ್ತದೆ. ಅವನ ಧ್ಯೇಯ ಸಾಧನೆಗೆ ಇದು ಸಹಕಾರಿಯಾಗುತ್ತದೆ. ಇಷ್ಟಾದರೂ ಹಗಲುಗನಸು ಕಾಣುವುದು ಒಂದು ದೃಷ್ಟಿಯಿಂದ ದೋಷಪೂರಿತ. ವ್ಯಕ್ತಿ ವಾಸ್ತವಿಕತೆಯನ್ನು ಎದುರಿಸಲು ಅಶಕ್ತನಾದಾಗಲೆಲ್ಲ ಹಗಲುಗನಸಿನ ಮೊರೆಹೊಕ್ಕರೆ, ಹಗಲುಗನಸಿನಲ್ಲೇ ತನ್ನೆಲ್ಲ ಹೆಚ್ಚಿನ ಸಮಯವನ್ನು ವ್ಯಯ ಮಾಡುತ್ತ ಹೋದರೆ ಮುಂದೆ ಆತ ವಾಸ್ತವಿಕ ಪ್ರಪಂಚದಲ್ಲಿ ಸಮರ್ಪಕವಾಗಿ ಹೊಂದಿಕೊಂಡು ಬಾಳು ನಡೆಸಲಾರ. ಕಲ್ಪನಾಶಕ್ತಿ ವ್ಯಕ್ತಿಯ ಜೀವನವನ್ನು ರೂಪಿಸುವುದರಲ್ಲಿ ಸಹಾಯಕವಾಗಿರಬೇಕೇ ವಿನಾ ಅವನ ನಿತ್ಯಜೀವನಕ್ಕೆ ಅಡ್ಡಿಯಾಗಬಾರದು. ಹಗಲುಗನಸು ಅತಿರೇಕಾವಸ್ಥೆಯನ್ನು ಮುಟ್ಟಿದಾಗ ಕಲ್ಪನಾಲೋಕವೇ ಹೆಚ್ಚು ವಾಸ್ತವಿಕವಾಗಿ ಕಂಡುಬರುತ್ತದೆ. ನೈಜತೆ ಮತ್ತು ಅನೈಜತೆಗಳ ನಡುವಿನ ವ್ಯತ್ಯಾಸವನ್ನು ಗುರ್ತಿಸುವುದರಲ್ಲಿ ಆತ ಅಶಕ್ತನಾಗಿರುತ್ತಾನೆ. ಈ ಅವಸ್ಥೆಯೇ ಮತ್ತಷ್ಟು ಮುಂದುವರಿದಾಗ ಆ ವ್ಯಕ್ತಿಗೆ ಸರಾಗವಾಗಿ ಮಾತಾಡಲೂ ಸಾಧ್ಯವಾಗುವುದಿಲ್ಲ. ಆತ ತನ್ನ ಸುತ್ತಮುತ್ತಲಿನ ಜನರೊಂದಿಗೆ ಹೊಂದಿಕೊಳ್ಳಲಾರ. ಕೊನೆಗೆ ಸ್ವಪ್ನಲೋಕದಲ್ಲೇ ಬಂಧಿಯಾಗಿ ಮನೋವಿದಳನದಲ್ಲಿ (ಸ್ಕಿಜೊಫ್ರೇನಿಯ) ಪರ್ಯವಸಾನ ಹೊಂದಬಹುದು.

ಇಂಥವ ಹೊರಜಗತ್ತಿನೊಂದಿಗೆ ಸಂಪೂರ್ಣವಾಗಿ ಸಂಪರ್ಕ ಕಳೆದುಕೊಂಡಿದ್ದರೂ ಇವನ ಕಲ್ಪನಾಶಕ್ತಿ ಮಾತ್ರ ಅಗಾಧವಾಗಿರುತ್ತದೆ. ತಲೆದಿಂಬನ್ನೇ ತಬ್ಬಿಕೊಂಡು. ತನ್ನ ಗತಿಸಿದ ಪುತ್ರ ಮರಳಿ ಬಂದಂತೆ ಭಾವಿಸಿಕೊಂಡು, ಅದರೊಂದಿಗೆ ಮಾತಾಡುವ, ಮುದ್ದಿಸುವ ಅನೇಕ ರೋಗಿಗಳು ಕಂಡುಬಂದಿದ್ದಾರೆ. ಈ ರೀತಿಯ ಅತಿರೇಕದ ಅಪಾಯದಿಂದ ಮಕ್ಕಳನ್ನು ತಪ್ಪಿಸಬೇಕಾದರೆ, ಅವರನ್ನು ಕ್ರೂರವಾಗಿ ಶಿಕ್ಷಿಸುವುದರಿಂದಾಗಲಿ ವಾಸ್ತವಿಕತೆಯ ಪರಿಚಯವನ್ನು ಒಮ್ಮೆಲೇ ಮಾಡಿಸುವುದರಿಂದಾಗಲಿ ಪ್ರಯೋಜನವಾಗುವುದಿಲ್ಲ. ಅದಕ್ಕೆ ಬದಲು ಸಾವಕಾಶವಾಗಿ, ತಾಳ್ಮೆಯಿಂದ ಅವರನ್ನು ಪರಿವರ್ತಿಸಬೇಕು. ಹಗಲುಗನಸಿನಲ್ಲಿ ಸಿಗುವ ಸುಖಕ್ಕಿಂತ ವಾಸ್ತವಿಕವಾಗಿ ನಡೆದುಕೊಳ್ಳುವುದರಲ್ಲಿ. ಹೆಚ್ಚಿನ ಸುಖವಿರುವುದನ್ನು ಮನವರಿಕೆ

ಮಾಡಿಕೊಡಬೇಕು. ವಾಸ್ತವಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅದರೊಂದಿಗೆ ಹೋರಾಡಿ ಜಯ ಗಳಿಸುವ ಹುಮ್ಮಸ್ಸನ್ನು ಅವರಲ್ಲಿ ತುಂಬಬೇಕು (ಎಲ್. ಎನ್. ಪಿ)

❑

**ಪ್ರಶ್ನೆಗಳು**

೧. ಕನಸು ಎಂದರೇನು? ವಿವರಿಸಿ

೨. ಕನಸು ಮತ್ತು ಹಗಲುಗನಸಿಗಿರುವ ವ್ಯತ್ಯಾಸವನ್ನು ವಿಶ್ಲೇಷಿಸಿ

೩. ಸಿಗ್ಮಂಡ್ ಫ್ರಾಯ್ಡ್‌ನ ಸಿದ್ಧಾಂತಗಳನ್ನು ಚರ್ಚಿಸಿ

೪. ಕನಸನ್ನು ಕುರಿತಂತೆ ಸಿಗ್ಮಂಡ್ ಫ್ರಾಯ್ಡ್‌ನ ಚಿಂತನೆಗಳನ್ನು ವಿವರಿಸಿ

೫. ಕನಸುಗಳ ವಿಧಗಳೆಷ್ಟು? ವಿವರಿಸಿ

# ಭಾಗ ೨ – ಯುದ್ಧ

## ಆಶಯ:

ಮಾನವ ಸಮುದಾಯಗಳಲ್ಲಿ ಆರ್ಥಿಕ ವಿಸ್ತರಣೆ ಹಾಗೂ ರಾಜಕೀಯದ ಲಾಭಕ್ಕಾಗಿ ಯುದ್ಧಗಳು ಘಟಿಸಿವೆ, ಘಟಿಸುತ್ತಿವೆ ಎಂಬುದು ಸರ್ವವೇದ್ಯ. ಇಂತಹ ಯುದ್ಧಗಳು ನಿಜವಾದ ಅರ್ಥದಲ್ಲಿ ಉದ್ಯಮವಾಗಿಯೂ ರೂಪಿತವಾಗುತ್ತಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಹಾಗೇ ನೋಡಿದರೆ, ಯುದ್ಧವೆಂಬುದು ಹಿಂಸೆಯ ಪ್ರತಿರೂಪವೇ ಸರಿ. ಸ್ವಹಿತಕ್ಕಾಗಿ ಬಹುಜನರ ಹಿತಾಸಕ್ತಿಯನ್ನು ನಾಶ ಮಾಡಲು ಹೊರಟಿರುವುದು, ಆ ಮೂಲಕ ತನ್ನನ್ನು ಉಳಿದು ಮಿಕ್ಕವರನ್ನು ಗುಲಾಮರನ್ನಾಗಿಸುವ ಪಾಳೆಯಗಾರ ಪ್ರವೃತ್ತಿಯ ಅಭಿವ್ಯಕ್ತ ರೂಪವೆಂತಲೇ ಈ ಹಿನ್ನಲೆಯಲ್ಲಿ ಇದನ್ನು ಭಾವಿಸಬಹುದು. ಹೀಗೆಂದುಕೊಂಡಾಗ ಆರ್ಥಿಕ ಲಾಭ ಮತ್ತು ರಾಜಕೀಯದ ಯಜಮಾನಿಕೆ ಯುದ್ಧದ ಮೂಲ ಗುರಿಯಾಗುದೆ ಎಂಬುದಂತೂ ಸತ್ಯ.

ಈ ಯುದ್ಧದ ಮೂಲಕ ಮಾನವಕುಲದ ನಾಶ; ನಿಸರ್ಗದ ನಾಶ. ಆ ಮೂಲಕ ಹವಾಮಾನದ ಮೇಲೆ ಉಂಟಾಗುವ, ಉಂಟಾಗಬಹುದಾದ ವೈಪರಿತ್ಯಗಳು ಏನು ಎಂಬುದು ಗೊತ್ತಿದೆ. ಹೀಗಿದ್ದೂ ಅದನ್ನೇ ಸಾಧಿಸುವ ದಿಕ್ಕಿನಲ್ಲಿ ಮುಂದೆ ಸಾಗಿದ್ದಾನೆ ಮನುಷ್ಯ, ಸಾಗುತ್ತಿದ್ದಾನೆ ಕೂಡ. 'ಮಾನವ ಕುಲದ ಬಹುಪಾಲು ಜನಸಮುದಾಯ ಯುದ್ಧದ ನೇರ ಪರಿಣಾಮಗಳಿಂದ ಅಥವಾ ಹವಾಮಾನ ವೈಪರಿತ್ಯಗಳಿಂದ, ರೋಗರುಜಿನಗಳಿಂದ ಇಲ್ಲವೇ ಹಸಿವಿನಿಂದ ಸಾಯುತ್ತಾರೆ. ಬದುಕುಳಿದವರ ದೇಹದಲ್ಲಿ ರೋಗನಿರೋಧಕ ಶಕ್ತಿ ಹ್ರಾಸವಾಗಿ ಏಡ್ಸ್ ಹಾಗೂ ಅನೇಕ ವಿಧದ ರೋಗಗಳ ಬೀಡಾಗುತ್ತದೆ. ಮಾತ್ರವಲ್ಲ, ಇಂತಹ ಸಮುದಾಯ ಮುಂದೊಮ್ಮೆ ಶಿಲಾಯುಗಕ್ಕೆ ಮರಳುತ್ತಾರೆ' – ಎನ್ನುವ ನಾಗೇಶ್ ಹೆಗಡೆಯವರ ನುಡಿಗಳನ್ನು ಅರ್ಥೈಸಿಕೊಂಡರೆ ಅಶಾಂತಿಯಿಂದ ಶಾಂತಿಯ ಕಡೆಗೆ ಮುಖ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇಲ್ಲಿನ ಪತ್ಯಗಳಾದ ಭರತ–ಬಾಹುಬಲಿ ಯುದ್ಧಪ್ರಸಂಗ; ನಿಜಾಮನ ದರ್ಬಾರ, ರಜಾಕಾರರ ಕಾರಬಾರ; ಅಣು ಚಳಿಗಾಲ : ಅಡಗಲು ಸ್ಥಳವೆಲ್ಲಿ? ಹಾಗೆಯೇ ಓದು ಪತ್ಯ ಬಲಾಚ್ಯುತರ ಪುಣ್ಯಪ್ರಭಾವೋದಯಗಳನ್ನು ಈ ಹಿನ್ನಲೆಯಲ್ಲಿ ಗಮನಿಸಿ.

# ೧. ಭರತ – ಬಾಹುಬಲಿ ಯುದ್ಧ ಪ್ರಸಂಗ (ಆದಿ ಪುರಾಣ)

## ಗದ್ಯಾನುವಾದ – ಕೆ. ಎಲ್. ನರಸಿಂಹಶಾಸ್ತ್ರಿ

೧೦೧ "ಭರತೇಶ್ವರ! ದೃಷ್ಟಿಯುದ್ಧ, ಜಲಯುದ್ಧ ಮತ್ತು ಮಲ್ಲಯುದ್ಧಗಳಿಂದಲೇ ಜಯುವನ್ನು ಸಂಪಾದಿಸಬಹುದು. ಜನವಿನಾಶವನ್ನು ಮಾಡುವುದರಿಂದ ಪಾಪವೂ ಅಪಯಶಸ್ಸೂ ಸಂಘಟಿಸುವುವು. ಆದ್ದರಿಂದ ದೇವ! ಈ ಯುದ್ಧವನ್ನು ಕಡೆಗಣಿಸು.

೧೦೨. "ತೋಳ್ಬಲದ ಬಲುಮೆಯನ್ನು ಬಿಟ್ಟುಬಿಡು, ತೋಳ್ಬಲವನ್ನು ತೋರಿಸಿದರೆ ಹೀನಬಲನನ್ನು ಅಧಿಕಬಲನು ಹೊಸಕಿಹಾಕಿದನೆಂಬ ಲೋಕನಿಂದೆಯು ಬರದೆ ಇರುವುದಿಲ್ಲ. ಆದ್ದರಿಂದ ಧರ್ಮಯುದ್ಧವನ್ನು ಮಾಡು" ಎಂದರು.

ವ॥ ಭರತೇಶ್ವರನು "ಹೀಗಾದರೆ ನಮಗೆ ಬಾಹುಬಲಿಯೊಡನೆ ಯುದ್ಧ ಸಂಘರ್ಷವೊದಗಲೆಂಬ ಬಯಕೆಯು ಗರ್ಭಿಣಿಯಾದ ದರಿದ್ರ ಕುಟುಂಬಿನಿಯ ಬಯಕೆಯಂತಾಯಿತು" ಎಂದು ಹೇಳಿ ರಾಜಲಕ್ಷ್ಮಿಯ ಲೀಲೆಗೆ ಆಶ್ರಯವೆನಿಸಿದ ಅಂಬಾರಿಯನ್ನೊರಗಿಕೊಂಡು ಆನೆಯ ಹೆಗಲಿನ ಮೇಲೆ ಸುಖಾಸೀನನಾದನು. ಆಗ ಬಾಹುಬಲಿಯ ಬಳಿಗೆ ಮಂತ್ರಿಗಳು ಬಂದು ಪೂರ್ವೋಕ್ತ ಕ್ರಮದಿಂದ ಧರ್ಮಯುದ್ಧಕಾರ್ಯವನ್ನು ಬಿನ್ನವಿಸಿದರು.

೧೦೩. ಆತನು "ನನ್ನ ಚತುರಂಗ ಬಲದ ಬಲುಹನ್ನು ನರರಲ್ಲಿ ಯಾರು ತಾಳಲು ಸಮರ್ಥರು" ಎಂಬ ನಿಮ್ಮರಸನ ಗರ್ವೋನ್ನತಿಯ ಕ್ಷಯವನ್ನು ಸ್ವಲ್ಪವಾದರೂ ನೋಡಿರಿ! ಬಳಿಕ ಧರ್ಮಯುದ್ಧವೇ ಜರುಗಲಿ ಎಂದನು.

ವ॥ ತನ್ನ (ಬಾಹುಬಲಿಯ) ಭುಜದಂಡದಲ್ಲಿನ ಚಾಪದಂಡದ ಟಂಕಾರವು ಭರತರಾಜನ ಸೈನ್ಯಕ್ಕೆ ಕೋಪಗೊಂಡ ಯಮನ ಹುಂಕಾರದ ಶಂಕೆಯುನ್ನುಂಟುಮಾಡದೆ, ಶತ್ರುಗಳಿಂದ ಸಹಿಸಲಾಗದ ತನ್ನ ಧನುರ್ದಂಡವು

ಭರತರಾಜನ ಸೈನ್ಯಕ್ಕೆ ಕೋಪದಿಂದ ಕುಟಿಲವಾದ ಯಮನ ಹುಬ್ಬಿನ ವಿಲಾಸವನ್ನು ಧರಿಸಲು ಸಮರ್ಥವಾಗದೆಯೂ ನಿರಂತರವಾಗಿ ಬಿಡಲಾಗುತ್ತಿದ್ದ ಬಾಣಗಳ ಸಾಲುಗಳಿಂದ ಸತತವಾಗಿ ಸುರಿಯುತ್ತಿರುವ ಮದಜಲವೆಂಬ ತೈಲಪಾಕಗಳಿಂದ ನೋಡಲಾಗದ ಭರತನ ಸೇನೆಯ ಆನೆಗಳೆಂಬ ಮಡಕೆಗಳನ್ನು ಚಿಕ್ಕಚಿಕ್ಕ ತೂತುಳ್ಳದನ್ನಾಗಿ ಮಾಡದೆಯೂ ಕಿವಿಗಳವರೆಗೆಳೆದು ಬಿಡಲ್ಪಟ್ಟ ಬಾಣಗಳೆಂಬ ಉಳಿಗಳು ಅವನ ಸೈನ್ಯಗಜಗಳ ತಲೆಗಳೆಂಬ ಕಲ್ಪಪ್ಪಡಿಗಳನ್ನು ಸೀಳದೆಯೂ ತನ್ನ ವಿಜಯಗಜಗಳ ಸೊಂಡಿಲಿನಿಂದ ಹೊರಚೆಲ್ಲಲ್ಪಟ್ಟ ಸೀಳಿಹೋದ ವೀರಸೈನಿಕರ ರಕ್ತಜಲಕಣಗಳಿಂದ ಕೋಪಾಗ್ನಿಯನ್ನು ಆರಿಸಿಕೊಳ್ಳದೆಯೂ ಆದ್ದರಿಂದ ಸ್ವಲ್ಪವಿಷಣ್ಣವದನನಾದ ಬಾಹುಬಲಿಯನ್ನು ಮಂತ್ರಿಮುಖ್ಯರು ಕಂಡು

೧೦೪. "ದುಷ್ಟವಾದ ಆಗ್ರಹವನ್ನು ತೊರೆ; ಪ್ರಶಾಂತವೂ ಗಂಭೀರವೂ ಆದ ಮನಸ್ಸಿನಿಂದ ಗಮನಿಸು. ಯುವರಾಜ, ಮನವನ್ನು ಹತೋಟಿಯಲ್ಲಿಟ್ಟುಕೊಂಡು ನಮ್ಮ ವಾರ್ಧಕ್ಯದ ಅನುಭವವನ್ನು ಒಂದುಸಲ ನಡೆಸಿಕೊಡು"

ವ॥ ಎಂದು ನುಡಿದು ಧರ್ಮಯುದ್ಧಕ್ಕೆ ಒಪ್ಪಿಸಿದರು. ಎರಡು ಸೈನ್ಯಗಳಲ್ಲಿಯೂ ಆನಂದಭೇರಿಯನ್ನು ಹೊಯ್ಸಿ ಧರ್ಮಯುದ್ಧವನ್ನು ಘೋಷಿಸಿದರು. ಬಾಹುಬಲಿ ಭರತೇಶ್ವರರ ಪಕ್ಷದ ರಾಜತಂಡವೆರಡೂ ಪಕ್ಕಗಳಲ್ಲಿ ಮಿಡುಕದೆ ಮಧ್ಯಸ್ಥರಾಗಿ ನಿಂತು ನೋಡುತ್ತಿರುವಂತೆ ಆಜ್ಞಾಪಿಸಿದರು. ಆಗ ಭರತ ಬಾಹುಬಲಿಗಳು ನೀಲನಿಷಧಾಚಲಗಳು ಪರಸ್ಪರವಾಗಿ ಯುದ್ಧಗೈಯ್ಯುವಂತೆ ಬಂದು ನಿಂತು ಒಬ್ಬರನ್ನೊಬ್ಬರು ಮೈಯಿಕ್ಕದೆ ನೋಡಿದರು. ಆಗ

೧೦೫. ಸುಂದರವಾದ ಮುಖಕಮಲವುಳ್ಳ ಭುಜಬಲಿಯು ರೆಪ್ಪೆಯಾಡಿಸದೆಯೆ ಕಣ್ಣುಗಳ ಗುಡ್ಡೆಗಳನ್ನಲುಗಿಸದಯೆ ಕಣ್ಣುಗಳಿಂದಲೇ ಹೀರುವಂತೆ ದೇಹವನ್ನಲುಗಿಸದೆಯೆ ಭರತನನ್ನು ದಿಟ್ಟಿಸಿ ನೋಡಿದನು. ಅದರಿಂದ ಅವನು (ಭರತರಾಜನು) ಸೋತುಹೋದನು.

ವ॥ ಆಗ ಬಾಹುಬಲಿಯ ತೋಜೋರಾಶಿಯೇ ಕಣ್ಣುಗಳಲ್ಲಿ ಉಕ್ಕುವಂತೆ (ಆಗಲೂ) ಸೈರಿಸದೆಯೆ ರೆಪ್ಪೆಮುಚ್ಚಿಕೊಂಡು ಭರತನು ದೃಷ್ಟಿಯುದ್ಧದಲ್ಲಿ ಸೋತನು. ಮತ್ತೆ ಭರತ ಬಾಹುಬಲಿಗಳಿಬ್ಬರೂ

೧೦೬. ಸಲಗಗಳೆರಡು ಸರೋವರದ ನೀರನ್ನು ವಿಲಾಸದಿಂದ ಹೊಗುವಂತೆ, ಕಮಲದ ಕೇಸರಗಳ ಧೂಳಿಗಳಿಂದ ಹೊಂಬಣ್ಣದ ಸ್ವಚ್ಛವಾದ ನೀರನ್ನು ಆದರದಿಂದ ಹೊಕ್ಕು ಎರಚಾಡಿದರು.

೧೦೭. ಭರತನ ಮುಖದಲ್ಲಿ ಕಾಣಿಸಿಕೊಂಡ ಉಗ್ರವಾದ ಕೋಪಾಗ್ನಿಯನ್ನು ನಂದಿಸಲೋ ಎಂಬಂತೆ ಮರಕತಮಣಿವರ್ಣದ ಬಾಹುಬಲಿಯು ಪರಿಘದಂತಿದ್ದ ಕರದಿಂದ ತಿಳಿನೀರನ್ನು ಮತ್ತೆ ಮತ್ತೆ ಎರಚಿದನು.

ವ॥ ಭರತೇಶ್ವರನು ಐದುನೂರು ಬಿಲ್ಲುಗಳಷ್ಟು ಎತ್ತರವುಳ್ಳ ವನಾದ್ದರಿಂದ ಐದುನೂರ ಇಪ್ಪತ್ತೈದು ಬಿಲ್ಲುಗಳಷ್ಟು ಎತ್ತರವಿರುವ ಬಾಹುಬಲಿಯ ಮೇಲೆ,

೧೦೮. ವೇಗದಿಂದ ತುಳುಕಿದ ನೀರು, ಬಾಹುಬಲಿಯ ಎದೆಯ ಮೇಲೆ ಮುತ್ತಿನಹಾರದ ಕಿರಣಗಳ ಕಾಂತಿಯನ್ನು ವಹಿಸಿತು. ದುರ್ಧರವಾದ ಜಲಯುದ್ಧವೂ ಭರತಚಕ್ರವರ್ತಿಗೆ ವಿಶೇಷವಾಗಿ ಪರಿಭವವನ್ನು ತಂದಿತು,

ವ॥ ಹೀಗೆ ಬಾಹುಬಲಿಯು ಆನೆಯ ಸೊಂಡಿಲನ್ನು ಹೋಲುವ ತನ್ನ ತೋಳುಗಳಿಂದ ಚೆಲ್ಲಿದ ನೀರಿಗೆ ಭರತನು ಮುಖವನ್ನು ಓರೆಯಾಗಿ ಮಾಡಿ ಮುಖಕ್ಕೆ ಸೋಲನ್ನು ತಂದುಕೊಂಡನು. ಆಗ ಕುಮಾರನಾದ ಬಾಹುಬಲಿಗಾಗಿ ಘೋಷಿಸುವ ಹೊಗಳಿಕೆಯ ಮಾತುಗಳು ಭರತನಿಗೆ ಸಹಿಸದಾದುವು. ಅವನು ತನ್ನ ಮಣಿಮಯವಾದ ಕಿರೀಟದಿಂದ, ಹೊಳೆಯುವ ಶಿಖರವುಳ್ಳ ಕನಕಾಚಲವನ್ನು ಹೋಲುತ್ತಾ ಬಂದು, ಮಲ್ಲಯುದ್ಧಕ್ಕೆ ತೊಡಗಿದನು.

೧೦೯. ಮರಕತಮಣಿಶೈಲದಂತಿದ್ದ (ಶ್ಯಾಮವರ್ಣದ) ಬಾಹುಬಲಿ ಯೊಡನೆ ಯುದ್ಧಕ್ಕೆ ತೊಡಗಲು ಸುರವಿಧ್ಯಾಧರ ನರರ ಸೈನ್ಯಗಳು ಎರಡೂ ಕಡೆಗೆ ಹೋಗಿ ನಿಂತು ನೋಡಲಾರಂಭಿಸಿದುವು.

೧೧೦. ಮಲ್ಲವಿದ್ಯೆಯ ಕೈಚಳಕ ಮತ್ತು ಪಟ್ಟುಗಳ ಪರಿಣಿತಿಯನ್ನು ಮೆರೆದು ಯುದ್ಧಮಾಡುತ್ತ ಬಾಹುಬಲಿಯು ಭರತನನ್ನು ಸುಲಭವಾಗಿ ಎತ್ತಿಕೊಂಡು ಅವನ ಮಣಿಕಿರೀಟಗಳ ಕಾಂತಿಗಳು ಬೆಳಗುತ್ತಿರಲು ಅವನನ್ನು ದಿಕ್ಕಿಗೆ ಬೀಸಿದನು.

೧೧೧. ಸಾಂಧ್ರವಾದ ಮರಕತಶೈಲವು ಕನಕಾಚಲವನ್ನು ಹೊತ್ತಿತ್ತೋ ಎಂಬಂತೆ ಬಾಹುಬಲಿಯು ಸಕಲಭೂಮಿಗೊಡೆಯನಾದ ಭರತೇಶ್ವರ ಚಕ್ರವರ್ತಿಯನ್ನು ಭೋಂಕನೆತ್ತಿ ಹಿಡಿದರೂ ನೆಲದ ಮೇಲೆ ಎಸೆಯಲು ಇಷ್ಟಪಡದೆ ಹೊತ್ತೇ ನಿಂತನು.

೧೧೨. "ಭರತನು ನನ್ನ ದೊಡ್ಡಣ್ಣ, ಗುರುಸ್ಥಾನೀಯ, ಚಕ್ರವರ್ತಿ, ಮಹಿಮೆಗೆ ಆಗರ. ಶಕ್ತಿಯಳಿದ ಈ ರಾಜನನ್ನು ಭೂಮಿಯ ಮೇಲೆ ಎಸೆದು ಅದೇಕೆ ಅವಮಾನವನ್ನು ಮಾಡಲಿ?"

೧೧೩. ಎಂದು ಆಲೋಚಿಸಿ ಬಾಹುಬಲಿಯು ಭರತನನ್ನು ಮೆಲ್ಲಗೆ ನೆಲದ ಮೇಲಿಳಿಸಿದನು. ಆಗ ಬಾಹುಬಲಿಯ ಸೈನ್ಯದಲ್ಲಿ ದುಂದುಭಿಧ್ವನಿಯೊಡನೆ ವಿಜಯಘೋಷಣೆ ಜರುಗಿತು. ಭರತೇಶ್ವರನ ಸೈನ್ಯಕ್ಕೆ ದೈನ್ಯವುಂಟಾಯಿತು.

೧೧೪. ಕೊನೆಯ ಜನ್ಮವುಳ್ಳವನೂ ಸಾರ್ವಭೌಮನೂ ಪುರುಪರಮೇಶ್ವರನ ಮಗನೂ ಆದ ಭರತೇಶ್ವರನಿಗೆ "ಹುಂಡಾವಸರ್ಪಿಣಿ[೧]"ಯ ವಶದಿಂದ ಸೋಲು ಒದಗಿತು.

೧೧೫. ಆ ಎರಡೂ ಸೈನ್ಯದ ಅರಸರ ಎದುರಿನಲ್ಲಿ ಪರಿಭವವು ಭರತನಿಗುಂಟಾಯಿತು. ಇದರಿಂದ ಅವನು ಕೋಪದ ದಳ್ಳುರಿಗಳನ್ನು ಚೆಲ್ಲುತ್ತ ಚಕ್ರರತ್ನವನ್ನು ಸ್ಮರಿಸಿ ಆಜ್ಞೆ ಮಾಡಿದನು.

ವ॥ ಆಗ ಪುರುಪರಮೇಶ್ವರನ ಮಕ್ಕಳ ಯುದ್ಧಾಡಂಬರಪ್ರಯುಕ್ತವಾದ ಉತ್ಪಾತಗಳಿಂದ ಚಿಂತಾಕ್ರಾಂತರಾಗಿ ಅವುಗಳ ಪ್ರಶಮನ ಪ್ರತೀಕಾರಕ್ಕಾಗಿಯೇ ನಾಗಲೋಕದ ಸುಂದರಿಯರೊಡನೆ.......???????

೧೧೬. ದೇವತೆಗಳು 'ಸರ್ವಜ್ಞಬಿಂಬಾವಳಿ'ಗೆ (ತೀರ್ಥಂಕರ ಮೂರ್ತಿಗಳಿಗೆ) ಆಗತಾನೆ ಕರೆದ ಕಾಮಧೇನುವಿನ ಅಮೃತದಂತಿರುವ ಕ್ಷೀರಧಾರೆಯಿಂದ ಅಭಿಷೇಕ ಮಾಡಿ ಪೂಜಿಸಿದರು. ಆಗತಾನೆ ಅರಳಿದ ಇಂದ್ರನ ಉದ್ಯಾನದ ಹೂವಿನ ಹಾರಗಳಿಂದ ಅರ್ಚಿಸಿದರು. ನೂತನ

---

೧. ಹುಂಡಾವಸರ್ಪಿಣೀ = ಶರೀರದ ಅಂಗೋಪಾಂಗಗಳನ್ನು ಕುರೂಪಗೊಳಿಸುವ ಕರ್ಮಗಳ ಉದಯ

ಚಿಂತಾಮಣಿರತ್ನಗಳಿಂದ ನಿರ್ಮಿತವಾದ ಆಶ್ಚರ್ಯಕರಾಭರಣಗಳಿಂದ ಅರ್ಚನೆಯನ್ನು ಮಾಡಿ ಕೈ ಮುಗಿದರು. ವ॥ ಆ ಪ್ರಸ್ತಾವದಲ್ಲಿ

೧೧೭. ಭರತನು ಅಪ್ಪಣೆ ಮಾಡಲು ಆ ಚಕ್ರರತ್ನವು ಅಪ್ಪಣೆಯನ್ನು ವಿರೋಧಿಸಿದೆ ಹೋಗಿ ಬಾಹುಬಲಿಯನ್ನು ಪ್ರದಕ್ಷಿಣೆ ಮಾಡಿ ಅವನನ್ನು ಸ್ವಲ್ಪವೂ ಭೇದಿಸಲಾರದೆಯೇ ಬಾಹುಬಲಿಯ ಬಲಭುಜದ ಪಕ್ಕದಲ್ಲಿ ಪ್ರತಾಪಹೀನವಾಗಿ ನಿಂತಿತು. ವ॥ ಆಗ

೧೧೮. ಬಾಹುಬಲಿರಾಜನ ಯಶೋದುಂದುಭಿಶಬ್ದವು ಭೂಮಿಯನ್ನೆಲ್ಲ ವ್ಯಾಪಿಸಿಕೊಮಡಿತೋ ಎಂಬಂತೆ ದೇವಸೇನೆಯ ನಗಾರಿ ಶಬ್ದವು ದೇವಸ್ತ್ರೀಯರ ಮಾಂಗಲ್ಯಗೇಯ ಸ್ವರದೊಡನೆ ಮಿಲಿತವಾಗಿ ಹರಡಿತು. ಹೂವುಗಳೆಂಬ ಮೋಡದ ಸಮೂಹವು ಸಂತುಷ್ಟರಾದ ದೇವತೆಗಳ ಆನಂದಬಾಷ್ಪಜಲವೋ ಎಂಬಂತೆ ಅರಳಮಳೆಯನ್ನು ತಂದಿತು.

೧೧೯. ತನ್ನ ಅಂತಸ್ತಿಗೆ ತಕ್ಕುದಲ್ಲದ್ದನ್ನು ಭರತೇಶನು ಮಾಡಿದನೆಂಬ ಕಲುವೃದ್ಧರಾದ ರಾಜರ ಮಾತುಗಳಿಗೆ ನಾಚಿಕೊಂಡು ಭರತರಾಜನು ತಲೆಬಾಗಿ ನಿಂತನು.

೧೨೦. ಬಾಹುಬಲಿಯು ತನ್ನ ಬಲಭುಜದ ಬಳಿಯಲ್ಲಿ ಬಂದು ನೀಮತ ಚಕ್ರವನ್ನು ವೀಕ್ಷಿಸಿದನು. ಈ ಸಾಹಸವನ್ನು ಭರತೇಶನು ನನ್ನ ಮೇಲೂ ಪ್ರಯೋಗಿಸಿದನು ಎಂದು ಸಾಹಸರಸಿಕನಾದ ಬಾಹುಬಲಿಯು ತನ್ನಲ್ಲಿ ಹೀಗೆ ಹೇಳಿಕೊಂಡನು.

೧೨೧. "ಮಿಂಚಿನ ಕಾಂತಿಯಂತೆ ಚಂಚಲವಾದ ರಾಜ್ಯವಿಮೋಹವನ್ನು ಕಳಚಿಡುವುದು ಬಹುಕಷ್ಟ, ಮನುಕುಲತಿಲಕನಾದ ಭರತೆಶನಿಗೂ ಈ ವ್ಯಾಮೋಹತ್ಯಾಗವು ಸಾಧ್ಯವೇ?

೧೨೨. ಅಣ್ಣತಮ್ಮಂದಿರ ಮೇಲೆ ಅಣ್ಣತಮ್ಮಂದಿರನ್ನು ಕಾದಿಸುವುದು. ತಂದೆ ಮಕ್ಕಳಿಗೂ ಕೋಪವನ್ನು ತಂದಿಡುವುದು. ಅದರ ಸಾಮರ್ಥ್ಯ ಈ ಪರಿಯದೆಂದ ಮೇಲೆ ರಾಜ್ಯಶ್ರೀಯ ವಿಷಯದಲ್ಲಿ ಪ್ರವರ್ತಿಸುವುದೆಂತು? ವ॥ ಅದಲ್ಲದೆ ಎಲ್ಲ ವಿದ್ಯೆಗಳೆಂಬ ನದಿಗಳನ್ನೊಣಗಿಸತಕ್ಕದ್ದುಊ ಬೆಸಿಗೆಯ ಸೂರ್ಯನ ಕಿರಣಮಾಲೆಯೂ ಉಪಶಮವೆಂಬ ಸಮುದ್ರಕ್ಕೆ ಪ್ರಳಯಕಾಲದ ಕಡಲ್ಗಿಚ್ಚಿನ ಜ್ವಾಲೆಯೂ ವಿನಯಬವೆಂಬ ಅಮೃತಮರೀಚಿಯುಳ್ಳ ಚಂದ್ರನನ್ನು

ಮರೆಮಾಚುವ ಮೋಡದ ಸಂತತಿಯೂ ಇಹಪರಲೋಕ ವಿವೇಕವೆಂಬ ಸೂರ್ಯನು ಮುಳುಗುವ ಸಮುದ್ರದ ಎಲ್ಲೆಯೂ ಧರ್ಮವೆಂಬ ವೃಕ್ಷವನ್ನು ಕಡಿಯಲು ಸಹಾಯಕವಾದ ಪರಶುಧಾರೆಯೂ ಇಂದ್ರಿಯ ವಿಷಯಗೆಳೆಂಬ ವಿಷವೃಕ್ಷದ ಚಿಗರೂ ಇಂದ್ರಿಯಗಳೆಂಬ ವೇಡರ ಸ್ವಚ್ಛಂದ ವಿಹಾರಕ್ಕನುಕೂಲವೂ ದಟ್ಟವೂ ಆದ ಕಾಡೂ ದುಷ್ಕೀರ್ತಿಯೆಂಬ ಧೂಳಿಯ ಹರಡುವಿಕೆಗೆ ಸಹಾಯಕವಾದ ಬಿರುಗಾಳಿಯೂ ಆದವಳು ಲಕ್ಷ್ಮಿ.

೧೨೩. ಪಾತಕಿಯಾದ ಈ ಲಕ್ಷ್ಮಿಯೊಡನೆ ಕಾತುರನಾದ ಕಾಪುರಷನಂತೆ ಈತನೇ ನೆರೆಯಲಿ! ನಾನು ಪುರುರಾಜನ ಮಕ್ಕಳು ಆಲೋಚಿಸುವಂತೆ ಆಲೋಚಿಸುವೆನು. ಕೆಟ್ಟದ್ದನ್ನು ಆಲೋಚಿಸೆನು.

೧೨೪. (ನರಕವೆಂಬ) ವಿಷಸಮುದ್ರಗಳಲ್ಲಿ ಅದ್ದುವ, ವಿಷಮ ರಣಾಂಗವನ್ನು ಹೊಗಿಸುವ, ವಿಷಯವಸ್ತುಗಳಲ್ಲಿ ತೊಡರಿಸುವ ವಿಷಯ ಸುಖಗಳಲ್ಲಿಯೇ ಈ ಜಗತ್ತು ಬಿದ್ದು ಒದ್ದಾಡುತ್ತಿದೆ.

೧೨೫. ಪ್ರಾರಂಭದಲ್ಲಿ ವಿಷಯ ಚಸ್ತುಗಳು ಸಿಹಿಯಾಗಿರುವುವು. ಬಳಿಕ ವಿಷದ ಹನಿಯಂತೆ ಮುಳಿದು ಕೊಲ್ಲುವುವು. ಹೀಗಿದ್ದರೂ ನರಪಶುಗಳು ವಿಷಯ ಸುಖಾಸ್ವಾದನದಲ್ಲಿಯೇ ಲಂಪಟರಾಗಿರುವುದೇಕೆ?

೧೨೬. ಕಿವಿ, ಮೈ, ಕಣ್ಣು, ನಾಲಿಗೆ ಮತ್ತು ಮೂಗುಗಳು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳಿಂದುಂಟಾಗುವ ಸುಖದಲ್ಲಿಯೇ ಪ್ರವೃತ್ತವಾಗುವುದೇ ಸುಖವೆನಿಸಿಸುವುದು. ಶಬ್ದಾದಿ ವಿಷಯಗಳಿಲ್ಲದಾಗ ಸುಖವೆಂಬುದೇ ಇಲ್ಲ. ಆದ್ದರಿಂದ ಅತೀಂದ್ರಿಯ ಸುಖವೇ ನಿಜವಾದ ಸುಖ.

೧೨೭. ನಾಶವಾಗುವ ಈ ದೇಹ, ನಾಶವಾಗುವ ಈ ರಾಜ್ಯ ಇವುಗಳ ವಿಷಯವಾದ ಸುದ್ದಿಯನ್ನು ಹೇಳಲಿಕ್ಕೆ ಸಹ ನನ್ನ ಮೈ ನಡುಗುತ್ತದೆ. ಆದಕಾರಣ ಈಗಲೇ ಜೈನದೀಕ್ಷೆಯನ್ನು ಪರಿಗ್ರಹಿಸಿ ಎಲ್ಲ ಸುರಸಮೂಹವನ್ನೂ ಕಾಲಿಗೆ ಬೀಳುವಂತೆ ಮಾಡಿಸುವೆನು”

೧೨೮. ಎಂದುಕೊಂಡು ಬಾಹುಬಲಿಯು “ಚಕ್ರೇಶ್ವರ ಲಜ್ಜೆಯನ್ನು ಬಿಡು, ಸಿಟ್ಟನ್ನು ಎಂದಿಗೂ ಮಾಡದಿರು. ತಮ್ಮಂದಿರ ವಿಷಯದಲ್ಲಿ ಹೀಗೆ ಇಷ್ಟು ನಿಗ್ರಹ ಬುದ್ಧಿಯನ್ನಿರಿಸುವುದು ಹಿರಿಮೆಯೇ?

೧೨೯. “ನಿನ್ನ ಆಜ್ಞಾಧೀನವಾದ ಚಕ್ರವು ನನ್ನ ದೇಹವೆಂಬ ಬೆಟ್ಟವನ್ನು ಗೆಲ್ಲಲು ಸಮರ್ಥವಾಗುವುದಿಲ್ಲ. ಸದೇಕೆ ಸುಮ್ಮನೆ ಮಾತನಾಡದಿರುವೆ? ಅದು ನನ್ನನ್ನು ಹೇಗೆ ಗೆದ್ದೀತು? ವಜ್ರಗಿರಿಯನ್ನು ವಜ್ರವು ನಾಶಪಡಿಸಲು ಸಾಧ್ಯವೇ?

೧೩೦. ಯೋಧಖಡ್ಗಗಳೆಂಬ ಉತ್ಪಲವನದಲ್ಲಿ ಸೊಗಸಿನಿಂದ ನಲಿಯುವ ದುಂಬಿಯಂತಿರುವವಳೂ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವವಳೂ ಆದ ರಾಜ್ಯಲಕ್ಷ್ಮಿಯು ನಿನ್ನ ಎದೆಯ ಮೇಲೆ ನಿಶ್ಚಲವಾಗಿ ನೆಲೆಸಿರಲಿ! ನನ್ನಯ್ಯನಿತ್ತ ರಾಜ್ಯವನ್ನು ನಿನಗೆ ಸಮರ್ಪಿಸುವೆನು. ನೀನು ಬಯಸಿರುವ ಹೆಣ್ಣನ್ನೂ ಭೂಮಿಯನ್ನೂ ನಾನು ಬಯಸಿದರೆ, ನನ್ನ ಕೀರ್ತಿಯು ಮಾಸದೆ?

೧೩೧. ನಾನು ನಿನ್ನ ವಿಷಯದಲ್ಲಿ ತೋರಿಸಿದ ಅವಿನಯ ಪ್ರಯುಕ್ತವಾದ ದೋಷವನ್ನು, ತಪಸ್ಸನ್ನು ಕೈಗೊಳ್ಳುವುದರ ಮೂಲಕ ಕಳೆದುಕೊಳ್ಳುವೆನು. ಮನಃಕಷಾಯವನ್ನು ತೊರೆ, ನನ್ನ ದುಶ್ಚೇಷ್ಟೆಯನ್ನು ಕ್ಷಮಿಸು” ವ॥ ಎಂದನು. ಹೀಗೆ ನುಡಿದು ಬಾಹುಬಲಿ ಕುಮಾರನು ತಪಶ್ಚರಣಕಾರ್ಯದಲ್ಲಿ ನಿಶ್ಚಲವಾದ ಮನಸ್ಸುಳ್ಳವನಾದನು.

❑

# ೨. ಕಥೆ

# ನಿಜಾಮನ ದರ್ಬಾರ, ರಜಾಕಾರರ ಕಾರಬಾರ

**– ಜಂಬಣ್ಣ ಅಮರಚಿಂತ**

'ಟಕ್ ಟಕ್' ಬಾಗಿಲು ಬಡಿಯುವ ಶಬ್ದ ಕೇಳುತ್ತಿದ್ದಂತೆ ರಾಯಪುರದ ಕಾಂಗ್ರೆಸು ಪುಢಾರಿ ಪಾಂಡುರಂಗಾಚಾರಿ ನಿದ್ದೆಗಣ್ಣಿನಿಂದ ಎದ್ದುಬಂದು ಆಕಳಿಸುತ್ತಾ "ಬಾಗಿಲ ತಟ್ಟೋರು ಯಾರಪಾ? ಇಂಥ ರಾತ್ರಿಯಲಿ" ಎಂದ. "ನಾನ್ರೀ ಆಚಾರಿ. ಓಬಳರೆಡ್ಡಿ, ತುಂಗಭದ್ರ ರಕ್ಷಣಾ ಶಿಬಿರದಿಂದ ಬಂದೀನಿ. ಬಾಗಿಲ ತೆಗೆರಿ. ಅರ್ಜೆಂಟ್ ಮಾತಾಡೋದೈತಿ" ಎಂದು ಉತ್ತರಿಸಿದ ಓಬಳರೆಡ್ಡಿ. ಪಾಂಡುರಂಗಾಚಾರಿ ಮೆಲ್ಲನೆ ಬಾಗಿಲ ತೆರೆದ. ಓಬಳರೆಡ್ಡಿ ಆತನ ಜೊತೆಗಿದ್ದ ರಾಜಪೂತರ ರುದ್ರದೇವಸಿಂಗ್ ಮನೆ ಹೊಕ್ಕರು.

ಈ ಹೊತ್ತಿನಲ್ಲಿ ನೀವ್ಯಾಕ ರಾಯಪುರಕ್ಕೆ ಬಂದಿರಿ? ಈಗ ಎಲ್ಲಾ ಕಡೆ ಕಾಲಾಗಸ್ತಿ ಕರಾಳ ಕಾನೂನು ಜಾರಿಗೆ ಬಂದಾದ. ಸಂಶಯ ಬಂದವರನ್ನೆಲ್ಲಾ ಪೊಲೀಸರು ಹಿಡಿದು ಹಾಕಲಿಕತ್ಯಾರ" ಎಂದ ಪಾಂಡುರಂಗಾಚಾರಿ. "ಏನಿಲ್ಲ ಆಚಾರ್ಯರೇ ರಜಾಕಾರರು, ನಿಜಾಮ ಸೇರಿ ಗಡಿನಾಡ ಪ್ರಾಂತದ ಜನರ ಮೇಲೆ ದಬ್ಬಾಳಿಕೆ ನಡಿಸ್ಯಾರ. ಭಾರತ ಸರಕಾರ ಸೂಚಿಸಿದ ಯಥಾಸ್ಥಿತಿಯ ಒಪ್ಪಂದಕ್ಕೆ ಸಹಿ ಹಾಕದೆ ನಿಜಾಮ ಕಾಲಹರಣ ಮಾಡುತ್ತಿದ್ದಾನೆ. ಒಂದು ಕಡೆ ಒಪ್ಪಂದವೆಂದು, ಇನ್ನೊಂದು ಕಡೆ ಯುದ್ಧದ ಸಿದ್ಧತೆ ನಡೆಸಿದ್ದಾನೆ. ಇದು ನಿಜಾಮನ ಗೋಮುಖ ವ್ಯಾಘ್ರ ರಾಜಕೀಯ ತಂತ್ರ. ಭಾರತ ಸರಕಾರದ ಗಮನ ಬೇರೆ ಕಡೆ ಸೆಳೆಯಲು ನಿಜಾಮ ಮತ್ತು ರಜಾಕಾರರು ಸೇರಿ ಪುಣೆ, ಗೋವೆ, ದಿಲ್ಲಿ, ಮದ್ರಾಸುಗಳ ಮೇಲೆ ನುಗ್ಗಲು ಯೋಜನೆ ರೂಪಿಸುತ್ತಿರುವ ಸುದ್ದಿ ಹಬ್ಬಿದೆ. ಭಾರತದ ಕಾದು ನೋಡುವ ತಂತ್ರ, ಆರ್ಥಿಕ ನಿರ್ಬಂಧ ಹೇರಿಕೆ ಯಾವುದು ಫಲಕಾರಿಯಾಗಿಲ್ಲ. ಬದಲಿಗೆ ರಜಾಕಾರರು ದಾಳಿ ಮಾಡಿ ಗಡಿಪ್ರದೇಶಗಳಲ್ಲಿ ಹಿಂಸೆ ಇನ್ನಷ್ಟು ಹೆಚ್ಚಿಸುತ್ತಿದ್ದಾರೆ" ಎಂದು ಓಬಳರೆಡ್ಡಿ ವಿವರವಾಗಿ ಎಲ್ಲಾ ತಿಳಿಸಿದ.

"ಸ್ವಲ್ಪ ತಡಿ ರೆಡ್ಡಿ, ಮಾಳಿಗೆ ಮೇಲೆ ಪಕ್ಷದ ಕಾರ್ಯಕರ್ತರು ಮಲಗಿದ್ದಾರೆ. ಅವರನ್ನೆಲ್ಲಾ ಕರೀತೀನಿ. ವಿವರವಾಗಿ ಮಾತಾಡೋಣ"

ಎಂದು ಪಾಂಡುರಂಗಾಚಾರಿ ಮಾಳಿಗೆ ಮೇಲೆ ಮಲಗಿದ್ದ ಪಕ್ಷದ ಕಾರ್ಯಕರ್ತರಾದ ನಿಡಶೇಶಿ ಶೀನಪ್ಪ, ಗುರುಮಿಟಕಲ್ ಗುರುಪಾದಪ್ಪ, ಶಾಂತಗೇರಿ ಶಾಂತಪ್ಪ, ಇನ್ನಿತರ ಎಂಟ್ಹತ್ತು ಜನರನ್ನು ಕರೆದು ತಂದ. ಓಬಳರೆಡ್ಡಿ ಮತ್ತು ರುದ್ರದೇವಸಿಂಗ್‌ನನ್ನು ಕಂಡು ಸಂತೋಷದಿಂದ ಕಾರ್ಯಕರ್ತರು ಅಪ್ಪಿಕೊಂಡರು. ಎಲ್ಲರು ಚರ್ಚೆಗೆ ಕುಂತರು. ರುದ್ರದೇವಸಿಂಗ್ ಚರ್ಚೆ ಸುರುಮಾಡಿದ. "ನಿಜಾಮನ ಕ್ರೂರ ಆಡಳಿತದ ದೌರ್ಜನ್ಯ ತಡೆಯಲು ಹೈದರಾಬಾದ ಕರ್ನಾಟಕದ ಗಡಿಪ್ರದೇಶಗಳಲ್ಲಿರುವ ಜನರು ಸ್ವಯಂ ಪ್ರೇರಣೆಯಿಂದ ಗಜೇಂದ್ರಗಡ, ಮುಂಡರಗಿ, ಇಟಗಿ, ಸೂಡಿ, ಬಂದೂರು, ಇಳಕಲ್, ಕಂಪ್ಲಿ, ತುಂಗಭದ್ರ, ಸಿರಗುಪ್ಪ ಮುಂತಾದ ಗಡಿಪ್ರದೇಶಗಳಲ್ಲಿ ರಕ್ಷಣಾ ಸಿಬ್ಬಂದಿಗಳನ್ನು ಸ್ಥಾಪಿಸಿ ಹೋರಾಟಕ್ಕೆ ಸಿದ್ಧರಾಗಿದ್ದಾರೆ. ಇದು ನಮ್ಮ ಅಳಿವು ಉಳಿವಿನ ಪ್ರಶ್ನೆ. ಗಡಿ ಪ್ರದೇಶಗಳಲ್ಲಿ ಹೋರಾಡುತ್ತಿರುವ ಯೋಧರಿಗೆ ನಿಜಾಮ ಸಂಸ್ಥಾನದ ಜನರು ತನುಮನ ಧನದಿಂದ ಸಹಾಯ ಮಾಡಬೇಕಾಗಿದೆ ಎಂದು ರುದ್ರದೇವಸಿಂಗ್ ವಿವರಿಸಿದ. "ನಿಮ್ಮ ಮಾತು ನಿಜ. ರಜಾಕಾರರ ದೌರ್ಜನ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ರಜಾಕಾರರ ಸಂಸ್ಥೆ ಭದ್ರಬುನಾದಿ ನಿರ್ಮಿಸಿಕೊಂಡಿದೆ. ಸುಮಾರು ೫೦ ಸಾವಿರಕ್ಕೂ ಅಧಿಕ ಹೆಣ್ಣು, ಗಂಡು ವೈಯಾರದ ವೇಶ್ಯೆಯರಿಗೆ ಮತ್ತು ಹಿಜಡಾಗಳಿಗೆ ಸಶಸ್ತ್ರತರಬೇತಿ ನೀಡಿ ಸಂಸ್ಥಾನದ ಎಲ್ಲಾ ಕಡೆ ತನ್ನ ಕರಾಳಹಸ್ತಬೇಟೆಗೆ ಸಂಸ್ಥಾನದ ಎಲ್ಲೆಡೆ ನಿಮಗೆ ಗೊತ್ತಿದ್ದಂತೆ ಎಲ್ಲೆಡೆ ಮೆರವಣಿಗೆಗಳನ್ನು ಏರ್ಪಡಿಸಿ, ಹುಸಿಗುಂಡು ಹಾರಿಸಿ ಜನರಲ್ಲಿ ಭೀತಿ ಹುಟ್ಟಿಸುವುದು ಭಾರತದ ಒಕ್ಕೂಟ ಪ್ರದೇಶಗಳಿಗೆ ನುಗ್ಗಿ ನಗ, ನಾಣ್ಯ ದೋಚುವುದು, ಮಹಿಳೆಯರ ಮಾನಭಂಗ ಮಾಡುವುದು, ಕಾಂಗ್ರೆಸ್ಸಿಗೆ ಸೇರಿದ ವ್ಯಕ್ತಿಗಳನ್ನು, ಹೋರಾಟಗಾರರನ್ನು ಹಿಂಸಿಸುವುದು, ಭಾರತ ಸರಕಾರದ ವಿರುದ್ಧ ಅಪಪ್ರಚಾರ ಮಾಡುವುದು, ಒತ್ತಾಯದಿಂದ ಮತಾಂತರ ಮಾಡಿಸುವುದು ಇದೇ ರಜಾಕಾರರ ಪ್ರಮುಖ ಕಾರ್ಯಕ್ರಮಗಳಾಗಿವೆ" ಎಂದು ನಿಡಿಶೇಶಿ ಶೀನಪ್ಪ ಸವಿಸ್ತಾರವಾಗಿ ವಿವರಿಸಿದ.

"ರಜಾಕಾರರು ನಡೆಸುತ್ತಿರುವ ದೌರ್ಜನ್ಯದ ಬಿಸಿ ಈಗ ಎಲ್ಲಾ ಕಡೆ ತಟ್ಟಿದೆ. ರಜಾಕಾರರು ಹಿಂದೂಗಳನ್ನು ಖತಲ್ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಇಸ್ಲಾಂ ಧರ್ಮವನ್ನು ನಿರಾಕರಿಸುವ ಗಂಡು ಮಕ್ಕಳನ್ನು ಕೊಂದು ಹೆಂಗಸರನ್ನು

ಬಲಾತ್ಕಾರದಿಂದ ಕೆಡಿಸಿ ಇಸ್ಲಾಂ ಧರ್ಮಕ್ಕೆ ಸೇರಿಸುತ್ತಾರೆಂಬ ಸುದ್ದಿ ಜೊತೆಗೆ ಮಕ್ಕಳನ್ನು ಗೋಡೆಗೆ ನಿಲ್ಲಿಸಿ ಸಾಯಿಸುವರೆಂಬ ಸುದ್ದಿ ಎಲ್ಲಾ ಕಡೆ ಹಬ್ಬಿದೆ. ಅನೇಕರಲ್ಲಿ ಆತಂಕ ಮೂಡಿಸಿದೆ ಎಂದು ಓಬಳರೆಡ್ಡಿ ನುಡಿದ. "ಈಗ ಕಾಂಗ್ರೆಸು ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಮತ್ತು ಆರ್ಯ ಸಮಾಜದ ಮುಖಂಡರು ರಾತ್ರಿ ಹೊತ್ತು ರಾಯಪುರದ ಗಲ್ಲಿಗಳಲ್ಲಿ ಸಂಚರಿಸಿ ಜನರಲ್ಲಿ ಧೈರ್ಯ ತುಂಬುವ ಕೆಲಸ ಮಾಡಬೇಕು. ರಜಾಕಾರರನ್ನು ಎದುರಿಸಲು ಕಾರ್ಯತಂತ್ರ ರೂಪಿಸಬೇಕು. ಸಾಯುವ ಮುನ್ನ ಒಬ್ಬೊಬ್ಬ ಹಿಂದೂ ನಾಲ್ಕೈದು ಜನ ರಜಾಕಾರರನ್ನು ಬಲಿ ತೆಗೆದುಕೊಂಡು ಸಾಯುವಂತಾಗಬೇಕು. ಅದಕ್ಕಾಗಿ ಬಚ್ಚಿಟ್ಟ ಆಯುಧಗಳನ್ನು ಹೊರತೆಗೆಯಬೇಕು. ಹೆಂಗಸರು ಖಾರದ ಪುಡಿಯನ್ನು ಸೆರಗಿನಲ್ಲಿ ಕಟ್ಟಿಕೊಂಡು ಒನಕೆ, ಗಡಾರಗಳನ್ನು ಬಗಿಲಲ್ಲಿಟ್ಟುಕೊಂಡು ರಜಾಕಾರರ ವಿರುದ್ಧ ಕೊನೆಯ ಸಮರಕ್ಕೆ ಸಿದ್ಧರಾಗಬೇಕೆಂದು ಜನರಿಗೆ ತಿಳಿಸಬೇಕಾಗಿದೆ. ರಾತ್ರಿಯಲ್ಲಿ ಪುಂಮೋಹಲ್ಲಾ ಗಲ್ಲಿಗಳಲ್ಲಿ ಸಂಚರಿಸಿ ಗುಪ್ತಸಭೆಗಳನ್ನು ಏರ್ಪಡಿಸಿ ಕೊನೆಯ ಸಮರಕ್ಕೆ ಸಿದ್ಧರಾಗಬೇಕೆಂದು ಕರೆ ಕೊಡಬೇಕಾಗಿದೆ."

"ಈ ಕೆಲಸವನ್ನು ನಾವು ಇಂದಿನಿಂದಲೇ ಪ್ರಾರಂಭಿಸುತ್ತೇವೆ" ಎಂದು ಪಾಂಡುರಂಗಾಚಾರ್ಯರು ಆಶ್ವಾಸನೆ ನೀಡಿದರು. ಆಗ ನಿಡಿಶೇಶಿ ಶೀನಪ್ಪನವರು ಮೇಲೆದ್ದು "ಓಬಳರೆಡ್ಡಿ ಮತ್ತು ರುದ್ರದೇವಸಿಂಗ್ ಆದಷ್ಟು ಬೇಗ ರಾಯಪುರ ಬಿಟ್ಟು ತುಂಗಭದ್ರಕ್ಕೆ ಸೇರಿಕೊಳ್ಳಬೇಕು. ರಜಾಕಾರರು ಅವರನ್ನು ಹಿಡಿಯಲು ಹಂಚಿಕೆ ನಡೆಸಿದ್ದಾರೆ. ರಾತ್ರಿ ಹೊತ್ತಿನಲ್ಲಿ ಪಹರೆ ಹಾಕಿದ್ದಾರೆ. ಓಬಳರೆಡ್ಡಿ ಮನೆಮಂದಿಗೆ ಸಾಕಷ್ಟು ಕಿರುಕುಳ ನೀಡುತ್ತಿದ್ದಾರೆ. ಅವರು ತಮ್ಮ ಮನೆಗಳಿಗೆ ಹೋಗಕೂಡದು. ಆವರು ತಲೆ ಮರೆಸಿಕೊಂಡು ಇಲ್ಲಿಂದ ಈ ರಾತ್ರಿ ಪರಾರಿಯಾಗಬೇಕು. ಅದಕ್ಕೆಲ್ಲಾ ನಾನು ವ್ಯವಸ್ಥೆ ಮಾಡುತ್ತೇನೆ" ಎಂದು ಸಲಹೆ ನೀಡಿದ. ಆ ಮಾತಿಗೆ ಎಲ್ಲರೂ ಒಪ್ಪಿದರು. ಅಷ್ಟೊತ್ತಿಗೆ ಚುಮುಚಮು ನಸುಕು ಪ್ರಾರಂಭವಾಗಿತ್ತು. ಸೂರ್ಯ ಮೇಲೇರಿ ಬರುವನೆಂಬ ಸುದ್ದಿ ಸೂರ್ಯಕಿರಣಗಳು ಜಗದ ತುಂಬಾ ಹರಡತೊಡಗಿದವು. ನಾಲ್ಕೈದು ಜನ ಕಾರ್ಯಕರ್ತರು ಮಾಳಿಗೆ ಏರಿ ಎಲ್ಲಾಕಡೆ ದೃಷ್ಟಿ ಚೆಲ್ಲಿ ನೋಡತೊಡಗಿದರು. ಹನುಮಾನ ವೃತ್ತದಲ್ಲಿ ಪೊಲೀಸರು ಮತ್ತು ರಜಾಕಾರರು ಜಮಾಯಿಸಿದ್ದರು. ಗದ್ದಲ ನಡೆದಿತ್ತು.

ವ್ಯಕ್ತಿಯೊಬ್ಬನನ್ನು ಕತ್ತೆಮೇಲೆ ಕೂಡಿಸಿ ಕೊರಳಿಗೆ ಚಪ್ಪಲಿಹಾರ ಹಾಕಿದ್ದರು. ಭಾರತ ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ರಕಾಕಾರರು ಕತ್ತೆ ಮೆರವಣಿಗೆ ನಡೆಸಿದ್ದರು. "ಯಾರಾದರೂ ನಿಜಾಮನ ವಿರುದ್ಧ ನಿಂತರೆ ಅವರಿಗೆ ಇದೇ ಗತಿ. ಹುಷಾರು" ಎಂದು ಕೂಗುತ್ತ ಕತ್ತೆ ಮೆರವಣಿಗೆಯನ್ನು ಸಾಲುಬೆಟ್ಟಗಳಿಗೆ ಸಾಗಿಸಿದರು.

ಪಾಂಡುರಂಗಾಚಾರ್ಯರ ಮನೆಯಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಪಕ್ಷದ ಪುಢಾರಿಗಳು, ಕಾರ್ಯಕರ್ತರು ನಿಸ್ಸಹಾಯಕರಾಗಿ ಕಿಟಕಿಗಳಲ್ಲಿ ನೋಡುತ್ತಾ ನಿಂತಿದ್ದರು. ಕತ್ತೆ ಮೆರವಣಿಗೆಯಲ್ಲಿ ಭಾಗಿಯಾಗಿದ್ದ ಗುಂಪು ಕಣ್ಮರೆಯಾಗುತ್ತಿದ್ದಂತೆ ರಾಯಪುರದ ಗಲ್ಲಿಗಳಲ್ಲಿ ಜನರು ಮನೆಗಳಿಂದ ಹೊರಬಂದು ಗುಸುಗುಸು ಮಾತಾಡತೊಡಗಿದರು. ನಿಡಿಶೇಶಿ ಶೀನಪ್ಪ ಹೊರಬಂದು ರಜಾಕಾರರು ನಡೆಸಿದ ಗದ್ದಲದ ಬಗ್ಗೆ ವಿವರಗಳನ್ನು ಶೇಖರಿಸಿ ಆಚಾರ್ಯರ ಮನೆಗೆ ಬಂದು "ಯಾರೋ ಬಡಪಾಯಿ, ಬಾಂಬಿನ ಖಾಲಿಡಬ್ಬಸಹಿತ ಸಿಕ್ಕ ಕಾರಣ ಅವನು ತೆಲಂಗಾಣದ ಕ್ರಾಂತಿಕಾರಿ ಪಾರ್ಟಿಗೆ ಸೇರಿದನೆಂದು ತಿಳಿದು ನಾನಾ ರೀತಿಯ ಹಿಂಸೆ ಕೊಟ್ಟು ಕತ್ತೆಯ ಮೇಲೆ ಕೂಡಿಸಿ ಜನರಲ್ಲಿ ಭೀತಿ ಹುಟ್ಟಿಸಲು ಮೆರವಣಿಗೆ ತೆಗೆದು ಸಾಲುಬೆಟ್ಟಗಳ ಕಡೆ ಅವನನ್ನು ಕೊಲ್ಲಲು ತೆಗೆದುಕೊಂಡು ಹೋಗಿದ್ದಾರೆ" ಎಂದು ಒಂದೇ ಉಸಿರಿನಲ್ಲಿ ಎಲ್ಲಾ ಹೇಳೀ ಮುಗಿಸಿದ. ಅಲ್ಲಿದ್ದವರೆಲ್ಲಾ ಒಬ್ಬರ ಮುಖ ಮತ್ತೊಬ್ಬರು ನೋಡಿದರು. ಪಾಂಡುರಂಗಾಚಾರಿ ಮನೆಯೊಳಗೆ ಹೋಗಿ ಒಂದು ಚೀಲ ಕೈಯಲ್ಲಿ ಹಿಡಿದು ತಂದ. ಓಬಳರೆಡ್ಡಿಗೆ ಗಂಟನ್ನು ಕೊಟ್ಟು, ಇದು ಜನರಿಂದ ಸಂಗ್ರಹಿಸಿದ ಕಾಣಿಕೆ. ಇದರಲ್ಲಿ ನಗನಾಣ್ಯಗಳಿವೆ. ಇದನ್ನು ತುಂಗಭದ್ರ ಗಡಿರಕ್ಷಣಾ ಶಿಬಿರಾಧಿಕಾರಿಗೆ ಹೋರಾಟಕ್ಕಾಗಿ ರಾಯಪುರದ ಜನರು ನೀಡಿದ ಕಾಣಿಕೆ ಎಂದು ಒಪ್ಪಿಸಲು ಸೂಚಿಸಿದ. "ನಮ್ಮ ಹೋರಾಟಕ್ಕೆ ಜನರು ಸ್ವಯಂಪರೇರಣೆ ನೀಡಿ ಹೋರಾಟಕ್ಕೆ ಬೆಂಬಲ ನೀಡಬೇಕು. ಭಾರತ ಸರಕಾರ ನಮ್ಮ ಹೋರಾಟಕ್ಕೆ ಧನ ಸಹಾಯ ಮಾಡುವುದಿಲ್ಲ. ಇಲ್ಲಿನ ನಮ್ಮ ಹೋರಾಟಗಾರರಿಗೆ ನಾವೇ ಸಹಾಯಹಸ್ತ ಚಾಚಬೇಕು. ರಜಾಕಾರರಿಗೆ ನಿಜಾಮ ಎಲ್ಲಾ ರೀತಿ ನೆರವು ನೀಡಿ ಪ್ರೋತ್ಸಾಹಿಸುತ್ತಿದ್ದಾನೆ. ಓಡಾಟಕ್ಕೆ ಮತ್ತು ಪ್ರಚಾರಕ್ಕೆ ರಜಾಕಾರರ ಸಂಸ್ಥೆ ತನ್ನದೇ ಆದ ಸಾರಿಗೆ ವ್ಯವಸ್ಥೆ ಹೊಂದಿದೆ. ಸೈನ್ಯ ಮದ್ದುಗುಂಡು ಆಧುನಿಕ ಆಯುಧಗಳನ್ನು ತನ್ನ

ವಶದಲ್ಲಿಟ್ಟುಕೊಂಡಿದೆ. ಪ್ರಚಾರಕ್ಕೆ ಒಂದು ರೇಡಿಯೋ ಕೇಂದ್ರ, ಒಂದು ಇಂಗ್ಲೀಷ್ ದಿನಪತ್ರಿಕೆ, ಏಳು ಉರ್ದು ದಿನಪತ್ರಿಕೆಗಳು, ಆರು ಉರ್ದು ವಾರಪತ್ರಿಕೆಗಳು ಯಜಮಾನ್ಯ ಪಡೆದಿವೆ. ಇದಕ್ಕಾಗಿ ಪ್ರತಿದಿನ ಮೂವತ್ತು ಸಾವಿರಕ್ಕೂ ಅಧಿಕ ಹಣ ಖರ್ಚು ಮಾಡುತ್ತಿದೆ. ಈ ಖರ್ಚಿಗಾಗಿ ಅದು ಸರಕಾರದ ಸುಂಕ ಲೂಟಿ ಮಾಡಿ ತಂದ ಸಂಪತ್ತು ಉಪಯೋಗಿಸುತ್ತಿದೆ. ಇದಕ್ಕೆಲ್ಲಾ ನಿಜಾಮನ ಅಭಯಹಸ್ತ ಸಿಕ್ಕಿದೆ. ಅದಕ್ಕೆ ರಜಾಕಾರರ ದೌರ್ಜನ್ಯಕ್ಕೆ ಲಂಗುಲಗಾಮಿಲ್ಲದಂತಾಗಿದೆ. ರಜಾಕಾರರಿಗೆ ಸಿಕ್ಕ ಸಹಾಯ ಭಾರತ ಸರಕಾರದಿಂದ ಸಿಗುವುದೆಂದು ನಿರೀಕ್ಷೆ ಮಾಡುವುದು ತಪ್ಪು. ಇಂದಲ್ಲ ನಾಳೆ ಭಾರತ ಸರಕಾರ ನಿಜಾಮ ಸಂಸ್ಥಾನದ ಮೇಲೆ ದಾಳಿ ಮಾಡಬಹುದು. ಅಲ್ಲಿಯತನಕ ನಮ್ಮ ಕಾಲಿನ ಮೇಲೆ ನಾವು ನಿಂತು ಹೋರಾಟ ಮಾಡಬೇಕಾಗಿದೆ" ಎಂದು ಓಬಳರೆಡ್ಡಿ ನುಡಿದ. ಅಷ್ಟರಲ್ಲಿ ಹೊರಗಿನಿಂದ ಕಾಂಗ್ರೆಸ್ಸು ಕಾರ್ಯಕರ್ತನೊಬ್ಬ ಓಡೋಡಿ ಬಂದು "ಆಚಾರಿಗಳೇ, ರಜಾಕಾರರು ಕತ್ತೆಯ ಮೇಲೆ ಮೆರವಣಿಗೆ ತೆಗೆದ ವ್ಯಕ್ತಿಯನ್ನು ಸಾಲುಬೆಟ್ಟಗಳಿಗೆ ಕರೆದೊಯ್ದು ಅವನ ಗುದದ್ವಾರದಲ್ಲಿ ಬಂದೂಕಿಟ್ಟು ಗೋಲಿ ಹೊಡೆದು ಸಾಯಿಸಿದ್ದಾರೆ. ಈ ವಿಷಯವನ್ನು ಸಾಲು ಬೆಟ್ಟಗಳಲ್ಲಿ ಕೆಲಸದಲ್ಲಿ ತೊಡಗಿದ್ದ ವಡ್ಡರು ರಾಯಪುರದ ಜನರಿಗೆ ತಿಳಿಸಿದ್ದಾರೆ. ಆನರು ಕಂಗಾಲಾಗಿ ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ" ಎಂದು ವರದಿ ಒಪ್ಪಿಸಿದ. "ಬಲಿಯಾದವನು ತೆಲಂಗಾಣದ ಕಮ್ಯೂನಿಸ್ಟ್ ಕ್ರಾಂತಿಕಾರಿಯಾಗಿರಬೇಕು" ಎಂದು ನುಡಿದು ಓಬಳರೆಡ್ಡಿ ಮತ್ತು ರುದ್ರದೇವಸಿಂಗ್‌ರನ್ನು ಸಮೀಪಿಸಿ "ನೀವಿಬ್ಬರು ಇಂದು ರಾತ್ರಿ ಇಲ್ಲಿಂದ ತುಂಗಭದ್ರಕ್ಕೆ ಪರಾರಿಯಾಗಬೇಕು. ಇದಕ್ಕೆಲ್ಲ ನಿಡಶೇಶಿ ಶೀನಪ್ಪನವರು ವ್ಯವಸ್ಥೆ ಮಾಡ್ಯಾರ. ನೀವು ನಿಮ್ಮ ಮನೆಗಳಿಗೆ ಹೋಗೋದು ಬ್ಯಾಡ. ಪೊಲೀಸರ ಸಕತ್ತು ಪಹೆರ ಇದೆ" ಎಂದು ನುಡಿದ. ಇದಕ್ಕೆ ಅವರಿಬ್ಬರು ಸಮ್ಮತಿ ಸೂಚಿಸಿದರು.

ರಜಾಕಾರರು ರಾತ್ರಿ ಸಮಯದಲ್ಲಿ ಗಲ್ಲಿಗಳಲ್ಲಿ ಸಭೆ ಏರ್ಪಡಿಸಿ ಭಾರತ ಸರಕಾರದ ವಿರುದ್ಧ ಕಾಂಗ್ರೆಸ್ಸು ಪಕ್ಷದ ವಿರುದ್ಧ ಘೋಷಣೆ ಕೂಗುತ್ತಾ, ಹುಸಿಗುಂಡುಗಳನ್ನು ಹಾರಿಸುತ್ತಾ ಜನರನ್ನು ಭಯಭೀತಗೊಳಿಸಲು ಸುರು ಮಾಡಿದರು. ಆಯುಧಗಳನ್ನು ಹಿಡಿದು ಗಲ್ಲಿಗಳಲ್ಲಿ ಗಸ್ತಿ ತಿರುಗುತ್ತಿರುವಾಗ ಯಾರಾದರೂ ಹಿಂದೂಗಳು ಸಿಕ್ಕರೆ ಕಡಿದು, ಬಡಿದು ಹಣ್ಣುಗಾಯಿ,

ನೀರುಗಾಯಿ ಮಾಡುತ್ತಿದ್ದರು. ಹೀಗೆ ಗಸ್ತು ತಿರುಗುತ್ತಿರುವಾಗ ರುದ್ರದೇವಸಿಂಗ್‌ನ ಮಾವ ಗೋಪಾಲಸಿಂಗನು ಸಿಕ್ಕಾಗ ಅವನ ಮೇಲೆ ತಲವಾರ್‌ಗಳಿಂದ ಹಲ್ಲೆ ನಡೆಸಿದಾಗ ಅವನ ಬಲಗಿವಿ ಕತ್ತರಿಸಿ ಹೋಯಿತು. ಹೆಗಲಿಗೆ ಕತ್ತಿಪೆಟ್ಟು ಬಿದ್ದಿರುವುದನ್ನು ಲೆಕ್ಕಿಸದೆ ಅವನು ಏಳುತ್ತಾ, ಬೀಳುತ್ತಾ ಓಡಿ ಮದರಸಾಬನ ಅಂಗಡಿ ಮುಂದೆ ಬಿದ್ದು ಮೂರ್ಛೆಹೋದ. ಬಿದ್ದವನನ್ನು ರಕಾಕಾರರು ಬೂಟುಗಾಲಿನಿಂದ ಮನಸಾರೆ ಒದ್ದರು. ಬಿದ್ದವನ ಹತ್ತಿರ ಬಂದು ಮದರ್‌ಸಾಬು ಅವನ ನಾಡಿ ಪರೀಕ್ಷಿಸಿ "ಈಗಾಗಲೇ ಅವನು ಸತ್ತಿದ್ದಾನೆ. ಹೆಣವನ್ನು ಒದ್ದರೆ ಏನು ಪ್ರಯೋಜನ" ಎಂದು ರಜಾಕಾರರನ್ನು ಸಮಾಧಾನಪಡಿಸಲು ಯತ್ನಿಸಿದ. ರಜಾಕಾರನೊಬ್ಬ ಬಿದ್ದವನ ದೇಹವನ್ನು ಆ ಕಡೆಯಿಂದ ಈ ಕಡೆಗೆ ಹೊರಳಿಸಿ ನೋಡಿದ. ದೇಹ ಅಲುಗಾಡದೆ ನಿಶ್ಚಲವಾಗಿ ಬಿದ್ದಿರುವುದನ್ನು ಕಂಡು ಸತ್ತಿರುವುದಾಗಿ ಭಾವಿಸಿ ರಜಾಕಾರರ ಗುಂಪು ಗುಂಡು ಹಾರಿಸುತ್ತಾ ಮುಂದೆ ಹೋಯಿತು. ರಜಾಕಾರರು ಹೋದದ್ದನ್ನು ಖಚಿತಪಡಿಸಿಕೊಂಡು ಮದರ್‌ಸಾಬು ಮತ್ತೊಮ್ಮೆ ಬಿದ್ದ ಗೋಪಾಲಸಿಂಗನ ನಾಡಿ ಪರೀಕ್ಷಿಸಿ ಜೀವವಿದೆ ಎಂದು ತಿಳಿದು ಲೋಟಾದಲ್ಲಿ ನೀರು ತಂದು ಮುಖದ ಮೇಲೆ ಚಿಮುಕಿಸಿದ. ಬಿದ್ದವನು ಕಣ್ಣು ತೆರೆದು "ಮುಝೆ ಮತ್ ಮಾರೋ, ಮತ್ ಮಾರೋ" ಎಂದು ಅಂಗಲಾಚಿದ. "ತುಮ್ಹೇ ಕುಚ್ನಹಿ ಹೋಗಾ, ಬೇಫಿಕರ್ ರಹೋ" ಎಂದು ತನ್ನಿಬ್ಬರು ಮಕ್ಕಳ ಸಹಾಯದಿಂದ ರಕ್ತದಲ್ಲಿ ಅದ್ದಿ ಹೋಗಿದ್ದ ಗೋಪಾಲಸಿಂಗನನ್ನು ಎತ್ತಿ ತಂದು ರುದ್ರದೇವಸಿಂಗನ ಮನೆ ಮುಂದಿದ್ದ ಕಟ್ಟೆಯ ಮೇಲೆ ಮಲಗಿಸಿದರು. ಮದರ್‌ಸಾಬ ರುದ್ರದೇವಸಿಂಗನ ಮನೆಬಾಗಿಲು ತಟ್ಟಿದ. ಮನೆಯೊಡತಿ ಪುತ್ಲಿಬಾಯಿ ಬಂದವರು, "ಯಾರು?" ಎಂದು ಕೇಳಿದಳು. "ಬಹೆನ್, ನಾನು ಮದರ್‌ಸಾಬು, ನಿಮ್ಮ ಸಂಬಂಧಿಕ ಗೋಪಾಲಸಿಂಗನನ್ನು ರಜಾಕಾರರು ಸಾಯಬಡಿದಿದ್ದಾರೆ. ಆತ ಮೂರ್ಛೆ ಅವಸ್ಥೆಯಲ್ಲಿದ್ದಾನೆ. ಒಳಗಡೆ ಕರೆದೊಯ್ಯಿರಿ" ಎಂದಾಗ ಅಂಜುತ್ತಲೇ ಪುತ್ಲಿಬಾಯಿ ಬಾಗಿಲು ತೆರೆದಳು. ಅವಳನ್ನು ಹಿಂಬಾಲಿಸಿ ಬಂದ ಮಕ್ಕಳು ಗೋಪಾಲಸಿಂಗನ ಹೀನ ಅವಸ್ತೆಯನ್ನು ನೋಡಿ ದುಃಖಿಸತೊಡಗಿದರು. "ಮನೆಯಲ್ಲಿ ಎಲ್ರೂ ಹೆಣ್ಣುಮಕ್ಕಳು, ಸಣ್ಣ ಚಿಕ್ಕೋಳು ಇದ್ದಾವ. ದಯವಿಟ್ಟು ಆತನನ್ನು ಒಳಗಡೆ ತಗಂಡು ಬರ್ರಿ" ಎಂದು ಪುತ್ಲಿಬಾಯಿ ಅಂದಾಗ ಮದರ್‌ಸಾಬು

ಹಿಂದೆಮುಂದೆ ನೋಡಿದ."ಬಡೇಮಿಯಾ, ನೀನು ನಮ್ಮ ತಂದೆ ಸಮಾನ, ಸಂಕೋಚ ಪಡೋದು ಬ್ಯಾಡಾ" ಎಂದಳು ಪುತ್ಲಿಬಾಯಿ. ತನ್ನಿಬ್ಬರು ಮಕ್ಕಳ ಸಹಾಯದಿಂದ ಗೋಪಾಲಸಿಂಗನನ್ನು ತಂದು ಮಂಚದ ಮೇಲೆ ಮಲಗಿಸಿದ ಮದರ್‌ಸಾಬು. "ನಿಮ್ಮ ಈ ಸಹಾಯವನ್ನು ನಾನು ಜೀವನ ತುಂಬಾ ಮರೆಯಲಾರೆ" ಎಂದು ಪುತ್ಲಿಬಾಯಿ ತನ್ನ ಕೃತಜ್ಞತೆಗಳನ್ನು ಅರ್ಪಿಸಿದಳು. "ಅದರಾಗ ಏನೈತೆ ಬುಡಮ್ಮಾ, ಮನುಷ್ಯನಿಗೆ ಮನುಷ್ಯ ಸಹಾಯ ಮಾಡದಿದ್ರೆ ಮತ್ತ್ಯಾರು ಮಾಡ್ತಾರೆ?" ಎಂದು ಮದರಸಾಬ ತನ್ನ ಮಕ್ಕಳೊಂದಿಗೆ ಹೊರಗೆ ಬಂದ. "ಇದು ನಿಮ್ಮ ದೊಡ್ಡಗುಣ. ಆ ಗುಣನೇ ನಮ್ಮಪ್ಪನನ್ನು ಉಳಿಸಿತು" ಎಂದು ಹಿಂಬಾಲಿಸಿ ಬಂದ ಪುತ್ಲಿಬಾಯಿ ಮತ್ತೊಮ್ಮೆ ವಂದನೆ ಸಲ್ಲಿಸಿ ಬಾಗಿಲ ಚಿಲಕ ಹಾಕಿ ಒಳಗೆ ಹೋದಳು.

ಮಕ್ಕಳೆಲ್ಲಾ ಕೂಡಿ ಗೋಪಾಲಸಿಂಗನ ಮೈಮೇಲಿನ ಅರಿವೆ ಬಿಚ್ಚಿ ಗಾಯಗಳನ್ನು ತೊಳೆದು ಮುಲಾಮು ಹಚ್ಚಿ ಪಟ್ಟಿ ಮಾಡಿದ್ದರು. "ಇದು ರಾಕ್ಷಸನಾಮ ಸಂವತ್ಸರ. ರಾಕ್ಷಸರ ಹಾವಳಿ ಜಾಸ್ತಿಯಾಗ್ಯಾದ. ಇಂಥ ಹೊತ್ತಿನಾಗ ರಾಯಪುರಕ್ಕೆ ಯಾಕ ಬಂದಿ? ಆ ನೇಕ್ ಇನ್ಸಾನ್ ಮದರ್‌ಸಾಬು ಇರದಿದ್ರೆ ನಿನ್ನ ಗತಿ ಏನಾಗುತ್ತಿತ್ತು" ಎಂದು ದುಃಖಿಸಿ ಅತ್ತಳು ಪುತ್ಲಿಬಾಯಿ. "ರುದ್ರದೇವಸಿಂಗ್ ಮನೆಬಿಟ್ಟು ಹೋಗಿದ್ದಾನೆ. ಮನೆಯೊಳಗೆ ಬರೀ ಹೆಣ್ಣುಮಕ್ಕಳು ಮಾತ್ರ ಇದ್ದಾರೆಂಬ ಸುದ್ದಿಕೇಳಿ ನಿಮ್ಮ ಜೊತೆಯಿರಬೇಕೆಂದು ಬಂದೆ ಬೇಟಿ" ಎಂದು ಗೋಪಾಲಸಿಂಗ್ ನುಡಿದ. "ಮದರ್‌ಸಾಬುನಂಥ ನೇಕ್ ಇನ್ಸಾನಿರುವುದರಿಂದ ಭೂಮಿ ಮೇಲೆ ಇನ್ಸಾನಿಯತ್ ಉಳಿದಿದೆ. ದೇವರು ಅವ್ರಿಗೆ ಒಳ್ಳೆಯದು ಮಾಡಲಿ" ಎಂದಳು ಪುತ್ಲಿಬಾಯಿ. "ನಿಜ ಹೇಳಿದೆ ಬೇಟಿ, ನಿಜ ಹೇಳಿದೆ. ಆತ ನನ್ನನ್ನು ಉಳಿಸದಿದ್ದರೆ ನಾನು ನಿಮ್ಮ ಮುಖ ನೋಡುತ್ತಿರಲಿಲ್ಲ. ದೇವರು ಅವರನ್ನು ಸದಾ ಕಾಪಾಡಲಿ" ಎಂದು ಮನದುಂಬಿ ಹರಸಿದ ಗೋಪಾಲಸಿಂಗ್.

ಗೋಪಾಲಸಿಂಗನನ್ನು ರಜಾಕಾರರು ಗಾಯಗೊಳಿಸಿದ ಸುದ್ದಿ ಓಣಿಯ ತುಂಬಾ ಹರಡಿತು. "ಅಂಥ ಒಳ್ಳೆಯ ಮನುಷ್ಯನನ್ನು ರಜಾಕಾರರು ಸಾಯುಬಡಿದಿದ್ದಾರೆಂದ ಮೇಲೆ ನಮ್ಮಂಥ ನಿಮ್ಮಂಥ ಪುಟಗೋಸಿಗಳದೇನು ಕಿಮ್ಮತ್ತು?....", "ಆದ್ರೂ ರಜಾಕಾರರು ನಮ್ಮ ಮೇಲೇರಿ ಬಂದ್ರೆ, ಒಂದು ಕೈ ತೋರುಸಾಮು" ಎಂದು ಜನ ತಮ್ಮತಮ್ಮೊಳಗೆ ಮಾತಾಡಿಕೊಂಡರು.

ರಜಾಕಾರರು ಇಂದೂ ದಾಳಿ ಮುಂದುವರಿಸಬಹುದೆಂಬ ಶಂಕೆಯಿಂದ ಓಣಿಯ ಜನರೆಲ್ಲಾ ಮಾಳಿಗೆಗಳ ಮೇಲೇರಿ, ಬೆತ್ತ, ಲಾಠಿ, ಕುಡುಗೋಲು, ಬೆಣಚುಕಲ್ಲಿನ ಕುಪ್ಪೆ ಹಾಕಿಕೊಂಡು ಕೊನೆಯ ಹೋರಾಟಕ್ಕೆ ಸಿದ್ಧರಾದರು. ಮೂಲಿಮನಿ ಗೋವಿಂದಪ್ಪ, ಹುಸೇನಪ್ಪ, ದವಲಪ್ಪ, ಮಾಳಿಗೆಗಳೇರಿ ಹನುಮಾನ ವೃತ್ತದ ಕಡೆ ದೃಷ್ಟಿ ಚೆಲ್ಲಿ ರಜಾಕಾರರ ಚಲನವಲನಗಳ ಮೇಲೆ ನಿಗಾ ಇಟ್ಟರು. ರಜಾಕಾರರು ಹಜಾಮರ ಉರುಕುಂದಪ್ಪ ಪುಕ್ಕಟೆ ದಾಡಿ ಮಾಡಿಲ್ಲವೆಂಬ ಕಾರಣಕ್ಕೆ ಅವನನ್ನು ಕೆಳಗೆ ಹಾಕಿ ಥಳಿಸಿ ಹಜಾಮತಿ ಮಾಡುವ ಸಾಮಾನುಗಳಿದ್ದ ಪೆಟ್ಟಿಗೆಯನ್ನು ಗಟಾರಕ್ಕೆಸೆಯುತ್ತಿರುವ ದೃಶ್ಯ ಕಂಡು ಬಂತು.

ಉರುಕುಂದಪ್ಪ ಏಳುತ್ತಾ ಬೀಳುತ್ತಾ ಓಡೋಡಿ ಅಗ್ಸರ ಗಲ್ಲಿಯಲ್ಲಿ ಹೊಕ್ಕು ಪಾಳುಬಿದ್ದ ಮನೆಯೊಂದರಲ್ಲಿ ಬಚ್ಚಿಟ್ಟುಕೊಂಡ. ರಜಾಕಾರರು ಅಲ್ಲಿ ಇಲ್ಲಿ ಅವನಿಗಾಗಿ ಹುಡುಕಾಡಿದರು. ಅವನು ಕಾಣದಾದಾಗ "ಬೇಟಾ, ಹಜಾಮ ಬಚ್‌ಗಯಾ, ಬಚ್‌ಗಯಾ" ಎಂದು ಮಾತಾಡಿಕೊಳ್ಳುತ್ತಾ ಹನುಮಾನ ವೃತ್ತದ ಕಡೆ ಸಾಗಿ ಹೋಗುವಾಗ ನಾಯಿಗಳು ಬೊಗಳುತ್ತಾ ಅವರ ದುಂಬಾಲು ಬಿದ್ದವು. "ಊರ ಜನರೆಲ್ಲಾ ನಮ್ಮನ್ನು ನೋಡಿ ಗಡಗಡ ನಡುಗುತ್ತಾ ಮನೆಗಳಲ್ಲಿ ಬಚ್ಚಿಟ್ಟುಕೊಂಡರೆ ಇವು ನಮಗೆ ಕಲೆಬಿದ್ದಾವ. ಈ ನಾಯಿಗಳಿಗೆ ರಜಾಕಾರರೆಂದರೆ ಏನೆಂಬುದನ್ನು ತೋರುಸಾಮು" ಎಂದು ರಜಾಕಾರರು ಕಲ್ಲುಗಳೆನ್ನೆತ್ತಿಕೊಂಡು ನಾಯಿಗಳಿಗೆ ಗುರಿಯಿಟ್ಟು ಬೀಸಿದರು. ತಲೆಗೆ ಕಲ್ಲು ತಾಕಿ ಒಂದೆರಡು ನಾಯಿಗಳು ಗಿರಗಿರನೆ ತಿರುಗಿ ನೆಲಕ್ಕೆ ಬಿದ್ದವು. ಉಳಿದ ನಾಯಿಗಳು 'ಕುಂಯಿ'ಗುಡುತ್ತಾ ಪಲಾಯನಗೈದವು.

❑

**ಲೇಖಕರ ಪರಿಚಯ:**

**ಜಂಬಣ್ಣ ಅಮರಚಿಂತ :** ನವ್ಯೋತ್ತರ ಕಾಲದಲ್ಲಿ ಕವಿಯಾಗಿ ಅಮರಚಿಂತ ಜಂಬಣ್ಣನವರು ರೂಪಗೊಂಡರು. ಅಮರಚಿಂತರು ತಮ್ಮ ಅಂತರಂಗದ ದನಿಗೆ ಅಕ್ಷರಗಳ ಮೂಲಕ ಅಭಿವ್ಯಕ್ತಿ ನೀಡಿದರು. ಗಜಲ್, ಕಾದಂಬರಿ, ಜೀವನ ಚರಿತ್ರೆಗಳನ್ನು ಪ್ರಕಟಿಸಿರುವ ಜಂಬಣ್ಣ ಅಮರಚಿಂತರದು

ಮೂಲತಃ ಕಾವ್ಯ ಪ್ರತಿಭೆ. ನವ್ಯ ಮತ್ತು ಬಂಡಾಯ ಕಾಲಘಟ್ಟ ಗಳೆರಡರಲ್ಲೂ ಗಮನಾರ್ಹ ಕವಿತೆ, ಕಥೆಗಳನ್ನು ಬರೆದ ಅಮರಚಿಂತರು ಈಗಲೂ ಅದೇ ಕಾವ್ಯೋತ್ಸಾಹವನ್ನು ಕಾಪಾಡಿಕೊಂಡು ಬಂದಿರುವ ಮೌನ ಧ್ಯಾನಿ.

ಮುಂಜಾವಿನ ಕೊರಳು, ಅಧೋಲೋಕದ ಅಕಾವ್ಯ, ಮಣ್ಣಲ್ಲಿ ಬಿರಿದ ಅಕ್ಷರ, ಅಮರಚಿಂತಕಾವ್ಯ, ಹರಿವನದಿಗೆ ಮೈಯೆಲ್ಲಾ ಕಾಲು – ಇವು ಅಮರಚಿಂತರ ಕವನಸಂಕಲನಗಳು. ಮುಳ್ಳಿನ ಬಾಯಲ್ಲಿ ಹೂನಾಲಿಗೆ, ಪದಗಳು ನಡೆದಾಡುತಿವೆ ಪಾದಗಳಾಗಿ, ಬಾಧೆಯ ವೃಕ್ಷದಲಿ ಬೋಧಿಯ ಪರಿಮಳ, ಇವು ಗಝಲ್ ಕವನಸಂಕಲನಗಳು. ಕುರುಮಯ್ಯ ಮತ್ತು ಅಂಕುಶದೊಡ್ಡಿ, ಬೂಟುಗಾಲಿನ ಸದ್ದು ಅಮರಚಿಂತರ ಕಾದಂಬರಿಗಳಾಗಿವೆ. 'ಮಡಿವಾಳ ಮಾಚಿದೇವ' ಜಿವನ ಚರಿತ್ರೆ. ಅಮರಚಿಂತರು ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ವಿ.ವಿ. ಸಿಂಡಿಕೇಟ್ ಸದಸ್ಯರಾಗಿದ್ದರು. ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ತ.ರಾ.ಸು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಅಮರಚಿಂತರಿಗೆ ಸಂದ ಗೌರವ ಪುರಸ್ಕಾರಗಳಾಗಿವೆ.

# ೩. ಲೇಖನ

# ಅಣು ಚಳಿಗಾಲ : ಅಡಗಲು ಸ್ಥಳವೆಲ್ಲಿ?

**– ನಾಗೇಶ್ ಹೆಗಡೆ**

ಶಸ್ತ್ರ ರಾಷ್ಟ್ರಗಳು ಆಕಸ್ಮಾತ್ ಯುದ್ಧಕ್ಕಿಳಿದರೆ ನಾವೆಲ್ಲ ಒಂದೇ ಏಟಿಗೇನೂ ನಿರ್ನಾಮವಾಗಿ ಹೋಗುವುದಿಲ್ಲ ಅಳಿವು–ಉಳಿವಿನ ಮಧ್ಯೆ ನಾವು ಸುದೀರ್ಘ ಸೆಣಸಾಟ ನಡೆಸಬೇಕಾಗುತ್ತದೆ. ಭೂಮಿಯ ಮೇಲಿನ ಜೀವ ರಾಶಿಯೆಲ್ಲ ನಂದಿಹೋಗುವ ಮುಂಚೆ ಉತ್ತರ ಗೋಳಾರ್ಧವೆಲ್ಲ ಹೊಗೆ ದೂಳುಕಣಗಳಿಂದ ಮುಚ್ಚಿಹೋಗುತ್ತದೆ. ಸೂರ್ಯ ರಶ್ಮಿ ನೆಲಕ್ಕೆ ತಾಗದೇ ವರ್ಷವೆಲ್ಲ ಅಂಧಃಕಾರ ಕವಿದು, ಚಳಿ ಅತಿಯಾಗಿ ವ್ಯಾಪಕ ಹಿಮಪಾತವಾಗುತ್ತದೆ. ಹವಾಮಾನ–ಮಳೆ ಬೆಳೆಯೆಲ್ಲ ಆಯತಪ್ಪಿ ಜೀವಜಂತುಗಳೆಲ್ಲ ಕ್ರಮೇಣ ಸಾವಪ್ಪುತ್ತವೆ. ಈ 'ಅಣು ಚಳಿಗಾಲ'ದ ವಿವಿಧ ಮುಖಗಳು ಹೇಗಿರುತ್ತವೆ? ಬದುಕುಳಿಯಲು ಎಂಥ ಸಿದ್ಧತೆ ಬೇಕು?

ಪ್ರತಿದಿನ ೧೦,೦೦೦ ವಾಹನಗಳು ಓಡಾಡುವ ಮಾಂಡವಿ ಸೇತುವೆ ಕುಸಿದಾಗ ಇಡೀ ಪಣಜಿ ನಗರಕ್ಕೆ ಲಕ್ವ ಹೊಡೆದಂತಾಯಿತು. ವಿದ್ಯುತ್ ಪೂರೈಕೆ ನಿಂತಿತು. ಟೆಲಿಫೋನ್ ಸಂಪರ್ಕ ಕಡಿದು ಹೋಯಿತು. ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಯಿತು. ವಿದ್ಯುತ್ ಪೂರೈಕೆ ನಿಂತಿದ್ದರಿಂದ ನೀರು ಪೂರೈಕೆ ನಿಂತಿತು. ಸಾರಿಗೆ ಸಂಪರ್ಕ ಕಡಿದು ಹೋದದ್ದರಿಂದ ಹಾಲು, ಸೀಮೆಎಣ್ಣೆ, ಅಡಿಗೆ ಅನಿಲ ಸರಬರಾಜೂ ನಿಂತಿತು. ಅಡುಗೆ ಬೇಯಿಸಲೆಂದು ಸೌದೆ ಡಿಪೋ ಬಳಿ ನಿಂತ ಕೆಲವರಿಗಂತೂ ಕಾಲವೇ ಅರ್ಧ ಶತಮಾನದಷ್ಟು ಹಿಂದೆ ಸರಿದಂತಾಯಿತು.

ಭೋಪಾಲ್‌ನಲ್ಲಿ ೩೦ ಅಡಿ ಉದ್ದದ ಎರಡು ವಿಷಾನಿಲ ಪೀಪಾಯಿ ಸೋರಿದಾಗ ೨,೦೦,೦೦೦ ಮಂದಿಗೆ ಬದುಕು ನರಕವಾಯಿತು. ಅವರ ಶರೀರಕ್ಕೆ ಸೇರಿದ ನಂಜನ್ನು ಇಳಿಸುವಲ್ಲಿ ಇಡೀ ರಾಜ್ಯದ ವೈದ್ಯಕೀಯ ವ್ಯವಸ್ಥೆಯೇ ಸೋತು ಕೈಚೆಲ್ಲಬೇಕಾಯಿತು. ಭೂಮಿಯ ಇನ್ನೊಂದು ಮಗ್ಗುಲಿನಲ್ಲಿ ಕಾರ್ಬಾಯಿಡ್ ಕಾರ್ಖಾನೆಗಳ ಎದುರು ಪೋಲೀಸರ ಅಶ್ರುವಾಯುವಿಗೆ ಜನ ಸಾಮಾನ್ಯರು ಕಣ್ಣೀರಿಳಿಸಬೇಕಾಯಿತು.

ಧನಬಾದ್‌ನಲ್ಲಿ ರೈಲು ಸಿಬ್ಬಂದಿ ಮುಷ್ಕರ ಹೂಡಿದ್ದರಿಂದ ಕಲ್ಲಿದ್ದಲು ಸಾಗಾಣಿಕೆ ಸ್ಥಗಿತವಾಯಿತು. ದಿಲ್ಲಿಯ ಶಾಖೋತ್ಪನ್ನ ವಿದ್ಯುದಾಗಾರಕ್ಕೆ ಇಂಧನ ಅಭಾವವಾಗಿ ಬ್ಲಾಕ್ ಔಟ್ ಘೋಷಿಸಬೇಕಾಯಿತು. ವಿದ್ಯುತ್ ಅಭಾವದಿಂದ ಟ್ರೇನ್‌ಗಳು ನಿಶ್ಚಲವಾಗಿ ಸಾರಿಗೆ ವ್ಯವಸ್ಥೆ ಅಧ್ವಾನವಾಯಿತು.

ಚೆರ್ನೊಬಿಲ್‌ನಲ್ಲಿ ಅಣುಸ್ಥಾವರ ಆಸ್ಫೋಟಗೊಂಡು ಪೋಲೆಂಡ್ ದೇಶದಲ್ಲಿ ಹಣ್ಣು ಹಂಪಲು ಬೆಳೆಯುವವರು ಭೂಮಿಕಾಣಿ ತ್ಯಾಗಮಾಡಿ ದಿವಾಳಿ ತೆಗೆಯಬೇಕಾಯಿತು. ನಾರ್ಡಿಕ್ ದೇಶಗಳಲ್ಲಿ ಹಾಲನ್ನು ಕಾಲುವೆಗೆ ಸುರಿಯಬೇಕಾಯಿತು. ಫಿನ್ ಲ್ಯಾಂಡ್‌ನ ೫೦೦೦ ಮಹಿಳೆಯರು ತಾವೆಂದೂ ಗರ್ಭ ಧರಿಸುವುದಿಲ್ಲವೆಂದು ಘೋಷಿಸಬೇಕಾಯಿತು. ಚೆರ್ನೊಬಿಲ್‌ನಿಂದ ೧೦೦೦ ಕಿಲೋಮೀಟರ್ ದೂರದವರೆಗಿನ ಎಲ್ಲ ಪ್ರದೇಶಗಳಿಂದಲೂ ಹಾಲು ಮತ್ತು ತಾಜಾ ಆಹಾರ ಪದಾರ್ಥಗಳು ಮಾರುಕಟ್ಟೆಗೆ ಬಾರದಂತೆ ತಡೆಹಿಡಿಯಲಾಯಿತು. ಆರೋಗ್ಯ ಹಾನಿ ಎಷ್ಟೆಂದು ಗೊತ್ತಾಗದಿದ್ದರೂ ಪೋಲೆಂಡ್ ದೇಶ ೭೦ ಕೋಟಿ ರೂಪಾಯಿ, ಇಟಲಿ ೨೦೦ ಕೋಟಿ ರೂಪಾಯಿ ಹಾಗೂ ಪಶ್ಚಿಮ ಜರ್ಮನಿ ೬೫೦ ಕೋಟಿ ರೂಪಾಯಿ ಆರ್ಥಿಕ ಹಾನಿ ಅನುಭವಿಸಬೇಕಾಯಿತು.

ಒಂದು ಸೇತುವೆ, ಒಂದು ಪೀಪಾಯಿ, ಒಂದು ಪೈಪ್‌ಲೈನ್, ಒಂದು ರೈಲು ಮಾರ್ಗ, ಒಂದು ರಿಯಾಕ್ಟರ್ ವಿಫಲವಾದರೂ ಲಕ್ಷಾಂತರ ಮಂದಿಯ ಜೀವನ ವ್ಯವಸ್ಥೆ ಅಲ್ಲೋಲ ಕಲ್ಲೋಲವಾಗುತ್ತದೆ. ಅವಘಡ ನಡೆದಲ್ಲಷ್ಟೇ ಅಲ್ಲ, ಯಾವುದೋ ರಾಷ್ಟ್ರದಲ್ಲಿ ಎಷ್ಟೋ ದಿನಗಳವರೆಗೆ ಯಾವುದೇ ತಪ್ಪಿಲ್ಲದಿದ್ದರೂ ಜನ ತೊಳಲಾಡಬೇಕಾಗುತ್ತದೆ. ಪ್ರಪಂಚ ತೀರ ಸಂಕುಚಿತವಾಗಿಬಿಟ್ಟಿದೆ. ಆಧುನಿಕ ಪ್ರಪಂಚ ನಾಜೂಕಾಗಿಬಿಟ್ಟಿದೆ.

ನಾವು ನಿರ್ಮಿಸಿಕೊಂಡ ಈ ನಾಜೂಕು ಹಂದರದ ಒಂದು ಎಳೆ ಕುಸಿದರೂ ಇಷ್ಟೆಲ್ಲ ಆವಘಡ ಆಗುತ್ತದೆಂದಾದರೆ ಆಕಸ್ಮಾತ್ ಮೂರನೇ ವಿಶ್ವ ಸಮರದ ಘೋಷಣೆಯಾಗಿ ಹಿರೋಶಿಮಾ ಬಾಂಬ್‌ನ ೩,೦೦,೦೦೦ ಪಟ್ಟು ಸಾಮರ್ಥ್ಯದ ಅಣು ಬಾಂಬ್‌ಗಳು ಸಿಡಿದರೆ ಏನಾದೀತು?

ನಾವೆಲ್ಲ ದಿನೊಪ್ಪತ್ತಿನಲ್ಲಿ ಸತ್ತೇಹೊಗುತ್ತೇವೆ; ಪ್ರಪಂಚಾದ್ಯಂತ ಮೊಳಕಾಲೆತ್ತರದ ಬೀದಿರಾಶಿ ಬಿದ್ದು ಭೂಮಿ ಎಂಬುದು ಬರಡುಗೋಳವಾಗುತ್ತದೆ; ಇತ್ಯಾದಿ ಭಯಾನಕ ಕಲ್ಪನೆಗಳು ನಮ್ಮಲ್ಲಿ

ಬೇರೂರಿವೆ. 'ಸತ್ತರೆ ಎಲ್ಲಾ ಒಟ್ಟಿಗೇ ಸಾಯುತ್ತೇವಲ್ಲ, ಭವಿಷ್ಯ ಅದಕ್ಕಿಂತ ಭಯಾನಕವಾಗಲು ಸಾಧ್ಯವೆ?' ಎಂಬ ಹುಂಬ ನಿಶ್ಚಿಂತೆಯಿಂದ ನಮ್ಮ ನಿತ್ಯದ ಕೆಲಸದಲ್ಲಿ ನಿರತರಾಗುತ್ತೇವೆ.

ಭವಿಷ್ಯ ಅದಕ್ಕಿಂತಲೂ ಭಯಾನಕವಾಗಲು ಸಾಧ್ಯ ಎಂಬುದನ್ನು ನಾಲ್ಕು ವರ್ಷಗಳ ಹಿಂದೆ (೧೯೮೨ ರಲ್ಲಿ) ಪೌಲ್ ಕ್ರೂಸನ್ ಮತ್ತು ಜಾನ್ ಬುಕ್ಸ್ ಎಂಬ ಇಬ್ಬರು ವಿಜ್ಞಾನಿಗಳು ಲೆಕ್ಕಾಚಾರ ಹಾಕಿ, ಅಷ್ಟೇನೂ ಪ್ರಸಿದ್ಧವಿಲ್ಲದ 'ಅಂಬಿಯೊ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದಾಗ ವಿಶ್ವಾದ್ಯಂತ ವಿಜ್ಞಾನಿಗಳೂ, ಮಿಲಿಟರಿ ತಜ್ಞರೂ ತಲ್ಲಣಗೊಂಡರು. ಅಣುಬಾಂಬ್ ಸಿಡಿದಾಗ ವಾತಾವರಣದ ಹೊರಗಿನ ಓರ್ಝೋನ್ ವಾಯು ಕವಚದ ಮೇಲೆ ಏನು ಪರಿಣಾಮ ಆಗುತ್ತದೆಂದು ಅಂದಾಜು ಮಾಡಹೋದ ಈ ವಿಜ್ಞಾನಿಗಳು ಹೇಳಿದ್ದಷ್ಟೆ; ೬೫೦೦ ಮೆಗಾಟನ್ ಬಾಂಬ್ ಸಿಡಿದರೆ ಹತ್ತು ಲಕ್ಷ ಚದರ ಕಿಲೋ ಮೀಟರ್ ಸಸ್ಯಾವರಣ ಸುಡುತ್ತದೆ: ೧೫೦ ಕೋಟಿ ಟನ್ ಇಂಧನ ತೈಲ ಹೊತ್ತಿ ಉರಿಯುತ್ತದೆ; ಇದರಿಂದಾಗಿ ದೂಳು ಹೊಗೆಯೆಲ್ಲ ಭೂಮಿಯನ್ನು ಸುತ್ತುವರೆದು ವರ್ಷಗಟ್ಟಲೆ ಕತ್ತಲು ಆವರಿಸುತ್ತದೆ; ಬಿರುಗಾಳಿ, ಹಿಮಪಾತ, ಬಾರಿ ಪ್ರವಾಹಗಳು ಉಂಟಾಗುತ್ತವೆ.

ಈ ಅಧ್ಯಯನದಿಂದ ಪ್ರಚೋದನೆಗೊಂಡು ಇತರ ವಿಜ್ಞಾನಿಗಳು ಇನ್ನಷ್ಟು ವಿವರವಾದ ಸಂಶೋಧನೆಗೆ ತೊಡಗಿದರು. ಅಮೆರಿಕದ ನಾಸಾ ವಿಜ್ಞಾನಿಗಳು ಮಂಗಳ ಗ್ರಹದ ಮೇಲೆ ನಿತ್ಯ ಬೀಸುವ ಧೂಮ – ಸುಂಟರ ಗಾಳಿಯನ್ನು ವೀಕ್ಷಿಸಿದರು. ಭೂಮಿಯ ಮೇಲೆ ಎಲ್ಲೆಲ್ಲಿ ಜ್ವಾಲಾಮುಖಿ ಸಿಡಿಯಿತೆಂದರೆ ಅಲ್ಲೆಲ್ಲ ಹೆಲಿಕಾಪ್ಟರ್ ಉಪಗ್ರಹಗಳ ಸಹಾಯದಿಂದ ವಾತಾವರಣದ ವಿಶ್ಲೇಷಣೆ ನಡೆಸಿದರು. ಬ್ರಝಿಲ್, ಪಶ್ಚಿಮ ಜರ್ಮನಿ, ಆಸ್ಟ್ರೇಲಿಯಾಗಳಲ್ಲಿ ಅರಣ್ಯಕ್ಕೆ ಬೆಂಕಿ ಬಿದ್ದಾಗೆಲ್ಲ ಸಂಶೋಧಕರ ತಂಡವನ್ನು ಕಳುಹಿಸಿ ಅಂಕಿ ಅಂಶ ಸಂಗ್ರಹಿಸಿದರು. ಈ ಮಾಹಿತಿಗಳನ್ನೆಲ್ಲ ಕಂಪ್ಯೂಟರ್ ಮಿದುಳಿಗೆ ಸೇರಿಸಿದರು. ವರ್ಷದ ಯಾವ ಕಾಲದಲ್ಲಿ ಯಾವ ಪ್ರದೇಶದಲ್ಲಿ ಎಷ್ಟು ಗಾತ್ರದ ಬಾಂಬ್ ಬಿದ್ದರೆ ಎಷ್ಟು ಪ್ರಮಾಣದ ಹೊಗೆ – ದೂಳು – ಕರಕಲು ಪುಡಿ ವಾತಾವರಣಕ್ಕೆ ಸೇರುತ್ತದೆ ಎಂಬುದನ್ನು ಅಂದಾಜು ಮಾಡಿದರು.

ವಿಶ್ವ ಸಮರದ ಬಗ್ಗೆ ಇಷ್ಟು ವಿವರವಾದ ಅಧ್ಯಯನವನ್ನು ಈವರೆಗೆ ಯಾರೂ ಕೈಗೊಂಡಿರಲಿಲ್ಲ. ಅವನ್ನೆಲ್ಲ ಪ್ರಕಟಿಸುವ ಮುಂಚೆ ಜಗತ್ತಿನ ಇತರ ವಿಜ್ಞಾನಿಗಳು ಜತೆ ಚರ್ಚಿಸಲೆಂದು ಹಲವಾರು ಸಭೆಗಳು ನಡೆದವು. ವಾತಾವರಣಕ್ಕೆ ಇಷ್ಟಿಷ್ಟು ದೂಳು – ಹೊಗೆ ಸೇರಿದರೆ ನೀರು, ಗಾಳಿ, ಮಳೆ, ಹಿಮಪಾತದಲ್ಲಿ ಎಂತೆಂಥ ವ್ಯತ್ಯಾಸಗಳಾಗುತ್ತವೆ ಎಂಬುದನ್ನು ಇನ್ನೊಂದು ವಿಜ್ಞಾನಿಗಳ ತಂಡ ವಿಶ್ಲೇಷಿಸಿತ್ತು. ಸಸ್ಯ, ಜಲಚರ, ಜೀವ ಜಂತುಗಳ ಮೇಲೆ ಏನೇನು ಪರಿಣಾಮ ಆಗುತ್ತದೆಂಬುದನ್ನು ಆಯಾ ಕ್ಷೇತ್ರದ ತಜ್ಞರು ವಿವರಿಸಿದರು. ಅಂತಿಮವಾಗಿ ವಾಷಿಂಗ್‌ಟನ್‌ನಲ್ಲಿ ಅಕ್ಟೋಬರ್ ೧೯೮೩ ರಂದು ಮಾನವ ಸಮಾಜದ ಬಹುಮುಖ್ಯ ಜನರ ಸಮಾವೇಶ ಕರೆಯಲಾಯಿತು. ವಿಜ್ಞಾನಿಗಳು, ವೈದ್ಯರು, ರಾಜಕೀಯ ಮುತ್ಸದ್ಧಿಗಳು, ಹಲವು ದೇಶಗಳ ರಾಯಭಾರಿಗಳು, ಸಮರತಂತ್ರ ತಜ್ಞರು, ಮಿಲಿಟರಿ ಅಧಿಕಾರಿಗಳಷ್ಟೇ ಅಲ್ಲ, ನೂರಾರು ಸಂಖ್ಯೆಯಲ್ಲಿ ಪತ್ರಿಕೆ, ಟಿವಿ, ರೇಡಿಯೋ ಪ್ರತಿನಿಧಿಗಳು ಸಭೆಗೆ ಹಾಜರಾದರು. ಅಷ್ಟೇ ಅಲ್ಲ, ಈ ವಿಚಾರ ಸಂಕಿರಣದ ಕಾರ್ಯಕಲಾಪಗಳನ್ನು ಅದೇ ವೇಳೆಗೆ ಉಪಗ್ರಹಗಳ ಮೂಲಕ ಮಾಸ್ಕೊಕ್ಕೆ ರವಾನಿಸಿ ಅಲ್ಲಿನ ವಿಜ್ಞಾನಿಗಳನ್ನೂ ರಾಜತಾಂತ್ರಿಕ ವ್ಯಕ್ತಿಗಳನ್ನೂ ಚರ್ಚೆಯಲ್ಲಿ ಸೇರಿಸಿಕೊಳ್ಳಲಾಯಿತು.

ಮೂರನೇ ವಿಶ್ವ ಸಮರ ನಡೆದರೆ ಒಂದೇ ಏಟಿಗೆ ಎಲ್ಲರೂ ಸಾಯುವುದಿಲ್ಲ; ಬದಲಿಗೆ ಇಡೀ ವಿಶ್ವದ ನಾಗರಿಕತೆ ಕ್ರಮೇಣ ಹೀನ ಸ್ಥಿತಿಗೆ ಇಳಿಯುತ್ತ ಶಿಲಾಯುಗಕ್ಕೆ ಮರಳಿ ಹತ್ತಾರು ವರ್ಷಗಳ ಪರ್ಯಂತ ನರಕಯಾತನೆ ಅನುಭವಿಸಿ ನಂದಿಹೋಗುತ್ತದೆ ಎಂಬುದು ಅರಿವಿಗೆ ಬಂದಾಗ ಸುಶಿಕ್ಷಿತ ಜಗತ್ತು ದಿಗಿಲುಗೊಂಡಿತು. ಈಗಿರುವ ಬಾಂಬ್‌ಗಳ ಪೈಕಿ ಶೇಕಡಾ ೨೦–೩೦ರಷ್ಟು ಆಸ್ಫೋಟಗೊಂಡರೂ ಭೂಮಿಯ ವಾತಾವರಣ ಮೊದಲಿನಂತಾಗಲೂ ಶತಮಾನಗಳೇ ಬೇಕು ಎಂಬುದು ಅರಿವಿಗೆ ಬಂದಾಗ ಒಂದೊಂದು ರಾಷ್ಟ್ರವೂ ತನ್ನ ಪ್ರಜೆಗಳ ಹಿತರಕ್ಷಣೆ ಹೇಗೆಂಬ ಬಗ್ಗೆ ಚಿಂತೆ ವ್ಯಕ್ತಪಡಿಸಿತು. ಅದಕ್ಕೆಂದೇ ಪ್ರತ್ಯೇಕ ಅಧ್ಯಯನ ಕೈಗೊಳ್ಳಲು 'ಸ್ಕೋಪ್' (ಸೈಂಟಿಫೀಕ್ ಕಮಿಟಿ ಆನ್ ಪ್ರಾಬ್ಲಮ್ ಆಫ್ ಎನ್‌ವಿರಾನ್‌ಮೆಂಟ್) ಎಂಬ ಸಮಿತಿ ರಚಿಸಲು ೭೧ ರಾಷ್ಟ್ರಗಳ ಪ್ರತಿನಿಧಿಯಾದ ವಿಜ್ಞಾನ ಸಂಘಗಳ ಅಂತರರಾಷ್ಟ್ರಿಯ ಮಂಡಳಿಗೆ ಆದೇಶ ನೀಡಲಾಯಿತು. ಮೂವತ್ತು ದೇಶಗಳ ೩೦೦ಕ್ಕೂ ಹೆಚ್ಚು ವಿಜ್ಞಾನಿಗಳು ಸೇರಿ

ಪರಿಸರದ ಮೇಲಾಗುವ ಪರಿಣಾಮ. ತೃತೀಯ ವಿಶ್ವದ ಬಡ ತಟಸ್ಥ ದೇಶಗಳ ಆರ್ಥಿಕ ಸ್ಥಿತಿಗತಿಯ ಮೇಲಾಗುವ ಪರಿಣಾಮಗಳನ್ನು ಅತ್ಯಂತ ಕೂಲಂಕುಷವಾಗಿ ವಿಶ್ಲೇಷಿಸಿ ೧೯೮೫ ಮಾರ್ಚ್‌ನಲ್ಲಿ ಪ್ರಕಟಿಸಿದರು. ೧೯೮೬ನ್ನು 'ಅಂತರಾಷ್ಟ್ರೀಯ ಶಾಂತಿ ವರ್ಷ'ವೆಂದು ಆಚರಿಸಲು ವಿಶ್ವಸಂಸ್ಥೆ ಕರೆ ನೀಡಿದ್ದರಿಂದ ಅಣುಸಮರ ಪರಿಣಾಮಗಳ ಬಗ್ಗೆ 'ಸ್ಕೋಪ್' ನಡೆಸಿದ ಅಧ್ಯಯನ ಆದಷ್ಟು ಹೆಚ್ಚು ಜನರನ್ನು ತಲುಪುವಂತೆ ಕ್ರಮ ಕೈಗೊಳ್ಳಬೇಕೆಂದೂ ಸಲಹೆ ನೀಡಲಾಯಿತು.

ಒಂದು ಮೆಗಾಟನ್ (ಅಂದರೆ ಹಿರೋಶಿಮಾ ಬಾಂಬ್‌ನ ೮೦ ಪಟ್ಟು) ಸಾಮರ್ಥ್ಯದ ಅಣುಬಾಂಬ್ ಸಿಡಿಯಿತೆಂದರೆ – ದೂಳು ರಾಸಾಯನಿಕಗಳೆಲ್ಲ ಒಂದೇ ನೆಗೆತಕ್ಕೆ ೧೨ ಕಿಲೋಮೀಟರ್ ಎತ್ತರಕ್ಕೆ ಚಿಮ್ಮಿ ನಂತರ ನಿಧಾನವಾಗಿ ೩೦ ಕಿಲೋಮೀಟರ್ ಎತ್ತರಕ್ಕೆ ಪಸರಿಸುತ್ತ ಹೋಗುತ್ತವೆ. ನೆಲಹಂತದಲ್ಲಿ ಬೆಂಕಿಯ ಕೆನ್ನಾಲಗೆ ಪ್ರತಿ ಸೆಕೆಂಡ್‌ಗೆ ೭೫ ಮೀಟರ್ ವೇಗದಲ್ಲಿ ಚಾಚುತ್ತ ಭಾರಿ ಸುಂಟರಗಾಳಿಯನ್ನು ಆಹ್ವಾನಿಸುತ್ತದೆ. ಮೇಲೆದ್ದ ಮೋಡ ಕ್ರಮೇಣ ಕೊಡೆಯಾಕಾರದಲ್ಲಿ ಬಿಚ್ಚಿಕೊಂಡು, ಅದೇ ಅಕ್ಷಾಂಶದ ಗುಂಟ ಭೂಮಿಗೆ ಬಳೆಯಾಕಾರದಲ್ಲಿ ಸುತ್ತಿಕೊಳ್ಳುತ್ತದೆ. ಭೂಮಿಗೆ ಸೂರ್ಯ ಕಿರಣ ತಲುಪಲು ವಿಫಲವಾದರೂ, ವಾತಾವರಣದ ಓಝೋನ್ ರಕ್ಷಾ ಕವಚ ಭಗ್ನವಾಗಿ ಘಾತುಕ ಅತಿನೇರಳೆ ಹಾಗೂ ವಿಶ್ವ ಕಿರಣಗಳ ನೆಲ ಮುಟ್ಟುತ್ತವೆ, ಮುಂದಿನ ಹತ್ತು ದಿನಗಳಲ್ಲಿ ಇಡೀ ಉತ್ತರ ಗೋಲಾರ್ಧಕ್ಕೆ ಕತ್ತಲು ಮುಸುಕುತ್ತದೆ. ಸಾವಿರ ಮೆಗಾಟನ್ ಬಾಂಬ್ ಬಿದ್ದರೆ ಮಾಮೂಲು ಸೂರ್ಯರಶ್ಮಿಯ ಶೇ.೧ ರಷ್ಟು ಮಾತ್ರ ನೆಲ ತಲುಪುವಂತಾಗುತ್ತದೆ. ನೀರು ಹೆಪ್ಪುಗಟ್ಟುತ್ತದೆ. ದಕ್ಷಿಣ ಭಾಗದಿಂದ ಬಿರುಗಾಳಿ ಬೀಸಲಾರಂಭಿಸುತ್ತದೆ. ೨೦ ದಿನಗಳಲ್ಲಿ ಏಷ್ಯದ ದಕ್ಷಿಣ ಭಾಗದಲ್ಲೂ ತಾಪಾಂಕ ೧೦ ಡಿಗ್ರಿ ಸೆಂಟಿಗ್ರೇಡ್‌ಗಿಂತ ಕೆಳಗಿಳಿದು ಹಿಮಾಲಯದಿಂದ ಸಾವಿರ ಕಿಲೋಮೀಟರ್ ದಕ್ಷಿಣದವರೆಗೂ ನೀರು ಪೂರೈಕೆ ಸ್ಥಗಿತವಾಗುತ್ತದೆ. ಮಳೆ ಮೋಡಗಳೆಲ್ಲ ಹಿಂಜಿದ ಹಿಮವಾಗಿ ಸಮುದ್ರದ ಮಟ್ಟ ತಗ್ಗುತ್ತದೆ. ಭೂಖಂಡಗಳು ತಂಪಾಗುವುದರಿಂದ ಹೊಸ ಮೋಡಗಳು ಬಾರದೇ ಮಳೆಗಾಲವೇ ಇಲ್ಲದಂತಾಗುತ್ತದೆ. ಹಿರೋಶಿಮಾದಲ್ಲಿ ಬಾಂಬ್ ದಾಳಿ ಆದಾಗಿನ ಪರಿಸ್ಥಿತಿಯಂತೆ – ನರಕಯಾತನೆ, ಆಕ್ರಂದನಗಳು ಕೇಳಬಾರದಿದ್ದರೂ, ಭೀಕರ ಬರಗಾಲಕ್ಕೆ

ತುತ್ತಾದ ಇಥಿಯೋಪಿಯಾದಂತೆ ಇಡೀ ಉತ್ತರ ಗೋಲಾರ್ಧ ಮೌನ ರೋಧನೊಂದಿಗೆ ಆಶ್ರಯ ಹುಡುಕುತ್ತ ದಕ್ಷಿಣ ದಿಕ್ಕಿಗೆ ಗುಳೆ ಹೊರಡಬೇಕಾಗುತ್ತದೆ. ಮೊದಲ ದಾಳಿಗೆ ಮರುದಾಳಿ ನಡೆದರೆ ಆ ಅವಕಾಶವೂ ಮೊಟಕಾಗುತ್ತದೆ.

ದಟ್ಟ ಕಪ್ಪು ವಿಕಿರಣ ಮೋಡಗಳು ಕ್ರಮೇಣ ದಕ್ಷಿಣಕ್ಕೆ ಬಂದಂತೆಲ್ಲ (ಅಂದರೆ ಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ಭೂಮಧ್ಯ ರೇಖೆಯನ್ನು ದಾಟಿದಂತೆಲ್ಲ) ವಿರಳವಾಗುತ್ತದೆ. ಮೊದಲ ಆರು ತಿಂಗಳ ಕಾಲ ಕೇವಲ ಸುಂಟರಗಾಳಿ, ಶೀತಲಕಾಲವನ್ನಷ್ಟೇ ಅನುಭವಿಸಿದ್ದ ಅಲ್ಲಿನ ಪ್ರಕೃತಿ, ಈಗ ಮಧ್ಯಾಹ್ನದಲ್ಲೇ ಸೂರ್ಯಾಸ್ತವನ್ನು ನೋಡುವಂತಾಗುತ್ತದೆ. ಸುದೀರ್ಘ ಕಾಲದವರೆಗೆ ಮಂಜು ಮುಸುಕಿ ಋತುಮಾನಗಳೆಲ್ಲ ಅಧ್ವಾನವಾಗುತ್ತದೆ. ಅತಿ ನೇರಳ ಕಿರಣಗಳೂ ಅಣ್ಣು ವಿಕಿರಣಗಳೂ ಅಳಿದುಳಿದ ಜೀವಜಾಲಕ್ಕೆ ದಾಳಿಯಿಡಲಾರಂಭಿಸುತ್ತದೆ.

ಭೂಮಿಯ ಮೇಲಿನ ಹಸಿರುಗಳೆಲ್ಲ ಸೂರ್ಯ ಕಿರಣಗಳನ್ನೇ ಅವಲಂಬಿಸಿರುವುದರಿಂದ ಅಣ್ಣು ಚಳಿಗಾಲದ ಪರಿಣಾಮ ವ್ಯಾಪಕ ವಾಗಲಿಕ್ಕಿದೆ. ಉತ್ತರ ಗೋಲಾರ್ಧದಲ್ಲಿ ಸೂರ್ಯಕಿರಣ ಶೇಕಡಾ ೧ ರಿಂದ ೧೦ ರಷ್ಟು ಮಾತ್ರ ನೆಲ ತಲುಪುತ್ತದೆ. ಅಲ್ಪಾವಧಿಯ ವಾರ್ಷಿಕ ಸಸ್ಯಗಳು, ಅದರಲ್ಲೂ ವಿಶೇಷವಾಗಿ ಭತ್ತ, ಗೋಧಿ, ರಾಗಿ, ಜೋಳ ಇವೆಲ್ಲ ಬಿಸಿಲಿನ ಅಭಾವದಿಂದಾಗಿ ಸಾಯುತ್ತವೆ. ಗಿಡ ಮರಗಳಲ್ಲಿ ಶಕ್ತಿ ಸಂಗ್ರಹ ಸಾಕಷ್ಟಿರುವುದರಿಂದ ಅವೆಲ್ಲ ಬದುಕುಳಿಯುತ್ತವೆ. ದಕ್ಷಿಣ ಗೋಲಾರ್ಧದಲ್ಲಿ ಆಹಾರ ಸಸ್ಯಗಳು ಏಕಾಏಕಿ ಸಾಯದಿದ್ದರೂ ಮಂದ ಬೆಳಕು ಹಾಗೂ ತೀವ್ರ ಚಳಿಯಿಂದಾಗಿ ಇಳುವರಿ ತುಂಬ ಕಮ್ಮಿಯಾಗುತ್ತದೆ.

ಮೀನು, ಕಪ್ಪೆ, ಹಾವು, ಹಲ್ಲಿ, ಜೇನ್ನೊಣಗಳಂಥ ಶೀತರಕ್ತ ಪ್ರಾಣಿಗಳು ಹಂತ ಹಂತವಾಗಿ ಚಳಿ ಹೆಚ್ಚಿದಂತೆ ಅಸು ನೀಗುತೊಡುಗುತ್ತವೆ. ಸಮುದ್ರದ ತಾಪಾಂಕ ನಿಧಾನವಾಗಿ ಕಮ್ಮಿಯಾಗುವುದರಿಂದ ಮೀನುಗಳು ಕೊಂಚ ಜಾಸ್ತಿ ಕಾಲ ಬದುಕುಳಿಯುತ್ತವಾದರೂ, ಕರಾವಳಿಯಿಂದ ದೂರ ಸಮುದ್ರಕ್ಕೆ ವಲಸೆ ಹೋಗುತ್ತದೆ.

ಬಿಸಿರಕ್ತ ಪ್ರಾಣಿಗಳಾದ ಕುರಿ–ಕೋಳಿ–ದನಕರುಗಳು ಚಳಿಯಿಂದ ಕೆಲ ಮಟ್ಟಿಗೆ ಬಚಾವಾಗುತ್ತವೆ. ಆದರೆ ಮೇವು ಸಿಗುವವರೆಗೆ ಮಾತ್ರ ಅವು

ಬದುಕುಳಿಯಬಹುದು. ಅವುಗಳ ಶರೀರದ ತಾಪಾಂಷ ೫ ಡಿಗ್ರಿ ಸೆಂಟಿಗ್ರೇಡ್ ಕೆಳಗಿಳಿಯಿತೆಂದರೆ ಆಹಾರ ಇದ್ದರೂ ಸಾಯುತ್ತವೆ. ಆಹಾರ ಮತ್ತು ಬೆಚ್ಚಗಿನ ಆಶ್ರಯದ ಸಮಸ್ಯೆ ತೀವ್ರವಾಗಿರುವುದರಿಂದ ಸಾಕುಪ್ರಾಣಿಗಳನ್ನು ಬಚಾವು ಮಾಡುವುದು ದುಸ್ತರವಾಗುತ್ತದೆ.

ಸತ್ತ ಮೀನು ಹಾಗೂ ಅಳಿದುಳಿದ ಸಾಕುಪ್ರಾಣಿಗಳ ಸಹಾಯದಿಂದ ಮನುಷ್ಯರು ಬದುಕಿ ಉಳಿಯಬಹುದು. ಆದರೆ ಇತರ ಸಾಮಾಜಿಕ ವ್ಯವಸ್ಥೆಯೆಲ್ಲ ಅಧ್ವಾನವಾಗಿರುವುದರಿಂದ ಬದುಕುಳಿಯಲು ನಡೆಸುವ ಹೋರಾಟ ಅತ್ಯಂತ ದಾರುಣವಾಗುತ್ತದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಉತ್ತರದ ಬಹುಭಾಗವೆಲ್ಲ ಹಿಮದಲ್ಲಿ ಮುಚ್ಚಿ ಹೋಗುತ್ತದೆ. ಹಿಮ ಪಸರಿಸುತ್ತ ಬಂದಂತೆ ಉತ್ತರದಿಂದ ವಲಸೆ ಬರುವವರ ಸಂಖ್ಯೆ ಕ್ರಮೇಣ ಹೆಚ್ಚುತ್ತದೆ.

ನಮ್ಮ ಊಹಾಶಕ್ತಿ ಅತ್ಯಂತ ಚುರುಕಾಗಬೇಕು ಈಗ. ವ್ಯವಸ್ಥೆಯ ಕುಸಿತ ಎಲ್ಲಿಂದ ಪ್ರಾರಂಭ ಆಗುತ್ತದೆಂದು ಹೇಳಲು ಬರುವಂತಿಲ್ಲ. ರಾಷ್ಟ್ರದ ಆಗು ಹೋಗುಗಳನ್ನು ನಿರ್ಧರಿಸುವ ದೆಹಲಿಯಲ್ಲಿ ಹವಾಮಾನ ವೈಪರೀತ್ಯ ಅತಿಯಾದರೆ? ಆಡಳಿತ ನಡೆಸುವವರು, ರಾಜಕೀಯ ಧುರೀಣರು, ಮಿಲಿಟರಿ ದಂಡನಾಯಕರು, ಇವರಿಗೆಲ್ಲ ಆಧಾರಸ್ತಂಭಗಳಾಗಿರುವ ಆಪ್ತ ಸಹಾಯಕರು, ತಂತ್ರಜ್ಞರು, ಗುಮಾಸ್ತರು, ಡ್ರೈವರ್‌ಗಳು, ಲಾಂಡ್ರಿಯವರು....... ದೇಶವನ್ನು ಮರೆತು ತಂತಮ್ಮ ಉಳಿವಿಗಾಗಿ ಗುಳೆ ಎದ್ದು ಹೊರಡುವಂತಾದರೇ?

ಪರಿಣಾಮ ಊಹಾತೀತವಾಗುತ್ತದೆ. ದೂರದ ಪೋಲಂಡ್‌ನಲ್ಲೋ, ತಾಷ್ಕೆಂಟ್‌ನಲ್ಲೋ ಅಣುಸಮರ ನಡೆದರೆ ನಮಗೆ ಉರಿ ತಾಗದಿರಬಹುದು; ವಿಕಿರಣ ತಟ್ಟದಿರಬಹುದು; ಸೂರ್ಯ ಕಿರಣ ಧಾರಾಳವಾಗಿ ಲಭ್ಯವಾಗುತ್ತಿರಬಹುದು. ಆದರೂ ಹಿಮಾಲಯಕ್ಕೆ ಹತ್ತಿರವಿರುವ ದೆಹಲಿಯಲ್ಲಿ ಚಳಿಗಾಳಿ ತೀವ್ರವಾಯಿತೆಂದರೆ ಇಡೀ ದೇಶಕ್ಕೆ ಅರಾಜಕತೆ ಹಬ್ಬಿ ಅಂತರ್ಯುದ್ಧ (ಸಿವಿಲ್‌ವಾರ್) ಪ್ರಾರಂಭವಾಬಹುದು. ಜೀವನಾವಶ್ಯಕ ಎಲ್ಲ ವಸ್ತು ವ್ಯವಸ್ಥೆಗಳಿಗಾಗಿ ಬೀದಿಕಾಳಗ ನಡೆಸಬೇಕಾಗಬಹುದು.

ಜೀವನಾವಶ್ಯಕ ವಸ್ತುಗಳು ಯಾವುವು? ಹಿಂದೆಲ್ಲ ಸಿವಿಲ್ ವಾರ್ ಪ್ರಾರಂಭವಾದಾಗ ಕಿರಾಣಿ ಅಂಗಿಡಿಯ ಜೀನಸುಗಳಾದ ಅಕ್ಕಿ, ಬೇಳೆ, ಎಣ್ಣೆ, ಬೆಲ್ಲ ಇತ್ಯಾದಿಗಳು ಭೂಗತವಾಗುತ್ತಿದ್ದವು. ಇಂದು ನಮ್ಮನ್ನು

ಕಂಗೆಡಿಸಬಲ್ಲ ಇತರ ನೂರೊಂದು ವ್ಯವಸ್ಥೆಗಳನ್ನು ನಾವು ಹೆಣೆದುಕೊಂಡಿದ್ದೇವೆ. ನೀರಿನ ಪೂರೈಕೆ ನಿಂತರೆ, ವಿದ್ಯುತ್ ಪೂರೈಕೆ ನಿಂತರೆ, ಡೇರಿ ಹಾಲು ಬಾರದೇ ಇದ್ದರೆ, ಬಸ್ ಅಥವಾ ಆಟೋ ಓಡಾಟ ಸ್ಥಗಿತವಾದರೆ, ಪೆಟ್ರೋಲ್ – ಸೀಮೆ ಎಣ್ಣೆ ದಾಸ್ತಾನು ಮುಗಿದರೆ.... ನಮ್ಮ ಕತೆ ಮುಗಿಯುತ್ತದೆ.

ಅಣು ಚಳಿಗಾಲದ ವಿವಿಧ ಮುಖಗಳನ್ನು ಅಷ್ಟೆಲ್ಲ ಆಳವಾಗಿ ಅಧ್ಯಯನ ಮಾಡಿರುವ ವಿಜ್ಞಾನಿಗಳು ಪರಾವಲಂಬಿ ಮಾನವನ ಇಂಥ ವ್ಯಕ್ತಿಗತ ದುರಂತಗಳ ಬಗ್ಗೆ ಏನನ್ನೂ ಹೇಳಿಲ್ಲ. ತೃತಿಯ ಜಗತ್ತಿನ ಬಡರಾಷ್ಟ್ರಗಳ ಆಯಾತ ನಿರ್ಯಾತಗಳು ಆಯ ತಪ್ಪುತ್ತವೆಂದೂ ಹಲವಾರು ಕೋಷ್ಟಕ, ಸ್ತಂಭಾಲೇಖಗಳಲ್ಲಿ ವಿವರಿಸಲಾಗಿದೆ (ಭಾರತ ತನಗೆ ಬೇಕಾದ ಇಂಧನ ತೈಲದ ಶೇ.೪೦ ಭಾಗವನ್ನೂ, ರಸಗೊಬ್ಬರ ಶೇ.೩೬ರಷ್ಟನ್ನೂ ವಿದೇಶದಿಂದಲೇ ಆಮದು ಮಾಡಿಕೊಳ್ಳುತ್ತಿದ್ದು, ವಿಶ್ವ ಸಮರದಿಂದಾಗಿ ಅದು ನಿಂತು ಹೋದರೆ, ನಾವು ತುಂಬ ಕಷ್ಟದ ದಿನಗಳನ್ನು ಎದುರಿಸಬೇಕಾದೀತೆಂಬ ಎಚ್ಚರಕೆಯನ್ನು ಕೊಡಲಾಗಿದೆ). ಆಡಳಿತ ವ್ಯವಸ್ಥೆ ಕುಸಿಯಿತೆಂದರೆ ಇಂಧನ – ರಸಗೊಬ್ಬರಗಳ ರಾಶಿಯೇ ಪಕ್ಕದಲ್ಲಿದ್ದರೂ ಅದು ಪ್ರಯೋಜನಕ್ಕೆ ಬರುವಂತಿಲ್ಲ ಎಂಬುದನ್ನು ನಾವು ಮನಗಾಣಬೇಕು.

ವ್ಯವಸ್ಥೆಯನ್ನು ಅತಿಯಾಗಿ ನಂಬಿರುವ ಜನರೇ ಯುದ್ಧಕಾಲದಲ್ಲಿ ಅತ್ಯಂತ ಸಂಕಷ್ಟಕ್ಕೆ ಗುರಿಯಾಗುತ್ತಾರೆ. ನಿಸರ್ಗದಿಂದ ದೂರವಾಗಿ, ನಗರದ ಕಾಂಕ್ರೀಟ್ ಕಾಡುಗಳಲ್ಲಿ ವಾಸಿಸುವ ಜನ ದಿನಬೆಳಗಾಗುತ್ತಲೇ ಪೇಪರ್, ಹಾಲು, ಕೆಲಸದಾಕೆ, ಸ್ಕೂಲ್ ಬಸ್ ಇವೆಲ್ಲ ನಿಯಮಿತ ವೇಳೆಗೆ ಬಂದರೇನೇ ನೆಮ್ಮದಿಯಾಗಿರುತ್ತಾರೆ. ಮಧ್ಯಮ ಪ್ರಮಾಣದ ವಿಶ್ವಸಮರ ನಡೆದರೂ ಇವರೆಲ್ಲ ಕ್ಷೋಭೆಗೊಳಗಾಗುತ್ತಾರೆ. ನಗರವಾಸಿಗಳಿಗೆಲ್ಲ ತಾವು ನಿರ್ಮಿಸಿಕೊಂಡ ಈ ವ್ಯವಸ್ಥೆಯೇ ಉಸಿರುಗಟ್ಟಿಸುವ ಪಂಜರವಾಗುತ್ತದೆ.

ನಾಗರಿಕ ಜಗತ್ತಿನ ವಿಪರ್ಯಾಸವೆಂದರೆ ಈಗೀಗ ಕ್ರಮೇಣ ದೂರದ ಹಳ್ಳಿಗಳೂ ಈ ಬಗೆಯ ವ್ಯವಸ್ಥೆಯ ಜಾಲಕ್ಕೆ ಸೇರಿಕೊಳ್ಳುತ್ತಿವೆ. ನಗರಗಳನ್ನು ಅವಲಂಬಿಸಿಯೇ ಬದುಕುವಷ್ಟು ಆಧುನಿಕ ಹಳ್ಳಿಗಳಾಗುತ್ತವೆ. ಭತ್ತದ ಗದ್ದೆಗೆ ನೀರೆತ್ತಲು ವಿದ್ಯುತ್ ಬೇಕು, ಭತ್ತ ಸುಲಿದು ಅಕ್ಕಿ ಮಾಡಲೂ ನಗರದ

ಮಿಲ್‌ಗಳೇ ಬೇಕು. ಅಂದಮೇಲೆ ಯುದ್ಧದ ಬಿಸಿಯಿಂದ ಹಳ್ಳಿಗಳೂ ಬಚಾವಾಗಲಾರವು. ಬೀಜ, ಗೊಬ್ಬರ ಕೀಟನಾಶಕ, ಪಶು ಔಷಧ, ಮೇವು ಮುಂತಾದ ವ್ಯವಸಾಯ ಅವಶ್ಯಕತೆಗಳ ಪೂರೈಕೆಯೂ ಏರುಪೇರಾಗಿ, ನೀರು – ಹವಾಮಾನ ಸರಿಯಾಗಿದ್ದರೂ ಕೃಷಿ ವಿಫಲವಾಗುತ್ತದೆ. ಜಗತ್ತಿನ ಬಹುಪಾಲು ರಾಷ್ಟ್ರಗಳಲ್ಲಿ ಒಂದು ಇಡೀ ವರ್ಷಕ್ಕೆ ಸಾಕಾಗುವಷ್ಟು ಧಾನ್ಯ ಸಂಗ್ರಹ ಇಲ್ಲ. ವ್ಯಕ್ತಿಗತವಾಗಿ ಕೆಲವು ರೈತರು ಧಾನ್ಯ ಸಂಗ್ರಹಿಸಿ ಇಟ್ಟುಕೊಂಡರೂ ಹಸಿದವರ ದಂಗೆ ದಾಳಿಯಿಂದ ಅದನ್ನು ರಕ್ಷಿಸಿ ಇಟ್ಟುಕೊಳ್ಳುವುದು ದುಸ್ತರವಾಗುತ್ತದೆ.

ಹೀಗೆ ಮಾನವಕುಲದ ಬಹುಪಾಲು ಜನ ಯುದ್ಧದ ನೇರ ಪರಿಣಾಮಗಳಿಂದ ಅಥವಾ ಹವಾಮಾನದ ವೈಪರೀತ್ಯಗಳಿಂದ ರೋಗ ರುಜಿನಗಳಿಂದ ಇಲ್ಲವೇ ಹಸಿವಿನಿಂದ ಸಾಯುವಾಗ, ಅಳಿದುಳಿದ ಜನ ಶಿಲಾಯುಗಕ್ಕೆ ಮರಳುತ್ತಾರೆ. ಬೆಂಕಿಯಿಂದ ಬಚಾವಾಗಿ ಉಳಿದ ಅಷ್ಟಿಷ್ಟು ಕಾಡನ್ನೇ ಸರಿಯಾಗಿ ನೋಡಿರದ ಆಧುನಿಕ ಮಾನವ ಅಲ್ಲಿ ಒಂದೆರಡು ವರ್ಷ ಕಂದಮೂಲಗಳನ್ನೂ, ಪ್ರಾಣಿ ಪಕ್ಷಿಗಳನ್ನೂ ಬೇಟೆಯಾಡಿ ಬದುಕುವುದು ಸುಲಭವಲ್ಲ. ವಿಪರ್ಯಾಸವೆಂದರೆ, ನಾಗರಿಕತೆ ಸೋಂಕಿರದ ಕಾಡು ಕುರುಬರು, ಜೇನುಕುರುಬರು, ಭಿಲ್ಲರು, ತೋಡರು, ಸಿದ್ಧಿಗಳಂಥ ಅರಣ್ಯ ಮೂಲ ನಿವಾಸಿಗಳೇ ಅಣು ಸಮರದ ಮರುದಿನಗಳಲ್ಲಿ ಶೈಶವ ನಾಗರಿಕತೆಯ ತೊಟ್ಟಿಲು ತೂಗುವವರಾಗುತ್ತಾರೆ.

ಆದರೆ ಮುಂದಿನ ಎರಡು – ಮೂರು ವರ್ಷಗಳಲ್ಲಿ ಎತ್ತರದ ವಾತಾವರಣದಲ್ಲಿರುವ ವಿಕಿರಣ ದೂಳು ಮೋಡಗಳು ಕ್ರಮೇಣ ಧರೆಗಿಳಿದಾಗ, ವಾತಾವರಣದ ಓಝೋನ್ ಕವಚ ಭಗ್ನವಾಗಿ ಸೂರ್ಯನ ಅತಿನೇರಳೆ ಕಿರಣಗಳು ನೆಲ ತಲುಪುವಾಗ ದಟ್ಟ ಕಾಡು ದುರ್ದೆಸೆಗೀಡಾಗುತ್ತದೆ. ಬದುಕುಳಿದವರ ದೇಹದಲ್ಲಿ ರೋಗನಿರೋಧಕ ಶಕ್ತಿ ಹ್ರಾಸವಾಗಿ ಅದು ಏಡ್ಸ್ ಹಾಗೂ ಅನೇಕ ವಿಧದ ಕ್ಯಾನ್ಸರ್ ರೋಗಗಳ ಬೀಡಾಗುತ್ತದೆ. ವಿಕಲಾಂಗ, ವಿಕಲಬುದ್ಧಿಯ ಮುಂದಿನ ಪೀಳಿಗೆ, ಆಲ್ಬರ್ಟ್ ಐನ್‌ಸ್ಟಿನ್‌ನ ಊಹೆಯಂತೆ ಕೇವಲ ಕಲ್ಲು ಮಣ್ಣುಗಳಿಂದಷ್ಟೇ ನಾಲ್ಕನೇ ವಿಶ್ವ ಸಮರವನ್ನು ನಡೆಸಬೇಕಾದೀತು.

ಇಂಥ ಕರಾಳ ಭವಿಷ್ಯ ನಮ್ಮದಾಗದಂತೆ ಏನು ಮಾಡಬೇಕು? ಈ ಬಗ್ಗೆ ವಿಜ್ಞಾನಿಗಳು ಯಾವ ಸಲಹೆಯನ್ನೂ ನೀಡಿಲ್ಲವಾದರೂ, ಸಮರ

ಸಿದ್ಧತೆಗಳನ್ನು ಕೈ ಬಿಡುವಂತೆ ಶಕ್ತ ರಾಷ್ಟಗಳನ್ನು ಒತ್ತಾಯಿಸಬೇಕಾದುದು ಎಲ್ಲ ನಾಗರಿಕರ ಕರ್ತವ್ಯ ಎನ್ನುವುದು ಸ್ಪಷ್ಟವಾಗಿಯೇ ಇದೆ. ಅಂತರ ರಾಷ್ಟೀಯ ಮಟ್ಟದಲ್ಲಿ ಆ ಬಗೆಯ ಒತ್ತಡ ತರುವುದು ವೈಯಕ್ತಿಕ ಮಟ್ಟದಲ್ಲಿ ಸುಲಭದ ಕೆಲಸವಲ್ಲ. ಅಂಥ ಒತ್ತಡ ಅತ್ಯವಶ್ಯಕವೆಂಬ ಮನೋಭಾವವೂ ನಮ್ಮಲ್ಲಿ ಬೆಳೆದುಬಂದಿಲ್ಲ. ೧೯೮೪ ರಲ್ಲಿ ನ್ಯೂಯಾರ್ಕ್ ಪಟ್ಟಣದಲ್ಲಿ ೭,೫೦,೦೦೦ ಜನ ಒಂದೆಡೆ ಸೇರಿ ಯುದ್ಧ ಸಿದ್ಧತೆ ಬೇಡವೆಂದು ಒತ್ತಾಯಿಸಿ ಶಾಂತಿ ಮೆರವಣಿಗೆ ನಡೆಸಿದ್ದರು. ನಮ್ಮಲ್ಲಿ ೧೯೮೬ ಮಾರ್ಚ್ ತಿಂಗಳಲ್ಲಿ ಗುಜರಾತಿನ ವೇಡ್‌ಚಿ ಎಂಬಲ್ಲಿ ೩೦೦ ಮಂದಿಯ ಸಮ್ಮೇಳನ ಜರುಗಿದಾಗ ಕರ್ನಾಟಕದಿಂದ ೫ ಜನ ಭಾಗವಹಿಸಿದ್ದರು. ತೃತೀಯ ವಿಶ್ವಸಮರ ನಮ್ಮಿಂದ ತುಂಬ ದೂರದಲ್ಲಿ ನಡೆಯುತ್ತದೆ ಎಂಬ ಆಶಾಭಾವನೆಯೇ ಇಂದು ಅಸಂಗತವಾಗಿದೆ. ಸಂಪರ್ಕ ಸೌಲಭ್ಯಗಳ ದೃಷ್ಟಿಯಿಂದ ಭೂಮಿ ಸಂಕುಚಿತಗೊಂಡಿರುವಂತೆಯೇ ಸಮರಾಂಗಣವೂ ಮನೆಬಾಗಿಲಿಗೇ ಬಂದಿದೆ. ಅಣು ಬಾಂಬ್‌ಗಳನ್ನು ಹೊತ್ತ ನೌಕೆಗಳು, ಜಲಾಂತರ್ಗಾಮಿಗಳು, ಉಪಗ್ರಹಗಳು ಭೂಮಿಯ ಎಲ್ಲ ಕಡೆ ಸುತ್ತವರೆದಿದ್ದು, ಅಣ್ವಸ್ತ್ರ ಮುಕ್ತ ಪ್ರದೇಶ (ನ್ಯೂಕ್ಲಿಯರ್ ಫ್ರೀ ಝೋನ್) ಎಂಬುದೇ ಇಲ್ಲವೆನ್ನುತ್ತಾರೆ, ಭಾರತಿಯ ರಕ್ಷಣಾ ಅಧ್ಯಯನ ಸಂಸ್ಥೆಯ ಮಾಜಿ ನಿರ್ದೇಶಕ ಡಾ|| ಕೆ. ಸುಬ್ರಹ್ಮಣ್ಯಮ್.

ಜಗತ್ತಿನ ದೇಶಗಳ ಪೈಕಿ ನ್ಯೂಜಿಲ್ಯಾಂಡ್ ಮಾತ್ರ ಅಣುಸಮರದ ನಂತರವೂ ಬದುಕು ಉಳಿಯುವ ವ್ಯವಸ್ಥೆ ಕೆಲಮಟ್ಟಿಗೆ ಮಾಡಿಕೊಂಡಿದೆ ಎಂದು ಹೇಳಲಾಗಿದ್ದು, ಇತರ ದೇಶಗಳಲ್ಲೂ ಈ ಕೆಳಗಿನಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ವಿಜ್ಞಾನಿಗಳು ಸಲಹೆ ನೀಡಿದ್ದಾರೆ:

ಆಹಾರಧಾನ್ಯ ಸಂಗ್ರಹಣೆಗೆ ಆದಷ್ಟು ಭದ್ರ ಗೋದಾಮುಗಳನ್ನು ನಿರ್ಮಿಸಿಕೊಳ್ಳುವುದು; ಕೃಷಿಕಾರ್ಯ ಮತ್ತೆ ಸಾಗುವಂತೆ ಮಾಡಲು ಬೀಜ ನಿಧಿಗಳನ್ನು ಸ್ಥಾಪಿಸುವುದು; ಪೆಟ್ರೋಲು, ಡೀಸೆಲ್, ಸೀಮೆಎಣ್ಣೆಗಳಿಗಾಗಿ, ವಿದೇಶಗಳ ಅವಲಂಬನೆಯಿಂದ ಮುಕ್ತವಾಗುವುದು; ರಫ್ತಿಗಾಗಿ ಬೆಳೆಯುವ ಕಾಫಿ, ತಂಬಾಕು, ರಬ್ಬರು ಇತ್ಯಾದಿಗಳನ್ನು ಆದಷ್ಟೂ ಕಮ್ಮಿ ಮಾಡಿ ಸ್ವದೇಶೀ ಮಾರುಕಟ್ಟೆಗೆ ಪೂರೈಕೆಯಾಗುವಷ್ಟೇ ಬೆಳೆಯುವುದು; ರಸಗೊಬ್ಬರ, ಕೀಟನಾಶಕಗಳಂಥ ಶಕ್ತಿ ಆಧರಿತ ಕೃಷಿ ಕ್ರಮಕ್ಕೆ ಬದಲಾಗಿ ನೈಸರ್ಗಿಕ ವಿಧಾನದಲ್ಲೇ ಆಹಾರೋತ್ಪನ್ನ ಪಡೆಯಲು ಯತ್ನಿಸುವುದು;

ಸಮಾಜದ ಎಲ್ಲ ಸ್ತರದಲ್ಲೂ ಸ್ಥಳೀಯ ಆಡಳಿತವನ್ನೇ ರೂಢಿಗೆ ತಂದು ಆದಷ್ಟುಮಟ್ಟಿಗೆ ಸ್ಥಳೀಯ ಸಂಪನ್ಮೂಲಗಳನ್ನೇ ಆಧರಿಸಿ ಬದುಕಲು ಕಲಿಯುವುದು.

ಅರ್ಧ ಶತಮಾನದ ಹಿಂದೆ ಗಾಂಧೀಜಿ ಹೇಳದ್ದೂ ಇದೆ ತಾನೆ?

ಅಣು ಸಮರದ ನಂತರದ ಸ್ಥಿತಿ ಹೇಗಿರುತ್ತದೆಂದು ನಿರೂಪಿಸುವ 'ಆ ಮರುದಿನ' ('ದಿ ಡೇ ಆಫ್ಟರ್') ಎಂಬ ಚಿತ್ರದಲ್ಲಿ ಅಮೆರಿಕದ ಕನ್ಸಾಸ್ ನಗರ ದೂಳಿಪಟವಾಗುವುದನ್ನು ತೋರಿಸುತ್ತಾರೆ. ಹೊಗೆ ಮುಸುಕಿದ ಮಸಣ ಮೌನವನ್ನು ಕಲಕುವಂತೆ ಅರೆಬೆಂದು ನಜ್ಜುಗುಜ್ಜಾಗಿರುವ ಪ್ರಯೋಗಶಾಲೆಯ ಸಲಕರಣೆಗಳ ಮಧ್ಯೆ ಸ್ವಯಂಚಾಲಿತ ಮುರುಕ ಧ್ವನಿವರ್ಧಕದಿಂದ 'ಹಲೊ ಯಾರಾದ್ರೂ ಇದೀರಾ?' ಎಂಬ ಕ್ಷೀಣ ಆಕ್ರಂದನ ರೆಕಾರ್ಡ್ ಕೇಳಿ ಬಂದಾಗ ಉತ್ತರಿಸಲು ಒಬ್ಬರೂ ಉಳಿದಿರುವುದಿಲ್ಲ.

ಬಾಹ್ಯ ವಿಶ್ವದಲ್ಲಿ ಜೀವಿಗಳಿದ್ದಾವೆಯೇ ಎಂಬುದನ್ನು ಪರೀಕ್ಷಿಸಲು ನಾವು ಅದೇ ಪ್ರಶ್ನೆಯನ್ನು ವಿದ್ಯುತ್ ಕಾಂತೀಯ ತರಂಗಗಳ ಮೂಲಕ ನಕ್ಷತ್ರ ಲೋಕಕ್ಕೆ ರವಾನಿಸಿದ್ದೇವೆ. ಮನುಷ್ಯನ ಬುದ್ಧಿಮತ್ತೆ ಆಕಾಶದೆತ್ತರಕ್ಕೆ ವಿಸ್ತರಿಸಿದೆಯೆಂದು ದೂರ ವಿಶ್ವಕ್ಕೇ ಸಂದೇಶ ಚಿಮ್ಮಿದ್ದೇವೆ. ಅಲ್ಲಿಂದ ಮಾರುತ್ತರ ಬರುವವರೆಗೆ ಈ ಭೂಮಿ ಜೀವಂತವಾಗಿ ಇರುತ್ತೋ ಇಲ್ಲವೋ.

**ಅನುಬಂಧ – ೧**

**ಅಣು ಸಾಮರ್ಥ್ಯ ಎಲ್ಲಿ? ಎಷ್ಟು?**

ಆಗಸ್ಟ್ ೬, ೧೯೪೫ ರಂದು ಹಿರೋಶಿಮಾ ನಗರದ ಮೇಲೆ ಬಾಂಬ್ ಹಾಕಿದ ನಂತರದ ಈ ೪೨ ವರ್ಷಗಳಲ್ಲಿ ಸರಸಾರಿ ಪ್ರತಿ ಅರ್ಧ ತಾಸಿಗೆ ಒಂದರಂತೆ ಅಷ್ಟೇ ಮಾರಕ ಶಕ್ತಿಯ ಅಣ್ವಸ್ತ್ರಗಳ ತಯಾರಾಗುತ್ತಿವೆ. ಸರ್ವೇ ಸಾಧಾರಣವಾಗಿ ಒಂದೊಂದು ಬಾಂಬ್‌ನ ಸಾಮರ್ಥ್ಯ ಹಿರೋಶಿಮಾ ಬಾಂಬ್‌ನ ೪೦ ಪಟ್ಟು ದೊಡ್ಡದಾಗಿರುತ್ತದೆ. ಕೆಲವೊಂದು ವಿಶೇಷ ಉದ್ದೇಶದ ಬಾಂಬ್‌ಗಳು ಹಿರೋಶೀಮಾ ಬಾಂಬ್‌ಗಿಂತ ೧,೫೦೦ ಪಟ್ಟು ಹೆಚ್ಚು ಶಕ್ತಿಶಾಲಿಯಾಗಿದೆ. ರಷ್ಯದವರು ೧೯೬೧ ಅಕ್ಟೋಬರ್‌ನಲ್ಲಿ

ಪರೀಕ್ಷಿಸಿದ್ದು ಈವರೆಗೆ ತಯಾರಿಸಲಾದ ಬಾಂಬ್‌ಗಳಲ್ಲೇ ಅತ್ಯಂತ ಶಕ್ತಿಶಾಲಿಯಾಗಿದ್ದು ಅದು ಹಿರೋಶಿಮಾ ಬಾಂಬ್‌ನ ೪೮೪೦ ಪಟ್ಟು ಬಲಿಷ್ಠವಾಗಿತು.

ವಿಶಿಷ್ಟವೆಂದರೆ, ಈಗೀಗ ಬಾಂಬ್‌ಗಳ ಸಂಖ್ಯೆಯೂ ತಗ್ಗುತ್ತಿದೆ, ಒಂದೊಂದು ಬಾಂಬ್‌ನ ಸಾಮರ್ಥ್ಯವೂ ಕಮ್ಮಿಯಾಗುತ್ತಿದೆ. ಅಂದರೆ ಬಾಂಬ್‌ಗಳು ಕಂಪ್ಯೂಟರ್‌ನ ಮಿದುಳನ್ನೇ ತಲೆಯಲ್ಲಿ ಹೊತ್ತುಕೊಂಡು ಚುರುಕಾಗುತ್ತಿವೆ. ಹಾಗಾಗಿ, ಗಾತ್ರ ಚಿಕ್ಕದಾದರೂ ಮೊದಲಿಗಿಂತ ಹೆಚ್ಚು ವಿಧ್ವಂಸಕಾರಿ ಆಗುತ್ತಿವೆ. ಮೊದಲೆಲ್ಲ ಅವು ಅಷ್ಟು ನಿಖರವಾಗಿ ಗುರಿ ತಲುಪುವ ಚಾಣಾಕ್ಷತೆ ಪಡೆದಿರಲಿಲ್ಲ. ಗುರಿಗೆ ಮೂರು ಮೈಲು ದೂರದಲ್ಲಿ ಎಲ್ಲಾದರೂ ಬೀಳಬಹುದಿತ್ತು. ಅದಕ್ಕೇ ಅವುಗಳ ಸಾಮರ್ಥ್ಯ ಹೆಚ್ಚಾಗಿತ್ತು. ಈಗ ಹಾಗಿಲ್ಲ. ಎರಡು ಸಾವಿರ ಮೈಲು ಪ್ರಯಾಣ ಮಾಡಿದರೂ ಅವು ಗುರಿಯತ್ತ ನೇರ ಚಲಿಸಿ ಹೆಚ್ಚೆಂದರೆ ಗುರಿಗೆ ೭೫ ಅಡಿ ದೂರದಲ್ಲಿ ಅಪ್ಪಳಿಸುತ್ತವೆ.

ಬಲದಲ್ಲಿ ಹಿರೋಶಿಮಾ ಬಾಂಬ್‌ನ ಮೂರು ಲಕ್ಷ ಪಟ್ಟು ಮಾರಕ ಸಾಮರ್ಥ್ಯ ಪಡೆದಿರುವ ಅಣುಬಾಂಬ್‌ಗಳು ಒಟ್ಟು ಸುಮಾರು ಒಂದು ಲಕ್ಷ ಗುರಿ (ಟಾರ್ಗೆಟ್)ಗಳತ್ತ ಕಣ್ಣಿಟ್ಟು ಕೂತಿವೆ. ಇವುಗಳನ್ನು ಗುರಿ ತಲುಪಿಸಲೆಂದು ಭೂಮಿಯ ಹಲವೆಡೆಗಳಲ್ಲಿ ಇಟ್ಟು ಸುಮಾರು ೨೪,೦೦೦ ಯುದ್ಧಾಸ್ತ್ರ ವಾಹಕಗಳು (ಅಂದರೆ ಕ್ಷಿಪಣಿ, ಜಲಾಂತರ್ಗಾಮಿ, ವಿಮಾನ, ಮಿಲಿಟರಿ ಉಪಗ್ರಹ, ಖಂಡಾಂತರ ಕ್ಷಿಪಣಿ, ಬಹುಶಿರ ಕ್ಷಿಪಣಿ ಇತ್ಯಾದಿ) ಇಂದು ಅಮೇರಿಕ ಮತ್ತು ರಷ್ಯ ಕಾದಾಟಕ್ಕೆ ನಿಂತರೆ ಪರಸ್ಪರದ ಎಲ್ಲ ನಗರಗಳನ್ನು ಐವತ್ತು ಬಾರಿ ಧ್ವಂಸಗೊಳಿಸುವಷ್ಟು ಮಾರಕ ಶಕ್ತಿ ಸೇರಿಸಿಕೊಂಡಿವೆ.

ದಿವಂಗತ ಪ್ರಧಾನಿ ಶೀಮತಿ ಇಂದಿರಾಗಾಂಧಿಯವರ ಲೆಕ್ಕಾಚಾರದ ಪ್ರಕಾರ ಒಂದು ಖಂಡಾಂತರ ಅಣುಕ್ಷಿಪಣಿ ತಯಾರಿಸುವಷ್ಟೇ ವೆಚ್ಚದಲ್ಲಿ ೨೦ ಕೋಟಿ ವೃಕ್ಷಗಳನ್ನು ಬೆಳೆಸಬಹುದು ಹತ್ತು ಜೈವಿಕ ಅನಿಲ ಯಂತ್ರಗಳನ್ನು ಕೊಳ್ಳಬಹುದು; ೬೫ ಸಾವಿರ ಆರೋಗ್ಯ ಸೇವಾ ಕೇಂದ್ರಗಳನ್ನು ತೆರೆಯಬಹುದು ಅಥವಾ ३,४೦,೦೦೦ ಶಾಲೆಗಳನ್ನು ಸ್ಥಾಪಿಸಬಹುದು.

ವಿಶಿಷ್ಟವೆಂದರೆ, ಇಷ್ಟು ದುಬಾರಿಯ, ಇಷ್ಟೊಂದು ಸಂಖ್ಯೆಯ ಅಣ್ವಸ್ತ್ರಗಳಿದ್ದರೂ ಮಿಲಿಟರಿ ಯೋಧರ ದೃಷ್ಟಿಯಿಂದ ಅವೆಲ್ಲ ನಿರುಪಯುಕ್ತ ಬುರುಡೆಗಳೇ ಸರಿ. ಯುದ್ಧರಂಗಗಳಲ್ಲಿ ಬಳಸಿದರೆ ದೂಳು, ವಿಕಿರಣದಿಂದಾಗಿ ಸೈನ್ಯ ಮುಂದುವರೆಯುವುದೇ ಕಷ್ಟ. ಮಿಲಿಟರಿ ನೆಲೆಯ ಮೇಲೆ ದಾಳಿ ಮಾಡಿದರೂ ಗೆದ್ದವರು ಅಂಥ ನೆಲೆಯನ್ನು ಆಕ್ರಮಿಸಿಕೊಳ್ಳುವಂತಿಲ್ಲ. ಆ ಪ್ರದೇಶವೆಲ್ಲ ವಿಕಿರಣಮಯವಾಗಿರುತ್ತದೆ. ಇನ್ನು ನಾಗರಿಕ ವಸತಿಗಳ ಮೇಲೆ ಎಸೆದರಂತೂ ಸೋತವರಿಗೂ ಸಾವು, ಗೆದ್ದವರಿಗೂ ಉಳಿಗಾಲವಿಲ್ಲ.

## ಅನುಬಂಧ – ೨

## ಬದುಕುಳಿಯುವುದು ಮಿಲಿಟರಿ ಮಾತ್ರ

ಜಗತ್ತಿನಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ತಾಣಗಳ ಮೇಲೆ ಕಣ್ಣಿಟ್ಟು ದಾಳಿ ಎಸಗಲು ಹೊಂಚು ಹಾಕಿ ಕೂತ ಅಣ್ವಸ್ತ್ರ ಕ್ಷಿಪಣಿಗಳು ಎಲ್ಲೆಲ್ಲಿ ಚಿಮ್ಮಬಹುದು? ಸಮರತಂತ್ರದ ಸಾಮಾನ್ಯ ನೀತಿ ಹೇಗಿರುತ್ತದೆ?

- ವೈರಿಯ ಬಲವನ್ನು ಕುಗ್ಗಿಸುವ ತಾಣಗಳ ಮೇಲೆ ಮೊದಲ ದಾಳಿ, ಅಂದರೆ ವೈರಿಯ ಕ್ಷಿಪಣಿಗಳು ಅವಿತುಕೊಂಡಿರುವ ಗೂಡುಗಳು, ಮಿಲಿಟರಿ ತುಕಡಿಗಳಿರುವ ನೆಲೆಗಳು, ರೇಡಿಯೋ – ವೈಯರ್‌ಲೆಸ್ – ಮೈಕ್ರೋವೇವ್ ಸಂಪರ್ಕ ಕೇಂದ್ರಗಳು, ಉದ್ದ ರನ್‌ವೇಗಳಿರುವ ವಿಮಾನ ನಿಲ್ದಾಣಗಳು; ಮಿಲಿಟರಿ ಉಪಕರಣ ತಯಾರಿಸುವ ಕಾರ್ಖಾನೆಗಳು ಇತ್ಯಾದಿ

- ಯುದ್ಧ ಸಂಬಂಧಿ ಸಾಮಾಜಿಕ ವ್ಯವಸ್ಥೆಯನ್ನು ಭಗ್ನಗೊಳಿಸಿ, ಅವು ಮತ್ತೆಂದೂ ತಲೆ ಎತ್ತದಂತೆ ಮಾಡುವುದು ಎರಡನೇ ಹಂತದ ಗುರಿ. ಇದುರಲ್ಲಿ ಅಣುಶಕ್ತಿ ಕೇಂದ್ರಗಳು, ಜಲ ವಿದ್ಯುತ್ ಹಾಗೂ ಶಾಖೋತ್ಪನ್ನ ವಿದ್ಯುದಾಗಾರಗಳು, ತೈಲ ಸಂಸ್ಕರಣ ರಿಫೈನರಿಗಳು, ಉಕ್ಕು ಅಲ್ಯೂಮಿನಿಯಂ ಕಾರ್ಖಾನೆಗಳು, ಸೇತುವೆಗಳು, ಅವು ಇವು ಎಲ್ಲ ಬರುತ್ತವೆ.

ದಾಳಿ– ಪ್ರತಿದಾಳಿ ಎಷ್ಟು ಬೀಕರ ಅಥವಾ ಎಷ್ಟು ಅವಧಿಯವರೆಗೆ ನಡೆದೀತು? ಸೀಮಿತ ದಾಳಿಯಾಗಿದ್ದರೆ ವೈರಿಯ ಶಸ್ತಾಸ್ತ್ರ ದಾಸ್ತಾನುಗಳ ಮೇಲೆ ಬುದ್ಧಿ ಕಲಿಸಲೆಂದೇ ನಾಗರಿಕ ಸಮೂಹದ ಮೇಲೆ ಒಂದೆರಡು ಬಾಂಬ್ ಹಾಕಿ ಯುದ್ಧ ಮುಗಿಸಬಹುದು– ಹಿರೋಶಿಮಾದಲ್ಲಿ ಬಾಂಬ್ ಹಾಕಿದಂತೆ.

ಅವೆಲ್ಲಕ್ಕಿಂತ ಭಯಾನಕವಾದುದು 'ರಂಗ ಸಮರ'

ಶಕ್ತ ರಾಷ್ಟ್ರಗಳಲ್ಲಿ ತಮ್ಮಿಂದ ದೂರದಲ್ಲಿರುವ ಅರಬ್ ರಾಷ್ಟ್ರಗಳಲ್ಲೋ, ದಕ್ಷಿಣ ಅಮೆರಿಕದಲ್ಲೋ ಅಥವಾ ತಂತಮ್ಮೊಳಗೆ ಬಡಿದಾಡಿಕೊಳ್ಳುವ ಇತರ ಯಾವುದೇ ಬಡರಾಷ್ಟ್ರದಲ್ಲೋ, 'ರಂಗ ಸಮರ' ನಡೆಸಿ ಅಣ್ವಸ್ತ್ರ ಬಲಾಬಲ ಪರೀಕ್ಷೆ ಮಾಡಬಹುದು. ಹೊಟ್ಟೆಬಟ್ಟೆಗಿಲ್ಲದ ಬಡರಾಷ್ಟ್ರಗಳೂ ಈಗ ಅಣುಬಾಂಬ್ ಸಿದ್ಧಪಡಿಸಿಕೊಳ್ಳುತ್ತಿದ್ದು, ಅಲ್ಲೇ ಸಮರಾಂಗಣ ಏರ್ಪಡಿಸಿಕೊಂಡು ಶಕ್ತ ರಾಷ್ತ್ರಗಳು ತಮ್ಮ ಅಸ್ತ್ರ ಭಂಡಾರ ಖಾಲಿ ಮಾಡಬಹುದು.

ಪಾಕಿಸ್ತಾನ – ಭಾರತಗಳೂ ಈ ಅಪಾಯದೆಡಗೇ ಸರಿಯುತ್ತಿವೆ.

ಸ್ವಿತ್ಸರ್ಲೆಂಡ್ ಹಾಗೂ ಅಮೆರಿಕಾದ ಕೆಲವು ನಗರಗಳಲ್ಲಿ ದಾಳಿಯಿಂದ ಬಚಾವಾಗಲೆಂದು ಆಶ್ರಯತಾಣಗಳನ್ನು ನಿರ್ಮಿಸಿದ್ದಾರೆ. ಒಂದು ತಿಂಗಳಿಗೆ ಸಾಲುವಷ್ಟು ಜೀವನಾವಶ್ಯ ಸರಂಜಾಮುಗಳನ್ನು ಪೇರಿಸಿಟ್ಟ ಭೂಗತ ಸುರಂಗಗಳು ತಯಾರಾಗಿದ್ದು ಆಗೊಮ್ಮೆ ಈಗೊಮ್ಮೆ ಯುದ್ಧದ ಹುಸಿಗಂಟೆ ಮೊಳಗಿಸಿ ನಾಗರಿಕರಿಗೆ ಬಚಾವು ತಂತ್ರದ ತಾಲೀಮು ಕೊಡಲಾಗುತ್ತದೆ.

ಇತರರನ್ನು ಕೊಲ್ಲುವವರೇ ತಮ್ಮ ರಕ್ಷಣೆಗಾಗಿ ಎಲ್ಲ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಮಿಲಿಟರಿ ಅಧಿಕಾರಿಗಳಿಗೆ ಹಾಗೂ ಯೋಧರಿಗೆ ರಕ್ಷಣಾ ಕವಚಗಳು, ವಿಕಿರಣ ನಿರೋಧ ಮುಖವಾಡಗಳೂ ಹಾಗೂ ಶುದ್ಧಗಾಳಿ ಸಿಲಿಂಡರುಗಳೂ ಲಭ್ಯವಾಗುತ್ತವೆ. ಸಮರ ನಡೆದರೆ ಮಿಲಿಟರಿ ಬದುಕುಳಿದು, ನಾಗರೀಕ ಪ್ರಪಂಚ ಮಣ್ಣುಮುಕ್ಕಬೇಕಾಗುವ ವಿಶಿಷ್ಟ ಪರಿಸ್ಥಿತಿ ಉಂಟಾಗುತ್ತವೆ.

## ಅನುಬಂಧ – ೩

## ಅಚಾತುರ್ಯ, ಆಕಸ್ಮಿಕ ವಿಶ್ವಸಮರ

೧೯೮೬, ಮೇ ೨೭–೨೮ ರಂದು ವಾಂಕೋವರ್ ನಗರದಲ್ಲಿ ವಿಶಿಷ್ಟ ಸಮ್ಮೇಳನವೊಂದು ನಡೆಯಿತು. ಶಸ್ತ್ರಾಸ್ತ್ರಗಳ ಒತ್ತುಗುಂಡಿಯನ್ನು ನಿಯಂತ್ರಣದಲ್ಲಿ ಇಟ್ಟಿರಬೇಕಾದ ಕಂಪ್ಯೂಟರ್‌ಗಳೇ ತಪ್ಪು ಲೆಕ್ಕಾಚಾರ ಮಾಡಿ ಯುದ್ಧ ಘೋಷಣೆ ಆಗುವ ಸಾಧ್ಯತೆಗಳನ್ನು ಚರ್ಚಿಸಲೆಂದು ತಜ್ಞರು ಅಲ್ಲಿ ಸಭೆ ಸೇರಿದ್ದರು. ೧೯೭೭–೭೮ರ ಮಧ್ಯೆ ಒಟ್ಟು ಆರು ಬಾರಿ ಇಂಥ ಆಚಾತುರ್ಯ ನಡೆದದ್ದು ನಿಜವೆಂದು ಅಮೆರಿಕ ಸರಕಾರದ ರಕ್ಷಣಾ ಇಲಾಖೆ ಒಪ್ಪಿಕೊಂಡಿದೆ. ಆದರೆ ಸಂಶೋಧಕರ ಪ್ರಕಾರ ಇಂಥ ಆಚಾತುರ್ಯಗಳ ಸಂಖ್ಯೆ ತೀರಾ ಹೆಚ್ಚಿದ್ದು, ಸರಕಾರಿ ಮಾಹಿತಿಗಳಲ್ಲಿ ಸತ್ಯವನ್ನು ಮರೆಮಾಚಲಾಗಿದೆ. ಯುದ್ಧಗಂಟೆ ಮೊಳಗುವ ಕೊಂಚ ಮುಂಚಿನ ಹಂತದಲ್ಲಿ ಕ್ಷಿಪಣಿ ಸಜ್ಜಾಗಬೇಕೆಂಬ ಆದೇಶವಂತೂ ೧೧೫೨ ಬಾರಿ ಹೊರಟಿತ್ತೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಉಲ್ಕಾಪಾತ, ಭೂಕಂಪನ, ಚಂಡಮಾರುತ ಮುಂತಾದ ದಿಢೀರ್ ನೈಸರ್ಗಿಕ ಪ್ರಕೋಪಗಳನ್ನು ಕಂಪ್ಯೂಟರ್ ತಪ್ಪಾಗಿ ಭಾವಿಸಿ ಆ ವರ್ಷ ೨೮೫ ಬಾರಿ ಅಲಾರ್ಮ್ ಮೊಳಗಿಸಿತ್ತೆಂದು ಹೇಳಲಾಗಿದೆ.

ಕಂಪ್ಯೂಟರ್‌ಗಳಿಗೆ ತಪ್ಪು ಮಾಹಿತಿ ನೀಡಿದ್ದರಿಂದಲೇ ಹೀಗಾಗುತ್ತಲಿದ್ದು ಎಷ್ಟೋ ಬಾರಿ ನಿರ್ದೇಶನಗಳನ್ನು ಸರಿಪಡಿಸುವಷ್ಟು ವ್ಯವಧಾನವೂ ಇರುವುದಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ, ಅಮೆರಿಕದ ಅಣ್ವಸ್ತ್ರ ಇಲಾಖೆಯಲ್ಲಿ ಕೆಲಸ ಮಾಡುವ ಬಹಳಷ್ಟು ಮಂದಿ ವಿಶ್ವದ ದುರಂತಕ್ಕೆ ಕಾರಣವಾಗಬಹುದುದಾಗಿದೆ. ಪ್ರತಿವರ್ಷ ೩೬೦೦ ಮಂದಿ ಅಣ್ವಸ್ತ್ರ ಸೈನಿಕರನ್ನು ಮಾನಸಿಕ ಅಸ್ವಸ್ಥತೆಯ ಕಾರಣದಿಂದಾಗಿ ತೆಗೆದುಹಾಕ ಲಾಗುತ್ತಿದೆ. ಮಾದಕವಸ್ತು ಸೇವನೆ ಮಟ್ಟ ಇತ್ತೀಚೆಗೆ ರಷ್ಯದ ಮಿಲಿಟರಿಯಲ್ಲೂ ಹೆಚ್ಚುತ್ತಿದೆ ಎನ್ನಲಾಗಿದೆ. 'ಭೂಮಿಯ ಮೇಲಿನ ಎಲ್ಲ ಅಣ್ವಸ್ತ್ರಗಳನ್ನು ಹೂತು ಬಿಡುವುದೊಂದೇ ಎಲ್ಲರ ಉಳಿವಿಗೆ ಏಕೈಕ ಮಾರ್ಗ' ಎನ್ನುತ್ತಾರೆ ಮಾಸ್ಕೋದ ನಿವೃತ್ತ ಮಿಲಿಟರಿ ಜನರಲ್ ಮೈಕಲ್ ಮಿಲ್‌ಸ್ಟೀನ್.

❑

# ೪. ಓದು ಪತ್ಯ
# ಬಲಾಚ್ಯುತರ ಪುಣ್ಯಪ್ರಭಾವೋದಯ
# (ಪಂಪ ಪುರಾಣ)

– ಡಾ. ಪಿ.ವಿ. ನಾರಾಯಣ

ರಾಘವಸೈನ್ಯವು ಪೂಸಿದ ಕಹಳೆ ಶಂಖ ಭೇರಿ ಮುಂತಾದವುಗಳ ಸದ್ದಿನೊಡನೆ ಕುದುರೆಗಳ ಕೆನೆತ ಆನೆಗಳ ಘೀಳುಗಳು ಸೇರಿ ಪ್ರಳಯಕಾಲದ ಸಮುದ್ರಘೋಷದಂತೆ ಕೇಳಿಸಿತು. ಇದನ್ನು ಕೇಳಿ ರಾವಣನು ಹೊಡೆಸಿದ ಸನ್ನಾಭೇರಿ ನಿನಾದವು ಲೋಕವನ್ನೇ ಆವರಿಸಿಬಿಟ್ಟಿತು. ರಾಮನು ರಣರಭಸದಿಂದ ತನ್ನ ಮೇಲೇರಿ ಬಂದುದರಿಂದಾಗಿ ತನ್ನ ತೋಳ ತೀಟೆಯನ್ನು ಕಳೆದುಕೊಳ್ಳಲು ಕಾರಣವಾಯಿತೆಂದು ದಶಾನನನ ಕಣ್ಣುಗಳು ಕೆಂಪೇರಿದವು. ಈ ಶಬ್ದ ಕೇಳಿಬರಲು ಭಾಸ್ಕರಪುರ ಪಯೋಧರಪುರ ಕಾಂಚನಪುರ ಕಂಪನಪುರ ವ್ಯೋಮಪುರ ವ್ಯೋಮವಲ್ಲಭಪುರ ಗಂಧರ್ವಪುರ ಶಶಿಮಂದಿರಪುರ ಶಿವಮಂದಿರಪುರ ಸಿಂಹಪುರ ಲಕ್ಷ್ಮೀಪುರ ಮಹಾಶೈಲಪುರ ಚಕ್ರಪುರ ಸೀಮಂತಪುರ ಮಲಯಪುರ ಶ್ರೀಗುಹಾಪುರ ಅಶ್ವಪುರ ಚಂದ್ರಪುರ ಕಿರಿಂಜಯಪುರ ಶಶಿಸ್ಥಾಪನಪುರ ಮಾರ್ತಂಡಪುರ ಸಹಸ್ಥಾಪನಾಪುರ ವಿಶಾಲಸ್ಥಾಪನಪುರ ಜಯಪುರ ಪರೀಕ್ಷಾಪುರ ವಿಶ್ವಪುರ ಶ್ರೀಚಂದ್ರಪುರ ಗಜಪುರ ಗೋಪುರ ಮಹಿಷಪುರ ರತನಪುರ ಮುಂತಾದವುಗಳ ವಿದ್ಯಾಧರರೆಲ್ಲ ತಂತಮ್ಮ ಸಂಗರಸಾಮಾಗ್ರೀಸಹಿತರಾಗಿ ಬಂದು ದಶಗ್ರೀವನನ್ನು ಕೂಡಿದರು. ಅವರೆಲ್ಲರಿಗೆ ಸಮುಚಿತ ಸನ್ಮಾನಗಳನ್ನು ಮಾಡಿದ ರಾವಣನು ಮೂವತ್ತುನಾಲ್ಕು ಸಾವಿರ ಅಕ್ಷೌಹಿಣಿ ಬಲಸಮೇತನಾಗಿ ಯುದ್ಧಸಿದ್ಧನಾಗಿ ಹೊರಟ.

ಈ ಕಡೆ ರಾಮಲಕ್ಷ್ಮಣರ ಸಹಸ್ರ ಅಕ್ಷೌಹಿಣಿ ಬಲಕ್ಕೊಡೆಯರಾದ ಸುಗ್ರೀವ ಪ್ರಭಾಮಂಡಲರೊಡನೆ ಇತರ ಅತಿಬಲರಾದ ವಿಯಚ್ಚರರು ಸಂಗ್ರಾಮೋತ್ಸುಕರಾಗಿ ಬಂದು ಸೇರಿದರು. ಆ ಪಡೆಗೆ ಎಂಟು ವಿಭಾಗಗಳಿದ್ದವು. ಒಂದು ಆನೆಯ ಕಾವಲಿನಲ್ಲಿ ಒಂದು ರಥ, ಮೂರು

ಕುದುರೆಗಳು, ಐವರು ಕಾಲಾಳುಗಳು ಸೇರಿದರೆ ಒಂದು ಪತ್ತಿ ಎನಿಸುತ್ತಿತ್ತು. ಪತ್ತಿಗೆ ಮೂರು ಪಟ್ಟು ದೊಡ್ಡದಾದುದು ಸೇನೆ; ಅದರ ಮೂರರಷ್ಟು ದೊಡ್ಡದು ಸೇನಾಮುಖ;ಅದರ ಮೂರರಷ್ಟು ಹಿರಿದಾದುದು ಗುಲ್ಮ; ಅದರ ಮೂರರಷ್ಟು ದೊಡ್ಡದು ವಾಹಿನಿ; ಅದರ ಮೂರುಪಟ್ಟು ಹಿರಿದು ಪೃತನೆ; ಅದರ ಮೂರು ಬಾರಿ ದೊಡ್ಡದಾದುದು ಚಮು; ಅದರಕ್ಕೆ ಮೂರರಷ್ಟು ದೊಡ್ಡದು ಆನೀಕಿನಿ. ಹತ್ತು ಆನೀಕಿನಿಗಳು ಸೇರಿದರೆ ಜೈನಶಾಸ್ತ್ರಗಳ ಪ್ರಕಾರ ಒಂದು ಅಕ್ಷೌಹಿಣಿ ಎನಿಸುತ್ತದೆ. ಒಂದು ಅಕ್ಷೌಹಿಣಿಯಲ್ಲಿ ಇಪ್ಪತ್ತೊಂದು ಸಾವಿರದ ಎಂಟನೂರ ಎಪ್ಪತ್ತು ಆನೆಗಳೂ, ಅಷ್ಟೇ ಸಂಖ್ಯೆಯ ರಥಗಳೂ, ಅರವತ್ತೈದು ಸಾವಿರದಾರುನೂರ ಹತ್ತು ಕುದರೆಗಳೂ, ಒಂದು ಲಕ್ಷ ಒಂಬತ್ತು ಸಾವಿರದ ಮುನ್ನೂರೈವತ್ತು ಕಾಲಾಳುಗಳೂ ಇರುತ್ತಾರೆ. ಹೀಗಾಗಿ ಎರಡೂ ಕಡೆಯ ಸೇನೆಗಳು ಸೇರಿದರೆ ಭೂಮಿಯೇ ಇಕ್ಕಟ್ಟೆನಿಸುತ್ತದೆ. ನಕ್ಷತ್ರಗಳನ್ನೂ, ಮಳೆಯ ಹನಿಗಳನ್ನೂ, ಪರಮಾಣುಗಳನ್ನೂ, ಆಕಾಶದ ವಿಸ್ತಾರವನ್ನೂ, ಸಮುದ್ರದ ಅಲೆಗಳನ್ನೂ, ದಿಕ್ಕಿನ ಕೊನೆಯನ್ನೂ, ಅಂತೆಯೇ ಈ ಎರಡೂ ಬಲಗಳ ಸಂಖ್ಯೆಯನ್ನೂ ಎಣಿಸಹೊರಡುವವನು ಗಾಂಪನೇ ಸರಿ. ಅವರ ಬಲಗಳು ಅಷ್ಟು ದೊಡ್ಡವು.

ಎರಡು ಕಡೆಗಳಲ್ಲಿಯೂ ಆಯುಧಗಳನ್ನು ಅರ್ಚಿಸುವ, ಯುದ್ಧದ ಆನೆಕುದರೆಗಳನ್ನು ಪೂಜಿಸುವ, ವೀರರ ಆಲಾಪಗಳನ್ನು ಕೇಳುವ, ಘೋಷಣೆ ಕೂಗುವ ಕೆಲಸದಲ್ಲಿಯೇ ಆ ರಾತ್ರಿ ಕಳೆಯಿತು. ನೇಸರು ಮೂಡಲು ಇಂದಗಿಯ ಆಜ್ಞೆಯ ಪ್ರಕಾರ ತಮಗಾರು ಎದುರಿಲ್ಲ, ಸಮರವನ್ನು ಮೊದಲಿಡಲು ತಾವೇ ನಾಯಕರು ಎಂದು ಹಸ್ತಪ್ರಹಸ್ತರು ಸಿದ್ಧರಾದರು. ಮಾರೀಚ ಮೊದಲಾದ ಮಹಾರಥರೊಡನೆ ರಥಿಕರೆಲ್ಲರೂ ತಂತಮ್ಮ ಸಿಂಹರಥಗಳನ್ನೇರಿ, ರಣಭೇರೀರವದೊಡನೆ ಲಂಕೆಯಿಂದ ಹೊರಟರು. ವಜ್ರೋದರ ಮುಂತಾದ ಕೆಲವು ಮೈಗಲಿಗಳು ಹುಲಿಗಳನ್ನೇ ವಾಹನಗಳನ್ನಾಗಿ ಮಾಡಿಕೊಂಡಿದ್ದರು; ಕೆಲವರು ಕುದುರೆಗಳ ಮೇಲೆ ಕೂತರು. ಆನೆಕುದುರೆಗಳ ಮೇಲೆ ಕೂತ ತನ್ನ ಅಂಗರಕ್ಷಕರಾದ ಏಳುಕೋಟಿ ವಿದ್ಯಾಧರತನಯರೊಡನೆ ಇಂದ್ರಜಿತ್ತುವು ಹೊರಟ. ಅವರೊಡನೆ ಜಿಶತ್ರು ಮೇಘವಾಹನರು 'ಇಂದಗಿಯೊಡನೆ ಅಹಿತರನ್ನು ಇಂದು ಅಗಿಯುವಂತೆ ಮಾಡುತ್ತೇವೆ' ಎಂದು ಸಿದ್ಧರಾದರು. ರಿಪುಬಲವಿಲಯೋತ್ಪಾತಕರದಂತೆ ಕೋರೈಸುವ ದೀಪ್ತಿತ ತ್ರಿಶೂಲಗಳನ್ನು

ಹಿಡಿದು ಕುಂಭಕರ್ಣನು ಜ್ಯೋತಿಷ್ಪ್ರಭವೆಂಬ ತನ್ನ ಮಣಿವಿಮಾನವನ್ನೇರಿ ಹೊರಟ.

ಹೀಗೆ ಉಗ್ರಬಲವು ಸಂಗ್ರಾಮರಂಗದಲ್ಲಿ ಒಗ್ಗೂಡಿ ನಿಲ್ಲಲು, ಉಗ್ರಾಸ್ತ್ರವನ್ನು ಹಿಡಿದು, ಪುಷ್ಪಕವಿಮಾನವನ್ನೇರಿ ಪೂರ್ಣೇಂದುವನ್ನು ಹೋಲುತ್ತಿದ್ದ ರಾವಣನು ಬೆಳ್ಗೊಡೆ ಭೇರೀರವ ಶಂಖನಿನಾದಗಳಾಗುತ್ತಿರಲು ಸಡಗರದಿಂದ ಹೊರಟ. ಬರುವಾಗ, ಸುರಾಲಯಗಳು ಒಡೆಯುವಂತೆ, ಪರ್ವತಸಂಕುಲವು ಕೆಡೆಯುವಂತೆ, ಭೂತಳವು ನಡುಗುವಂತೆ, ಮರಗಳು ಪ್ರತಿಕೂಲ ಗಾಳಿಯಿಂದ ಬಾಗುವಂತೆ, ಹಕ್ಕಿಗಳು ಭಯದಿಂದ ಕಲರವಮಾಡಲು ಮಾನಧನನು ಎದುರಾದ ಉತ್ಪಾತಗಳನ್ನೂ, ಅಪಶಕುನಗಳನ್ನೂ ಲೆಕ್ಕಿಸದೆ, ಸಂಗರಾವನಿಗೆ ನಡೆತಂದ. ದನುಜೇಂದ್ರನ ಒಡ್ಡು ಕೋರೈಸುತ್ತಿರಲು ವಾನರಚಿಹ್ನರು ಕಾದುವ ತಕ್ಕಿನಿಂದ ರಣಭೂಮಿಗೆ ಬಂದರು; ಸಮುದ್ರದ ಅಲೆಗಳ ಭೋರ್ಗರೆತದಂತೆ ನಾನ ರಣವಾದ್ಯಗಳ ದನಿಯೊಡನೆ ಕಪಿಧ್ವಜರು ನಡೆತಂದರು. ಹಲವು ಬಗೆಯ ವಾಹನಗಳನ್ನೇರಿ ಅಲಂಘ್ಯವಿಕ್ರಮರಾದ ವಿದ್ಯಾಧರ ವೀರರು ಸಂಗ್ರಾಮಲೋಲುಪರಾಗಿ ಐತಂದರು. ಹಸ್ತಪ್ರಹಸ್ತರೊಡನೆ ತಳ್ತಿರಿಯಲು ನಳನೀಲರು ವಿಲಯಾಗ್ನಿಗಳಂತೆ ಮುಂಭಾಗದಲ್ಲಿ ಬಂದರು. ಇಂದ್ರಜಿತ್ತುವಿಗೆ ಭಂಗವನ್ನುಂಟು ಮಾಡಬೇಕೆಂಬ ಆತುರದಿಂದ ಅಂಗದಕುಮಾರನು ಕಡುಕೈದು ಬಂದ. ಸುಷೇಣ ಜಾಂಬವರು ಅಮಿತ ಚತುರಂಗಸೇನಾಸಮನ್ವಿತರಾಗಿ ಮಾರುತಮಾರ್ಗದಲ್ಲಿ ಬಂದು ಸೇರಿದರು. ಈ ಬಗೆಯಲ್ಲಿ ತಮ್ಮ ತಮ್ಮ ವಿಜಯಧ್ವಜಗಳನ್ನು ಆಗಸದಲ್ಲಿ ಹಾರಾಡಿಸಿ ಪ್ರಮುಖ ವೀರರುಗಳೆಲ್ಲ ರಣರಸಿಕರಾಗಿ ನಡೆತಂದರು. ಪ್ರಭಾಮಂಡಲ ಮಹೇಂದ್ರ ಚಂದ್ರಾಭ ಮಹಾಬಲ ಸರ್ವಪ್ರಿಯ ಶರಭ ಪ್ರೀತಿಂಕರ ದೃಢರಥ ಕುಮುದಾವರ್ತ ಸೂರ್ಯಜ್ಯೋತಿ ವಿಮಲಸಾಗರ ರತಿವರ್ಧನ ವಿಜಯಾಶ್ರಯ ಮುಂತಾದ ಹೆಸರಿನ ನಾಯಕರು ಉತ್ಸಾಹದಿಂದ ರಣರಂಗದೆಡೆಗೆ ನಡೆತಂದರು.

ಒಬ್ಬೊಬ್ಬ ವೀರನನ್ನು ಹಿಂಬಾಲಿಸಿದ್ದ ಚತುರಂಗಬಲವೂ ಎಣಿಕೆಗೆ ಮೀರಿದುದಾಗಿತ್ತು; ಅವರೆಲ್ಲರ ರಣವಾದ್ಯಗಳ ಸದ್ದು ದಿಕ್ಕರಿಗಳ ಕಿವಿಗಳನ್ನು ತುಂಬಿತ್ತು. ವಿದ್ಯಾಧರ ಸೇನೆಯೆಲ್ಲ ಅನುವರಬುವಿಯಲ್ಲಿ ನೆರೆದು ನಳ

ನೀಲರು ಹೇಳಿದಂತೆ ಶತ್ರುಬಲಕ್ಕೆದುರಾಗಿ ನಿಂತರು. ಅಪ್ರತಿಮ ಪ್ರತಾಪನಿಧಿಯಾದ ವಿಭೀಷಣನು ಉದ್ಗತ ಮುದ್ಗರವನ್ನು ಕೈಯಲ್ಲಿ ಹಿಡಿದು ತನ್ನ ರತ್ನಪ್ರಭ ವಿಮಾನವನ್ನೇರಿ ನಭಮಾರ್ಗದಲ್ಲಿ ಬಂದ. ಅವನೊಡನೆ ಬಂದ ಅಕ್ಷೌಹಿಣಿ ಸೈನ್ಯದಿಂದಾಗಿ ಆಗಸದಲ್ಲಿ ಜಾಗವೇ ಇರದಂತಾಯಿತು. ಬಲದೇವ ವಾಸುದೇವರನ್ನು ನಿರೀಕ್ಷಿಸಿ ದಶಗ್ರೀವನು, ಅವರೆದುದು ತನ್ನ ಪೊಡರ್ಪುದೋರುವೆನೆಂಬ ಸಂಭ್ರಮದಿಂದ ಆಗಸಮಾರ್ಗವನ್ನು ಮೂವಳವಾಗಿ ಸುತ್ತುವರಿದ. ತನ್ನ ಆಭರಣಗಳ ಕಾಂತಿಯಿಂದ ಆವೃತನಾದ ಪ್ರಭಾಮಂಡಲನು ಕಡಲ ಮಧ್ಯೆ ನಿಂತ ವರುಣನಂತೆ ಕಾಣಿಸಿದ. ದಶಕಂಠನನ್ನು ಇರಿಯಲು ನಾನೇ ಸಾಕು ಎಂಬ ಯುದ್ಧಾಕಾಂಕ್ಷೆಯಿಂದ ಸುಗ್ರೀವನು ತನ್ನ ರತ್ನಮಯ ವಿಮಾನವೇರಿ ಬಂದ. ಅವನೊಡನೆ ವಿರೋಧಿಬಲಕ್ಕೆ ಬಿರುಗಾಳಿಯೆನಿಸಿದ ಯುದ್ಧಾವರ್ತ, ರಣಕ್ರೀಡೆಯ ಯಮನೆನಿಸಿದ್ದ ವಸಂತ, ಶತ್ರುಬಲವೆಂಬ ಕುಮುದವನಕ್ಕೆ ಆನೆಯಂತಿದ್ದ ಕುಮುದ, ಅರಿಕುಲ ಕಾಳೋರಗನೆನಿಸಿದ ಉರಗ ಮೊದಲಾದ ಹಲವು ಮಂದಿ ನಾಯಕರು ನಾನಾ ಬಗೆಯ ಆಯುಧಗಳನ್ನು ಹಿಡಿದು ರಣಸಿದ್ಧರಾದರು. ಇವರೆಲ್ಲರ ನಡುವೆ ಕಲ್ಪಾಮರರಂತೆ ಮಣಿಮಯವಿಮಾನದಲ್ಲಿ ರಾಮಲಕ್ಷ್ಮಣರಿದ್ದರು; ಖೇಚರ ಕಾಮಿನಿಯರು ಅವರಿಗೆ ಚಾಮರವಿಕ್ಕುತ್ತಿದ್ದರು, ಮಣಿಮಯ ಘಂಟನಾದ ಮಧುರದನಿಗೈಯ್ಯುತ್ತಿತ್ತು.

ಹೀಗೆ ಎರಡೂ ಕಡೆಯ ಬಲಗಳು ನೆಲ–ಆಗಸಗಳೆರಡನ್ನೂ ಪೂರ್ತಿ ಆವರಿಸಿಬಿಟ್ಟವು. ಇಕ್ಕೆಲಗಳಲ್ಲೂ ತಮಗೆ ಸರಿಯೆನಿಸಿದ ವ್ಯೂಹ ಪ್ರತಿವ್ಯೂಹಗಳು ಯಥಾವಿಧಿಯಿಂದ ರಚಿತವಾದವು. ತಮ್ಮ ಕಡೆಯ ನಾಯಕ ಬಿರುದುಗಳನ್ನು ಉಗ್ಗಡಿಸುತ್ತ ಬೀರವದ್ದಳೆ ಕಹಳೆ ಹರೆಗಳ ಶಬ್ದ ಮಾಡಿ ಎಲ್ಲರ ಕಿವಿಗಳನ್ನು ತುಂಬಿದರು; ನಾಯಕರ ಹೊಳೆಯುವ ಕುರುಹಿನ ಬಾವುಟಗಳನ್ನು ಮೇಲೆತ್ತಿ ಹಿಡಿದರು; ತಮ್ಮೆದುರಾದ ಶತ್ರುಗಳ ಧ್ವಜಗಳನ್ನು ಕಂಡು ಕುಪಿತಗೊಂಡು ಕದನಕುತೂಹಲವನ್ನು ತಳೆದರು. ಇತ್ತ, ಕಡೆಗಾಲದ ನಂಜಿನ ಬಿರುಗಾಳಿ ಬೀಸುವಂತೆ ನಳ ನೀಲರು ಹಸ್ತಪ್ರಹಸ್ತರೊಡನೆ ಸೇರಿ ಕೈಬೀಸಿದರು. ಭೂಮಿ ಗುಡುಗಿತೋ, ಸೂರ್ಯನ ರಥವು ಬುವಿಯ ಮೇಲೆ ಬಿದ್ದಿತೋ, ಭೂಮಿಯನ್ನು ಹೊತ್ತ ಆದಿಶೇಷನ ಕಂಠದ ಗಟ್ಟಿ ಮೂಳೆಯು ಮುರಿದ ಸದ್ದಾಯಿತೋ,

ಕುಲಪರ್ವತವು ಸೀಳಿಹೋಯಿತೋ, ಸಾಗರವು ಮೇರೆವರಿಯಿತೋ, ಇಲ್ಲಿದಿದ್ದರೆ ಇಂತಹ ಶಬ್ದವಾಗಲು ಸಾಧ್ಯವಿಲ್ಲ ಎಂಬಂತೆ ಇಕ್ಕೆಲದಲ್ಲಿಯೂ ಸಮರಾನಕಸ್ವನವು ಭೋರ್ಗರೆಯಿತು. ಆನೆ ಆನೆಗಳೊಡನೆ, ಕುದುರೆಕುದುರೆಗಳೊಡನೆ, ರಥರಥಗಳೊಡನೆ, ಆಳುಗಳು ಆಳುಗಳೊಡನೆ ಕಲಹಕ್ಕೆ ಮೊದಲುಗೈಯಲು ಆಕಾಶವು ಭೂಮಿಯೊಡನೆ ಯುದ್ಧಕ್ಕೆ ತೊಡಗಿದಂತೆ ತೋರಿತು. ಭೂಮಿ ಕಂಪಿಸುವಂತೆ ಎರಡೂ ಕಡೆಯ ಪೆರ್ವಡೆಗಳು ತಾಗಲು, ಕಹಳೆಗಳ ಸದ್ದೂ, ಬಿಲ್ಲಿನ ಠೇಂಕಾರದ ಸದ್ದೂ, ಆನೆಗಳ ದಂತಗಳ ತಿಕ್ಕಾಟವೂ, ಯೋಧರ ಬಾಣಗಳ ಘೋರಧ್ವನಿಯೂ, ಕತ್ತಿಗಳ ಟಣತ್ಕಾರವೂ ದಿಗಂತತದವರೆಗೂ ಹಬ್ಬಿ ಪ್ರಳಯಕಾಲದ ಸಮುದ್ರಘೋಷದಂತೆ ಕೇಳಿಸಿತು. ಕತ್ತಿಗಳು ಸಂಘರ್ಷಿಸಲು ಕಿಡಿಗಳು ಹೊಮ್ಮಿದವು, ಆನೆಗಳ ಗುದ್ದಾಟದಲ್ಲಿ ದಂತಗಳು ಮುರಿದು ಬಿದ್ದವು, ತೇರುಗಳು ಪರಸ್ಪರ ಘಟ್ಟಿಸಲು ಕುದುರೆಗಳೂ ಧ್ವಜಗಳೂ ನೆಲಕ್ಕುರುಳಿದವು, ಕೊಂತಗಳ ನಡುವಣ ಇರಿದಾಟದ ನಡುವೆ ತೋರವೆಣಗಳು ನೆಲಕ್ಕುರುಳಿದವು.

ಉಭಯ ಬಣಗಳಲ್ಲಿನ ಬಿಲ್ಲಣಿಗಳು ಒಬ್ಬರೊಬ್ಬರ ಮೇಲೆ ಬಾಣಗಳ ರಾಶಿಯನ್ನು ಕರೆದಾಗ ರಣಗತ್ತಲೆಯು ಆವರಿಸಿ, ಬಾಣಗಳು ಆಗಸದಲ್ಲಿ ಘರ್ಷಿಸಿ ಕಿಡಿಗಳ ಮಳೆಯನ್ನು ಕರೆದವು. ಬಾಣಾಂಧಕಾರದೊಡನೆ ಸುರಿದ ರಕ್ತದಿಂದ ಕೆಂಪಾದ ನಭವು ಮುಳುಗುವ ಸೂರ್ಯನ ಕಿರಣಗಳಂತೆ ಕಂಡು ಸಮರಭೂಮಿಯಲ್ಲಿ ಸೇನೆಯಂಬ ಕಾಳರಾತ್ರಿ ಆವರಿಸಿತು. ಗಗನ ಎಡೆಗೆಟ್ಟಿತು, ಗಾಳಿಯು ನಡೆಗೆಟ್ಟಿತು, ಬಿಲ್ಲ ಪಡೆಗಳು ಬಿಡುವ ಬಾಣಗಳು ಮರ್ಮಗಳಿಗೆ ತಾಕಿ ಯಮಕಿಂಕರರಂತೆ ಸುಭಟರ ಪ್ರಾಣಗಳನ್ನು ಮೇಲೆ ನಡೆಸಿದವು. ಸೂರ್ಯಕಿರಣಗಳು ಕಣ್ಮರೆಯಾದವು, ಕತ್ತಲೆ ದಟ್ಟವಾಯಿತು, ಹೊನ್ನ ಗರಿಗಳಿಂದಾಗಿ ಆಗಸವು ಕಪಿಲವರ್ಣಕ್ಕೆ ತಿರುಗಿತು, ಇಬ್ಬಲದ ಬಿಲ್ಲ ಪಡೆ ಗಾಳಿಯ ವೇಗದಲ್ಲಿ ಬಿಟ್ಟ ಬಾಣಗಳು ಕಾಡನ್ನು ಹೊಗುವ ಹಕ್ಕಿಗಳಂತೆ ಆವರಿಸಿದವು. ಉಭಯಬಲಗಳ ಅಸ್ತ್ರವಿದ್ಯೆಯಿಂದಾಗಿ ಗಾಳಿ ನಡೆಗೆಟ್ಟಿತು, ಗಗನಸ್ಥಳವು ಹೂತುಹೋಯಿತು. ದಿಕ್ಕುಗಳು ತುಂಬಿಕೊಂಡವು, ನಡುಹಗಲೇ ಮಧ್ಯರಾತ್ರಿಯಂತೆ ಕತ್ತಲಿಸಿತು; ಇದನ್ನು ಕಂಡು ಯುದ್ಧವನ್ನು ನೋಡಲು ನೆರೆದಿದ್ದ ದೇವತೆಗಳು ಬೆರಗಾದರು. ಬಾಣಶ್ರೇಣಿಯು ದೆಸೆಯನ್ನು ನುಂಗಿ, ದಿನೇಶನನ್ನು ನೊಣೆದು,

ದಿಗಂತಗಳನ್ನು ಹೀರಿಬಿಟ್ಟಿತು; ಸೇನೆಗಳಲ್ಲಿ ನೆತ್ತರನ್ನು ಸುರಿಸಿ, ಕರುಳು ಹೊರಬರುವಂತೆ ಮಾಡಿ, ಕಣ್ಣಾಲಿಗಳು ಸೂಸುವಂತಾಗಿ, ಕೈಗಳನ್ನು ಕತ್ತರಿಸಿ, ಕಾಲುಗಳನ್ನು ಖಂಡತುಂಡಗಳನ್ನಾಗಿಸಿತು. ಕಡುವಿಲ್ಲರು ಬಾಣಗಳನ್ನು ತುಡುವ, ಬಿಡುವ, ನಡುವ ಕಾರ್ಯಗಳಾವುವೂ ಕಾಣಿಸದಿದ್ದರೂ ರಣರಂಗದಲ್ಲಿ ರಕ್ತದ ಹೊನಲುಗಳು ರಭಸದಿಂದ ಹರಿದವು. ಸುಭಟನೊಬ್ಬ ತನ್ನ ಹಣೆಯಲ್ಲಿ ನೆಟ್ಟ ಬಾಣವನ್ನು ಕಿತ್ತಾಗ ಗಾಯದೆಡೆಯಿಂದ ನೆತ್ತರು ಉಕ್ಕಿಬರಲು ಹಣೆಗಣ್ಣಿನ ಉರಿಯಂತೆ ಕಾಣಿಸಿತು; ಆ ಭಟನು ಮರುಳುಗಳ ನಡುವೆಯಿದ್ದ ಮೃಡನಂತೆ ಗೋಚರಿಸಿದ.

ಯಮನ ಎದೆಯನ್ನೇ ಬಿಚ್ಚುಂತೆ ಉಭಯಬಲದ ಧನುರ್ಧರ ಸೈನ್ಯಗಳು ಕಾದಾಡಿದವು. ಯಮನ ಕೋಣಗಳು ಸೆಣಸಾಡುವಂತೆ ಕಡಿತಲೆಕಾರರು ತಾಗಿದರು. ಕಡಿತಲೆಕಾರರು ನಾನಾ ಬಗೆಯ ಹೊಡೆತಗಳಿಂದ ಯುದ್ಧಗೈಯಲು ಅನೇಕರ ಮೈಗಳು ಕಡಿಖಂಡವಾದವು, ಮುಂಡಗಳು ಕುಣಿದಾಡಿದವು, ಕೈಗಳು ಕತ್ತರಿಸಿ ಬಿದ್ದವು, ತೊಡೆಗಳ ಮಾಂಸ ಹೊರಬಂದಿತು. ಹೊಟ್ಟೆ ಬಿರಿದವು, ರಣರಂಗ ಕಣೆಕಾಲುಗಳ ಗಣಿಯಾಯಿತು. ಮೇಗಾಲುಗಳ ದೊಣೆಯಾಯಿತು, ಹಸಿಯ ತಲೆಗಳು ದೆಸೆದೆಸೆಯಲ್ಲಿ ಬಿದ್ದವು. ಕಣ್ಣುಗಳು ಸೂಸಾಡಿದವು, ಮೂಳೆಗಳು ಮುರಿದವು, ಕರಳುಗಳು ಹೊರಚೆಲ್ಲಿದವು. ಮರಳುಗಳು ಸಂತಸದಿಂದ ಕುಣಿದಾಡಿದವು. ಸಿಡಿಲ ಬಳಗದಂತೆ ಇಕ್ಕೆಲದ ಬಲಗಳೂ ಸೆಣಸಾಡಿದವು.

ಸವಾರರು ಸೆರಗುಬೆರಗನ್ನು ಬಗೆಯದೆ ತಮ್ಮ ಆಶ್ರಯದಾತನ ಜೋಳವಾಳಿ ನಿಲ್ಲುವಂತೆ ತಮ್ಮ ಕುದುರೆಗಳನ್ನು ದೌಡಾಯಿಸಿದರು; ಎರಡೂ ಕಡೆಯ ಹಯಗಳು ಒಂದೇ ನೇರದಲ್ಲಿ ಹರಿದಾಡಿದವು. ಗೊರಸುಗಳ ಲೋಹದ ಲಾಳಗಳು ಪ್ರವಾಹದಂತೆ ಹರಿದವು. ಕಟ್ಟಿಕೊಂಡ ಐಬಣ್ಣದ ಪಟ್ಟೆಯ ಕುಚ್ಚುಗಳಲ್ಲಿ ಕಾಮನಬಿಲ್ಲನ್ನು ಮೂಡಿಸಿ, ತೊಟ್ಟ ಕವಚದ ಕಾಂತಿಯಲ್ಲಿ ಚಾಂಚಲ್ಯವನ್ನು ಹುಟ್ಟಿಸಿ ಆ ಸವಾರರು ಒಡ್ಡಿ ಬರಲು ರೌದ್ರರಸವು ಮೇರೆದಪ್ಪಿ ಹರಿಯಿತು. ಲೋಹದ ರಕ್ಷಾಕವಚಗಳು, ಶಿರಸ್ತ್ರಾಣಗಳು ಹಾಗೂ ಕತ್ತಿ–ಒರೆಗಳ ಹೊಳಪು ದಿಗಂತರಾಳವನ್ನು ಹೊಗುವಂತೆ ವಾಯುವೇಗದಲ್ಲಿ ಹರಿಯುವ ಎರಡೂ ಬದಿಯ ಕುದುರೆಗಳು ನೋಡುವವರ ಕಂಗಳಿಗೆ ಬಿಸಿಲಕುದುರೆಗಳಂತೆ

ಕೋರೈಸಿದವು. ಸವಾರರು ಯುದ್ಧಗೈಯುತ್ತಿರಲು ಕರ್ಕಡೆಗಳು ಯಮನ ಸರ್ಪಗಳಂತೆ, ಚಕ್ರಗಳು ಲಯಕಾಲಚಕ್ರಗಳಂತೆ, ನಾಳಿ ಬಾಣಗಳು ಜವನಾಳಿಯಂತೆ, ತೋಮರಗಳು ಯಮನ ಡಾಮರಗಳಂತೆ ತೋರಿದವು. ಕುದುರೆ ಸವಾರರು ಕಡಿಖಂಡ ಮಾಡಿದ ತಲೆಗಳು ಆಗಸವನ್ನು ತುಂಬಿ ರವಮಂಡಲವನ್ನು, ಆವರಿಸಲು ಬಿಸಿಲ ಝಳ ತಗ್ಗಿ ಗ್ರಹಣಸಮಯದಂತಾಯಿತು. ಕತ್ತಿಗಳ ಚೂರುಗಳು ಉಲ್ಕೆಗಳಂತೆ ಹಾರಿದವು; ಚಿಲ್ಲನೆ ಚೆಲ್ಲಿದ ರಕ್ತವು ದಿಗಂತಗಳನ್ನೂ ಕೆಂಪುಮಾಡಿದವು; ಆಕಾಶವನ್ನು ಅವಸಾನಕಾಲದ ಸಂಜೆ ಆವರಿಸಿದಂತೆ ಕಾಣಿಸಿತು; ಮೇಲಿನಿಂದ ಬೀಳುವ ಮಿದುಳುಗಳು ಭೂಮಿಗೆ ಬೀಳುವ ನಕ್ಷತ್ರಗಣದಂತೆ ತೋರಿತು. ಮೂಳೆ ಮುರಿದು ಬಿದ್ದ ಆನೆಗಳೇ ದೋಣಿಗಳಾಗಲು, ಹೆಣಗಳ ಕೈಗಳೇ ಹುಟ್ಟುಗಳಾಗಲು, ಅಲೆಗಳು ಮುಗಿಲುದ್ದ ಏರಿ ಹರಿಯುವ ನೆತ್ತರ ತೊರೆಯನ್ನು ಮರುಳುಗಳು ಹಾಯುತ್ತಿದ್ದವು. ಚಕ್ರಚೀತ್ಕಾರವು ಭೂಚಕ್ರವು ತನ್ನ ಭಾರದಿಂದಲೇ ನರಳಿದಂತೆಯೂ, ಬಿಲ್ಲುಗಳ ಟಂಕಾರವು ಪ್ರಳಯಕಾಲದ ಗುಡುಗಿನಂತೆಯೂ, ಕುದುರೆಗಳ ಕೆನೆತವು ಅಟ್ಟಹಾಸದಂತೆಯೂ ಕೇಳಿಸುತ್ತಿತ್ತು. ಹೀಗೆ ತುರಂಗ ಸಂಗರವು ಭಯಂಕರವಾಯಿತು.

ರಥಿಕರು ರಥಿಕರೊಡನೆಯೂ, ಸಾರಥೀಗಳು ಸಾರಥಿಗಳೊಡನೆಯೂ, ಆಗಸದಲ್ಲಿ ಧ್ವಜಗಳು ಧ್ವಜಗಳೊಡನೆಯೂ, ರಥಗಳು ರಥಗಳೊಡನೆಯೂ ತಾಗಿದವು. ಅಪಾರ ಪ್ರಮಾಣದ ಬಾಣಪ್ರಯೋಗದಿಂದಾಗಿ ರಥಗಳ ಅಚ್ಚುಗಳು ಸಿಡಿದವು, ಮೂಕಿಗಳು ಮುರಿದವು, ಕಡಾಣಿಗಳು ಕಳಚಿಬಿದ್ದವು, ಪಾರಿಗಳು ಕಡಿದುಹೋದವು, ನೊಗಗಳು ಓರೆಯಾದವು, ಕುದುರೆಗಳು ಓಡಿದವು, ಬಾವುಟಗಳು ಕಿತ್ತುಬಿದ್ದವು, ರಥಿಕರು ಸತ್ತರು, ಸಾರಥಿ ಸತ್ತರೂ ಕಲವು ರಥಿಕರು ಗಾಬರಿಗೊಳ್ಳದೆ ತಾವೇ ರಥವನ್ನು ಚೋದಿಸಿಕೊಂಡು ಕಾದಿದರು. ಮಹಾರಥರು ಅದಟರ ಮೇಲೆ ಬಿಟ್ಟಾಗ ಯಮನಾಳುಗಳನ್ನು ಕರೆತರುವ ಬಾಣಗಳು ಶತ್ರುಗಳ ರೋಮರೋಮಗಳಲ್ಲಿ ನಾಟಿ ವಿಧಿಲಿಪಿಯನ್ನೇ ಒರೆಸಿಬಿಟ್ಟವು. ತೇರಿನ ಒಡ್ಡು ಗಾಳಿಗಿದಿರಾದ ಮೋಡದ ಒಡ್ಡಿನಂತಾದಾಗ, ಯೋಧರು ಕೂರಂಕುಶದಿಂದ ಚುಚ್ಚಿ ಆನೆಗಳನ್ನು ರಣದಲ್ಲಿ ನೂಕಿದರು.

ಮಾವತಿಗರು ಅಂಕುಶದಿಂದ ಚುಚ್ಚಿದಾಗ ಆನೆಗಳು ಗಾಳಿಗೆ ಗರಿ ಮೂಡಿದಂತೆ ಓಡಿ ಕಾರ್ಮುಗಿಲ ದಂಡಿನಂತೆ ಆವೇಶದಿಂದ ಕಾದಿದವು, ತಮ್ಮ ಕೋಡುಗಳಿಂದ ತಲೆಗಳನ್ನು ಸೀಳಿ ಮಿದುಳನ್ನು ಹೊರತೆಗೆದವು. ಧ್ವಜಗಳು ಮತ್ತು ಪರಿಘಗಳ ಪ್ರತಿಘಾತದಿಂದ ಧರಾತಳವೇ ನಡುಗಲು, ಮೋಡಗಳೆಲ್ಲ ಚದುರಲು, ಕೋಪ–ವೇಗಗಳಿಂದ ತಮ್ಮ ಮದಜಲವನ್ನು ಸುರಿಸುತ್ತ ಎರಡೂ ಕಡೆಯ ಆನೆಗಳು ಸಿಡಿಲು ಸಿಡಿಲಿನೊಂದಿಗೆ ತಾಗಿ ಕಿಡಿಗಳುದುರುವಂತೆ, ದಂತಗಳು ಮುರಿದು ಬೀಳುವಂತೆ ತಾಗಿದವು. ಮದಜಲವು ಬಲ್ಸರಿಗಳನ್ನೂ, ದಂತಗಳ ಕಾಂತಿಯು ಬಳ್ಳಿಮಿಂಚುಗಳನ್ನೂ, ದೃಷ್ಟಿ ಸಿಡಿಲನ್ನು ನಾಚಿಸುವಂತೆ, ಮುಗಿಲ ರಾಶಿಗಳು ಪರಸ್ಪರ ಗುದ್ದಾಡುವಂತೆ ತಾಗಿದವು. ಅವುಗಳ ಘೀಳು ಗುಡುಗಿನಂತೆ ಕೇಳಿಸಿತು. ಮದವನ್ಮಾತಂಗ ಕುಂಭಗಳಿಂದ ರಣಭೂಮಿಯಲ್ಲಿ ಮುತ್ತಿನ ಮಣಿಗಳು ಇಟ್ಟಾಡಿದವು. ಕರಿಘಟೆಗಳ ಜೊತೆಯಲ್ಲಿ ಅಂಗರಕ್ಷಕ ಪಡೆ ಯಮನ ಕೋಣಗಳಂತೆ ಹೊಡೆದಾಡಲು ಕಡಿಖಂಡವಾಗಿ ಬಿದ್ದ ಹೆಣಗಳ ರಾಶಿಯಿಂದ ರಣಾಂಗಣದಲ್ಲಿ ಜವನುಂಡು ಕಾರಿಕೊಂಡ ಹಾಗೆ ಕಾಣುತ್ತಿತ್ತು. ಕಾಲ್ಗಾಪಿನವರ ಬಲ್ಗೈಯ್ತುದಿಂದ ನೆತ್ತರ ತೊರೆಗಳು ಗಳಗಳನೆ ಹರಿದವು, ಕರುಳುಗಳ ಹಿಣಿಲುಗಳು ತೆಪ್ಪಗಳಾಗಲು ಕೆಲವರು ತೇಲಾಡಿದರು. ಆನೆಗಳ ಹೋರಾಟದಿಂದ ಅಮರರೂ ಅಪ್ಸರರೂ ಅಳುಕುವಂತಾಯಿತು. ತಮ್ಮೊಡನೆ ಬಲುಹಿನಿಂದ ಕಾದಿ ಸತ್ತ ಸುಭಟರನ್ನು ಆನೆಗಳು ತಮ್ಮ ಸೊಂಡಿಲಿನಿಂದ ಹಿಡಿದೆತ್ತಿ, ಸುರಪ್ರಮದೆಯರಿಗೆ ದುರ್ಲಭರಾದ ವಲ್ಲಭರನ್ನು ಪ್ರೀತಿಯ ಕಾಣಿಕೆಯಾಗಿ ನೀಡುವಂತೆ ಮಾರ್ಬಲಕ್ಕೆದುರಾಗಿ ಓಡಿದವು.

ಆನೆ ಕುದುರೆ ಸವಾರರು ರಥಿಕರು ಹಾಗೂ ಕಾಲಾಳುಗಳ ಹೆಣಗಳೊಡನೆ ಭೂತಗಣಗಳು ರೌದ್ರಕರಕವಾಗಿ ನೆರದಾಡಿದವು. ದಾನವ ಸೇನೆಯು ಹೀಗೆ ಕಾದಿ ಖಚರ ಚಾತುರ್ದಂತವನ್ನು ಅಂತಕನ ಪುರಿಗಟ್ಟಿತು. ಹಸ್ತಪ್ರಹಸ್ತರು ತಮ್ಮ ದೋರ್ವಲವನ್ನು ಎರಡೂ ಕಡೆಯ ಭಟರಿಂದ ಹೊಗಳಿಸಿದರು. ತಮ್ಮ ಪಡೆ ನಾಶಗೊಳ್ಳಲು ವಾನರ ಸೇನೆಯು ಓಡಿ ನಳನೀಲರ ಮೊರೆಹೊಕ್ಕಿತು. ಇಳೆಯು ನಡುಗುವಂತೆ ಹಸ್ತನು ಕೆರಳಿದ ಯಮನಂತೆ ತನ್ನ ರಥವನ್ನು ನಳನ ಕಡೆ ಓಡಿಸಿದ. ನಳನನ್ನು ಕಂಡು ಅವನ ಕೋಪ ಉಲ್ಬಣಿಸಿತು. ಬಿಲ್ಲಿನ ಟೇಂಕಾರವೆಂಬ

ಗುಡುಗಿನೊಡನೆ ಹಸ್ತನು ಹಸ್ತದ ಮಳೆಯಂತೆ ನಳನ ಮೇಲೆ ಬಾಣದ ಮಳೆಗರೆದ. ಇದರಿಂದ ನಳನು ಬಡಬಾಗ್ನಿಯಂತೆ ಕಿನಿಸಿ ಚಂದ್ರಶರವನ್ನು ತೆಗೆದು ತೊಟ್ಟು ತಲೆಯನ್ನು ಕಡಿಯಲು ಹಸ್ತನು ಅಸ್ತಮಿಸಿದ. ಅತಿಕುಪಿತನಾದ ಪ್ರಹಸ್ತನು ತನ್ನ ರಥವನ್ನು ನಳನ ರಥಕ್ಕಿದಿರಾಗಿ ತಂದು ನಿಲ್ಲಿಸಿಕೊಂಡ. ಆಗ ನೀಲನು ನೀಲಮೇಘದಂತೆ ಗರ್ಜಿಸುತ್ತ ನಳನ ನೆರವಿಗೆ ಧಾವಿಸಿ ತನ್ನ ಕೈಚಳಕದಿಂದ ಪ್ರಹಸ್ತನ ನೆಚ್ಚಿನ ಕೈದುವನ್ನು ಕಡಿಖಂಡಮಾಡಿದ. ಮರುಚಣದಲ್ಲಿಯೇ ತನ್ನ ಬತ್ತಳಿಕೆಯಿಂದ ಮೊನೆಯಂಬನ್ನು ತೆಗೆದು ಬಿಲ್ಲಿಗೆ ಹೂಡಿ ಪ್ರಹಸ್ತನ ಎದೆಗೆ ಸರಿಯಾಗಿ ಗುರಿಯಿಟ್ಟ. ಅದು ಕಾಳನಾಗದಂತೆ ಎದೆಯನ್ನು ಹೊಕ್ಕು ಬೆನ್ನಲ್ಲಿ ಹೊರಬಂತು! ಹೀಗೆ ಅವನೂ ಹತನಾದ. ಅಷ್ಟು ಹೊತ್ತಿಗೆ, ಈ ದಿನವಾದರೂ ನಳನೀಲರ ಕೈಯಿಂದ ದಶಾನನನ ಸೇನೆಯನ್ನು ಪಾರುಮಾಡಬೇಕೆಂಬ ರೀತಿಯಲ್ಲಿ ರಾಜೀವಸಖನು ಪಶ್ಚಿಮಸಮುದ್ರದಲ್ಲಿ ಮರೆಯಾದ. ಎರಡೂ ಕಡೆಗಳಲ್ಲಿ ಅಪಹಾರ್ಯತೂರ್ಯ ಧ್ವನಿಯಾಯಿತು.

ಉಭಯ ಬಲಗಳ ಸೈನಿಕರು ಸಮರಪರಿಶ್ರಮವನ್ನು ಆರಿಸಿಕೊಳ್ಳಲು ತಮ್ಮ ತಮ್ಮ ಬೀಡುಗಳಿಗೆ ಹೋದರು. ಎಲ್ಲೆಡೆಯೂ ಶತ್ರುಸೇನೆಯು ಅಲ್ಲಾಡುವಂತೆ ಮಾಡಿದ ನಳನೀಲರ ಶೌರ್ಯ, ಹಸ್ತಪ್ರಹಸ್ತರ ವೀರಮರಣ ಇವುಗಳನ್ನು ಕುರಿತ ಹೊಗಳಿಕೆಯ ಮಾತೇ ಮಾತು. ಈ ಮಧ್ಯೆ ಗಾಯಗೊಂಡವರಿಗೆ ಮದ್ದು ಹಾಕುವುದು, ಮರುದಿನದ ಕದನಕ್ಕೆ ಸಿದ್ಧತೆ, ತೊಡಬೇಕಾದ ಕವಚಗಳ ಆಯ್ಕೆ, ಆನೆಕುದುರೆಗಳಿಗೆ ತೊಡಿಸಬೇಕಾದ ತನುತ್ರಗಳ ಜೋಡಣೆ ಮುಂತಾದ ಕೆಲಸಗಳು. ಇವುಗಳಲ್ಲಿಯೇ ರಾತ್ರಿ ಕಳೆಯಿತು. ಕದನರಸಾಸ್ವಾದನ ಲೋಭದಿಂದ ಎರಡೂ ಕಡೆಯ ವೀರರು ಕಾತುರರಾಗಿರುವುದರಿಂದ ತಾನಿನ್ನು ತಡಮಾಡುವುದು ಸಲ್ಲದೆಂದು ದಿನಪನುದಯಿಸಿದ. ನಿಶಾಚರರ ಆಟವನ್ನು ಮುಗಿಸಲೆಂದು ಉಷೆಯು ಕತ್ತಲೆಯ ತೆರೆಯನ್ನು ಸರಿಸಲು ರವಿಯು ಕಾಣಿಸಿಕೊಂಡು ಬೆಳಕನ್ನು ಹರಡಿದ. ಸಿದ್ಧರಾಗಿದ್ದ ಚತುರಂಗಬಲಗಳು ರಣರಂಗಕ್ಕೆ ಧಾವಿಸಿದವು.

ಸರಿ, ಸ್ವಲ್ಪ ಹೊತ್ತಿನಲ್ಲಿಯೇ ಯಮನಿಗೆ ಹುಗ್ಗಿಯನ್ನು ಬೇಯಿಸಿದಂತೆ ರಣಮಂಡಲದಲ್ಲಿ ಅಸಂಖ್ಯಾತ ದೇಹಗಳು ಬಿದ್ದವು. ಮಾರೀಚ ಸಿಂಹಕಟಿ

ಚಾರಣ ಶುಕ ಮಕರ ವಿಘ್ನ ಶರಪಂಜರ ಗಂಭೀರ ವಜ್ರ ಮದನಾಂಕುಶ ಮೊದಲಾದ ರಾವಣನ ಹನ್ನೆರಡು ಮಂದಿ ಸಾಮಂತರು ಒಂದೆಡೆ, ಸಂತಾಪ ಪ್ರಥಿತ ನಂದನ ಉದ್ಧತ ಮಹೋದದಧಿ ಉದ್ದಾಮಕೀರ್ತಿ ವಿಘಟ ಉದ್ದಾಮ ಗಜ ದುರಿತಾಸ್ತ್ರ ಮುಂತಾದ ಪ್ರಭಾಮಂಡಲನ ಹನ್ನೆರಡು ಜನ ಸಾಮಂತರು ಗರಿಸನ್ನೆ ಮಾಡಿ ಕಾದಲು ತೊಡಗಿದರು. ಮಾರ್ಬಲವು ಸಂತಾಪದಿಂದ ತಲ್ಲಣಿಸುವಂತೆ ಕಲ್ಪಾಂತಕೃತಾಂತನಾದ ಮಾರೀಚನು ಸಂತಾಪನನ್ನು ಕೊಂದುಹಾಕಿದ. ರಾವಣನ ಸೇನೆಯಲ್ಲಿ ಜಯಭೇರಿ ಮೊಳಗಿತು. ರಾಮನ ದಳದಲ್ಲಿ ಭಯವಾವರಿಸಿತು. ಕೊಂಚ ಹೊತ್ತಿನಲ್ಲಿಯೇ ಮಕರನು ತನ್ನ ಚಾಪವನ್ನು ಮೀಟಿ ಟಂಕಾರಮಾಡಿ ಬಡಬಾಗ್ನಿಯಂತಹ ತನ್ನ ಬಾಣಾವಳಿಯಿಂದ ಮಹೋದಧಿಯ ಜೀವವನ್ನು ಪೂರ್ತಿ ಹೀರಿಬಿಟ್ಟ. ಉದ್ದಾಮನ ರಕ್ತಸಿಕ್ತ ತಲೆಯು ಆಗಸದಲ್ಲಿ ಹಾರುವಂತೆ ಗಂಭೀರನು ಬಾಣ ಪ್ರಯೋಗಿಸಿದ. ಅವನ ಕಡೆಯ ಹರೆಗಳು ಜೋರಾಗಿ ಸದ್ದುಮಾಡಿದವು. ಶತ್ರುಮದಕರಿಸಿಂಹನಾದ ಸಿಂಹಕಟಿಯು ದಶಾಸ್ಯನ ಸಿಂಹಾಸನವನ್ನು ಸ್ಥಿರಪಡಿಸುವಂತೆ ಅಜೇಯನೆನಿಸಿದ ಬಾಹುಬಲನನ್ನು ಸಂಹರಿಸಿದ.

ಈ ಪರಿಯಲ್ಲಿ ತಮ್ಮ ಕಡೆಯ ನಾಲ್ವರು ಮಹಾಸಾಮಂತರು ಅಂತಕನ ಜಠರಾಗ್ನಿಗೆ ಆಹುತಿಯಾಗಲು, ಈ ಕಡೆಯ ಉಳಿದ ಸಾಮಂತರು ತುಪ್ಪವನ್ನು ಕುಡಿದ ಅಗ್ನಿಯಂತೆ ಅತಿಕುಪಿತರಾಗಿ ರಾವಣನ ಕಡೆಯ ವರೂಥಿನಿಯನ್ನು ಆಹ್ವಾನಿಸಿ ಲಯಸಮಯಭೈರವನಂತೆ ಭೀಕರಾಕಾರರಾಗಿ ಕಾದಲು ಮೊದಲು ಮಾಡಿದರು. ಇಕ್ಕಡೆಯ ರಥಗಳ ಅಚ್ಚುಗಳು ಒಂದರೊಡನೊಂದು ತಾಕಿ ನೆಲ ನಡುಗಲು, ಅವುಗಳ ತುದಿಯಲ್ಲಿನ ಧ್ವಜಗಳು ಅದಕ್ಕೆ ತಕ್ಕಂತೆ ಮೇಲೆ ಅಭಿನಯಮಾಡಿದವು. ಆವೇಶದಿಂದ ಕೋದಂಡವನ್ನು ಟಂಕಾರ ಮಾಡಿ ದಶಮುಖನ ಸಾಮಂತನಾದ ವಿಘ್ನನು ಬಲವಾಗಿ ಬಾಣ ಬಿಡಲು ಉದ್ದಾಮನು ತನ್ನ ತೋಮರದಿಂದ ಅವನ ಮರ್ಮಸ್ಥಾನಕ್ಕೆ ಹೊಡೆದ; ಇಂದ್ರನ ವಜ್ರಹತಿಯಿಂದ ಕೆಡೆವ ಕುಲಪರ್ವತದಂತೆ ಅವನು ಧರೆಗುರುಳಿದ. ಈ ಸಲ, ಕಪಿಬಲದಲ್ಲಿ ಜಯನಿನಾದ ಮೊಳಗಿತು. ಅಂತೆಯೇ ವಜ್ರನ ಬಾಹುಗಳನ್ನು ತನ್ನ ಕುಠಾರಾಯುಧದಿಂದ ತುಂಡರಿಸಿದ; ಉನ್ಮಾದವಾರಣವು ಅಜಗರವನ್ನು ತುಳಿಯುವಂತೆ ಚಾರಣನನ್ನು

ಕೊಂದಿಕ್ಕಿದ. ದೆಸೆವಲಿ ಕೊಡುವಂತೆ ಆ ರಣರಂಗದಲ್ಲಿ ಎಲ್ಲೆಲ್ಲೂ ತುಂಡು ದೇಹಗಳು ಚೆಲ್ಲವರಿದವು. ಶುಕನನ್ನು ದುರಿತಾಸ್ತ್ರನು ಕಾಳ್ಗಿಚ್ಚಿನಂತೆ ಅಂತಕನ ಹೋಮಕುಂಡಕ್ಕೆ ನೂಕಿದ; ಯಮನ ಕೋಣದ ಕೊಂಬುಗಳಿಗೆ ಆಣಸುಗಳನ್ನು ತೊಡಿಸುವ ಹಾಗೆ ನಂದನನು ಶರಪಂಜರನನ್ನು ತನ್ನ ಕತ್ತಿಯಿಂದ ಕತ್ತರಿಸಿ ಎಸೆದ; ಸಿಂಹವು ತನ್ನ ಉಗುರುಗಳಿಂದ ಆನೆಯನ್ನು ಸೀಳುವಂತೆ ಮದನಾಂಕುಶನು ಗಜನನ್ನು ಕೊಚ್ಚಿಹಾಕಿದ. ಇದನ್ನೆಲ್ಲ ಕಂಡ ರಾವಣನು ಕಾಲಾಗ್ನಿಯಂತೆ ಉರಿದ. ಹೀಗೆ ದನುಜ ಹಾಗೂ ಪ್ರಭಾಮಂಡಲನ ಕಡೆಯ ಬಲಗಳು ಭಯಂಕರವಾಗಿ ಹೋರಾಡಿದವು. ಮುಖ್ಯ ನಾಯಕರುಗಳು ಒಬ್ಬರನ್ನೊಬ್ಬರು ಇರಿದಾಡುವುದನ್ನು ಕಂಡು ಕೃಪಾಳುವಾದ ಚಂಡಮರೀಚಿಯು ಯುದ್ಧವನ್ನು ಕೊನೆಗೊಳಿಸುವನೆಂಬ ಬಗೆಯಿಂದ ಪಶ್ಚಿಮ ಪಯೋನಿಧಿಯಲ್ಲಿ ನಿಧಾನವಾಗಿ ಇಳಿದ. ಅಪಹಾರ್ಯತೂರ್ಯಗಳು ಮೊಳಗಿ ಸೈನಿಕರು ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು.

ಮಾರನೆಯ ಬೆಳಿಗ್ಗೆ ತನ್ನ ಕುಲಜನ ವಿಜಯವನ್ನು ಕಂಡು ಕಣ್ಣುಗಳನ್ನು ತಣಿಸಿಕೊಳ್ಳುವ ಉತ್ಕಂಠತೆಯಿಂದ ಬೆಟ್ಟದ ಮೇಲೇರಿದಂತೆ ಸೂರ್ಯನು ಉದಯಿಸಿದ. ಉಭಯ ವಾಹಿನಿಗಳು ಪೂರ್ವಕ್ರಮದಲ್ಲಿ ರಣಭೂಮಿಯಲ್ಲಿ ಎದುರಿಸಿ ನಿಂತುವು. ದಾಸನನನ ಸೇನಾಪತಿಗಲಾದ ಕುಂಭ ನಿಕುಂಭ ಶಂಭು ಸ್ವಯಂಭೂ ಚಂಡ ಪ್ರಚಂಡ ಕುಂಡಲ ಹಲಾಹಲ ಪುಷ್ಪಚೂಲ ಧೂಮ ರಾಕ್ಷಸ ಸಂಧ್ಯಾಕ್ಷ ಬಿಂದುಮಾಲಿ ಬೀಮಭೀಷಣ ಧವಳಕೀರ್ತಿ ವಿಕ್ರಮ ವಿದ್ಯುಜ್ಜಿಹ್ವ ಸೌಮ್ಯಾನನ ಮುಂತಾದ ಪ್ರಮುಖರು ರಾಮನ ಸೈನ್ಯದೆದುರು ನಿಂತರು. ಮನುವಂಶಲಲಾಮನಾದ ರಾಮನ ಮುಂದೆ ತಮ್ಮ ಶೌರ್ಯವನ್ನು ತೋರಿಸುವ ಪುಣ್ಯ ತಮಗೆ ದೊರಕಿತೆಂದು ಸಂತಸದಿಂದ ಕೆಲವು ಖೇಚವಲ್ಲಭರು ರಣಾನುರಾಗದಿಂದಿದ್ದರು. ಉದಾತ್ತ ರಾಘವನೊಡನೆ ಮಿತ್ರಭಾವದಿಂದ ಕೂಡಿದ ಚಂದ್ರಾಭ ಚಂದ್ರಮಾಲಿ ರತಿವರ್ಧನ ಮೇಘವಾಹನ ಭೀಮರವ ಕುಮುದಾವರ್ತ ಸುಷೇಣ ಜಯಮಿತ್ರ ಮಾನಾರ್ಹ ಮಹೇಂದ್ರ ಮೇಘಪರ್ವತ ಸರ್ವಪ್ರಿಯ ತರಂಗ ತರಲ ಚಪಲಾವೇಗ ವಿದ್ಯುತ್ಕರ್ಣ ಜಯ ವಿಜಯರೆಂಬ ವಿದ್ಯಾಧರರು ತಮತಮಗೆ ಸಮಬಲರೆನಿಸಿದ ವಿದ್ಯಾಧರಪ್ರತಿನಾಯಕರೊಡನೆ ವೀರಾವೇಶದಿಂದ ಹೋರಾಟದಲ್ಲಿ ತೊಡಗಿದರು. ಉಡಿವ ರಥಗಳು,

ಮಡಿಯುವ ಕುದುರೆಗಳು, ದೇಹ ತುಂಡಾಗಿ ಬೀಳುವ ಎರಡೂ ಕಡೆಯ ಕಾಲಾಳುಗಳು, ಉರುಳುವ ಆನೆಗಳು, ಕತ್ತರಿಸಲು ಕುಣಿಯುವ ಅಟ್ಟೆಗಳಿಗಾಗಿ ಕೂಗಾಡುತ್ತ ಸಂಭ್ರಮಿಸುವ ಮರುಳುಗಳು, ಹರಿಯುವ ರಕ್ತಪ್ರವಾಹ, ಆಗಸದಲ್ಲಿ ಧಿಂಕಿಡುವ ಶಿರಗಳು – ಇವುಗಳಿಂದ ಕೂಡಿ ಸಂಗರಾಂಗಣವು ಅತಿ ಭಯಂಕರವಾಯಿತು. ಹಲವಾರು ದಿನಗಳ ಕಾಲ ಹೀಗೆ ಕಾದಾಡಿ ತಮ್ಮ ಮನೋಬಲ ಭುಜಬಲ ವಿದ್ಯಾಬಲಗಳನ್ನು ಮೆರೆದ ಅನೇಕ ಪರಾಕ್ರಮಿಗಳು ಮಣ್ಣುಪಾಲಾದರು.

ಒಂದು ದಿನ ಕಾಳ್ಗಿಚ್ಚಿನಂತೆ ಹೆದರಿ ಓಡುವ ಮೃಗಗಳಂತೆ ಸುಗ್ರೀವನ ಪಡೆಯು ದಶಗ್ರೀವನ ಪಡೆಗೆ ಬೆಂಗುಡುವಂತಾಯಿತು. ಆಗ ಸುಗ್ರೀವನು ತನ್ನ ರಥವನ್ನೇರಿ ವಿಪಕ್ಷವನ್ನು ಧೂಳಿಪಟಮಾಡಲೆಂದು ಸೇನೆಯ ಮುಂದೆ ಬಂದ. ಮಾರುತಿಯೂ ಯಮನಂತೆ ತನ್ನ ಆನೆ ಹೂಡಿದ ರಥವನ್ನೇರಿ ನಡೆದ. ಮಾರಿಯ ಮೂರಿಯಂತೆ ಬಂದವನೇ ಹನುಮನು ಕುಂಭಕರ್ಣನ ಮಕ್ಕಳಾದ ಮಾಲಿ ಜಂಬುಮಾಲಿಗಳ ಮೇಲೆ ಬಿದ್ದ. ಅವನ ದಿವ್ಯಾಸ್ತ್ರಗಳನ್ನು ಎದುರಿಸಲಾಗದೆ ದ್ವಿಷತ್ಸೇನೆಯ ಪೇರಾಳುಗಳೂ ಆನೆಕುದುರೆಗಳೂ ರಥಗಳೂ ಬಿದ್ದವು. ಪವಮಾನನಂದನನು ಚರಮದೇಹಿಯಾದ್ದರಿಂದ ಅವನ ನದೇಹಕ್ಕೆ ಕೈದುಗಳು ನಾಟವು; ವಿದ್ಯಾಪರಮೇಶ್ವರನಾದ ಅವನಿದಿರಲ್ಲಿ ಹೋರಾಡುವುದು ಯಾರಿಗೂ ಅಸಾಧ್ಯ. ಹೀಗಾಗಿ ಅವನು ಮಾಲಿ ಜಂಬುಮಾಲಿಗಳ ಮಹಾಸಾಮಂತಸಂದೋಹವನ್ನು ಕೊಂದ. ಯಮನ ಎದೆ ತೆರೆಯಿತೆಂಬಂತೆ, ದಾನವಸೇನೆಗೆ ಪ್ರಲಯಸಮಯ ಸನ್ನಿಹಿತವಾದಂತೆ ಅವನು ಶತ್ರುಗಳನ್ನು ತರಿದುಹಾಕಿದ. ಇದನ್ನು ಕಂಡ ಮಾಲಿಯು ವಿಲಯಸಮಯಜ್ವಾಲೆಯಂತೆ ಉರಿಯುತ್ತ ತನ್ನ ರಥವನ್ನು ಮಾರುತಿಯ ರಥಕ್ಕೆದುರಾಗಿ ನಿಲ್ಲಿಸಿದ. ಬಿಸಿಲ ಪ್ರಖರತೆ ಕಡಿಮೆಯಾಗುವಂತೆ, ಕತ್ತಲೆಯಾವರಿಸುವಂತೆ, ಮಾರುತಿಯ ತೇರಿನ ಆನೆಯ ಮಸ್ತಕದಿಂದ ಹೊಸಮುತ್ತುಗಳಂತೆ ಬಿಸುನೆತ್ತರುಗಿವಂತೆ ಮಾರುತಿಯ ರಥ ಮಿಸುಕಾಡದಂತೆ ಅಂಬಿನ ಮಳೆಯನ್ನು ಕರೆದ. ತನಗೆ ಸ್ಯಂದನಬಂಧನವನ್ನು ಮಾಡುವ ಅವನ ಮೇಲೆ ಆಂಜನೇಯನ ಕೋಪ ಮೇರೆ ಮೀರಿ ತಾನೂ ಬಾಣಬಿಟ್ಟು ಅದನ್ನೆಲ್ಲ ಖಂಡಿಸಿ ಮತ್ತೊಂದರಿಂದ ಅವನ ತಲೆಯನ್ನೂ ಕತ್ತರಿಸಿಹಾಕಿದ. ತನ್ನ ಅಣ್ಣನ ಸಾವು

ಜಂಬುಮಾಲಿಯಲ್ಲಿ ಅಸಾಧ್ಯ ದುಗುಡಕೋಪಗಳನ್ನುಂಟುಮಾಡಿತು; ಆನೆಯ ಮೇಲೆ ಸಿಂಹ ಏರಿಹೋಗುವಂತೆ ತನ್ನ ಗದೆಯನ್ನು ಹಿಡಿದು ಮುನ್ನುಗ್ಗಿದಾಗ ಮರುನ್ನಂದನನು ಅವನನ್ನೂ ಕತ್ತಯಿಂದ ಇರಿದು ಧರೆಗುರುಳಿಸಿದ.

ಆ ಬಳಿಕ ಅಂಜನಾಸುತನು ಮುಂದೆ ಬರಲು ಬೆಳ್ಗೊಡೆ ಚಾಮರ ಪಾಳಿಧ್ವಜ ಶಂಖ ಕಹಳೆ ಮುಂಥಾದ ರಾಜಚಿಹ್ನೆಗಳಿಂದ ಕೂಡಿದ ಚತರಂಗಬಲಪರಿವೃತನಾಗಿದ್ದ ದಶಮುಖನು ಕಾಣಿಸಿಕೊಂಡ. ತನಗೆ ಸಮನಾದ ವೀರ ಈಗ ದೊರೆತನೆಂದು ವಲೀಮುಖಧ್ವಜನು ಅವನತ್ತ ತನ್ನ ತೇರನ್ನು ಮುನ್ನಡೆಸಿದ. ಅವನ ರಭಸದಿಂದ ರಕ್ಕಸವಡೆ ತಲ್ಲಣಿಸಿತು. ಇದರಿಂದ ಕುಪಿತನಾದ ದಶಮುಖನು ಕಡುಮುಳಿದು ಅವನೊಡನೆ ಕಾದಲು ಬಗೆದಾಗ, ಮಯನ ಮಕ್ಕಳಾದ ಮಹೋದರ ವಜ್ರೋದರರು ಅಡ್ಡ ಬಂದು, ಮಹೋದರನು ಅಂಗದನೊಡನೆಯೂ, ವಜ್ರೋದರನು ಆಂಜನೇಯನೊಡನೆಯೂ ಕಾದಲು ತೊಡಗಿದರು. ನಿಡುಗಾಲ ಅವರಲ್ಲಿ ಕಾದಾಟವಾಯಿತು; ಸಾಮಾನ್ಯಾಸ್ತ್ರ ಹಾಗೂ ದಿವ್ಯಾಸ್ತ್ರಗಳ ಬಳಕೆಯಾಯಿತು. ಕೊನೆಗೆ ಅಂಗದನ ಕಣೆ ಮಹೋದರನಂಗದ ರಕ್ತ ಹೀರಿ ಅವನನ್ನು ದಿವಿಜಾಂಗನೆಯರ ಬಳಿ ಕಳಿಸಿತು. ಇತ್ತ, ಹನುಮನು ದಿವ್ಯಾಸ್ತ್ರವನ್ನು ಬಿಡಲು ಅದು ವಜ್ರೋದರನ ಎದೆಗೆ ನಾಟಿ ಬೆನ್ನಲ್ಲಿ ಹೊರಬಂದಿತು; ಎರಡೂ ಕಡೆಯಿಂದ ನೆತ್ತರುಗಿದು ಅವನು ಕಣ್ಣುಗಳನ್ನು ಬಿಟ್ಟು, ರಾವಣನ ಭುಜಬಲಶ್ರೀ ಅಲ್ಲಾಡಲು ಕರಿಯ ಬೆಟ್ಟ ಧರೆಗುರುಳುವಂತೆ ಕೆಡೆದು ಜೀವ ಬಿಟ್ಟ. ಆ ಮುಂದೆಯೂ ಕಾಳ್ಗಿಚ್ಚು ಕಾನನವನ್ನೂ, ಬಡಬಾನಲವು ವಾರಿಧಿಯನ್ನೂ ನಾಶಮಾಡುವಂತೆ ಪವನಸುತನು ಅಗಣಿತ ದಾನವಸೈನ್ಯವನ್ನು ತವಿಸಿದ. ಆಣುವನ ಕೂರ್ಗಣೆಗಳಿಂದ ನೆಲವೆಲ್ಲ ಕತ್ತಲೆಯಾವರಿಸಿದಂತೆ ಹೆಣಮಯವಾಯಿತು. ಎರಡೂ ಕೈಗಳಿಂದ ದಿವ್ಯಾಯುಧಗಳನ್ನು ಬಳಸುತ್ತ ಅನಿಲತನೂಜನು ರಣವ್ಯಸನಿಯಾಗಿ ಯುದ್ಧಗೈದು ಪಿಶಾಚಸಂಕುಲಕ್ಕೆ ಔತಣ ಮಾಡಿಸಿದ.

ತನ್ನ ತಮ್ಮಂದಿರನ್ನು ಕೊಂದ ಮಾರುತಿಯ ಮೇಲಿನ ಅತೀವ ಕೋಪದಿಂದ ಕುಂಭಕರ್ಣನು ತ್ರಿಶೂಲವನ್ನು ಹಿಡಿದು ಏರಿಬಂದ. ಇದನ್ನು ಕಂಡ ಚಂಡ ಬಲಿ ಶಶಿಮಂಡಲರೆಂಬ ರಘುವೀರನ ಮಹಾಸಾಮಂತರು ಹನುಮನನ್ನು ಸುತ್ತುವರಿದು ಕಂಭಕರ್ಣನನ್ನು ಎದುರಿಸಿದರು. ಅವನು

ಪ್ರಕ್ಷೋಭಣ ವಿದ್ಯಾಶರವನ್ನು ಪ್ರಯೋಗಿಸಿ ಕಪಿಧ್ವಜಸೈನ್ಯವು ಮೈಮರೆಯುವಂತೆ ಮಾಡಿದ. ಸುಗ್ರೀವನು ನಿದ್ರಾಪ್ರಬೋಧಿನಿ ಎಂಬ ದಿವ್ಯಾಸ್ತ್ರದಿಂದ ಹನುಮ ಮುಂತಾದವರ ನಿದ್ದೆಯನ್ನು ಹೋಗಲಾಡಿಸಿದ. ಆನಂತರ ಅವರೆಲ್ಲ ಸೇರಿ ರಕ್ಕಸವಡೆಯನ್ನು ಹಿಮ್ಮೆಟ್ಟಿಸಲು, ದನುಜೇಂದ್ರನು ಅಮರಾದ್ರಿಯು ಅಲುಗಾಡುವಂತೆ, ಸಮುದ್ರದ ನೀರು ತುಳುಕಾಡುವಂತೆ, ರವಿಮಂಡಲವನ್ನು ಭೂಮಿಗಿಳಿಸುವಂತೆ ಯುದ್ಧಗೈದರು. ಆ ಹೊತ್ತಿಗೆ ಇಂದ್ರಜಿತ್ತು ಬಂದು ಕೈಗಳನ್ನು ಮುಗಿದು "ನಿಮ್ಮ ಹಣೆಯಲ್ಲಿ ಗೆರಗಳೂ ಕಣ್ಣಲ್ಲಿ ಕೆಂಪೂ ಕಾಣಿಸಿಕೊಳ್ಳುವಂತಾಗುವುದೇ ನಮಗೆ ಅವಮಾನ. ಕಪಿಸೈನ್ಯವು ನೀವು ಬರಬೇಕಾದಷ್ಟು ಅಸಾಧ್ಯರೇನಲ್ಲ; ನನಗೆ ಅಪ್ಪಣೆ ಕೊಡಿ, ಅವರ ಬಾಳ್ದಲೆಗಳನ್ನು ತರುತ್ತೇನೆ, ಅದಾಗದಿದ್ದರೆ ಹಸಿತಲೆಗಳನ್ನು ತರುತ್ತೇನೆ" ಎಂದು ತಂದೆಯ ಅಪ್ಪಣೆ ಪಡೆದು ಹೊರಟ.

ಬೆಟ್ಟಗಳೇ ಪರಮಾಣುಗಳು ಎಂಬ ಪ್ರಮಾಣದಲ್ಲಿ ಬ್ರಹ್ಮನು ನಿರ್ಮಿಸಿದ ತ್ರೈಲೋಕ್ಯಕಂಟಲಕವೆಂಬ ತನ್ನ ಭಾರಿ ಆನೆಯನ್ನೇರಿ, ಪ್ರಳಯಕಾಲದ ಬಿರುಗಾಳಿಯಂತೆ ಸುಗ್ರೀವ-ಪ್ರಭಾಮಂಡಲರನ್ನು ಎದುರಿಸಲೆಂದು ಇಂದ್ರಜಿತ್ತು ಬಂದ. "ಕಪಿಗಳಿಗೆ ಚಪಲತೆ ಸಹಜವಾದುದು; ಹಾಗಾಗಿ ದಶಕಂಧರನ ಪಾದಕಮಲಸೇವೆಯನ್ನು ಬಿಟ್ಟು ಹುಲುಮಾನವನಿಗೆ ಸೇವಕರಾದಿರಲ್ಲ! ನಿಮ್ಮ ನಿಮ್ಮ ಆಳವನ್ನು ಅರಿಯದೆ ನನ್ನೊಡನೆ ಪೋಣರ್ಕೆಗೆಂದು ಬಂದಿರಲ್ಲ, ಸಂಹರಿಸುವೆಡೆಯಲ್ಲಿ ನಿಮ್ಮನ್ನು ಕಾಪಾಡಬಲ್ಲವರು ಭೂಮಿಯ ಮೇಲೆ ಇಲ್ಲವಲ್ಲ!" ಎಂದು ಅವರನ್ನು ಕುರಿತು ಹೀಯಾಳಿಸಿದ. ಅದನ್ನು ಕೇಳಿ ಸುಗ್ರೀವನು, "ಕಾಳಗವನ್ನು ಬಿಟ್ಟು ಹೆಂಗಸರ ಜಗಳ ಮಾಡುವೆಯಲ್ಲ; ನಿನಗೆ ಪರಾಕ್ರಮವಿದ್ದರೆ ನಿನ್ನ ಕತ್ತಿಯನ್ನು ಬೀಸಿ ತೋರಿಸು" ಎಂದು ಅವನ ಮೇಲೆ ವಾಗ್ಬಾಣವನ್ನೆಸೆದ. ಈ ಪರಸ್ಪರ ಮೂದಲಿಕೆ ಸ್ವಲ್ಪ ಕಾಲ ನಡೆಯಿತು. ಪ್ರಭಾಮಂಡಲನ ಮೇಲೆ ದಶಮುಖಕುಮಾರನಾದ ಮೇಘವಾಹನನು ಪ್ರಳಯಕಾಲದ ಮೋಡದಂತೆ ಬಾಣಗಳ ಮಳೆಯನ್ನೇ ಸುರಿಸಿದ. ಆದರೆ ಅವಾರ್ಯವೀರ್ಯನಾದ ಜನಕಾತ್ಮಜನು ಅವನು ಬಿಟ್ಟ ಬಾಣಗಳನ್ನೆಲ್ಲ ತುಂಡರಿಸಿದ. ಆಗ ಮೇಘವಾಹನನು ಅಗ್ನಿಬಾಣವನ್ನು ಪ್ರಯೋಗಿಸಲು ಪ್ರಭಾಮಂಡಲನು ವರುಣಶರವನ್ನು ಬಿಟ್ಟು ಅದನ್ನು ನಂದಿಸಿದ. ಅಲ್ಲದೆ ಅವನ ರಥದ ಕುದುರೆ ಸಾರಥಿ ಧ್ವಜಗಳ ಮೇಲೆಲ್ಲ ಅಸ್ತ್ರಪ್ರಯೋಗ ಮಾಡಿ ಅವನ್ನೆಲ್ಲ ನುಚ್ಚುನೂರುಗೊಳಿಸಿದ. ವಿರಥನಾದ ದನುಜಸುತನು

ನಾಗಾಸ್ತ್ರವನ್ನು ಬಿಡಲು, ಅದು ಅಹಿಬಂಧನವನ್ನು ಮಾಡಿ ಪ್ರಭಾಮಂಡಲನನ್ನು ಮೂರ್ಚೆಗೊಳಿಸಿತು. ಈ ಕಡೆ ಇಂದ್ರಜಿತುವು ಸುಗ್ರೀವನನ್ನು ವಿರಥನನ್ನಾಗಿಸಿ ಅವನ ಮೇಲೆ ತಾನೂ ಪನ್ನಗಾಸ್ತ್ರವನ್ನು ಬಿಟ್ಟ. ಆ ಫಣಿಸಾಯಕವು ಸುಗ್ರೀವನನ್ನು ಅಡಿಯಿಂದ ಮುಡಿಯವರೆಗೂ ಆವರಿಸಿ ಅವನನ್ನು ಮೈಮರೆಯುವಂತೆ ಮಾಡಿಬಿಟ್ಟಿತು. ದಾನವಸೈನ್ಯದಲ್ಲಿ ಎಲ್ಲೆಡೆ ಜಯದುಂದುಭಿಗಳು ಮೊಳಗಿದವು.

ಇತ್ತ ಅಧಿಕಬಲರಾದ ಕುಂಭಕರ್ಣ–ಮಾರುತಿಯರು ಮಾಯಾಯುದ್ಧ ಹಾಗೂ ದಿವ್ಯಾಯುಧ ಪ್ರಯೋಗದಲ್ಲಿ ತೊಡಗಿದರು. ಖಚರಕುಲಾಗ್ರಣಿಯನ್ನು ವಿರಥನನ್ನಾಗಿ ಮಾಡಿದ ಅಸುರಕುಲಚೂಡಾಮಣೀಯು ಅಣುವನನ್ನು ಅಣುವಿನಂತೆ ಹಿಡಿದ. ಹೀಗೆ ನಾಗಪಾಶವಿದ್ಯೆಯಿಂದ ಸುಗ್ರೀವ ಪ್ರಭಾಮಂಡಲ ಹನುಮಂತ ಮುಂತಾದ ಮುಖ್ಯನಾಯಕರನ್ನು ಕಟ್ಟಿಹಾಕಲು, ಈ ವಿಷಯವನ್ನು ವಿಭೀಷಣನು ರಾಮಲಕ್ಷ್ಮಣರಿಗೆ ತಿಳಿಸಿ, ತನ್ನ ಸೈನ್ಯದೊಡನೆ ಕಾದಾಡುತ್ತಿರಬೇಕೆಂದೂ ತಾನು ಬಂಧಿತರನ್ನು ಕರೆತರುವುದಾಗಿಯೂ ಹೇಳಿ ಹೊರಟ. ಸಂಗರದಲ್ಲಿ ದೋರ್ಭಂಗವನ್ನು ಮಾಡುವೆನೆಂದು ಅಂಗಾರವನ್ನುಗುಳುವ ಸಿಡಿಲಿನಂತೆ ಅಂಗದನೂ ಕುಂಭಕರ್ಣನ ಮೇಲೆ ಏರಿ ಹೋದ. ಸಾಧಾರಣಾಸ್ತ್ರ ದಿವ್ಯಾಸ್ತ್ರಗಳ ಪ್ರಯೋಗವಾಯಿತು; ಕೊನೆಗೆ, ಶರಭವನ್ನು ಹಿಡಿದ ಸಿಂಹವನ್ನು ಭೇರುಂಡವು ಸೆಳೆದುಕೊಳ್ಳುವಂತೆ ಅಂಗದನು ನಿಶಾಚರನ ಕರದಿಂದ ಹನುಮಂತನನ್ನು ಸೆಳೆದುಕೊಂಡ. ಆ ಕ್ಷಣವೇ ಅವನು ಆಗಸಕ್ಕೆ ನೆಗೆದು ಮಾರುತಿಯೊಡನೆ ರಘುಜನಲ್ಲಿಗೆ ಬಂದ.

ಈ ಕಡೆ, ವಿಭೀಷಣನು ಇಂದಗಿ–ಮೇಘವಾಹನರೊಡನೆ ಕಾಳಗಕ್ಕೆ ತೊಡಗಿದ. ಆದರೆ ಅವರು ತಮ್ಮ ಚಿಕ್ಕಪ್ಪನೊಡನೆ ಕಾದಲು ಇಷ್ಟಪಡದೆ, ಅವನ ಮುಂದೆ ಸೋಲಾದರೂ ತಮಗೆ ಕುಂದಲ್ಲವೆಂದು ಬಗೆದು ಹೊರಟು ಹೋದರು. ಇದರಿಂದ ನಾಗಶರಾವೃತರಾದ ಸುಗ್ರೀವಪ್ರಭಾಮಂಡಲರನ್ನು ಏನು ಮಾಡಬೇಕೆಂದು ತೋಚದೆ ವಿಭೀಷಣನು ಗಲಿಬಿಲಿಗೊಂಡ. ಇಷ್ಟು ಹೊತ್ತಿಗೆ ರಘುಕುಲ ಪಕ್ಷಕ್ಕೆ ಸೋಲಾಗುವುದನ್ನು ಕಾಣಲು ಇಷ್ಟಪಡದವನಂತೆ ಸೂರ್ಯನು ಅಪರವಾರಿಧಿಯನ್ನು ಹೊಕ್ಕ. ದಶಾಸ್ಯನು ಅಪಹಾರತೂರ್ಯವನ್ನು ಘೋಷಿಸಿದ. ಎಲ್ಲರೂ ತಮ್ಮ ತಮ್ಮ ಬೀಡಿಗೆ ಹೋದರು.

ಇತ್ತ ಪನ್ನಗಶರದಿಂದ ಮೂರ್ಛೆಗೆ ಸಂದ ಸುಗ್ರೀವ ಪ್ರಭಾಮಂಡಲರನ್ನು ಪಾರುಗಾಣಿಸುವ ಪರಿ ಯಾವುದೆಂದು ಲಕ್ಷ್ಮಣನು ಮುಕುಳಿತಾಂಜಲಿಯಾಗಿ ಬೆಸಗೊಳ್ಳಲು, ಹಿಂದೆ ವರವಿತ್ತ ದಿವಿಜನನ್ನು ನೆನೆದರೆ ಕ್ಷಣಮಾತ್ರದಲ್ಲಿ ಅವರ ಪ್ರಜ್ಞೆ ಮರುಳುವುದೆಂದು ರಾಮನು ಸಲಹೆಯಿತ್ತ. ಲಕ್ಷ್ಮಣನು ಹಾಗೆಯೇ ಮಾಡಲು ಮಹಾಲೋಚನನೆಂಬ ನಿಲಿಂಪನಿಗೆ ಆಸನಕಂಪನವಾಯಿತು. ತನ್ನನ್ನು ನೆನೆಸಿಕೊಳ್ಳುತ್ತಿರುವವನು ರಘುವೀರನೆಂಬುದು ಅವನಿಗೆ ಅವಧಿಜ್ಞಾನದಿಂದ ತಿಳಿಯಿತು. ಗರುಡಾಧಿಪನಾದ ಆ ದೇವತೆಯು ಬಹುವಿದ್ಯೆಗಳನ್ನು ಪಡೆದ ಸಿಂಹವಾಹಿನಿ–ಗರುಡವಾಹಿನಿಗಳನ್ನೂ ದಿವ್ಯಾಸ್ತ್ರಗಳನ್ನೂ ಕೊಡುವಂತೆ ತನ್ನ ಅನುಚರನಾದ ಚಿಂತಾವೇಗನಿಗೆ ಅಪ್ಪಣೆಮಾಡಿದ. ಅವನು ಬಂದು ಸಿಂಹವಾಹಿನಿಯನ್ನು ಶ್ರೀರಾಮನಿಗೂ ಗರುಡಾವಾಹಿನಿಯನ್ನು ಲಕ್ಷ್ಮೀಧರನಿಗೂ ಸದ್ಭಾವದಿಂದ ತಲುಪಿಸಿದ. ಅವನನ್ನು ಉಚಿತ ಮರ್ಯಾದೆಗಳಿಂದ ರಾಮಲಕ್ಷ್ಮಣರು ಗೌರವಿಸಿದರು; ಜಿನಪೂಜೆಗೈದು ಹರ್ಷಪುಲುಕಿತರಾದರು. ಅವರನ್ನು ನಿರ್ಭರಭಕ್ತಿಯಿಂದ ಸ್ತುತಿಗೈದು, ವಿನಮ್ರತೆಯಿಂದ ವರ್ಷ ವರುಣ ಅಗ್ನಿ ಮುಂತಾದ ನಾನಾ ಬಗೆಯ ದಿವ್ಯಾಸ್ತ್ರಗಳನ್ನೂ, ಬೆಳ್ಗೊಡೆ ಚಾಮರಗಳನ್ನೂ, ಸಿಂಹಗರುಡ ವಾಹಿನಿಗಳನ್ನೂ, ಕವಚಗಳನ್ನೂ, ಅನೇಕ ಬಗೆಯ ರತ್ನಭೂಷಣಗಳನ್ನೂ ರಾಮಲಕ್ಷ್ಮಣರಿಗಿತ್ತು ಚಿಂತಾವೇಗನು ಮನೋವೇಗದಿಂದ ಮರಳಿದ.

ಇದನ್ನು ಕಂಡು ಹನುಮಂತನೇ ಮುಂತಾದ ವಿದ್ಯಾಧರರಿಗೆಲ್ಲ ತುಂಬ ಅಚ್ಚರಿಯಾಯಿತು. ಆಮೇಲೆ ಗರುಡವಾಹಿನಿಯ ತಮಪ್ರಭೆಯು ಸುತ್ತಲಿನ ಕತ್ತಲೆಯನ್ನು ಹೋಗಲಾಡಿಸಲು, ಅದರಿಂದ ಹೊಮ್ಮೆ ವೇಗವಾಗಿ ಬೀಸಿಬಂದ ಗಾಳಿಯಿಂದಾಗಿ  ನಾಗಪಾಶವಿದ್ಯೆಯು ಸಡಿಲಗೊಂಡಿತು; ಸುಗ್ರೀವ ಪ್ರಭಾಮಂಡಲರು ಮೂರ್ಛೆ ತಿಳಿದೆದ್ದು ಪ್ರಸನ್ನಚಿತ್ತರಾಗಿ ರಾಮಲಕ್ಷ್ಮಣರಲ್ಲಿಗೆ ಬಂದರು. ಈ ಎಲ್ಲಾ ಸಾಧ್ಯವಾದ ಬಗೆಯನ್ನು ನಿರೂಪಿಸಬೇಕೆಂದು ಅವರು ಕೇಳಿಕೊಳ್ಳಲು ಶ್ರೀರಾಮನು ಎಲ್ಲವನ್ನೂ ವಿವರವಾಗಿ ತಿಳಿಸಿದ. ಎಲ್ಲರಿಗೂ ಸಂತಸವಾಯಿತು. ಆ ರಾತ್ರಿಯ ವಿಶ್ರಾಂತಿಗೆಂದು ಎಲ್ಲರೂ ಬೀಡಾರಗಳಿಗೆ ತೆರಳಿದರು.

❑

# ಭಾಗ ೩ – ಮಾನವೀಯತೆ

## ಆಶಯ:

ಮನುಷ್ಯ ನಾಗರೀಕತೆಗೆ ತನ್ನನ್ನು ತೆರೆದುಕೊಂಡಂತೆ ಪರಸ್ಪರ ಸಹಕಾರ ಮಾನವೀಯತೆ, ನ್ಯಾಯ, ನೀತಿ, ಧರ್ಮ ಸಂಸ್ಕೃತಿ, ಸಂಸ್ಕಾರ ಇವುಗಳೆಲ್ಲವನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕ ಸಾಗಿಸುವುದು ಅಗತ್ಯವಾಗಿದೆ. ಭೂಮಿಯ ಮೇಲಿನ ಸಕಲ ಸಂಪತ್ತುಗಳೂ ಸಕಲರಿಗೂ ಸಮಾನವಾಗಿ ತಲುಪದ ಕಾರಣ ಮನುಷ್ಯನೇ ಮಾನವೀಯತೆಯನ್ನು ಮೆರೆಯುವುದು ಅನಿವಾರ್ಯವಾಗಿದೆ. "ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸುವ ಧರ್ಮವನ್ನು" ಎಲ್ಲರೂ ಅನುಸರಿಸುವುದು ಮತ್ತು ಅಳವಡಿಸಿಕೊಳ್ಳುವುದನ್ನು ಪುರಾತನ ಕಾಲದಿಂದ ಎಲ್ಲಾ ಚಿಂತಕರೂ ಸಾರಿದ್ದಾರೆ. ನಾವು ಬದುಕಿ ಇತರ ಜೀವಿಗಳೆಲ್ಲರನ್ನು ಬದುಕಲು ಅನುವು ಮಾಡಿಕೊಡುವುದು ಅದಕ್ಕೆ ಬೇಕಾದ ವ್ಯವಸ್ಥೆಗಳು ಸಕಲರಿಗೂ ದೊರಕುವಂತೆ, ಹಂಚಿಕೆಯಾಗುವಂತೆ ಮಾಡುವುದು, ತಿಳಿದವರು, ಯುವಕರು ಅನುಸರಿಸುವ ಮಾರ್ಗವಾಗಬೇಕಿದೆ. ಬಡವರನ್ನು ಮುದುಕರನ್ನು, ಮಕ್ಕಳನ್ನು ಸಹನೆ, ಅಕ್ಕರೆ ವಾತ್ಸಲ್ಯಗಳಿಂದ ನೋಡುವುದು, ಅವರಿಗೆ ಕಾಲಕ್ಕೆ ಬೇಕಾದ ಅಗತ್ಯ ಅನಿವಾರ್ಯಗಳನ್ನು ಒದಗಿಸುವುದು ಇಡೀ ಮನುಕುಲ ಅಳವಿಡಿಸಿಕೊಳ್ಳುವ ಗುಣ ಎಲ್ಲರಲ್ಲೂ ಕರಗತವಾಗುವುದನ್ನು ಕಲಿಸುವ ಹೊಣೆಗಾರಿಕೆ ಜವಾಬ್ದಾರಿಯುತ ನಾಗರೀಕರದ್ದು, ಪೋಷಕರದ್ದು, ಶಿಕ್ಷಕರದ್ದು ಆಗಿದೆ. ಈ ನಿಟ್ಟಿನಲ್ಲಿ ನಮ್ಮ ಸಾಹಿತಿಗಳು ಕಾಲದಿಂದಲೂ ಇಂತಹ ಕಥೆ, ಕಾದಂಬರಿ, ಕಾವ್ಯ, ಪ್ರಬಂಧ ಇತ್ಯಾದಿ ಸಾಹಿತ್ಯಗಳನ್ನು ನಿರಂತರ ನೀಡುತ್ತಾ ಬಂದಿದ್ದಾರೆ. ಇದು ಓದುಗರ ಮನೋಪರಿವರ್ತನೆಗೆ ಸಹಕಾರಿಯಾಗಬೇಕಾಗಿದೆ. ಇಂತಹ ಸಾಹಿತ್ಯವನ್ನು ಒಳಗೊಂಡ ಭಾಗ ಮಾನವೀಯತೆಯಾಗಿದೆ.

"ದಯವಿಲ್ಲದ ಧರ್ಮಯೇವುದಯ್ಯಾ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ" ಎಂದ ಬಸವಣ್ಣನವರ ಚಿಂತನೆಯ ಹಿಂದೆ ಮಾನವೀಯತೆ "ತನುಕರಗದವರಲ್ಲಿ ಪುಷ್ಪವನೊಲ್ಲಯಯ್ಯಾ ನೀನು ಮನಕರಗದವರಲ್ಲಿ ಗಂಧಾಕ್ಷತೆಯ ನೊಲ್ಲಯಯ್ಯಾ ನೀನು" ಎಂಬ ಅಕ್ಕಮಹಾದೇವಿಯ ಸಾಲುಗಳ ಉದ್ದೇಶ ಕರುಣೆ ಅಂತ:ಕರಣವೇ ಆಗಿದೆ. ಸಿದ್ದಯ್ಯ ಪುರಾಣಿಕರು ಹೇಳುವ "ಏನಾದರೂ ಆಗು ಮೊದಲು ಮಾನವನಾಗು ..........." ಈ ಎಲ್ಲಾ ಸಾಲುಗಳು ಸಾರುತ್ತಿರುವುದು ಕರುಣೆ, ಆನುಕಂಪ, ಮಾನವೀಯತೆ, ಹೃದಯವಂತಿಕೆ, ಸಮಾನ ಮನೋಭಾವವೇ ಆಗಿದೆ. ಅದಿಲ್ಲದಿರೆ ಮನುಷ್ಯನಿಗೂ ಮೃಗಗಳಿಗೂ ವ್ಯತ್ಯಾಸವೇನು ಎಂಬುದನ್ನು ಪ್ರಶ್ನಿಸಿಕೊಳ್ಳಬೇಕಾಗುತ್ತದೆ.

# ೧. ಕಾವ್ಯ
# ಒಡಕು

**– ಗಂಗಾಧರ ಚಿತ್ತಾಲ**

ಜಗಜ್ಜಾಹೀರವಾಗಿ ಸುದ್ದಿ ಬಂದಿತ್ತು
ದಪ್ಪಕ್ಷರದ ಸುದ್ದಿ :
ಯಾವುದೋ ಉಸುಬಿನ ಅರಣ್ಯಕ್ಕೆ
ಅಣುವನ್ನೊಯ್ದು ಜಜ್ಜಿ ಒಡೆದರಂತೆ
ಮೈಲಿದೂರ ಮೈಕದ್ದು ನಿಂತವರು ನೋಡಿದರಂತೆ.

ಮೊದಲು ಜಿಗಿದದ್ದು ಭುಗಿಲೆದ್ದ ಜ್ವಾಲೆಯ ಗೋಲ
ನೂರು ಸೂರ್ಯರ ಜರೆವ ವಿಸ್ಫುಲಿಂಗ
ಆಮೇಲೆ ಆಕಾಶ ಮುತ್ತಿ ಹೆಡೆ ಬಿಚ್ಚಿದ
ಭಯಾಕಾರ ರೇಣು ಭಸ್ಮದ ಅಣಬೆ,
ಆಮೇಲೆ ತೆರೆ ಮೇಲೆ ತೆರೆ ಬಡಿದು
ಸಿಡಿಮಿಡಿದ ನೆಲದದುರು.
ಕೊನೆಗೆ ಒಮ್ಮೆ ಗರ್ಜನೆಯೋ, ಚೀತ್ಕಾರವೋ
ವಿಕಾರ ಕೂಗೋ, ತಿಳಿಯದ ದೇಹ ಜೀವಭೇದಕ ನಾದ.

ಇನ್ನೂ ಏನೇನೋ ಗಳಿಸಿತ್ತು ಸುದ್ದಿ :
ಈ ಯಶಸ್ವಿ ಒಡಕಿನಿಂದ ಹೊರಬಿದ್ದ ಬಲವೆಷ್ಟು,
ಒಳಸುರಿದ ಶ್ರಮವೆಷ್ಟು, ಖರ್ಚೆಷ್ಟು.
ಈ ಮಹತ್ಸಾಧನೆಯ ಮಂತ್ರಬೋಧಕನ್ಯಾರು, ತಂತ್ರ
ಶೋಧಕನ್ಯಾರು, ಏನವರ ವರ್ಚಸ್ಸು.

ಈ ಐತಿಹಾಸಿಕದ ಸಾಧಕದ ಬಾಧಕದ ಒಂದಿಷ್ಟು ತಪಶೀಲು
ಮಾನವನ ನಡೆಯಲ್ಲಿ ಇದು ಎಷ್ಟನೆ ಮೈಲಿಗಲ್ಲು
ಮುಂದಿನ ಕಲ್ಲು.
ಬೀಳುವ ಸರಾಸರಿಯ ತಾರೀಖಿನಂದಾಜು

ಬರುವ ನಾಳೆಗಳಲ್ಲಿ ಏನೆಲ್ಲ ಕಾದಿದೆಯೋ ಅದರ ಜಾತಕ ಗಣಿತ
ಒಡಕಿನ ಪರಂಪರೆಯ ಚಾಚೂ ಬಿಡದ ಗಣಿತ
ಅಂಕಿಸಂಖ್ಯೆಯ ಸಕಲ ವಿವರಸಹಿತ.

ಓದೋದುತಿರುವಾಗ ನನಗೇತಕೋ ನಡುಕ,
ಇದು ಒಳಿತಿಗಲ್ಲ, ನೆಲಗಟ್ಟನೇ ಜಡಿದೊಡೆದು
ಅಡಿಗಲ್ಲಿನೊಳೆಗುಟ್ಟನೊಳಕು ಬೆದಕುವ ಚಾಳಿ
ಕೆದಕಿ ಅರಸುವ ಖಚ್ಚಿ ತುರಿಕೆ ಕಳೆವುದರಲ್ಲಿ
ಕುರುಡುಕೈಗಳು ದುಡುಕಿ–ನಿಯತಿಯುರಕೂ
ಈ ಜ್ವಾಲೆ, ಈ ಭಸ್ಮ, ಈ ಕೂಗು, ಈ ಕಂಪ
ವಿದ್ರೋಹಕುರಿದೆದ್ದ ವಿಲಯರುದ್ರರ ಹೂಲಿ.

# ೨. ಕಥೆ
# ಧರ್ಮ

**– ಬೆಸಗರಹಳ್ಳಿ ರಾಮಣ್ಣ**

"ನಿಮ್ಮ ಹಾಳು ಧರ್ಮಕ್ಕೆ ಬೆಂಕಿ ಹಾಕ್ತು. ನನ್ನ ಹಿಮಗಿರಿ ರಂಗ. ನನ್ನಪ್ಪ ನಮ್ಮ ತಾತ ಅಂತ ಹೇಳ್ಕೊಂಡು, ಈ ಹಾಳು ಹಳ್ಳೀಲಿ ಸೇರ್ಕೊಂಡು ನಮಗೆಲ್ಲ ಒಳ್ಳೆ ವಿದ್ಯಾಭ್ಯಾಸ ಕೊಡಿಸದೆ, ನಾಗರಿಕತೆ ಕಲಿಸದೆ ಹಳ್ಳಿ ಗಂಡುಗಳಾಗಿ ಮಾಡಿದ್ರಿ – ನನಗೆಲ್ಲೋ ಒಂದು ದರಿದ್ರದ ಪ್ರೈಮರಿ ಸ್ಕೂಲ್ ಮೇಷ್ಟ್ರ ಕೆಲಸ ಸಿಗದಿದ್ರೆ ನಿಮ್ಮ ಹಿಮಗಿರಿ ರಂಗ ಬೆಟ್ಟದ ಮಣ್ಣನ್ನೇ ಕಲಿಸ್ಕೊಂಡು ತಿನ್ನಬೇಕಾಗ್ತಿತ್ತು... ನಂದೇನೋ ಒಂದು ದಾರಿ ಆಯ್ತು. ಇನ್ನು ಕೃಷ್ಣನದೋ... ನೀವು ಹಿಡಿದ ಹಾಗೇ ಹಿಮಗಿರಿ ರಂಗನ ಪಾದ ನಂಬಿ ಬದುಕೂ ಅಂತೀರಿ... ಇನ್ನು ಪದ್ಮ ಬೇರೆ. ತಬ್ಬಲಿ ಮೊಮ್ಮಗಳು ಬೆಳೆದು ನಿಂತವ್ಳೆ. ಏನೋ ಅಷ್ಟೋ ಇಷ್ಟೋ ಹತ್ತಾರು ಖಂಡುಗ ಭತ್ತ ಬರೋ ಕೊಡುಗೆ ಭೂಮೀನ ಉಳಿಸ್ಕೋಳಿ. ಇದಕ್ಕಾಗಿ ಒಂದು ಸಣ್ಣ ಸುಳ್ಳ ಭೂನ್ಯಾಯ ಮಂಡಲಿ ಮುಂದೆ ಹೇಳಿ ಅಂದ್ರೆ... ನಿಮ್ಮ ನಿಸೂರು ಮೂರು ಲೋಕಕ್ಕಾಗ್ರದೆ. ಹರಿಶ್ಚಂದ್ರನ ತೊಡೇ ಮೇಲೆ ಹುಟ್ಟಿದೋರಂಗೆ ಆಡ್ತೀರಿ. ಹನ್ನೆರೆಡು ಎಕರೆ ಭೂಮಿ ಆ ಚಾಂಡಾಲ ಚನ್ನೇಗೌಡನ ಪಾಲಾಗೋಗ್ತದೆ... ನಿಮ್ಮ ನ್ಯಾಯ... ನಿಷ್ಠೂರ ನನಗೆ ವಿಷದ ಸಮಾನವಾಗಿದೆ."

ಹಿರಿಯ ಮಗ ರಂಗನಾಥ ಆಡಿದ್ದ ಮಾತುಗಳು ಒಂದೊಂದು ಒಂದು ಹಾವಿನ ಹೆಡೆಯಾಗಿ, ಕೆನ್ನಾಲಗೆಯನ್ನು ತನ್ನ ಬುರುಡೆ ಸುತ್ತ ಆಡಿಸುತ್ತಿರುವ ಅನುಭವವಾಗಿ ಶ್ರೀಕಂಠಭಟ್ಟರು 'ಅಸ್' ಎಂದು ಮಗ್ಗಲು ಬದಲಾಯಿಸಿದರು. ಇಡೀ ರಾತ್ರಿಯೆಲ್ಲ ಹಾಸಿದ್ದ ಮಂದಲಿಗೆ ಈಚಲ ಮುಳ್ಳುಗಳ ಮಂಚದಂತೆ ಮೈಯನ್ನು ಚುಚ್ಚತೊಡಗಿತ್ತು. ಜೊತೆಗೆ ಹೆಂಡತಿ ರತ್ನಮ್ಮ ಆಡಿದ್ದ ಮಾತುಗಳು : "ಅಲ್ಲಾಂದ್ರೆ ಈ ಹಾಳು ಊರಿಗಾಗಿ ನೀವು ಎಷ್ಟೊಂದು ದುಡಿದ್ರಿ. ಮಾನವರಿಗೆ, ಪಶುಗಳಿಗೆ ಅಂತ ಆಸ್ಪತ್ರೆ ತಂದ್ರಿ, ಊರಿಗೇ ಊರೇ ಭಟ್ಟರು ಅಂದ್ರೆ ಪ್ರಾಣ ಬಿಡುತ್ತೆ ಕಣೇ! ನನ್ನ 'ಮರಳು ಹೊಳೆ' ಅಂದ್ರೆ ಏನಂತ ತಿಳ್ಕೊಂಡಿದ್ದೀ! ಚಿನ್ನ! ಚಿನ್ನದಂಥ ಜನ ಇಲ್ಲಿ

ಇರೋರು. ಈ ಹಾಳು ಹಳ್ಳಿ ಮುಕ್ಕಗಳು ಹಾಡೋ ಹಾಡುಗಳನ್ನು ಹಳ್ಳಿ ಹಳ್ಳೀ ಅಲೆದು, ಮುಳ್ಳು ದಾರಿ ತುಳಿದು, ಪಾದಗಳನ್ನು ಸವೆಸಿ, ಹಗಲು–ಇರುಳು ಅಂದೇ ಜೋಗಿ, ಜಂಗಮ, ತಂಬೂರಿ ಮೀಟೋರನ್ನ ಹುಡುಕಿ, ಅವರು ಹೇಳಿದ ಸಾಹಿತ್ಯವನ್ನು ಬರೆದು, ಸಂಸ್ಕರಿಸಿ, ಅಚ್ಚು ಹಾಕಿಸಿ ಅಷ್ಟೋ – ಇಷ್ಟೋ ಇದ್ದ ಹಳೇ ದುಡ್ಡನ್ನೂ ಕಳಕೊಂಡ್ರಿ, ಈ ನಿಮ್ಮ ಪುಸ್ತಕ 'ಹುಟ್ಟಿದ ನೆಲ'ವನ್ನು ಹೆತ್ತ ಭೂಮಿಗೆ ನೀಡಿದ ಕಾಣಿಕೆ, ಪಾಮರರ ಸಾಹಿತ್ಯವನ್ನು ಒಳಗೊಂಡಿರೋ 'ಅಪೂರ್ವ ಗಣಿ' ಎಂದು ಬಲ್ಲವರು ಹೊಗಳಿ ಹಾಡಿದರು. ಶ್ರೀಕಂಠಭಟ್ಟರು ಎಂದರೆ 'ಮರಳು ಹೊಳೆ'ಯ ಮರ್ಯಾದೆ ಅಂತಾರೆ... ಆದ್ರೆ ಇವತ್ತು ಆ ಚನ್ನೇಗೌಡ ಕಾನೂನಿನ ಪ್ರಕಾರ ಭೂನ್ಯಾಯ ಮಂಡಲಿ ಮುಂದೆ ನಾನೇ ಶ್ರೀಕಂಠಭಟ್ಟರ ಹನ್ನೆರಡು ಎಕರೆ ಭೂಮಿಯನ್ನು ಉತ್ತು–ಬಿತ್ತು ವ್ಯವಸಾಯ ಮಾಡ್ತಾ ಇದ್ದೀನಿ; ನನ್ನ ಹೆಸರಲ್ಲೇ ಪಾಣೀಪಟ್ಟಿ ಇದೆ ಅಂತ ಹೇಳಿಕೆ ಮಾಡಿಸಿ ಅರ್ಜಿ ಕೊಟ್ಟಿದ್ದಾನಂತೆ. ಈ ಭೂಮಿ ಕೈ ತಪ್ಪಿತು ಅಂದ್ರೆ ಆ ಕೃಷ್ಣನೇ ಗತಿ. ಪದ್ಮಳ ಪಾಡು – ಈ ಹಾಳು ಇಳಿವಯಸ್ಸಿನಲ್ಲಿ ಇದೆಂಥ ಶಿಕ್ಷೆ? ಸುಮಾರು ಎಪ್ಪತ್ತು ವರ್ಷಗಳಿಂದ ನಾವು ಮಾಡಿದ ನಿಷ್ಠೆಯ ಸೇವೆಗೆ ನಿಮ್ಮ ಹಿಮಗಿರಿ ರಂಗ ನೀಡಿದ್ದು ನೋಡಿದಿರಾ! ಎಷ್ಟೊಂದು ದಿವ್ಯವಾದ ವರಪ್ರಸಾದ?" – ಈವರೆಗೆ ತಮ್ಮ ಬದುಕಿನಲ್ಲಿ ಸುಳಿಯದ 'ಸಂಶಯ'ದ ಮಡುವಿಗೆ ನೂಕಿದ್ದವು.

"ಎಷ್ಟೊಂದು ಆಗಿರಬಹುದು? ಮುಂಜಾನೆಯ ಮಬ್ಬು ಬೆಳಕಿನಲ್ಲಿ ಹಿಮಗಿರಿಯ ಪದದಡಿಯಲ್ಲಿ ಗಂಭೀರವಾಗಿ ಹರಿಯುವ ಹಿಮಗಿರಿ ನದಿಯನ್ನು ನೋಡಲು ಅದೆಷ್ಟು ಚೆಂದ. ಚಿಲಿಪಿಲಿಗುಡುವ ಹಕ್ಕಿಗಳ ಹಿಂಡು, ಪೂರ್ವದಲ್ಲಿ ಕೆಂಪಗೆ ಕ್ಷಣಕ್ಷಣಕ್ಕೂ ತನ್ನ ಮೈಬಣ್ಣವನ್ನು ಬದಲಿಸುತ್ತ ದಿಗಂತದಲ್ಲಿ ಮೇಲೇರುವ ಸೂರ್ಯ, ಗಿರಿಯ ಮೇಲೆ ತನ್ನ ಶಿಖರದ ವೈಭವವನ್ನು ಮೆರೆಸುತ್ತ ಬೆಳಗುವ ಹಿಮಗಿರಿ ರಂಗನ ದೇವಾಲಯ! ಇನ್ನೆಷ್ಟು ದಿನ ಈ ಧರೆಯ ಮೇಲೆ ಈ ಘಟ್ಟ ಇದ್ದೀತು, ಹೋಗಿ, ನದಿಯ ದಡದ ಮೇಲೆ ಪುಟ್ಟ ಮಗುವಿನಂತೆ ನಿಂತು ನಿಸರ್ಗವನ್ನು ಸವಿಯಬೇಕು" ಎಂದುಕೊಂಡು ಭಟ್ಟರು ಎದ್ದು ಕುಳಿತುಕೊಂಡರು. ಬೊಗಸೆಯಲ್ಲಿ ಮುಖ ಉಜ್ಜಿಕೊಂಡು "ಕಾಪಾಡು ರಂಗ" ಎಂದರು.

ಭಟ್ಟರ ಹೆಂಡತಿಗೂ ಇಡೀ ರಾತ್ರಿ ನಿದ್ದೆ ಹತ್ತಿರ ಸುಳಿಯಲಿಲ್ಲ. ತಂದೆ–ಮಗನ ಮಾತಿನ ಘರ್ಷಣೆಯಲ್ಲಿ ತಾವು ಮಧ್ಯೆ ಪ್ರವೇಶಿಸಿ ಆಡಿದ್ದ ಮಾತುಗಳು ಯಜಮಾನರನ್ನು ನೋಯಿಸಿದ್ದುದರಲ್ಲಿ, ಅವರಿಗೆ ಸಂಶಯವಿರಲಿಲ್ಲ. ಎದ್ದು 'ಸ್ವಿಚ್' ಹಾಕಿದ್ರು. ಅಂಗಳದ ತುಂಬ ಬೆಳಕು ಆವರಿಸಿದಾಗ ಅವರು ಕಂಡದ್ದು ಚಿಂತಾಕ್ರಾಂತರಾಗಿ ಕುಳಿತ ಗಂಡನನ್ನು, ಮಾತನಾಡಿಸಲು ಭಯ. ಯಾಕೋ ಏನೋ ಇದ್ದಕ್ಕಿದ್ದಂತೆಯೇ ಕಣ್ಣು ತುಂಬ ನೀರು ತುಂಬಿಕೊಂಡವು. ತಮ್ಮ ಬಲಗಡೆ ನೋಡಿದರು, ತಬ್ಬಲಿ ಪದ್ಮ ನಿಶ್ಚಿಂತೆಯಿಂದ ಮಲಗಿದ್ದಳು. ಯಜಮಾನರು ಮೇಲೆದ್ದ ಸದ್ದಾಯಿತು. ತಿರುಗಿ ನೋಡಿದರು. ಭಟ್ಟರು ಶಾಲು ಹೊದ್ದು, ಅಲ್ಲೇ ಮೂಲೆಯಲ್ಲಿದ್ದ ಹಳೆಯ ಎಕ್ಕಡಗಳನ್ನು ಮೆಟ್ಟಿಕೊಳ್ಳಲು ಕದದ ಮೂಲೆಕಡೆ ಹೆಜ್ಜೆ ಹಾಕಿದರು. ಮೌನ ಮುಳ್ಳಾಗಿ ಇಡೀ ಅಂಗಳವನ್ನು ಆವರಿಸಿ ರತ್ನಮ್ಮನವರನ್ನು ಚುಚ್ಚಿತು; ಇನ್ನು ತಡೆಯಲಾಗಲಿಲ್ಲ.

"ಏನೂಂದ್ರೆ ಇಷ್ಟೊತ್ತಿಗೇ ಈ ಗವ್ ಎನ್ನೋ ಕತ್ತಲೇಲೇ ಎಲ್ಲಿಗೆ ಹೊರಟಿರಿ? ಕೃಷ್ಣನ್ನ ಏಳಿಸಲೇ?"

"ಹಾಂ! ಇಲ್ಲೇ ಹೊಳೇ ಕಡೆಗೆ. ಆಗಲೇ ಕೋಳಿ ಕೂಗುವ ಹೊತ್ತಾಗಲಿಲ್ಲವೆ?"

"ಅಲ್ಲಾ, ನಾನು ಮಲಗೋ ಮುಂಚೆ ಆಡಿದ ಮಾತುಗಳಿಂದ ನಿಮ್ಮ ಮನಸ್ಸಿಗೆ..."

"ನೋವಾಯ್ತು ಅಂತ್ಲೇ? ಇಲ್ಲ... ಆದ್ರೂ ನನ್ನ ಬದುಕಿನಲ್ಲಿ ಸಂಶಯವಂತೂ ಮೂಡಿತು. ನಂಬಿದ್ದನ್ನು ನಿಮ್ಮೆಲ್ಲರ ಮೇಲೂ ಹೇರೋಕೆ ನನಗಿರೋ ಅಧಿಕಾರ ಏನು? ಆ ಹಾಳುಭೂಮಿ ನನ್ನ ಹೆಸರಿನಲ್ಲಿದೆ. ನಾನೇ ಆ ಎ.ಸಿ.ಯೋ, ಡಿ.ಸಿ.ಯೋ ಅವರ ಮುಂದೆ ಹಾಜರಾಗಬೇಕು. ಸತ್ಯವನ್ನಲ್ಲದೆ ಇನ್ನೇನನ್ನೂ ನುಡಿಯೋಲ್ಲ ಅಂತ ದೇವರ ಹೆಸರಲ್ಲಿ ಪ್ರಮಾಣ ಮಾಡಬೇಕು. ಎದುರುಗಡೆ ನನ್ನ ಭೂಮಿ ಉತ್ತು ಬಿತ್ತು ವ್ಯವಸಾಯ ಮಾಡ್ತಾ ಇರೋ ಚನ್ನೇಗೌಡ ನಿಂತಿರ್ತಾನೆ... ಭೂನ್ಯಾಯ ಮಂಡಲಿ ಸದಸ್ಯರು ಕುಳಿತಿರ್ತಾರೆ. ಎಲ್ಲರ ಮನಸ್ಸು, ಕಣ್ಣು ನನ್ನನ್ನೇ ನೋಡ್ತಾ ಇರ್ತಾವೆ. ನನ್ನ ಇಷ್ಟು ವರ್ಷಗಳ ಬದುಕು ನನ್ನ ಬಾಯಿಂದ

ಏನನ್ನು ನುಡಿಸುತ್ತದೆ ಅಂತ ಕುತೂಹಲದಿಂದ ಕುಳ್ಳಿರ್ತಾರೆ. ಸುಳ್ಳು ಹೇಳಿ ಯಾವ ನರಕಕ್ಕೆ ಹೋಗಲಿ... ಮಕ್ಕಳು, ಅವರು, ಇವರು ಆಡೋ ಮಾತುಗಳು ನನಗೆ ಬೇಕಿಲ್ಲ. ಕೈಹಿಡಿದವಳು ನೀನು, ನನ್ನ ಅರ್ಥ, ಕಾಮ, ಮೋಕ್ಷಗಳಲ್ಲಿ ಸಮಭಾಗಿಯಾದವಳು ನೀನು. ನಿನ್ನ ತೀರ್ಮಾನವೇನು? ಹೆಂಡತಿ, ಗಂಡನಿಗೆ ತಾಯಿ, ಮಂತ್ರಿ, ವೇಶ್ಯೆ – ಇಷ್ಟೆಲ್ಲಾ ಅಂತ ಧರ್ಮಶಾಸ್ತ್ರಗಳು ಹೇಳ್ತವೆ! ನಾನೇನು ಮಾಡಬೇಕು ಹೇಳು?"

ರತ್ನಮ್ಮ ಗಂಡನನ್ನೇ ದಿಟ್ಟಿಸಿ ನೋಡಿದರು. ಚಿಂತೆಯ ಗೂಡಿನಂತಿದ್ದ ಕಣ್ಣುಗಳಲ್ಲಿ ಅಪೂರ್ವ ಬೆಳಕೊಂದು ಚಿಮ್ಮುತ್ತಿತ್ತು. ಗಡುಸಾಗಿದ್ದ ಮುಖದಲ್ಲಿ ಯಾವುದೋ ದಿವ್ಯವಾದ, ವರ್ಣಿಸಲಾಗದ ಸಾಹಸ ಗೂಡು ಕಟ್ಟಿದಂತಿತ್ತು. ಗಂಡನನ್ನು ಹೆಮ್ಮೆಯಿಂದ ದಿಟ್ಟಿಸಿ, ದಿಢೀರನೆ ಕುಳಿತು ಪಾದಗಳ ಮೇಲೆ ತಲೆಯಿಟ್ಟು ಕಣ್ಣೀರಿನಿಂದ ತೊಳೆದುಬಿಟ್ಟು. ಕಣ್ಣೀರಿನ ಬಿಸಿ ಪಾದಗಳನ್ನು ತೊಯ್ಯುತ್ತಿರುವುದನ್ನು ತಿಳಿದ ಭಟ್ಟರು ಹೆಂಡತಿಯ ಭುಜಗಳನ್ನು ಹಿಡಿದು ಪ್ರೇಮದಿಂದ, ಗೌರವದಿಂದ ಮೇಲೆಬ್ಬಿಸಿದರು. ಶಾಲಿನ ತುದಿಯಿಂದ ಕಣ್ಣೀರು ಸೀಟಿದರು. ಆದರೂ ಆ ಪ್ರೇಮಮಯಿ ಹೆಣ್ಣಿನ ಕಣ್ಣುಗಳಿಂದ ನೀರು ನಿಲ್ಲಲಿಲ್ಲ "ನನ್ನನ್ನು ಹರಸಿ."

"ನಿನಗೆ ಒಳ್ಳೆಯದಾಗಲಿ..."

"ನನಗೆ ಬೇಕಾದ್ದು ಈ ಆಶೀರ್ವಾದವಲ್ಲ..."

"ಇನ್ನೇನು?"

"ದೀರ್ಘ ಸುಮಂಗಲೀಭವ, ಎಂದು..."

"ಈ ಬೇಡಿಕೇನ ನೀನು ಹಿಮಗಿರಿ ರಂಗನ ಮುಂದಿಡಬೇಕು ರತ್ನ... ನನ್ನ ಆಯಸ್ಸನ್ನು ನಾನೇ ಹೆಚ್ಚಿಸಿಕೊಳ್ಳುವ ಸ್ವಾರ್ಥವನ್ನು ಎಂಬತ್ತು ನಾಲ್ಕು ವರ್ಷಗಳ ಈ ಇಳೀ ವಯಸ್ಸಿನಲ್ಲಿ ನಾನು ಮಾಡಲಾರೆ."

ರತ್ನಮ್ಮ ಬಿಕ್ಕಿದರು.

" ಆ ಹಿಮಗಿರಿ ರಂಗ ನಿನ್ನ ಕಾಪಾಡಲಿ" ಎನ್ನುತ್ತ ತಲೆ ನೇವರಿಸಿ, ಕದದ ತಾಳ ತಗೆದು, ಕತ್ತಲೆಯಲ್ಲಿ ಕರಗಿ ಹೋದರು.

–೨–

ಕೃಷ್ಣಪೇಟೆಯ ತಾಲ್ಲೂಕು ಕಚೇರಿಯಲ್ಲಿ ಒಂದು ವಾರದ ನಂತರ ಭೂನ್ಯಾಯ ಮಂಡಲಿ ಸೇರಿದೆ. ಅಂದು ಸೋಮವಾರ, ಎ.ಸಿ. ಸಾಹೇಬರು, ಹರಿಜನರು. ಈತನೇ ಈಗ ನ್ಯಾಯಾಧೀಶ. ತಾಲ್ಲೂಕಿನ ತುಂಬ ಕುತೂಹಲ ಕೆರಳಿಸಿದ್ದ ಚನ್ನೇಗೌಡ–ಶ್ರೀಕಂಠಭಟ್ಟರ ಭೂ ವಿವಾದದ ಅಂತ್ಯವನ್ನು ನಿರ್ಧರಿಸುವ ಮಹತ್ವದ ದಿನ. ಯಾರೋ ಗುರುತಿನವರು:

"ಏನು ಭಟ್ಟರೇ, ನಿಮ್ಮಂಥಹ ಮೇಧಾವಿಗಳಿಗೆ, ಸತ್ಯನಿಷ್ಠರಿಗೆ, ಓರ್ವ ಹರಿಜನ ಅಧಿಕಾರಿಯ ಮುಂದೆ ಕೈಜೋಡಿಸಿ ನಿಂತು ನ್ಯಾಯ ಬೇಡುವ ಸ್ಥಿತಿ ಬರಬಾರದಿತ್ತು. ಈ ಹಾಳು ಸರ್ಕಾರದ ಕಾನೂನಿಗೆ ಬೆಂಕಿ ಹಾಕ್ತು!" ಎಂದಾಗ ಭಟ್ಟರು "ಅಯ್ಯಾ! ನನ್ನ ಕನ್ನಡದ ಆದಿ ಕವಿ ಪಂಪ ಮಹಾಶಯ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದಿದ್ದಾನೆ. ವಿದ್ಯೆ ಇದ್ದಲ್ಲಿ, ವಿದ್ವತ್ ಇದ್ದಲ್ಲಿ ತಲೆಬಾಗಬೇಕಾದ್ದು ಧರ್ಮ. ಇದರಲ್ಲಿ ತಪ್ಪೇನು?" ಎಂದು ಹೇಳುತ್ತ ಪಂಚಾಯ್ತಿಯ ಕೊಠಡಿ ಪ್ರವೇಶಿಸಿದರು.

ವಿಚಾರಣೆ ಪ್ರಾರಂಭವಾಯಿತು:

"ನಿಮ್ಮ ಹೆಸರೇನು?"

"ಮರಳು ಹೊಳೆ ಶ್ರೀಕಂಠಭಟ್ಟ"

ನಿಮ್ಮ ತಂದೆಯವರ ಹೆಸರು?"

ಮರಳು ಹೊಳೆ ನರಸಿಂಹ ಭಟ್ಟ"

"ಇಲ್ಲಿ ನಿಂತಿರೋರು ನಿಮಗೆ ಗೊತ್ತೇ?"

"ಹೌದು, ಗೊತ್ತು, ನಮ್ಮೂರಿನವರೆ – ಚನ್ನೇಗೌಡರು ಅಂತ"

"ಈಗ ನಾನು ಒಂದೆರೆಡು ಮಹತ್ವದ ಪ್ರಶ್ನೆಗಳನ್ನು ಕೇಳ್ತೀನಿ... ಸತ್ಯ ಹೇಳ್ತೀರ"

"ಕೇಳಿ ಸತ್ಯವಾದದ್ದನ್ನೇ ನುಡೀತಿನಿ."

"ಈ ಚನ್ನೇಗೌಡ ನಿಮ್ಮ ಹನ್ನೆರೆಡು ಎಕರೆ ಭೂಮಿ..." ಎ.ಸಿ. ಸಾಹೇಬರು ಪ್ರಶ್ನೆಯನ್ನು ಕೇಳಿ ಮುಗಿಸುವುದಕ್ಕೆ ಮುಂಚೆಯೇ ಭಟ್ಟರು ಉತ್ತರಿಸಿದರು: "ನನ್ನ ಹೆಸರಿನಲ್ಲಿರೋ ಹನ್ನೆರೆಡು ಎಕರೆ ಭೂಮಿಯನ್ನು ಈತನೇ ವ್ಯವಸಾಯ ಮಾಡ್ತಾ ಇದ್ದಾನೆ..."

ಎಷ್ಟು ವರ್ಷಗಳಿಂದ...?"

"ಅವನ ತಾತ, ಮುತ್ತಾತರ ಕಾಲದಿಂದ..."

"ನೋಡಿ ನಿಮಗೂ ಮಕ್ಕಳಿದ್ದಾರೆ ಯೋಚಿಸಿ ಉತ್ತರಿಸಿ."

"ಅಯ್ಯೋ ಸ್ವಾಮಿ, ನನ್ನ ಹಿಮಗಿರಿ ರಂಗನ ಪಾದದಾಣೆ ಇದು ಸತ್ಯ..."

"ನೀವು ಭೂಮಿ ಕಳೆದುಕೊಳ್ಳುತ್ತೀರಲ್ಲ! ಎಲ್ಲೋ ಸ್ವಲ್ಪ ಪರಿಹಾರ ಹಣ ಬರುತ್ತದೆ. ಯೋಚಿಸಿ."

"ನಿಮ್ಮನ್ನು ಸರಕಾರ ಏನೆಂದು ಇಲ್ಲಿ ನೇಮಿಸಿದೆ?"

"ಭೂನ್ಯಾಯ ಮಂಡಲಿ ಅಧ್ಯಕ್ಷನಾಗಿ."

"ಆದರೆ ನೀವು ನನಗೆ ಸುಳ್ಳು ಹೇಳಲು ಪ್ರೇರೆಪಿಸುವಂತಿದೆಯಲ್ಲ...?"

ಎ.ಸಿ. ಸಾಹೇಬರು ಸುಸ್ತಾದರು.

"ಹಾಗಲ್ಲ... ನಿಮಗೆ ಇಳೀವಯಸ್ಸು... ಅದಕ್ಕೇ ದೃಢೀಕರಿಸಿಕೊಳ್ಳಲು ಕೇಳಿದ ಪ್ರಶ್ನೆಗಳನ್ನೇ ಕೇಳಬೇಕಾಯಿತು. ಬೇಸರ ಮಾಡಿಕೋಬೇಡಿ."

"ನನ್ನ ಭೂಮಿಯನ್ನು ವ್ಯವಸಾಯ ಮಾಡುತ್ತಿರುವವನು ಚನ್ನೇಗೌಡ..."

"ಭೂಮಿ ಚನ್ನೇಗೌಡರಿಗೆ ಸೇರುತ್ತದೆ. ಆತನೇ ಒಡೆಯ ನಿಮ್ಮ ಭೂಮಿಗೆ"

"ಆಯ್ತು ದೇಶದ ನ್ಯಾಯ, ಕಾನೂನನ್ನು ಒಪ್ಪಿಕೋತೀನಿ."

"ನಾನಿನ್ನು ಹೋಗಬಹುದೇ?"

ಎ.ಸಿ. ಸಾಹೇಬರು ಗೌರವದಿಂದ ಎದ್ದು ನಿಂತರು. ಭೂನ್ಯಾಯ ಮಂಡಲಿ ಸದಸ್ಯರು ಮೂಕರಾಗಿ, ಬೆವತು ಹೋದರು. ಚನ್ನೇಗೌಡನಿಗೆ ಹುಚ್ಚು ಹಿಡಿದಂತಾಯಿತು.

ದಢದಢನೆ ಹೆಜ್ಜೆ ಹಾಕುತ್ತ ಹೊರಟ ಶ್ರೀಕಂಠಭಟ್ಟರ ಹಿಂದೆ ಚನ್ನೇಗೌಡ ಓಡಿದ. "ಸ್ವಾಮಿ ಭಟ್ಟರೇ, ನಿಂತ್ಕೋಳಿ..."

ಇಲ್ಲ, ಭಟ್ಟರು ಕಿವುಡರಂತೆ ಹೆಜ್ಜೆ ಹಾಕತೊಡಗಿದರು.

ಚನ್ನೇಗೌಡ ತಾಲ್ಲೂಕು ಆಫೀಸು ಒಂದಾಗುವಂತೆ ಕಿರುಚಿದ;

"ನೀವು ನಿಲ್ಲದೆ ಹೋದ್ರೆ ಹಿಮಗಿರಿ ರಂಗನ ಆಣೆ" ಭಟ್ಟರು ನಿಂತರು.

ಚನ್ನೇಗೌಡ ಎದುರು ಬಂದು, ಕೈಜೋಡಿಸಿ ನಿಂತ.

"ಏನಪ್ಪಾ? ಕರೆದದ್ದು?"

"ಕಾನೂನು ಪ್ರಕಾರ ನಾನೇನೋ ಭೂಮಿ ಧಕ್ಕಿಸಿಕೊಂಡೆ. ಆದರೆ ನಾನೂ..."

"ಮುಂದೇನು ಹೇಳು."

"ಮನ್ನ ಸ್ವಾಮಿ... ನಿಮ್ಮ ಮಕ್ಕಳ ಮೇಲೆ ಕಲ್ಲು ಎಂಗೆಳೀಲಿ?"

ಭಟ್ಟರು ಸುಮ್ಮನೆ ಶೂನ್ಯದೃಷ್ಟಿ ಚೆಲ್ಲಿದರು.

"ಆರು ಎಕರೇನ ನಿಮ್ಮ ಮಕ್ಕಳಿಗೆ ಬರೀತೀನಿ!"

"ಇಂಥ ದಾನ ನಾನು ಒಪ್ಪೋಲ್ಲ!"

"ಹೋಗ್ಲಿ... ಮಾರಾಟಕ್ಕೆ ಕೊಟ್ಟೇವ್ನಿ ಅಂತ್ಲೇ ಬರ್ದುಕೊಡ್ತೀನಿ."

"......................................"

"ನೀವು ಒಪ್ಪದೇ ಹೋದ್ರೆ... ಹೊಳೇಗೆ ಬಿದ್ದು ಸಾಯ್ತೀನಿ."

ಶ್ರೀಕಂಠಭಟ್ಟರ ಕಣ್ಣಲ್ಲಿ ನೀರು ಬಂತು.

ನೋಡು ಚನ್ನೇಗೌಡ. ಈ ವಿಷಯದಲ್ಲಿ ನಾನು ತಲೆ ಹಾಕೋಲ್ಲ. ಇನ್ನು ಮೇಲೆ ನೀನುಂಟು, ನನ್ನ ಮಕ್ಕಳುಂಟು. ನನಗೆ, ನನ್ನ ಹಿಮಗಿರಿ ರಂಗನ ಸೇವೆ ಈ ಘಟ ಇರೋತನಕ ಇದ್ದೇ ಇದೆ" ಎಂದು ಮರಳು ಹೊಳೆಯ ಕಡೆ ಹೆಜ್ಜೆ ಹಾಕತೊಡಗಿದರು. ವಯಸ್ಸಾದ ಕಾಲುಗಳಲ್ಲಿ ವಜ್ರಶಕ್ತಿ ಮೂಡಿತ್ತು.

❑

# ೩. ಲೇಖನ

# ಜಾತಿಗಳ ಹುಟ್ಟು ಮತ್ತು ಬೆಳವಣಿಗೆ

**– ಬಿ. ಆರ್. ಅಂಬೇಡ್ಕರ್**

**ಅನುವಾದ : ಸಿದ್ಧಲಿಂಗಯ್ಯ**

ಮಾನವನ ನಾಗರೀಕತೆಯಲ್ಲಿ ಮುಖ್ಯ ಪಾತ್ರ ವಹಿಸುವ ಭೌತಿಕ ವಸ್ತುಗಳನ್ನು ಸಂಶೋಧಿಸಿ ವಿವರಿಸುವುದನ್ನು ನಾವು ನೋಡಿದ್ದೇವೆ. ಆದರೆ ಮಾನವಕೃತ ಸಂಸ್ಥೆಯೊಂದರ ಸಂಶೋಧನೆಯನ್ನು ಗಮನಿಸುವವರು ವಿರಳ. ಇಂಥ ಸಂಸ್ಥೆಯನ್ನು ಬಹಿರಂಗಗೊಳಿಸುವುದೇ ಒಂದು ಬಗೆಯ ವಿಚಿತ್ರ. . ಆದರೆ ಮನುಕುಲ ವಿಜ್ಞಾನದ ವಿದ್ಯಾರ್ಥಿಗಳಾದ ತಮಗೆ ಈ ಶೋಧನೆ ಪ್ರಯಾಸವನ್ನುಂಟು ಮಾಡುವುದಿಲ್ಲವೆಂಬ ಭರವಸೆ ನನಗಿದೆ. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಗೆಳೆಯರು ಪ್ರಾಚೀನ ಮತ್ತು ಆಧುನಿಕ ಸಮಾಜದ ಅನೇಕ ಸಂಸ್ಥೆಗಳನ್ನು ಖಚಿತವಾಗಿ ವಿವರಿಸದ್ದಾರೆ. "ಭಾರತದಲ್ಲಿ ಜಾತಿಗಳು" ಎಂಬ ಪ್ರಬಂಧದಲ್ಲಿ ನಾನು ಜಾತಿಗಳ ಹುಟ್ಟು, ರಚನೆ, ಬೆಳವಣಿಗೆಯನ್ನು ಕುರಿತು ವಿವರಿಸಲಿದ್ದೇನೆ.

ನನಗಿಂತ ಸಮರ್ಥರನೇಕರು ಜಾತಿಗಳ ನಿಗೂಢತೆಯನ್ನು ಪ್ರಕಟಪಡಿಸಲು ಪ್ರಯತ್ನಪಟ್ಟಿದ್ದಾರೆ. ಆದರೂ ಈ ಸಂಸ್ಥೆ ಇನ್ನೂ ವಿವರಿಸಲಾಗದ ಪ್ರಾಂತಕ್ಕೆ ಸೇರಿದೆ. ಪ್ರಾಯೋಗಿಕ ಮತ್ತು ಸೈದ್ಧಾಂತಿಕ ದೃಷ್ಟಿಯಿಂದ ಜಾತಿಯ ಸಮಸ್ಯೆ ವಿಶಾಲವಾದದ್ದು. ಇದೊಂದು ಸ್ಥಳೀಯ ಸಮಸ್ಯೆ. ಇದರ ಪರಿಣಾಮಗಳನ್ನು ಕಡೆಗಣಿಸುವಂಥದಲ್ಲ. "ಭಾರತದಲ್ಲಿ ಜಾತಿ ಪದ್ಧತಿ ಇರುವವರೆಗೂ ಹಿಂದೂಗಳು ಅಂತರಜಾತಿ ವಿವಾಹಗಳನ್ನು ಆಗುವುದಿಲ್ಲ ಮತ್ತು ಹೊರಗಿನವರೊಂದಿಗೆ ಸಾಮಾಜಿಕ ಸಂಬಂಧಗಳನ್ನು ಬೆಳೆಸುವುದಿಲ್ಲ." ಹಿಂದೂಗಳು ಹೆಚ್ಚು ಹೆಚ್ಚಾಗಿ ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ವಲಸೆ ಹೋದದ್ದೇ ಆದರೆ ಜಾತಿ ಸಮಸ್ಯೆ ಅಂತರ ರಾಷ್ಟ್ರೀಯ ಸಮಸ್ಯೆ ಆಗುತ್ತದೆ.

ಭಾರತದ ಜನತೆ ಆರ್ಯ, ದ್ರಾವಿಡ, ಮಂಗೋಲಿಯನ್ ಮತ್ತು ಸಿಥಿಯನ್ನರ ಮಿಶ್ರಣವಾಗಿದೆ. ಶತಶತಮಾನಗಳ ಹಿಂದೆ ಈ ಜನಾಂಗಗಳು

ಪ್ರಪಂಚದ ನಾನಾ ಪ್ರದೇಶ ಮತ್ತು ಸಂಸ್ಕೃತಿಗಳಿಂದ ಇಲ್ಲಿಗೆ ಬಂದರು. ಇಲ್ಲಿನ ಮೂಲ ನಿವಾಸಿಗಳೊಂದಿಗೆ ಹೋರಾಡುತ್ತಲೇ ಇವರು ಇಂಡಿಯಾಕ್ಕೆ ಕಾಲಿಟ್ಟರು. ನಿರಂತರ ಸಂಪರ್ಕ ಮತ್ತು ಪರಸ್ಪರ ಸಂಬಂಧಗಳ ಮೂಲಕ ತಮ್ಮ ಪೂರ್ವಸಂಸ್ಕೃತಿಗಳನ್ನು ಮರೆತು ಸಾಮಾನ್ಯ ಸಂಸ್ಕೃತಿಯೊಂದನ್ನು ರೂಪಿಸಿಕೊಂಡರು. ಭಾರತದ ಉದ್ದಕ್ಕೂ ಕಂಡುಬರುವ ಸಾಂಸ್ಕೃತಿಕ ಐಕ್ಯತೆಯೇ ಈ ಜನರನ್ನು ಏಕಸೂತ್ರತೆಗೆ ಒಳಪಡಿಸಿದೆ. ಈ ಏಕಸೂತ್ರತೆಯ ಕಾರಣದಿಂದ ಜಾತಿಪದ್ಧತಿಯನ್ನು ವಿವರಿಸುವುದು ಕಷ್ಟವಾಗಿದೆ. ಜಾತಿ ಏಕಸೂತ್ರತೆಯ ಘಟಕವನ್ನು ರವಾನಿಸುವ ಸಂಸ್ಥೆ ಆಗಿರುವುದರಿಂದ ಜಾತಿಯ ಹುಟ್ಟು ಬೆಳವಣಿಗೆ ಎಂದರೆ ಈ ರವಾನಿಸುವ ಪ್ರಕ್ರಿಯೆಯ ವಿವರಣೆಯೇ ಆಗಿದೆ. ನಿಷಿದ್ಧತೆ ಅಥವಾ ಸಗೋತ್ರ ವಿವಾಹ ಜಾತಿಯ ತಿರುಳು ಎಂಬುದು ಜಾತಿಯ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವ ಎಂಥವನಿಗೂ ಹೊಳೆಯುತ್ತದೆ. ಅಮೆರಿಕಾದ ಬಿಳಿಯರು ಮತ್ತು ಕಪ್ಪು ಜನರ ಸಂಬಂಧಗಳನ್ನು ಇಂಡಿಯಾದಲ್ಲಿ ಅನ್ವಯ ಮಾಡುವುದು ಸಾಧ್ಯವಿಲ್ಲ. ಯಾಕೆಂದರೆ ಇಲ್ಲಿಯ ಪರಿಸ್ಥಿತಿಗಳೇ ಬೇರೆ. ಇಂಡಿಯಾದ ಜನತೆ ಏಕರೂಪತೆಯನ್ನು ಉಳ್ಳವರಾಗಿದ್ದಾರೆ. ಭಾರತದ ವಿವಿಧ ಜನಾಂಗಗಳು ವಿಭಿನ್ನ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಪರಸ್ಪರ ಸಮ್ಮಿಲನಗೊಂಡಿದ್ದಾರೆ. ಇದು ಏಕರೂಪತೆಯುಳ್ಳ ಜನಾಂಗದ ಮುಖ್ಯ ಲಕ್ಷಣ. ಏಕರೂಪತೆಯ ಗುಣವಿದ್ದರೂ ಜಾತಿಯು ಸಮುದಾಯವನ್ನು ನಿರ್ದಿಷ್ಟ ಘಟಕಗಳಾಗಿ ಕೃತಕ ವಿಭಜನೆಗೆ ಒಳಪಡಿಸಿದೆ. ಸಗೋತ್ರ ವಿವಾಹ ಪದ್ಧತಿಯ ಮೂಲಕ ಒಂದು ಜಾತಿಯು ಇನ್ನೊಂದು ಜಾತಿಯೊಡನೆ ಸಂಬಂಧ ಹೊಂದುವುದನ್ನು ನಿಷೇಧಿಸಲಾಗಿದೆ. ಆದ್ದರಿಂದ ಸಗೋತ್ರ ವಿವಾಹವು ಜಾತಿಪದ್ಧತಿಯ ವಿಶಿಷ್ಟವಾದ ಮತ್ತು ಮುಖ್ಯವಾದ ಲಕ್ಷಣವೆಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯ. ಈ ಕಾರಣದಿಂದ ಸಗೋತ್ರ ವಿವಾಹದ ಅಧ್ಯಯನ ಜಾತಿಯ ಹುಟ್ಟು ಮತ್ತು ರಚನೆಯನ್ನು ಕುರಿತ ಅಧ್ಯಯನವಾಗುತ್ತದೆ.

ಇಂಡಿಯಾದ ಸಮಾಜ ಯಾವುದೇ ಸಮಾಜಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಾಚೀನತೆಯ ಅವಶೇಷಗಳನ್ನು ಇನ್ನೂ ಉಳಿಸಿಕೊಂಡಿದೆ. ಇದರ ಧರ್ಮ ಆದಿವಾಸಿಗಳದಾಗಿದ್ದು ಪದ್ಧತಿಗಳು ಬುಡಕಟ್ಟುಗಳ ಮೂಲಕ್ಕೆ

ಸಂಬಂಧಿಸಿವೆ. ಕಾಲ ಮತ್ತು ನಾಗರೀಕತೆಯ ತೀವ್ರವಾದ ಬೆಳವಣಿಗೆ ಆಗಿದ್ದರೂ ಸಹಾ ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಿದೆ. ಭಾರತದ ಪ್ರಾಚೀನ ಪದ್ಧತಿಗಳಲ್ಲಿ ಅತ್ಯಂತ ಗಮನಾರ್ಹವಾದದ್ದು ಭಿನ್ನಗೋತ್ರದ ವಿವಾಹ ಪದ್ಧತಿ. ಚರಿತ್ರೆಯ ಬೆಳವಣಿಗೆಯೊಡನೆ ಭಿನ್ನಗೋತ್ರ ವಿವಾಹ ತನ್ನ ಪ್ರಭಾವವನ್ನು ಕಳೆದುಕೊಂಡಿತು. ಹತ್ತಿರದ ರಕ್ತಸಂಬಂಧಿಗಳನ್ನು ಬಿಟ್ಟರೆ ಮದುವೆಯ ವಿಚಾರದಲ್ಲಿ ಹೀಗೇ ಎಂದು ಗೆರೆ ಎಳೆಯುವುದು ಅಪರೂಪ. ಆದರೆ ಇಂಡಿಯಾದ ಜನತೆಗೆ ಸಂಬಂಧಿಸಿದಂತೆ ಭಿನ್ನಗೋತ್ರ ವಿವಾಹ ಇಂದಿಗೂ ಕೂಡ ಕಟ್ಟಳೆಯಾಗಿದೆ: ಇಲ್ಲಿ ಕುಲಗಳಿಲ್ಲದಿದ್ದರೂ ಕುಲಪದ್ಧತಿಯ ಲಕ್ಷಣಗಳಿವೆ. ಇದನ್ನು ಭಿನ್ನಗೋತ್ರವಿವಾಹದ ನಿಯಮಕ್ಕೆ ಅನುಗುಣವಾಗಿ ನಡೆಯುವ ವಿವಾಹ ಪದ್ಧತಿಗಳಲ್ಲಿ ಕಾಣಬಹುದು. ರಕ್ತಸಂಬಂಧಿಗಳಲ್ಲಿ ಮದುವೆ ಆಗಬಾರದು ಎಂಬುದಷ್ಟೇ ಅಲ್ಲ, ಒಂದೇ ಗೋತ್ರದವರು ಮದುವೆ ಆಗುವುದು ಅಪವಿತ್ರ ಎಂದು ಪರಿಗಣಿಸಲ್ಪಟ್ಟಿರುವುದು ಗಮನಾರ್ಹವಾಗಿದೆ.

ಸಗೋತ್ರ ವಿವಾಹ ಪದ್ಧತಿಯು ಭಾರತಕ್ಕೆ ಪರಕೀಯವಾದದ್ದು. ಇಲ್ಲಿಯ ಬಹುತೇಕ ಗೋತ್ರಗಳು ಮತ್ತು ಕುಲಸಂಸ್ಥೆಗಳು ಭಿನ್ನಗೋತ್ರ ವಿವಾಹಕ್ಕೆ ಮಾನ್ಯತೆ ಕೊಟ್ಟಿದ್ದವು. ಭಿನ್ನಗೋತ್ರ ವಿವಾಹ ಭಾರತದ ಜನತೆಯ ಅಭಿಪ್ರಾಯವಾಗಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಇದನ್ನು ಮೀರುವ ಧೈರ್ಯ ಯಾರಿಗೂ ಇರಲಿಲ್ಲ. ಸಗೋತ್ರ ವಿವಾಹ ಜಾತಿಗಳಲ್ಲಿ ಇದ್ದಾಗ್ಯೂ ಭಿನ್ನಗೋತ್ರ ವಿವಾಹವನ್ನು ಕಟ್ಟುನಿಟ್ಟಾಗಿ ಆಚರಿಸಲಾಗುತ್ತಿತ್ತು. ಈ ನಿಯಮವನ್ನು ಮುರಿದವರಿಗೆ ಉಗ್ರ ಶಿಕ್ಷೆ ಕೊಡಲಾಗುತ್ತಿತ್ತು. ಕಾಲಾನಂತರದಲ್ಲಿ ಸಗೋತ್ರ ವಿವಾಹ ಪದ್ಧತಿಯನ್ನು ಹೇರಿದ್ದರಿಂದ ಜಾತಿಪದ್ಧತಿ ಸೃಷ್ಟಿಯಾಯಿತು.

ಜಾತಿಯ ಸಮಸ್ಯೆ ಮದುವೆಯಾಗಬಹುದಾದ ಎರಡು ಭಿನ್ನ ಲಿಂಗಗಳ ಅಸಮಾನತೆಯ ಮೇಲೆ ನಿಂತಿದೆ. ದಂಪತಿಗಳಿಬ್ಬರು ಏಕಕಾಲದಲ್ಲಿ ಸತ್ತುಹೋದರೆ ಈ ಸಮಸ್ಯೆಯೇ ಹುಟ್ಟುವುದಿಲ್ಲ. ಆದರೆ ಹೀಗೆ ಸಾಯುವುದು ಅಪರೂಪ. ಹೆಂಡತಿಗಿಂತ ಮೊದಲೇ ಗಂಡ ಸತ್ತರೆ ಆ ಜಾತಿಯಲ್ಲಿ ಅಧಿಕ ಮಹಿಳೆಯೊಬ್ಬಳನ್ನು ಕಾಣುತ್ತೇವೆ. ಆಕೆ ಮರು ಮದುವೆಯಾಗುವುದರ ಮೂಲಕ ಸಗೋತ್ರ ವಿವಾಹವನ್ನು ಉಲ್ಲಂಘಿಸುತ್ತಾಳೆ. ಹಾಗೆಯೇ ಗಂಡನಿಗಿಂತ ಮೊದಲೇ ಹೆಂಡತಿ ಸತ್ತರೆ ಆ

ಜಾತಿಯಲ್ಲಿ ಅಧಿಕ ಪುರುಷನೊಬ್ಬನು ಉತ್ಪತ್ತಿಯಾಗುತ್ತಾನೆ. ಈತ ಜಾತಿಯ ಹೊರಗೆ ಮದುವೆಯಾಗಿ ಸಗೋತ್ರ ವಿವಾಹವನ್ನು ಭಗ್ನಗೊಳಿಸಬಹುದು. ಹೀಗೆ ಅಧಿಕ ಪುರುಷ ಮತ್ತು ಅಧಿಕ ಮಹಿಳೆಯರು ಆ ಸಮಾಜ ಅವರ ಬಗ್ಗೆ ಎಚ್ಚರವಹಿಸದಿದ್ದಾಗ, ಸೂಕ್ಷ್ಮ ಸಂಗಾತಿಗಳು ದೊರೆಯದಿದ್ದಾಗ ಜಾತಿಯ ಹೊರಗೆ ಮದುವೆಯಾಗುವುದು ಅನಿವಾರ್ಯವಾಗುತ್ತದೆ. ಹೀಗಾಗಿ ಅವರು ಜಾತಿ ಪದ್ಧತಿಗೆ ಕುತ್ತಾಗಿ ಪರಿಣಮಿಸುತ್ತಾರೆ. ಅಧಿಕ ಪುರುಷ ಮತ್ತು ಮಹಿಳೆಯರನ್ನು ಸಂಬಂಧಪಟ್ಟ ಜಾತಿಗೆ ನಿರುಪದ್ರವಿಯಾಗುವಂತೆ ನಿರ್ವಹಿಸಲು ವಿವಿಧ ಮಾರ್ಗಗಳನ್ನು ಅಳವಡಿಸಿಕೊಳ್ಳಲಾಗಿದೆ. ಅಧಿಕ ಮಹಿಳೆಯಿಂದ ಒದಗಬಹುದಾದ ಅಪಾಯಗಳನ್ನು ದೂರ ಮಾಡಿ ಸಗೋತ್ರ ವಿವಾಹ ಪದ್ಧತಿಯನ್ನು ಕಾಪಾಡಿಕೊಳ್ಳಲು ಎರಡು ರೀತಿಯಿಂದ ಸಾಧ್ಯ. ಮೃತ ಗಂಡನ ಚಿತೆಯಲ್ಲೇ ಆಕೆಯನ್ನು ಸುಡುವುದು ಒಂದು ವಿಧಾನ ಆದರೆ ಇದು ಲೈಂಗಿಕ ಅಸಮಾನತೆಯನ್ನು ನಿವಾರಿಸಲು ಸೂಕ್ತ ವಿಧಾನವಾಗಲಾರದು. ಅಲ್ಲದೆ ಈ ಕ್ರಮವನ್ನು ಎಲ್ಲಾ ವಿಧವೆಯರಿಗೂ ಅನ್ವಯಿಸಲಾಗುವುದಿಲ್ಲ. ಸಾವಿನಿಂದ ಪಾರಾದ ವಿಧವೆಯರು ಆ ಜಾತಿಗೆ ಎರಡು ರೀತಿಯ ಆತಂಕಗಳನ್ನು ತಂದೊಡ್ಡುತ್ತಾರೆ. ಆಕೆ ಜಾತಿಯ ಹೊರಗೆ ಮದುವೆಯಾಗಿ ಸಗೋತ್ರ ವಿವಾಹ ಪದ್ಧತಿಯನ್ನು ಉಲ್ಲಂಘಿಸುತ್ತಾಳೆ. ಇಲ್ಲದೆ ಜಾತಿಯ ಒಳಗೇ ಮದುವೆಯಾಗಿ ನವವಧುವೊಬ್ಬಳ ಮದುವೆಯ ಅವಕಾಶವನ್ನು ಕಸಿದುಕೊಳ್ಳುತ್ತಾಳೆ. ಈ ಬಗೆಯ ಅಪಾಯಗಳನ್ನು ನಿವಾರಿಸಲು ಇರುವ ಎರಡನೇ ಕ್ರಮ ಆಕೆಗೆ ಶಾಶ್ವತ ವೈಧವ್ಯ ಪ್ರಾಪ್ತಿ ಮಾಡುವುದು. ಇದು ಆಕೆಯನ್ನು ಸುಡುವುದಕ್ಕಿಂತ ಹೆಚ್ಚು ಪ್ರಾಯೋಗಿಕವಾದದ್ದು. ಇದರಿಂದ ಅವಳಿಗೆ ಮುಂದೆ ಯಾವುದೇ ಗಂಡಸಿನ ಹೆಂಡತಿಯಾಗುವುದಕ್ಕೆ ಅವಕಾಶವಿರುವುದಿಲ್ಲ.

ಅಧಿಕ ಪುರುಷನ ಸಮಸ್ಯೆ ಅಧಿಕ ಮಹಿಳೆಯ ಸಮಸ್ಯೆಗಿಂತ ಮುಖ್ಯವಾದದ್ದು. ಕಾಲಾನುಕಾಲದಿಂದಲೂ ಪುರುಷನನ್ನು ಮಹಿಳೆಗಿಂತ ಒಂದು ಕೈ ಮೇಲೆಂದು ಭಾವಿಸಲಾಗಿದೆ. ಗಂಡು ಹೆಣ್ಣಿನ ನಡುವೆ ಇರುವ ಅಸಮಾನತೆ ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ಪಾತ್ರವಹಿಸುತ್ತದೆ. ಸ್ತ್ರೀಯನ್ನು ನಿರಂತರ ಶೋಷಣೆಗೆ ಒಳಪಡಿಸಿ ತಾನೇ ಸಕಲ ಕಾಯಿದೆಗಳನ್ನು ಪುರುಷ ನಿರ್ಮಿಸಿದ್ದರಿಂದ ಸಮಸ್ಯೆಗೆ ಸೂಚಿಸುವ

ಪರಿಹಾರದಲ್ಲಿ ಪಕ್ಷಪಾತವಿದೆ. ಅಧಿ ಪುರುಷನನ್ನು ಆತ ಪುರುಷನೆಂಬ ಕಾರಣಕ್ಕಾಗಿ ಮೃತ ಪತ್ನಿಯ ಜೊತೆ ಸುಡುವುದಿಲ್ಲ. ಯಾವುದೇ ಜಾತಿ ತನ್ನ ಜಾತಿಯ ಗಂಡಸೊಬ್ಬನನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಈತನನ್ನು ಎರಡು ರೀತಿಯಲ್ಲಿ ಉಳಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಜಾತಿಪದ್ಧತಿಗೆ ಗಂಡಸು ಮತ್ತು ಸಗೋತ್ರ ವಿವಾಹ ಎರಡೂ ಮುಖ್ಯ. ಕೆಲವರು ಅಜೀವ ವಿಧುರರಾಗಿಯೇ ಇದ್ದು ಸ್ವಯಂ ಆರೋಪಿತ ಬ್ರಹ್ಮಚರ್ಯವನ್ನು ಅನುಭವಿಸಬಹುದು. ಅಥವಾ ಇನ್ನೂ ಮುಂದೆ ಹೋಗಿ ವಿಶ್ವವನ್ನೇ ತಿರಸ್ಕರಿಸಬಹುದು. ಆದರೆ ಮಾನವ ಸ್ವಭಾವಕ್ಕೆ ಇದು ವಾಸ್ತವ ಪರಿಹಾರವಲ್ಲ. ಈ ಅಧಿಕ ಪುರುಷ ಒಂದು ನಿರ್ದಿಷ್ಟ ಗುಂಪಿನಲ್ಲಿದ್ದು, ಗುಂಪಿನ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾನೆ. ಆ ಗುಂಪಿನ ನೈತಿಕ ಮೌಲ್ಯಗಳಿಗೆ ಇವನಿಂದ ಗಂಡಾಂತರ ಇದ್ದೇ ಇದೆ. ಒಬ್ಬ ವಿಧುರ ಪ್ರಪಂಚವನ್ನು ತಿರಸ್ಕರಿಸುವುದಕ್ಕೂ ಹೆಂಡತಿಯ ಜೊತೆಯಲ್ಲೇ ಚಿತೆಗೇರುವುದಕ್ಕೂ ಗಾಢವಾದ ವ್ಯತ್ಯಾಸವೇನಿಲ್ಲ. ಸ್ವಯಂ ಆರೋಪಿತ ಬ್ರಹ್ಮಚರ್ಯವು ಯಾವ ಪ್ರಯೋಜನವನ್ನು ತರುವುದಿಲ್ಲ. ಜಾತಿಯ ಹಿತದೃಷ್ಟಿಯಿಂದ ಅವನು ಗೃಹಸ್ಥನಾಗಿರಬೇಕು. ಅದಕ್ಕಾಗಿ ಇವನಿಗೊಬ್ಬ ಸಂಗಾತಿಯನ್ನು ಒದಗಿಸುವ ಹೊಣೆ ಗುಂಪಿನದಾಗಿರುತ್ತದೆ. ಬಾಗಿಲುಗಳನ್ನು ಸ್ವಯಂ ಮುಚ್ಚಿಕೊಂಡ ಜಾತಿಗಳಲ್ಲಿ ಜನ ಸಂಖ್ಯೆಯ ಪ್ರಮಾಣ ಒಂದು ಹೆಣ್ಣಿಗೆ ಒಂದು ಗಂಡಾಗಿರುವುದರಿಂದ ಇಲ್ಲಿ ಹೆಣ್ಣಿನ ಸಮಸ್ಯೆ ಉದ್ಭವಿಸುತ್ತದೆ. ಆದ್ದರಿಂದ ಅಧಿಕ ಪುರುಷನಿಗೆ ವಿವಾಹ ಯೋಗ್ಯವಲ್ಲದ ವಯಸ್ಸಿನ ಹುಡುಗಿಯೊಬ್ಬಳನ್ನು ಮದುವೆಮಾಡಿಸಬೇಕಾಗುತ್ತದೆ. ಇದರಿಂದ ಆತ ಜಾತಿಯ ಒಳಗೇ ಉಳಿದು ಸಗೋತ್ರ ವಿವಾಹ ಮತ್ತು ಜಾತಿಯ ನೀತಿಗಳನ್ನು ಕಾಪಾಡಿಕೊಂಡು ಬರಲು ಸಾಧ್ಯ. ಈಗ ನಾಲ್ಕು ರೀತಿಗಳಿಂದ ಹೆಣ್ಣು ಮತ್ತು ಗಂಡಿನ ಸಮಾನತೆಯನ್ನು ಉಳಿಸಿಕೊಂಡು ಬರಲು ಅನುಕೂಲವಾಯಿತು:

೧. ವಿಧವೆಯನ್ನು ಗಂಡನ ಜೊತೆಯಲ್ಲಿ ಸುಡುವುದು (ಸತಿಪದ್ಧತಿ)

೨. ಕಡ್ಡಾಯ ವೈಧವ್ಯ

೩. ಒತ್ತಾಯಪೂರ್ವಕ ಬ್ರಹ್ಮಚರ್ಯ

೪. ಹೆಣ್ಣಿನ ಬಾಲ್ಯವಿವಾಹ

ಮೇಲೆ ಸೂಚಿಸಿದ ನಾಲ್ಕು ಪದ್ಧತಿಗಳನ್ನು ಕುರಿತಂತೆ ವೈಜ್ಞಾನಿಕವಾದ ವಿವರಣೆ ಬಂದೇ ಇಲ್ಲ. ಆದರೆ ಇವುಗಳನ್ನು ಗೌರವಿಸುವ ಅನೇಕ ವಾದಗಳಿವೆ. ಅವು ಈ ಪದ್ಧತಿಗಳ ಹುಟ್ಟು ಮತ್ತು ಅಸ್ತಿತ್ವದ ಕಾರಣಗಳನ್ನು ಹೇಳುವುದಿಲ್ಲ. ಸತಿಪದ್ಧತಿಯನ್ನು ಹೆಣ್ಣು–ಗಂಡಿನ ದೇಹ ಮತ್ತು ಆತ್ಮದ ಮಿಲನದ ಸಂಕೇತವೆಂದು, ಸಾವಿನ ನಂತರದ ಪ್ರೇಮ ಜೀವನವೆಂದೂ ಹೇಳಿ ಗೌರವಿಸಲಾಗಿದೆ. ಬಾಲ್ಯವಿವಾಹವನ್ನು ಇದೇ ಧಾಟಿಯಲ್ಲಿ ಸಮರ್ಥಿಸಲಾಗಿದೆ. ಹುಡುಗಿಗೆ ಲೈಂಗಿಕ ಪ್ರಜ್ಞೆ ಬರುವ ಮುನ್ನವೇ ತಾನು ಪ್ರೀತಿಸಬೇಕಾದ ವ್ಯಕ್ತಿ ಯಾರೆಂದು ಅರಿವಾಗಲು ಬಾಲ್ಯವಿವಾಹ ಉಪಯುಕ್ತವೆಂದು ಡಾ॥ ಕೇತ್ಕರ್ ಹೇಳುತ್ತಾರೆ. ನನ್ನ ಅಭಿಪ್ರಾಯದ ಪ್ರಕಾರ ಸತಿಪದ್ಧತಿ, ಒತ್ತಾಯಪೂರ್ವಕ ವೈಧವ್ಯ, ಬಾಲ್ಯ ವಿವಾಹ ಇವು ಅಧಿಕ ಪುರುಷ ಮತ್ತು ಅಧಿಕ ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸಿ ಸಗೋತ್ರ ವಿವಾಹ ಪದ್ಧತಿಯನ್ನು ಉಳಿಸಿಕೊಳ್ಳಲು ಹುಟ್ಟಿದ ಆಚರಣೆಗಳು.

ಸಮಾಜ ವ್ಯಕ್ತಿಗಳಿಂದ ಕೂಡಿದೆ ಎನ್ನುವುದಕ್ಕಿಂತ ವರ್ಗಗಳಿಂದ ರಚನೆಯಾಗಿದೆ ಎನ್ನುವುದೇ ಸೂಕ್ತ. ವ್ಯಕ್ತಿ ಯಾವಾಗಲೂ ಯಾವುದಾದರೂ ಒಂದು ವರ್ಗಕ್ಕೆ ಸೇರಿದವನಾಗಿರುತ್ತಾನೆ. ಈ ಸಾಮಾನ್ಯ ಸೂತ್ರವನ್ನು ಗಮನದಲ್ಲಿಟ್ಟುಕೊಂಡರೆ ಜಾತಿಯ ಹುಟ್ಟನ್ನು ತಿಳಿಯುವುದು ಸುಲಭ. ಇದರಿಂದ ವರ್ಗಗಳು ಜಾತಿಗಳಾದುದಕ್ಕೆ ವಿವರಣೆ ಸಿಗುತ್ತದೆ. ವರ್ಗ ಮತ್ತು ಜಾತಿ ಇವೆರಡೂ ನೆರೆ–ಹೊರೆಯವರು. ಜಾತಿ ಬಾಗಿಲು ಮುಚ್ಚಿಕೊಂಡ ವರ್ಗ. ಮೊದಲು ಬಾಗಿಲು ಮುಚ್ಚಿಕೊಂಡ ವರ್ಗ ಯಾವುದು? ಈ ಪ್ರಶ್ನೆಗೆ ಉತ್ತರ ಜಾತಿಯ ಹುಟ್ಟು ಮತ್ತು ಬೆಳವಣಿಗೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. ನಾನು ಮೇಲೆ ಸೂಚಿಸಿದ ಪದ್ಧತಿಗಳು ಬ್ರಾಹ್ಮಣ ಜಾತಿಯಲ್ಲಿ ಮಾತ್ರ ಬಳಕೆಯಲ್ಲಿರುವಂತಹವು. ಈ ಜಾತಿ ಶ್ರೇಣೀಕೃತ ಹಿಂದೂ ಸಮಾಜದಲ್ಲಿ ಉನ್ನತ ಸ್ಥಾನವನ್ನು ಆಕ್ರಮಿಸಿದೆ. ಬ್ರಾಹ್ಮಣೇತರ ಜಾತಿಗಳಲ್ಲಿ ಈ ಪದ್ಧತಿಗಳು ಕಡ್ಡಾಯವಲ್ಲ.

ಜಾತಿ ಸಂಸ್ಥೆಯು ಬ್ರಾಹ್ಮಣೇತರರಲ್ಲಿ ಬೇರುಬಿಟ್ಟ ಬಗೆಯನ್ನು ಅಧ್ಯಯನ ಮಾಡುವುದು ಸೂಕ್ತವಾಗಿದೆ. ವಿದ್ವಾಂಸರು ಇದಕ್ಕೆ ಎರಡು ಕಾರಣಗಳನ್ನು ಸೂಚಿಸುತ್ತಾರೆ. ಇದು ದೇವರು ಕಟ್ಟಾಜ್ಞೆಯೆಂದು ಮಾಡಲಾಯಿತು. ಅಥವಾ ಭಾರತದ ಜನತೆಯ ವಿಚಿತ್ರವಾದ ಸಾಮಾಜಿಕ ಬೆಳವಣಿಗೆಯ ನಿಯಮಕ್ಕನುಸಾರವಾಗಿ ಜಾತಿಪದ್ಧತಿ ಹುಟ್ಟಿತು.

ಪ್ರಪಂಚದಲ್ಲಿನ ಎಲ್ಲಾ ದೇಶಗಳಿಗೂ ಒಬ್ಬೊಬ್ಬ ಕಾನೂನುದಾತ ಅವತರಿಸಿರುವುದನ್ನು ಕಾಣುತ್ತೇವೆ. ಭಾರತದಲ್ಲಿ ಮನು ಎಂಬುವವನು ಜಾತಿಗಳನ್ನು ಸೃಷ್ಟಿಸಿದ ಎಂದು ನಂಬಲಾಗಿದೆ. ಒಬ್ಬ ಮನುಷ್ಯನ ಲೇಖನಿಯಿಂದ ಒಂದು ವರ್ಗ ಮೃಗಗಳ ಮಟ್ಟಕ್ಕೆ ಇಳಿಯಿತು ಎಂದರೆ ಅದನ್ನು ಕಲ್ಪಿಸಿಕೊಳ್ಳುವುದು ಕೂಡ ಕಷ್ಟವಾಗುತ್ತದೆ. ಜಾತಿ ಮನುವಿನಿಗಿಂತ ಹಿಂದಿನಿಂದಲೂ ಬಳಕೆಯಲ್ಲಿತ್ತು. ಆಗ ಪ್ರಚಲಿತವಿದ್ದ ಜಾತಿ ನಿಯಮಗಳನ್ನು ಮನು ಸೂತ್ರೀಕರಿಸಿದನೆಂದು ಹೇಳಬಹುದು. ಇದರ ಅರ್ಥ ಮನು ಜಾತಿಪದ್ಧತಿಯ ಪರವಾಗಿದ್ದನೆಂದೇ ಆಗಿದೆ. ಬ್ರಾಹ್ಮಣರು ಜಾತಿ ಪದ್ಧತಿಯನ್ನು ಸೃಷ್ಟಿಸಿದರು ಎಂದು ಹೇಳಲಾಗಿದೆ. ಬ್ರಾಹ್ಮಣರು ಜಾತಿಸೃಷ್ಟಿಯ ಪ್ರಕ್ರಿಯೆಗೆ ತಮ್ಮ ಸಿದ್ಧಾಂತದಿಂದ ಸಹಾಯ ಮಾಡಿದರೇ ಹೊರತು ಅವರೇ ಸೃಷ್ಟಿಸಲಿಲ್ಲ. ಜಾತಿಯನ್ನು ಶಾಸ್ತ್ರಗಳ ಸೃಷ್ಟಿಯೆಂದೂ ಭಾವಿಸಲಾಗಿದೆ. ಆದ್ದರಿಂದ ಜಾತಿಪದ್ಧತಿಯನ್ನು ವಿರೋಧಿಸುವ ಧೈರ್ಯವನ್ನು ಮಾಡುವುದಿಲ್ಲ. ಕೇವಲ ಭೋದನೆಯಿಂದ ಜಾತಿಯನ್ನು ಸೃಷ್ಟಿಸುವುದಾಗಲಿ ನಾಶಗೊಳಿಸುವುದಾಗಲಿ ಸಾಧ್ಯವಿಲ್ಲ.

ಭಾರತದಲ್ಲಿ ಜಾತಿಪದ್ಧತಿಯ ಪ್ರಸರಣವನ್ನು ಅಧ್ಯಯನ ಮಾಡಲು ಶ್ರೇಷ್ಠ ವ್ಯಕ್ತಿಗಳ ಸಿದ್ಧಾಂತಗಳು ಸಹಾಯಕ್ಕೆ ಬರುವುದಿಲ್ಲ. ಪಾಶ್ಚಿಮಾತ್ಯ ವಿದ್ವಾಂಶರು ನಾಯಕ ಆರಾಧನೆಗೆ ಹೆಚ್ಚು ಮಹತ್ವಕೊಡದೆ ಇದನ್ನು ವಿವರಿಸಲು ಪ್ರಯತ್ನ ಪಟ್ಟಿದ್ದಾರೆ. ಜಾತಿ ಪದ್ಧತಿಯ ಮೂಲ ಅವರಿಗೆ ಹೀಗೆ ಕಂಡಿದೆ. ೧) ವೃತ್ತಿ ೨) ಬುಡಕಟ್ಟು ಜನಾಂಗದ ಪಳೆಯುಳಿಕೆಗಳು ೩) ಹೊಸ ನಂಬಿಕೆಯ ಉದ್ಭವ ೪) ಮಿಶ್ರತಳಿ ೫) ವಲಸೆ. ಇಲ್ಲಿ ಕಾಣಿಸಿದ ಸ್ಥಿತಿಗಳು ಪ್ರಪಂಚದ ಯಾವ ಭಾಗದಲ್ಲೂ ಇರಲಿಲ್ಲವೇ? ಎಂಬುದು ನನ್ನ ಪ್ರಶ್ನೆ. ಪ್ರಪಂಚದ ಎಲ್ಲ ಕಡೆಯೂ ಇವು ಇದ್ದ ಪಕ್ಷದಲ್ಲಿ ಅಲ್ಲೆಲ್ಲವೂ ಜಾತಿ ಪದ್ಧತಿ ಸೃಷ್ಟಿಯಾಗಬೇಕಾಗಿತ್ತು. ಆ ಪ್ರದೇಶಗಳು ವೇದ ಭೂಮಿಗಿಂತ ವಿಚಿತ್ರವಾದವೋ ಅಥವಾ ವಿದ್ವಾಂಸರೇ ತಪ್ಪು ಮಾಡಿದ್ದಾರೋ ಎಂಬ ಅನುಮಾನ ನನಗೆ ಬರುತ್ತದೆ. ಎರಡನೇ ಮಾತೇ ಹೆಚ್ಚು ಸಂಭವನೀಯ ಅನ್ನಿಸುತ್ತದೆ. ಜಾತಿಪದ್ಧತಿಯ ಸಿದ್ಧಾಂತಗಳನ್ನು ಮಂಡಿಸಿದ್ದ ಸರ್ ಡೆಂಜಿಲ್ ಇಬೆಟ್‌ಸನ್ (Sir Denzil Ibb-etson) ಮತ್ತು ನೆಸ್‌ಫೀಲ್ಡ್ (Nesfield) ಸೆನಾರ್ಟ್ (Senart) ಹೆಚ್. ರೈಸ್‌ಲಿ (H. Risley) ಇವರ ಸಿದ್ಧಾಂತಗಳೆಲ್ಲ ಇದೇ ರೀತಿಯವಾಗಿವೆ. ಕಸುಬು ಜಾತಿಪದ್ಧತಿಯ

ಮೂಲ ಎಂದು ಹೇಳರುವುದು ನನಗಂತೂ ತೀರಾ ಸರಳ ಸಂಶೋಧನೆ ಎನಿಸುತ್ತದೆ. ವೃತ್ತಿ ಗುಂಪು, ವೃತ್ತಿ ಜಾತಿಯಾಗಿ ಪರಿವರ್ತನೆಯಾದದ್ದು ನಿಗೂಢವಾದ ಅಂಶವಾಗಿದೆ.

ಹಿಂದೂ ಸಮಾಜವು ನಾಲ್ಕು ವರ್ಗಗಳಿಂದ ರೂಪಿತವಾಗಿದೆ. ೧) ಬ್ರಾಹ್ಮಣರು ಅಥವಾ ಪುರೋಹಿತ ವರ್ಗ ೨) ಕ್ಷತ್ರಿಯರು ಅಥವಾ ಸೈನಿಕ ವರ್ಗ ೩) ವೈಶ್ಯರು ಅಥವಾ ವ್ಯಾಪಾರಿಗಳು ೪) ಶೂದ್ರರು ಅಥವಾ ಶ್ರಮಜೀವಿಗಳು. ವರ್ಗಪದ್ಧತಿಯಲ್ಲಿ ಯಾವನೇ ವ್ಯಕ್ತಿ ಸೂಕ್ತ ತರಬೇತಿಯನ್ನು ಪಡೆದು ತನ್ನ ವರ್ಗವನ್ನು ಬದಲಾಯಿಸಬಹುದಿತ್ತು. ಚರಿತ್ರೆಯ ಒಂದು ಘಟ್ಟದಲ್ಲಿ ಸಮಾಜದ ಉಳಿದ ಜನರಿಗಿಂತ ದೂರ ಇದ್ದ ಪುರೋಹಿತ ವರ್ಗ ಬಾಗಿಲು ಮುಚ್ಚಿಕೊಳ್ಳುವ ಪ್ರವೃತ್ತಿಯ ಮೂಲಕ ತಾನೇ ಒಂದು ಜಾತಿಯಾಯಿತು. ಬೇರೆ ವರ್ಗಗಳಲ್ಲಿ ಸಮಾಜ ವಿಭಜನೆಯ ನಿಯಮಗಳು ವ್ಯತ್ಯಾಸಗೊಂಡು ಅವು ಸಣ್ಣ ಮತ್ತು ದೊಡ್ಡ ಗುಂಪುಗಳಾಗಿ ಒಡೆದವು. ವೈಶ್ಯರು ಮತ್ತು ಶೂದ್ರವರ್ಗಗಳು ಅಸಂಖ್ಯಾತ ಜಾತಿಗಳಿಗೆ ಮೂಲವಾಗಿದ್ದವು. ಯುದ್ಧ ಕಲೆಯನ್ನು ಅವಲಂಬಿಸಿದ್ದ ಕ್ಷತ್ರಿಯ ವರ್ಗ ಹೆಚ್ಚು ಹೋಳುಗಳಾಗಲಿಲ್ಲ. ಅದು ಆಡಳಿತಗಾರರು ಮತ್ತು ಸೈನಿಕರು ಎಂದು ಎರಡು ಭಾಗವಾಯಿತು ಎನ್ನಬಹುದು. ಒಂದು ಸಮಾಜದಲ್ಲಿ ಉಪಗುಂಪುಗಳು ಸಹಜ. ಆದರೆ ಇಲ್ಲಿಯ ಅಸಹಜ ವಿಚಾರವೆಂದರೆ ಈ ಗುಂಪುಗಳು ಹೊರಗಿನ ಗಾಳಿಬೆಳಕುಗಳನ್ನು ವಿರೋಧಿಸಿ, ಸ್ವಯಂ ಬಾಗಿಲು ಮುಚ್ಚಿಕೊಂಡ ಘಟಕಗಳಾದವು. ಅಂದರೆ ಜಾತಿಗಳಾದವು. ಈ ಗುಂಪುಗಳನ್ನು ಬಾಗಿಲು ಮುಚ್ಚಿಕೊಳ್ಳುವಂತೆ ಒತ್ತಾಯಪಡಿಸಲಾಯಿತೋ ಅಥವಾ ಸ್ವಂತ ಇಚ್ಛೆಯಿಂದ ಈ ಕ್ರಿಯೆ ನಡೆಯಿತೋ ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತರ : ಕೆಲವರು ಬಾಗಿಲುಗಳನ್ನು ಮುಚ್ಚಿಕೊಂಡರು. ಇನ್ನು ಕೆಲವರು ತಮ್ಮ ವಿರುದ್ಧವಾಗಿ ಬಾಗಿಲುಗಳನ್ನು ಮುಚ್ಚಿರುವುದನ್ನು ಕಂಡುಕೊಂಡರು. ಒಂದು ಮನಶಾಸ್ತ್ರೀಯವಾದ ವಿವರಣೆ. ಮತ್ತೊಂದು ಯಾಂತ್ರಿಕವಾದುದ್ದು. ಜಾತಿಪದ್ಧತಿ ರೂಪ ಪಡೆದಿದ್ದನ್ನು ವಿವರಿಸಲು ಇವೆರಡು ಪರಸ್ಪರ ಪೂರಕವಾಗಿವೆ.

ಮೊದಲು ಮನಶಾಸ್ತ್ರೀಯವಾದ ವಿವರಣೆಯನ್ನು ನೋಡೋಣ. ಈ ವರ್ಗಗಳು ಬಾಗಿಲುಗಳನ್ನು ಮುಚ್ಚಿಕೊಂಡಿದ್ದು ಯಾಕೆ? ಇದಕ್ಕೆ ನನ್ನ ಉತ್ತರ ಬ್ರಾಹ್ಮಣರು ಎನಿಸುತ್ತದೆ. ಇದು ಬ್ರಾಹ್ಮಣರಿಂದ ಆರಂಭವಾದ

ಬ್ರಾಹ್ಮಣೇತರ ವರ್ಗಗಳಿಂದ ಹೃದಯಪೂರ್ವಕವಾಗಿ ಸ್ವೀಕರಿಸಲ್ಪಟ್ಟಿತು. ಇದು ಅನುಕರಣೆಯ ಅಂಟುರೋಗ. ಎಲ್ಲಾ ಉಪಗುಂಪುಗಳು ತಾರತಮ್ಯತೆಯ ಕಡೆಗೆ ನಡೆದು ಜಾತಿಗಳಾಗಿ ಮಾರ್ಪಟ್ಟವು. ಅನುಕರಣೆ ಮನುಷ್ಯನ ಮೂಲ ಸ್ವಭಾವ. ಇದನ್ನು ಸಮರ್ಥಿಸಲು ಹೆಚ್ಚಿನ ವಿವರಣೆ ಬೇಕಿಲ್ಲ. ಗೇಬ್ರಿಯಲ್ ಟ್ರೇಡ್ ಎಂಬ ವಿದ್ವಾಂಸ ಅನುಕರಣೆಯ ತತ್ವಗಳನ್ನು ಮಂಡಿಸುತ್ತಾ, ಮೇಲಿನವರಿಂದ ಕೆಳಗಿನವರೆಗೆ ಅನುಕರಣೆ ಪ್ರವಹಿಸುತ್ತದೆ ಎಂದು ಹೇಳುತ್ತಾನೆ. ಅನುಕರಣೆಯಿಂದಲೇ ಕೆಲವು ಜಾತಿಗಳು ಹುಟ್ಟಿದವು. ಅನುಕರಣೆಗೆ ತನ್ನದೇ ಆದ ಅನುಕೂಲಕರ ಸ್ಥಿತಿ ಇರಬೇಕು. ೧) ಅನುಕರಣೆಯ ಮೂಲ ಸಮಾಜದಲ್ಲಿ ಗೌರವ ಮತ್ತು ಘನತೆಯನ್ನು ಅನುಭವಿಸುತ್ತಿರಬೇಕು. ೨) ಗುಂಪಿನ ಸದಸ್ಯರಿಗೆ ಅಸಂಖ್ಯಾತ ಮತ್ತು ನಿತ್ಯ ಸಂಬಂಧಗಳಿರಬೇಕು. ಈ ಸ್ಥಿತಿ ಇಂಡಿಯಾದಲ್ಲಿದೆ. ಬ್ರಾಹ್ಮಣರನ್ನು ದೇವರುಗಳೆಂದು ಪರಿಗಣಿಸಲಾಗಿದೆ. ಇತರರ ಜೀವನ ವಿಧಾನ ಮತ್ತು ಇತ್ಯಾದಿಗಳನ್ನು ನಿರ್ಣಯಿಸುವವನು ಆತನೇ. ಇವನ ಘನತೆ ಪ್ರಶ್ನಾತೀತವಾದದ್ದು. ಆದ್ದರಿಂದ ಇವನನ್ನು ಅನುಕರಣಯೋಗ್ಯ ಎಂದು ಭಾವಿಸಲಾಯಿತು. ಹಿಂದೂ ಸಮಾಜದಲ್ಲಿ ಆಯಾ ಜಾತಿಯ ಘನತೆಯು ಸತಿಪದ್ಧತಿ, ಶಾಶ್ವತವೈಧವ್ಯ, ಹೆಣ್ಣಿನ ಬಾಲ್ಯವಿವಾಹವನ್ನು ಆಚರಿಸುವುದರೊಂದಿಗೆ ಹೆಣೆದುಕೊಂಡಿತ್ತು. ಇದು ಬ್ರಾಹ್ಮಣರಿಗೂ ಒಂದು ನಿರ್ದಿಷ್ಟ ಜಾತಿಗೂ ಇರುವ ಅಂತರವನ್ನು ಅವಲಂಬಿಸಿತ್ತು. ಬ್ರಾಹ್ಮಣರಿಗೆ ಹತ್ತಿರವಿದ್ದ ಜಾತಿಯವರು ಈ ಮೂರೂ ಪದ್ಧತಿಗಳನ್ನು ಅನುಸರಿಸಿದರು. ಕಡಿಮೆ ಹತ್ತಿರವಿದ್ದ ಜಾತಿಯವರು ಒತ್ತಾಯಪೂರ್ವಕ ವೈಧವ್ಯ ಮತ್ತು ಹೆಣ್ಣಿನ ಬಾಲ್ಯವಿವಾಹವನ್ನು ಮಾತ್ರ ಒಪ್ಪಿಕೊಂಡರು. ಹೆಚ್ಚು ದೂರದಲ್ಲಿರದ್ದವರು ಈ ಮೂರೂ ಆಚರಣೆಗಳನ್ನೂ ಒಳಗೊಳ್ಳದೆ ಜಾತಿಯ ಸೂತ್ರವನ್ನು ಮಾತ್ರ ಆಯ್ಕೆ ಮಾಡಿಕೊಂಡರು. ಭಾರತ ದೇಶದ ಜಾತಿ ಸೃಷ್ಟಿಯ ಪ್ರಕ್ರಿಯೆ ಕೆಳಗಿನವರು ಮೇಲಿನವರಿಂದ ಅನುಕರಣೆ ಮಾಡಿರುವ ಪ್ರಕ್ರಿಯೆಯೇ ಆಗಿದೆ.

ಜಾತಿಯ ನಿಯಮಗಳಿಗೆ ವಿರುದ್ಧವಾದ ಯಾವುದೇ ಹೊಸ ವಿಚಾರ ಅಸಹನೀಯವಾಗಿತ್ತು. ಅಂತಹ ವ್ಯಕ್ತಿಯನ್ನು ಜಾತಿಯಿಂದ ಹೊರಗೆ ಹಾಕುತ್ತಿದ್ದರು. ಏಕೆಂದರೆ ಜಾತಿ ನಿಯಮಗಳು ಅತ್ಯಂತ ಕ್ರೂರವಾದ್ದರಿಂದ ಅದರ ವಿರುದ್ಧ ಧಂಗೆ ಎದ್ದವರೊಡನೆ ರಾಜಿಯ ಪ್ರಶ್ನೆಯೇ ಹುಟ್ಟಲಿಲ್ಲ. ಹೊಸ ರೀತಿಯ ಆಲೋಚನೆಯೇ ಹೊಸ ಜಾತಿಯ ಹುಟ್ಟಿಗೆ ಕಾರಣವಾಯಿತು. ಭಿನ್ನವಾಗಿ ಯೋಚಿಸುವ ಪ್ರವಾದಿ ಮತ್ತು

ಅಂತರ್ಜಾತಿಯ ಸಂಬಂಧಗಳು ಇಟ್ಟುಕೊಂಡ ಪ್ರೇಮಿ ಇವರಿಬ್ಬರು ಜಾತಿಪದ್ಧತಿಯ ಸಮಾಜಕ್ಕೆ ಸಿಂಹಸ್ವಪ್ನವಾಗಿ ಪರಿಣಮಿಸಿದರು. ಪ್ರವಾದಿ ತನ್ನ ಹೊಸ ಚಿಂತನೆಗಳ ನೆಲೆಯಲ್ಲಿ ಜಾತಿಯೊಂದನ್ನು ಸೃಷ್ಟಿಸಿದರೆ ಪ್ರೇಮಿ ಮಿಶ್ರತಳಿಯ ಇನ್ನೊಂದು ಜಾತಿಯನ್ನು ಸೃಷ್ಟಿಸುತ್ತಿದ್ದ. ಸಾಂಪ್ರದಾಯಿಕ ಸಮಾಜದಲ್ಲಿ ಪಾಪಿ ಎನಿಸಿಕೊಂಡ ಈತನಿಗೆ ಸಾಮಾಜಿಕ ಬಹಿಷ್ಕಾರವೇ ಶಿಕ್ಷೆ. ಇದರ ಪರಿಣಾಮ ಹೊಸ ಜಾತಿಯ ಉದ್ಭವ. ಇದರ ಜೊತೆಗೆ ಯಾಂತ್ರಿಕವಾಗಿ ಬಾಗಿಲು ಮುಚ್ಚಿಕೊಂಡ ಜಾತಿಗಳಿಗೆ ಅದು ಅನಿವಾರ್ಯವಾಗಿತ್ತು. ಈ ಅನಿವಾರ್ಯತೆ ಜಾತಿಗಳು ದ್ವಿಗುಣಗೊಳ್ಳಲು ಕಾರಣವಾಯಿತು.

ಪಾಶ್ಚಿಮಾತ್ಯ ವಿದ್ವಾಂಸರು ಜಾತಿಯನ್ನು ವಿವರಿಸಲು ಬಣ್ಣವನ್ನು ಪ್ರಮಾಣವಾಗಿ ಬಳಸಿದರು. ಈ ದಿಕ್ಕಿನಲ್ಲಿ ಇದು ಅಪ್ರಯೋಜನಕಾರಿ. "ಎಲ್ಲಾ ರಾಜಕುಮಾರರು–ದ್ರಾವಿಡ, ಆರ್ಯ ಯಾರೇ ಆಗಲಿ ಅವರೆಲ್ಲಾ ಆರ್ಯರು." ಎಂಬ ಕೇತ್ಕರ್‌ರವರ ಮಾತು ಔಚಿತ್ಯಪೂರ್ಣವಾದದ್ದು. ಚರ್ಮದ ಬಣ್ಣ ತನ್ನ ಪ್ರಾಮುಖ್ಯತೆಯನ್ನು ಭಾರತದಲ್ಲಿ ಎಂದೊ ಕಳೆದುಕೊಂಡಿತ್ತು. ಪಾಶ್ಚಿಮಾತ್ಯ ವಿದ್ವಾಂಸರು ನಮ್ಮ ಶಾಸ್ತ್ರಗ್ರಂಥಗಳನ್ನು ಜಾತಿ ಪದ್ಧತಿಯ ಹುಟ್ಟನ್ನು ವಿವರಿಸುವ ಸಿದ್ಧಾಂತಗಳೆಂದು ಭ್ರಮಿಸಿ ಅವುಗಳನ್ನು ಆಶ್ರಯಿಸಿದ್ದರು. ಜಾತಿಗಳು ಧಾರ್ಮಿಕ ವೃತ್ತಿಗೆ ಅನುಗುಣ ಎಂಬುದು ನಿಜವಾದರೂ ಅದೇ ಪ್ರಧಾನ ಕಾರಣವಲ್ಲ. ಜಾತಿಗಳು ವೃತ್ತಿಗೆ ಜೋತು ಬಿದ್ದ ಕಾರಣವನ್ನು ಇನ್ನೂ ಅಧ್ಯಯನ ಮಾಡಬೇಕಾಗಿದೆ. ಜಾತಿಗೆ ಸಂಬಂಧಿಸಿದಂತೆ ಈ ಮುಖ್ಯ ವಿಚಾರಗಳನ್ನು ಗಮನಿಸಬೇಕು. ೧) ವಿಭಜನೆಗೊಂಡಿರುವ ಹಿಂದೂ ಸಮಾಜದಲ್ಲಿ ಆಳವಾದ ಸಾಂಸ್ಕೃತಿಕ ಐಕ್ಯತೆ ಇದೆ ೨) ಜಾತಿಗಳು ದೊಡ್ಡ ಸಾಂಸ್ಕೃತಿಕ ಘಟಕವೊಂದರ ಅಂಶಗಳು. ೩) ಒಂದು ಜಾತಿಯಿಂದ ಅನೇಕ ಜಾತಿಗಳು ಆರಂಭವಾದವು. ೪) ವರ್ಗಗಳು ಜಾತಿಗಳಾಗಲು ಅನುಕರಣೆ ಮತ್ತು ಬಹಿಷ್ಕಾರ ಕಾರಣವಾಗಿದೆ.

[೧೯೧೬ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಡಾ॥ ಎ.ಎ. ಗೊಯಿಡೆನ್ ವೈಸರ್ ಮಾನವಶಾಸ್ತ್ರ ಸಮ್ಮೇಳನದಲ್ಲಿ ಡಾ॥ ಅಂಬೇಡ್ಕರ್‌ರವರು ಓದಿದ "Castes in India : their Mechanism, Genesis and Development" ಎಂಬ ಪ್ರಬಂಧದ ಸಂಗ್ರಹಾನುವಾದ]

❑

# ೪. ಓದುಪತ್ರ
# ಸೈಕಲ್ ರಿಕ್ಷಾದವನ ಮಗ ಐಎಎಸ್ ಮಾಡಿದ!

**– ಎ. ಆರ್. ಮಣಿಕಾಂತ್**

ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಛಲವಿದ್ದರೆ, ಕಣ್ಮುಂದೆ ಒಂದು ಗುರಿಯಿದ್ದರೆ, ಕಠಿಣ ಪರಿಶ್ರಮವೂ ಜತಗಿದ್ದರೆ ಆಕಾಶದಷ್ಟೇ ಎತ್ತರವಿರುವ ಗೌರಿಶಂಕರನನ್ನೂ ಹತ್ತಬಹುದು, ಚಂದ್ರಲೋಕಕ್ಕೂ ಹೋಗಿ ಬರಬಹುದು. ಕೊನೆಯೇ ಇಲ್ಲ ಎಂಬಂಥ ಸಾಗರವನ್ನೂ ಈಜಬಹುದು. ಚೀನಾ ಗೋಡೆಯ ಇನ್ನೊಂದು ತುದಿಯನ್ನು ನಡೆದೇ ಕ್ರಮಿಸಬಹುದು. ಹಲವು ಮಂದಿ ಧೀರರು ಅಂಥ ಸಾಹಸಗಳನ್ನು ಆಗಿಂದಾಗ್ಗೆ ಮಾಡಿ ತೋರಿಸುತ್ತಲೇ ಇದ್ದಾರೆ. ಆ ಮೂಲಕ, ಅಸಾಧ್ಯ ಎಂಬ ಪದಕ್ಕೆ ಅರ್ಥವೇ ಇಲ್ಲ ಎಂದು ಮತ್ತೆ ಮತ್ತೆ ಸಾಬೀತುಪಡಿಸಿದ್ದಾರೆ. ಈ ಸಾಧನೆಗಳನ್ನು ಮೆಚ್ಚುವ ಮಂದಿ, ಅದೇ ಸಂದರ್ಭದಲ್ಲಿ 'ಅಯ್ಯೋ ಬಿಡ್ರೀ. ಹಾಗೆ ಸಾಧನೆ ಮಾಡಿರುವವರೆಲ್ಲ ಲಕ್ಷಾಧಿಪತಿಗಳ ಮಕ್ಳೂ. ಅವರಿಗೇನು ಕಮ್ಮಿ? ಅಪ್ಪನ ದುಡ್ಡು ರಾಶಿ ರಾಶಿ ಇದೆ. ಹಾಗಾಗಿ ಒಂದೊಂದೇ ಸಾಹಸ ಮಾಡ್ತಾ ಹೋಗ್ತಾರೆ' ಎಂದು ಕೊಂಕು ನುಡಿಯುತ್ತಾರೆ.

ಯಶಸ್ಸು ಎಂಬುದು ಯಾವತ್ತೂ ಶ್ರೀಮಂತಿಕೆಯನ್ನೋ. ಪ್ರಭಾವವನ್ನೋ, ಚೆಂದವನ್ನೋ, ಮನೆತನವನ್ನೋ ನೋಡಿಕೊಂಡು ಬರುವುದಿಲ್ಲ. ಒಂದು ಕನಸನ್ನು ಎದುರಿಗಿಟ್ಟುಕೊಂಡೇ ಅದನ್ನು ಫೇಸ್ ಮಾಡಲು ಪ್ರಯತ್ನಿಸುತ್ತಾನಲ್ಲ? ಆತನನ್ನು ಯಶಸ್ಸೆಂಬುದು ಬಾಚಿ ತಬ್ಬಿಕೊಳ್ಳುತ್ತದೆ. ಈ ಮಾತಿಗೆ ಒಂದು ಪಸಂದ್ ಉದಾಹರಣೆಯಾಗಿ ನಮ್ಮ ಕಣ್ಮುಂದೆ ಇರುವವನ ಹೆಸರೇ ಗೋವಿಂದ ಜೈಸ್ವಾಲ್. ಕಡುಕಡುಕಡುಕಡು ಬಡನತದ ಮಧ್ಯೆಯೇ ಬೆಳೆದವನು. ಕೊಳಗೇರಿಯ ಕತ್ತಲಿನಿಂದ ಬಂದವನು. ಇನ್ನೂ ವಿವರಿಸಿ ಹೇಳಬೇಕೆಂದರೆ, ಆತ ಒಂದು ಲಡಕಾಸಿ ಸೈಕಲ್ ರಿಕ್ಷಾ ಓಡಿಸುವ ನಾರಾಯಣ ಜೈಸ್ವಾಲ್ ಎಂಬಾತನ ಮಗ. ಅವರಿದ್ದದು ಕೊಳಗೇರಿ ತಾನೆ? ಹಾಗಾಗಿ ಅವರ ಮನೆಗೆ ವಿದ್ಯುತ್

ಸೌಲಭ್ಯವೂ ಇರಲಿಲ್ಲ. ಈ ಗೋವಿಂದ ಜೈಸ್ವಾಲ್‌ನನ್ನು ಬಿಟ್ಟರೆ ಮನೆಯಲ್ಲಿ ಬೇರೆ ಯಾರಿಗೂ ಅಕ್ಷರದ ಗಂಧವೂ ಇರಲಿಲ್ಲ. ಎಲ್ಲ ಸಂಕಟಗಳ ಮಧ್ಯೆಯೇ ಈ ಗೋವಿಂದ ಜೈಸ್ವಾಲ್ ಐಎಎಸ್ ಪಾಸು ಮಾಡಿದ ಸಾಹಸವಿದೆಯಲ್ಲ, ಹೇಳಿದರೆ ಅದೇ ಚೆಂದದ ಕಥೆ.

ನಾರಾಯಣ ಜೈಸ್ವಾಲ್ ಕಾಶಿಯ ಕೊಳಗೇರಿಯಲ್ಲಿದ್ದ. ಕಾಶಿಯ ಬೀದಿಗಳಲ್ಲಿ ಬೆಳಗಿಂದ ಸಂಜೆಯತನಕ ರಿಕ್ಷಾ ತುಳಿಯುತ್ತಿದ್ದ. ಒಂದು ಸಂತೋಷವೆಂದರೆ – ಅಂಥ ಕಡುಬಡತನದ ಮಧ್ಯೆಯೂ ಆತ ಯಾವುದೇ ದುರಭ್ಯಾಸ ಅಂಟಿಸಿಕೊಳ್ಳಲಿಲ್ಲ. ಒಂದೊಂದು ಪೈಸೆಯನ್ನೂ ಕೂಡಿಸಿಟ್ಟ ಆ ಹಣದಿಂದ ಒಂದಿಷ್ಟು ಜಮೀನು ಖರೀದಿಸಿದ. ಈ ಮಧ್ಯೆಯೇ ಅವನಿಗೆ ನಾಲ್ವರು ಮಕ್ಕಳಾದರು. ಮೂರು ಹೆಣ್ಣು ಒಂದು ಗಂಡು. ತನ್ನ ರಿಕ್ಷಾದಲ್ಲಿ ದಿನವೂ ಅದೆಷ್ಟೊ ಮಂದಿ ಆಫೀಸರ್‌ಗಳನ್ನು ಕೂಡಿಸಿಕೊಂಡು ಪೆಡಲ್ ತುಳಿಯುತ್ತಿದ್ದ ನಾರಾಯಣ ಜೈಸ್ವಾಲ್, ಇವತ್ತಲ್ಲ ನಾಳೆ ನನ್ನ ಮಕ್ಕಳೂ ಹೀಗೇ ಆಫೀಸರ್‌ಗಳಾಗಿ ಮೆರೆಯಲಿ ಅಂದುಕೊಳ್ಳುತ್ತಿದ್ದ ದಣಿದು ಸುಸ್ತಾಗಿ ಮನೆಗೆ ಬಂದ ಮೇಲೆ ಮಕ್ಕಳನ್ನು ಹತ್ತಿರ ಕರೆದು – "ನೀವೆಲ್ಲ ಚೆನ್ನಾಗಿ ಓದಿ ಆಫೀಸರ್‌ಗಳಾಗಬೇಕು. ಓದದೇ ಹೋದರೆ ಉಪವಾಸವೇ ಗತಿಯಾಗುತ್ತದೆ" ಎಂದು ಮೇಲಿಂದ ಮೇಲೆ ಬುದ್ಧಿ ಹೇಳುತ್ತಿದ್ದ.

ಅದೇಕೋ ಏನೋ, ನಾರಾಯಣ ಜೈಸ್ವಾಲ್‌ನ ಹೆಣ್ಣು ಮಕ್ಕಳಿಗೆ ವಿದ್ಯೆ ಒಲಿಯಲಿಲ್ಲ. ಆದರೆ ಕಿರಿಯವನಿದ್ದನಲ್ಲ ಗೋವಿಂದ? ಅವನು ತುಂಬಾ ಚೆನ್ನಾಗಿ ಓದುತ್ತಿದ್ದ. ಅವನು ಏಳನೇ ತರಗತಿಯಲ್ಲಿ ಪಾಸಾದ ತಿಂಗಳಲ್ಲೇ ಆತನ ತಾಯಿ ತೀರಿಹೋದಳು. ಇದು ನಾರಾಯಣ ಜೈಸ್ವಾಲ್ ಕುಟುಂಬಕ್ಕೆ ಬಿದ್ದ ದೊಡ್ಡ ಪೆಟ್ಟು. ಮೊದಲಿನಿಂದಲೂ ಸಂಕಟದ ಮಧ್ಯೆಯೇ ಬೆಳೆದಿದ್ದ ನಾರಾಯಣ ಜೈಸ್ವಾಲ್, ಹೆಂಡತಿಯ ಅಗಲಿಕೆಯನ್ನು ತುಟಿಕಚ್ಚಿ ಸಹಿಸಿಕೊಂಡ. ಅದೊಂದು ದಿನ ಮಗನನ್ನು ಎದುರುಕೂರಿಸಿಕೊಂಡು – "ನಿನ್ನ ಅಕ್ಕಂದಿರ ಮದುವೆಯ ಜವಾಬ್ದಾರಿ ನನ್ನ ಮೇಲಿದೆ ಮಗನೇ. ಆ ಹೊಣೇನ ಹೇಗಾದ್ರೂ ನಿಭಾಯಿಸ್ತೀನಿ. ನೀನು ಶ್ರದ್ಧೆಯಿಂದ ಓದು. ಸಂಕಟದ ಬದುಕು ನನಗೆ ಮಾತ್ರ ಇರಲಿ" ಅಂದು ಕಣ್ತುಂಬಿಕೊಂಡ.

ಈ ವೇಳೆಗಾಗಲೇ ಸೀಮೆಎಣ್ಣೆ ದೀಪದ ಬೆಳಕಿನಲ್ಲಿ ಓದಿಯೇ ಗೋವಿಂದ ಜೈಸ್ವಾಲ್ ಪಿಯುಸಿ ಮುಗಿಸಿದ್ದ. ಪದವಿ ತರಗತಿಯಲ್ಲಿ ಹೆಚ್ಚು ಅಂಕ ಪಡೆಯಬೇಕು ಅಂದುಕೊಂಡರೆ ಓದಲು ಮನೆಯಲ್ಲಿ ಲೈಟೇ ಇರಲಿಲ್ಲ. ಜತೆಗೆ, ಮನೆಯ ಅಕ್ಕಪಕ್ಕ ದಿನದ ಇಪ್ಪತ್ನಾಲ್ಕು ಗಂಟೆಯೂ ಹತ್ತಿಗಿರಣಿ ಹಾಗೂ ಪ್ರಿಂಟಿಂಗ್ ಮೆಷಿನ್‌ಗಳು ಗಿರ್ರಗಿರ್ರಗಿರ್ರನೆ ತಿರುಗುತ್ತ ಸದ್ದು ಮಾಡುತ್ತಲೇ ಇದ್ದವು. ಈ ಸದ್ದಿನ ಮಧ್ಯೆಯೇ, ಮನೆಯ ಮುಂದಿದ್ದ ಬೀದಿ ದೀಪಗಳ ಕೆಳಗೆ ಕೂತು ಗೋವಿಂದ ಜೈಸ್ವಾಲ್ ಓದಬೇಕಿತ್ತು. ಪ್ರಿಂಟಿಂಗ್ ಮೆಷಿನ್ನಿನ ಸದ್ದು ಕೇಳಿದರೆ, ಓದು ತಲೆಗೆ ಹೋಗೋದಿಲ್ಲ ಅನ್ನಿಸಿದಾಗ ಎರಡೂ ಕಿವಿಗೆ ಹತ್ತಿ ತುಂಬಿಕೊಂಡು, ನಂತರ ಅದೇ ಬೀದಿ ದೀಪದ ಕೆಳಗೆ ಕೂತು ಓದಿದ ಗೋವಿಂದ. ಪ್ರತಿಫಲವಾಗಿ ಸೆಕೆಂಡ್ ಕ್ಲಾಸ್‌ನಲ್ಲಿ ಡಿಗ್ರಿ ಪಾಸು ಮಾಡಿದ.

ಈ ಸಂದರ್ಭದಲ್ಲಿಯೇ ಪರಿಚಿತರೆಲ್ಲ "ಓದಿದ್ದು ಸಾಕು. ಯಾವುದಾದ್ರೂ ಕೆಲ್ಸ ಹಿಡಿ" ಅಂದರು. ಬೇರೆ ಯಾವುದೂ ಸಿಗದೇ ಹೋದ್ರೆ ಅಟೆಂಡರ್ ಕೆಲಸಕ್ಕಾದರೂ ಪ್ರಯತ್ನಿಸು ಅಂದರು. ಅಪ್ಪನಿಗಗೆ ನೆರವಾಗಬೇಕು. ಮನೆಗೆ ಆಧಾರವಾಗಬೇಕು ಎಂಬ ಆಸೆಯಿತ್ತಲ್ಲ? ಅದೇ ಕಾರಣದಿಂದ ಗೋವಿಂದ ಜೈಸ್ವಾಲ್ – ಕ್ಲರ್ಕ್, ಅಟೆಂಡರ್, ಕ್ಯಾಷಿಯರ್, ಮ್ಯಾನೇಜರ್ – ಹೀಗೇ ಹತ್ತು ಹಲವು ಕೆಲಸಗಳಿಗೆ ಅರ್ಜಿ ಹಾಕಿದ. ಹಲವು ಸ್ಪರ್ಧಾತ್ಮಕ ಪರೀಕ್ಷೆ ಬರೆದ. ಸಂದರ್ಶನಗಳಿಗೆ ಹೋಗಿ ಬಂದ. ಆದರೆ ಎಲ್ಲ ಸಂದರ್ಶನಗಳಲ್ಲೂ "ನಿಮಗೆ ಕೆಲ್ಸ ಕೊಡ್ತೀವಿ, ನೀವು ಎಷ್ಟು ಲಂಚ ಕೊಡ್ತೀರಿ?" ಎಂದೇ ಕೇಳುತ್ತಿದ್ದರು.

ಮಧ್ಯಮ ವರ್ಗದವರು ಅನ್ನಿಸಿಕೊಳ್ಳಲು ಅಗತ್ಯವಿರುವ ಎಲ್ಲ ಸರಕಾರಿ ನೌಕರಿಗಳೂ 'ಫಿಕ್ಸ್' ಆಗಿಬಿಟ್ಟಿರುತ್ತವೆ ಎಂದು ಗೋವಿಂದ ಜೈಸ್ವಾಲ್‌ಗೆ ತುಂಬ ಬೇಗನೇ ಅರ್ಥವಾಗಿ ಹೋಯಿತು. ಅಂದರೆ ಲಂಚ, ಕೊಡದೆ ಕೆಲಸಕ್ಕೆ ಸೇರಲು ಸಾಧ್ಯವೇ ಇಲ್ಲವೆ ಎಂದು ಆತ ಯೋಚಿಸಿದ. ಆ ಪ್ರಶ್ನೆಯನ್ನೇ ಹತ್ತಾರು ಮಂದಿಗೂ ಕೇಳಿದ. ಲಂಚವನ್ನೇ ಪಡೆಯದೆ, ಕೇವಲ ಪ್ರತಿಭೆಯನ್ನು, ಮೆರಿಟ್ಟನ್ನು ಆಧರಿಸಿ ಕೊಡುವ ನೌಕರಿಯೆಂದರೆ ಜಿಲ್ಲಾಧಿಕಾರಿ ಹುದ್ದೆ. ಅದಕ್ಕೆ ಐಎಎಸ್ ಮಾಡಬೇಕು ಎಂದು ಹತ್ತಾರು ಮಂದಿ ಹೇಳಿದರು. ಅಪ್ಪನ ಬಳಿ ಎಲ್ಲವನ್ನೂ ವಿವರಿಸಿದ ಗೋವಿಂದ.

ಎಲ್ಲವನ್ನೂ ಮೌನವಾಗಿ ಕೇಳಿಸಿಕೊಂಡು ಕ್ಷಣ ಸುಮ್ಮನಿದ್ದ ನಾರಾಯಣ ಜೈಸ್ವಾಲ್ ನಂತರದ ಎರಡೇ ದಿನದಲ್ಲಿ ತನಗಿದ್ದ ಅಷ್ಟೂ ಜಮೀನನ್ನೂ ಮಾರಿ, ಅದರಿಂದ ಒಂದ ದುಡ್ಡನ್ನು ಮಗನ ಕೈಗಿಟ್ಟು "ನೀನಿನ್ನು ಹೊರಡು. ಎಲ್ಲವನ್ನೂ ಮರೆತು ಓದು. ನನ್ನ ರಟ್ಟೆಯಲ್ಲಿನ್ನೂ ಶಕ್ತಿ ಇದೆ. ದುಡೀತೀನಿ. ತಿಂಗಳು ತಿಂಗಳೂ ನಿಂಗೆ ದುಡ್ಡು ಕಳಿಸ್ತೀನಿ" ಅಂದ.

ಐಎಎಸ್ ಮಾಡಲು ದಿಲ್ಲಿಗೆ ಹೊರಟ ಗೋವಿಂದನನ್ನು ಕಂಡು ಗೇಲಿ ಮಾಡಿದವರಿಗೆ ಲೆಕ್ಕವಿಲ್ಲ. ಆದರೆ ಅದೇನನ್ನೂ ಗಮನಿಸುವ ಸ್ಥಿತಿಯಲ್ಲಿ ಗೋವಿಂದ ಜೈಸ್ವಾಲ್ ಇರಲಿಲ್ಲ. ಆತ ಹಗಲಿರುಳೆನ್ನದೆ ಒಂದೇ ಸಮನೆ ಓದಿದ. ದಿಲ್ಲಿಯಂಥ ಊರಿನಲ್ಲಿ ಖರ್ಚಿಗೆ ಹಣ ಸಾಲುತ್ತಿರಲಿಲ್ಲ ಅನ್ನಿಸಿದಾಗ ಟ್ಯೂಷನ್ ಶುರುಮಾಡಿದ. ಆಗಲೂ ದುಡ್ಡು ಸಾಕಾಗದೇ ಹೋದಾಗ ಬೆಳಗಿನ ತಿಂಡಿಗೆ ಗುಡ್‌ಬೈ ಹೇಳಿದ. ದೇವರ ಮೇಲೆ ಅವನಿಗೆ ನಂಬಿಕೆ ಇರಲಿಲ್ಲ. ಹಾಗಾಗಿ ಹರಕೆ, ಪೂಜೆ ವ್ರತದ ಮೊರೆ ಹೋಗಲಿಲ್ಲ. ಬದಲಿಗೆ "ಏನೇ ಕಷ್ಟ ಬಂದರೂ ನಾನೇ ಒಂದು ಕೈ ನೋಡ್ಕೋತೇನೆ" ಎಂದು ನಿರ್ಧರಿಸಿಬಿಟ್ಟ.

ಇಷ್ಟೆಲ್ಲ ಆದ ನಂತರವೂ ಗೋವಿಂದ ಜೈಸ್ವಾಲ್‌ಗೆ ಕೊರಗಿತ್ತು. ಏನೆಂದರೆ ಅವನಿಗೆ ಬರುತ್ತಿದ್ದುದ್ದು ಬಟ್ಲರ್ ಇಂಗ್ಲೀಷ್! ಮಾತೃಭಾಷೆಯ ಬದಲು ಇಂಗ್ಲೀಷ್‌ನಲ್ಲಿ ಪರೀಕ್ಷೆ ಬರೆದರೆ ಒಂದು ಸ್ಕೋಪ್ ಎಂದು ಎಲ್ಲರೂ ಹೇಳುತ್ತಿದ್ದರು. ಆದರೆ ಬಾರದ ಇಂಗ್ಲೀಷ್‌ಗಿಂತ ಮಾತೃಭಾಷೆ ಹಿಂದಿಯಲ್ಲಿ ಪರೀಕ್ಷೆ ಬರೆಯುವುದೇ ಸರಿ ಅನ್ನಿಸಿತು. ಹಾಗೇ ಮಾಡಿದ. ಪರೀಕ್ಷೆ ಮುಗಿದ ಮೇಲೆ ಕಾಶಿಗೆ, ಅದೇ ಕೊಳೆಗೇರಿಯ ಮನೆಗೆ ಬಂದುಬಿಟ್ಟ.

ಕಡೆಗೊಂದು ದಿನ ಬಂದೇ ಬಂತು. ಅದು ಗೋವಿಂದ ಜೈಸ್ವಾಲ್‌ನ ಬದುಕಿನ 'ಅಮೃತಘಳಿಗೆ'. ಐಎಎಸ್ ಪರೀಕ್ಷೆಯಲ್ಲಿ ಆತ ೪೮ನೇ ರ‍್ಯಾಂಕ್ ಬಂದಿದ್ದಾನೆ ಎಂಬ ಸುದ್ದಿ ಪ್ರಕಟವಾಯಿತು. ಫಲಿತಾಂಶದ ಒಂದು ರಿಜಿಸ್ಟರ್ಡ್ ಪೋಸ್ಟ್ ಪತ್ರ ಗೋವಿಂದ ಜೈಸ್ವಾಲ್‌ನ ಕೊಳೆಗೇರಿ ಮನೆಯ ವಿಳಾಸಕ್ಕೆ ಬಂದರೆ, ಈ ವಿಳಾಸ ಹುಡುಕಿ ಹುಡುಕಿ ಸುಸ್ತಾದ ಅಂಚೆಯವನು 'ವಿಳಾಸದಾರರು ಪತ್ತೆಯಿಲ್ಲ' ಎಂದು ಷರಾ ಬರೆದು ವಾಪಸ್ ಕಳಿಸಿಬಿಟ್ಟಿದ್ದ! ಅಂಚೆ ಇಲಾಖೆ, 'ಮತ್ತೊಮ್ಮೆ ಹುಡುಕಿ' ಎಂದು ಆ ಪತ್ರವನ್ನೇ ವಾಪಸ್ ಕಳುಹಿಸಿತು. ಕಡೆಗೊಮ್ಮೆ ಕೊಳಗೇರಿಯ ಒಂದು ಹಳೆ

ಹಳೆ ಹಳೆ ಮನೆಯಲ್ಲಿ ಜೈಸ್ವಾಲ್ ಕುಟುಂಬವನ್ನು ಅಂಚೆಯವನು ಪತ್ತೆ ಮಾಡಿದ. ಕೆಲವೇ ದಿನಗಳಲ್ಲಿ ಪ್ರೊಬೇಷನರಿ ಆಫಿಸರ್ ಎಂದು ಗೋವಿಂದ ಜೈಸ್ವಾಲ್‌ನನ್ನು ನೇಮಕ ಮಾಡಿರುವ ಪತ್ರ ಕೂಡ ಆತನ ಕೈ ಸೇರಿತು. ಕೆಲವೇ ವರ್ಷಗಳ ಹಿಂದೆ ಅಟೆಂಡರ್ ಕೆಲಸ ಕೇಳಿ ಅಧಿಕಾರಿಗಳಿಂದ ಅದೆಷ್ಟೋ ಲಕ್ಷ ಕೊಡಿ ಅನ್ನಿಸಿಕೊಂಡಿದ್ದ ಗೋವಿಂದ ಜೈಸ್ವಾಲ್ ಕಡೆಗೂ, ಒಂದೇ ಒಂದು ಪೈಸೆ ಲಂಚ ಕೊಡದೆ ಐಎಎಸ್ ಆಫೀಸರ್ ಆಗಿಯೇಬಿಟ್ಟ.

ಹೌದು ಇದು ಕಟ್ಟುಕಥೆಯಲ್ಲ. ನಡೆದಂಥದ್ದು. ನಾಲ್ಕು ತಿಂಗಳ ಹಿಂದಷ್ಟೇ ಗೋವಿಂದ ಜೈಸ್ವಾಲ್ ಪ್ರೊಬೇಷನರಿ ಅವಧಿ ಮುಗಿದಿದೆ. ಆತನೀಗ ಉತ್ತರ ಪ್ರದೇಶದಲ್ಲಿ ಜಿಲ್ಲಾಧಿಕಾರಿ. ಮದುವೆ ಮಾರ್ಕೆಟ್‌ನಲ್ಲಿ ಅವನ ಹೆಸರು ತುಂಬ ಜೋರಾಗಿ ಓಡುತ್ತಿದೆ. ಕನ್ಯಾಪಿತೃಗಳು ಅವನ ಮನೆ ಮುಂದೆ ಸಾಲಾಗಿ ನಿಂತಿದ್ದಾರೆ. 'ಜಾತಿ, ಧರ್ಮದ ಮಾತು ಬೆಡವೇ ಬೇಡ.. ನೀವು 'ಯಸ್' ಅನ್ನಿ ಸಾಕು. ಮನೆ ಅಳಿಯನನ್ನಾಗಿ ಮಾಡ್ಕೋತೇವೆ." ಅಂದಿದ್ದಾರೆ. ಮದುವೆಗೆ ಒಪ್ಪಿದ್ರೆ ಅದೆಷ್ಟೋ ಕೋಟಿ ವರದಕ್ಷಿಣೆ ಕೊಡುವ ಮಾತಾಡಿದ್ದಾರೆ.

ಒಂದೇ ಮಾತಲ್ಲಿ ಹೇಳುವುದಾದರೆ ಗೋವಿಂದನಿಗೆ ಈಗ ಊರ ತುಂಬಾ ನೆಂಟರು. ಆದರೆ, ಗೆಲುವಿನ ಹಮ್ಮಿನಲ್ಲಿ ಗೋವಿಂದ ಮೈಮರೆತಿಲ್ಲ. ತನ್ನ ಭವಿಷ್ಯ ರೂಪಿಸಲು ತಂದೆ ಪಟ್ಟ ಕಷ್ಟ ಎಂಥದೆಂದು ಅವನಿಗೆ ಗೊತ್ತಿದೆ. ಅಪ್ಪನನ್ನು ಚೆನ್ನಾಗಿ ನೋಡ್ಕೋಬೇಕು. ಅಕ್ಕಂದಿರ ಬದುಕಿಗೆ ನೆರವಾಗಬೇಕು. ತನ್ನಂಥದೆ ಹಿನ್ನಲೆಯಿಂದ ಬಂದ ಬಡವರ ಮನೆಯ ಮಕ್ಕಳಿಗೆ ನೆರವಾಗಬೇಕು. ಲಂಚ ಕೊಡದೇ ನೌಕರಿ ಪಡೆಯುವಂಥ ವಾತಾವರಣ ನಿರ್ಮಿಸಬೇಕು... ಇಂಥವೇ ನೂರೆಂಟು ಕನಸುಗಳು ಗೋವಿಂದ ಜೈಸ್ವಾಲ್‌ಗೆ ಇವೆ. ಈ ಪೈಕಿ ಒಂದಷ್ಟು ಕನಸುಗಳನ್ನು ನನಸು ಮಾಡಿಕೊಂಡ ನಂತರ ಬಡವರ ಮೆನಯ ಹೆಣ್ಣೊಬ್ಬಳನ್ನು ಮದುವೆಯಾಗುವುದೇ ನನ್ನ ಗುರಿ ಎಂದಾತ ದೃಢವಾಗಿ ಹೇಳಿದ್ದಾನೆ.

ಗೋವಿಂದ ಜೈಸ್ವಾಲ್‌ನ ಯಶೋಗಾಥೆಯನ್ನು ಓದಿದರಲ್ಲ? ಈಗ ಹೇಳಿ, ಸಾಧನೆಗೆ ಅಸಾಧ್ಯವಾದುದು ಯಾವುದಾದರೂ ಇದೆಯೇ?

❑

# ಭಾಗ ೪ – ವೈಜ್ಞಾನಿಕ ಸಂಶೋಧನೆ

**ಆಶಯ:**

ಸಾಮಾನ್ಯ ಅರ್ಥದಲ್ಲಿ ಸಂಶೋಧನೆ ಬಗ್ಗೆ ತಿಳಿಯಬೇಕೆಂದರೆ ಅದಕ್ಕಾಗಿ ನಿಗದಿತ ರಾಚನಿಕ ಕಾರ್ಯವಿಧಾನವನ್ನು ಅನುಸರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಆಯ್ದುಕೊಂಡ ವಿಷಯದ ಮಜಲು ಮತ್ತು ಸಂಶೋಧಕನ ಮೇಲೆ ಈ ಸಂಶೋಧನೆ ಅವಲಂಬಿತವಾಗಿರುತ್ತದೆ. ಹೀಗೆ ಈ ಕೆಳಗೆ ನಮೂದಿಸಿದ ಹಂತಗಳು ಬಹುತೇಕ ಔಪಚಾರಿಕ ಸಂಶೋಧನೆಗೆ ಅಗತ್ಯವೆನಿಸಿವೆ. ಇವುಗಳಲ್ಲಿ ಮೂಲಭೂತ ಆಧಾರ ಮತ್ತು ಅನ್ವಯಿಕೆಗಳು ಇದರ ಭಾಗಗಳಾಗಿವೆ:

೧. ಅವಲೋಕನಗಳು ಮತ್ತು ವಿಷಯಗಳ ರಚನೆ ೨. ಸಿದ್ಧಾಂತ (ಆಧಾರ ಕಲ್ಪನೆ) ೩. ಪರಿಕಲ್ಪನಾತ್ಮಕ ವ್ಯಾಖ್ಯೆಗಳು ೪. ಕಾರ್ಯಾತ್ಮಕ ವ್ಯಾಖ್ಯೆ ೫. ಅಂಕಿ ಅಂಶ ಸಂಗ್ರಹ ೬. ಶೋಧನೆ, ಆಧಾರ ಕಲ್ಪನೆಗಳ ಪರಿಷ್ಕರಣೆ ೭. ಉಪಸಂಹಾರ, ಅಗತ್ಯವಾದರೆ ಪುನರಾವರ್ತನೆ.

ಸಾಮಾನ್ಯವಾದ ತಪ್ಪು ಕಲ್ಪನೆ ಎಂದರೆ ಇಂತಹ ಪದ್ಧತಿ ಮೂಲಕ ಆಧಾರ ಕಲ್ಪನೆಗಳನ್ನು ಪುರಾವೆಗಳೊಂದಿಗೆ ಸಾಧಿಸಬಹುದೆಂಬುದಾಗಿದೆ. ವ್ಯಾಪಕವಾಗಿ ಈ ಆಧಾರ ಕಲ್ಪನೆಯ ಸಿದ್ಧಾಂತವನ್ನು ಭವಿಷ್ಯತ್‌ನ ಮುನ್ಸೂಚನೆಗಳಿಗಾಗು ಬಳಸಲಾಗುತ್ತದೆ. ಇದನ್ನು ಒಂದು ಪ್ರಯೋಗದಿಂದ ಬರುವ ಫಲಿತಾಂಶವನ್ನು ನಿರೀಕ್ಷಿಸಿ ಅಂದಾಜಿಸಬಹುದಾಗಿದೆ. ಒಂದು ವೇಳೆ ಸ್ಥಿರತೆ ಹೊಂದಿದ್ದರೆ ಆಗ ಪ್ರಯೋಗವು ಆಧಾರ ಕಲ್ಪನೆ ಸಿದ್ಧಾಂತಕ್ಕೆ ಪೂರಕವಾಗಿ ಅಥವಾ ಬೆಂಬಲವಾಗಿ ಇರುತ್ತದೆ. ಇಲ್ಲಿ ಇಂತಹ ಕಾಳಜಿಪೂರ್ವಕ ಭಾಷೆ ಬಳಕೆಗೆ ಕಾರಣವೆಂದರೆ, ಸಂಶೋಧಕರು ಪರ್ಯಾಯ ಸಿದ್ಧಾಂತವನ್ನು ತಮ್ಮ ಅವಲೋಕನಗಳೊಂದಿಗೆ ಗುರುತಿಸಲು ಸಾಧ್ಯವಾಗುತ್ತದೆ. ಹಲವು ಬಾರಿ ಪ್ರಯೋಗಗಳೊಂದಿಗೆ ಸಹ ಇದು ಸ್ಥಿರತೆ ಸಾಧಿಸುತ್ತದೆ. ಅಂದರೆ ಇಂತಹ ಪ್ರಕರಣಗಳಲ್ಲಿ ಸಿದ್ಧಾಂತವು ಎಂದಿಗೂ ರುಜುವಾತಾಗಲಾರದು. ಆದರೆ ವೈಜ್ಞಾನಿಕ ಪರೀಕ್ಷೆಗೆ ಒಳಪಟ್ಟ ನಂತರ ವಿವಿಧ ಹಂತಗಳಲ್ಲಿ ಅದು ಪರಿಷ್ಕೃತಗೊಂಡು ವ್ಯಾಪಕವಾಗಿ ಒಂದು ಸತ್ಯದ ಸಂಶೋಧನೆ ಎಂದಾಗಬಹುದು. ಹೀಗೆ ಅದರ ವೈಶಾಲ್ಯತೆಯು ಸಮಯ ಕಳೆದಂತೆ ಹೆಚ್ಚಲೂ ಕಾರಣವಾಗುತ್ತದೆ. ಒಂದು ಉಪಯುಕ್ತವಾದ ಸಿದ್ಧಾಂತವು ಮುನ್ಸೂಚನೆಯನ್ನು ಅನುಮತಿಸುತ್ತದೆ. ಇದು ನಿಖರ ಅವಲೋಕನದ ಪರಿಧಿಯೊಳಗೆ ಆ ಕಾಲಮಾನವನ್ನು ತಿಳಿಸಿ, ಮುನ್ಸೂಚನೆಯನ್ನು ಪರೀಕ್ಷೆಗೊಳಪಡಿಸುತ್ತದೆ. ಕಾಲ ಕಳೆದಂತೆ ಅವಲೋಕನದ ನಿಖರತೆಯಲ್ಲಿ ಸುಧಾರಣೆಯಾದಂತೆ ಆಧಾರ ಕಲ್ಪನೆಯ ಸಿದ್ಧಾಂತಕ್ಕೆ ನಿಶ್ಚಿತ ಭವಿಷ್ಯವನ್ನು ಸೂಚಿಸಲು ಸಾಧ್ಯವಾಗುವುದಿಲ್ಲ.

ಇಂತಹ ಪ್ರಕರಣರಣದಲ್ಲಿ ಹೊಸ ಸಿದ್ಧಾಂತವು ಹಳೆಯದಕ್ಕೆ ಸವಾಲಾಗಿ ನಿಲ್ಲುತ್ತದೆ. ಅಂದರೆ ಹೊಸ ಆಧಾರ ಕಲ್ಪನೆಯು ಹಿಂದಿನದಕ್ಕಿಂತಲೂ ಹೆಚ್ಚು ನಿರ್ಧಿಷ್ಟತೆ ಒದಗಿಸುತ್ತದೆ. ಹೊಸದು ಈಗ ಅಧಿಕ ನಿಖರ ಮುನ್ಸೂಚನೆಗೆ ಪೂರಕವಾಗಿರುತ್ತದೆ. ಇಲ್ಲಿ ಕಾಲಕ್ರಮೇಣದ ಅಧ್ಯಯನಕ್ಕೆ ಸಮಯಾವಕಾಶ ನೀಡುವುದರಿಂದ ಸಂಶೋಧನೆ ಮತ್ತಷ್ಟು ಸ್ಪಷ್ಟವಾಗುತ್ತದೆ.

ವೈಜ್ಞಾನಿಕ ಸಂಶೋಧನೆಯು ವೈಜ್ಞಾನಿಕ ಪದ್ಧತಿಯ ಅಳವಡಿಕೆಯನ್ನು ಅವಲಂಬಿಸಿದೆ. ಈ ಮೂಲಕ ಅದು ಕುತೂಹಲವನ್ನು ಬಡಿದೆಬ್ಬಿಸಿ ಫಲಿತಾಂಶಕ್ಕಾಗಿ ಸಜ್ಜುಗೊಳಿಸುತ್ತದೆ. ಇಂತಹ ಸಂಶೋಧನೆಯು ವೈಜ್ಞಾನಿಕ ಮಾಹಿತಿ ಮತ್ತು ನಿಸರ್ಗದ ಸಿದ್ಧಾಂತಗಳ ವಿವರಣೆಯನ್ನು ಒದಗಿಸುತ್ತದೆ. ಅಲ್ಲದೇ ನಮ್ಮ ಸುತ್ತಲಿನ ಜಗತ್ತಿನ ಬಗೆಗಿನ ಮೂಲಭೂತ ಅಂಶಗಳನ್ನು ಪರಿಚಯಿಸುತ್ತದೆ. ಇದು ಪ್ರಾಯೋಗಿಕ ಅಳವಡಿಕೆಗಳನ್ನು ಸಾಧ್ಯವಾಗಿಸುತ್ತದೆ.

# ೧. ಕಾವ್ಯ
# ಇಪ್ಪತ್ತನೆಯ ಶತಮಾನದ ಕೊಲಂಬಸ್

**– ಕೆ.ಎಸ್. ನಿಸಾರ್ ಅಹಮದ್**

೧

ನಾನು –
ದಿಗ್ದಿಗಂತದ ಬೆಳ್ಳಿಗೆರೆಗೆ ಆಶಿಸಿದವನು,
ಕಲ್ಲಲ್ಲಿ ಸಿರಿ, ನೆಲದಲ್ಲಿ ಝರಿ, ಕಾಡೊಳಗು ದಾರಿಯನು ಕನಸಿದವನು,
ನಗುವ ಭಡವರ ನಡುವೆ ಎಡವಿಬಿದ್ದರು, ಎದ್ದು
ಗೆದ್ದೆ ಬರುವೆನು ಎಂದು ಕಾರವಾನಿನ ಸೇನೆ ಜೊತೆಗೆ ಹೊರಟವನು

ಅರಮನೆಯ ದಾರಿಯಲಿ ಬೆಡಗಿಯರ ದಂಡು–
"ಅವರ ಎಡಗಡೆ ಗುಂಡು, ಅವರ ಬಲಗಡೆ ಗುಂಡು"
ಕಂಡು ಸುಖವುಂಡು ಮೆರೆಯಬಹುದಿತ್ತು;
ಬಂಧು ಬಳಗದ ಪಾದ ಸಮೆದ ಹಾದಿಯ ಹಿಡಿದು ಸಾಗಬಹುದಿತ್ತು;
ಇದ್ದಕಿದ್ದಂತೇಕೋ ಮಧ್ಯ ರಾತ್ರಿಯ ನಿದ್ದೆ ಸಂತೆ ಗದ್ದಲವಾಗಿ
ಅರಸುಗುವರನ ಧೈರ್ಯ ಬೆನ್ನುಬಿತ್ತು.

ಹಡಗಿನಟ್ಟದ ಮೇಲೆ ಹೊತ್ತು ಸುಸ್ತಾದಾಗ,
ಇರುಳರಳಿ ಎದ್ದಾಗ,
ಮೇಲೆ ಕಕ್ಕಾಬಿಕ್ಕಿಯಾಗಿ ಚಿಕ್ಕೆ ಸಮೂಹ:
"ಬೇಡ ಮರುಧರೆಯಲ್ಲಿ ನೀರ ದಾಹ,

ಬಿಟ್ಟ ಕಡೆ
ಮರಳಿ ನಡೆ,
ನೆರಳಿನಾಳದ ಗಾಳಕೇಕೆ ಮೋಹ?"

– ಚೆಲುವು ಮೋಡದ ಮರೆಗೆ ಸಿಡಿಲ ಕಾರ್ಖಾನೆ
ಇರುವುದನು ನಂಬುವುದು ಹೇಗೆ ತಾನೆ?

ಹಾವಿಗೆರೆದೆನೆ ಹಾಲ?
ತಳ್ಳಬೇಕಿದೆ ಬೇಡ ಪಡೆಯ ನಡುವೆಯ ಬಾಳ!
ವರುಷ ನೂರರ ಒರಲೆ ತಿಂದ ತೊಲೆಯಿದೊ ತಂದೆ,
ಕಣ್ಣ ಕಡಿದರು ಅಯ್ಯೋ ನಿದ್ದೆಯಿಲ್ಲ!
ನಡೆದಾಟವೋ ತೂಗು–ಕತ್ತಿಯ ಕೆಳಗೆ
ಹದ್ದುಗಣ್ಣಿನ ಹಸಿವು ಕತ್ತಲೊಳಗೆ–
ತಿನಿಸು ಕಾಣದ ಬಾಯ ಚಾಟಿ ಏಟಿನ ಚುರುಕು;
ಮನಸು ರೇಸಿನ ಕುದುರೆ,
ಬುದ್ಧಿ ಬೆದರಿದೆ ಇರದೆ ಮೂಗುದಾರ!
ಎಲೆ ತುದಿಯ ಹನಿ, ಎಳೆಯ ದಾರದ ಏಣಿ ನೆಚ್ಚಿನಿಂತೆ;
ಕೋಳಿ ಕಹಳೆಯ ವೇಳೆ ಒಂದೆ ಮಾರು;
ತೋಡ, ಭಿಲ್ಲರ ಬಿಲ್ಲು ಕಂಡು ಉಡುಗಿದೆ ಮಾತೆ,
ತೋರಬಾರದೆ ಹಸಿರು, ನೆಲದ ಗೀರು?

ಹುಬ್ಬನೇರಿಸಿ, ಕೈಯನೆತ್ತಿ ಮಬ್ಬನು ಸರಿಸಿ ಕಣ್ಣ ಹರಿಸಿದೆ ಮುದುಕ
ತೆರೆದ ಬಾಗಿಲು ಬಾಯಿ; ಬೆರಳು ಮೂಗಿನ ಮೇಲೆ, ಮನಸು ಮೂಕ?
ದೂರ ದಂಡೆಯ ಮೇಲೆ ಮೂಡು–ಬಣ್ಣದ ಹೆಜ್ಜೆ
ಮಣ್ಣು ಮರ ಗಿಡಕೆಲ್ಲ ಎಂಥದೋ ಲಜ್ಜೆ!
ಮೂಡಣದ ಬಾನೊಂದು ಚೆಲುವು ತುಂಬಿದ ಮಂಡಿ
ಹೊದರು ಮರಬಳ್ಳಿಗಳು ಮಧುರ ನಾದದ ಹುಂಡಿ–
ಹೊಸಲೋಕ, ಹೊಸಲೋಕ
Eureka! Eureka!

೨

ಪಡುವಣದ ಬೆಟ್ಟಗಳ ಮೇಲೆ ನೆಟ್ಟಿತು ಸಂಜೆ ತನ್ನ ವಿಜಯ ಪತಾಕೆ,
ಕಡಲ ಮಡಿಲನು ಹೊಕ್ಕೆ;
ಮನಸಿನಾಸೆಗೆ ಮೂಡಿಬಂತು ರೆಕ್ಕೆ;
ಪುಲಕದಲೆಯೊಂದೆದ್ದು ಕುಣಿಯೆ, ತಟ್ಟಿತು ಒಳಗೆ
ಬಿಸಿಯ ನೆತ್ತರ ಶಾಖ ನರನರಕ್ಕೆ;
ಹಾರಿದಷ್ಟೂ ದೂರ ದೂರವಾಯಿತು ತಾಯಿನಾಡ ಹಕ್ಕೆ!

ಇತರರೆದೆಯಾಳದಲಿ ಸುಳಿವ ಅಲೆಗಳನಳೆವ ಹುಚ್ಚು ನನಗೆ,
ಭೂಕಂಪ ಮಾಪನದ ಯಂತ್ರವಾದೆ;

ಅಪರಿಚಿತ ಬಂಡೆಗಳ ಒಳಗೆ ಮಿಂಚಿನ ನಡಿಗೆ,
ನೂರು ಹರಿದಾರಿಗಳ ಸಂಚರಿಸಿದೆ!
ಎತ್ತರೆತ್ತರಕೆಸೆದ ಕಲ್ಲು ನಾನು;
ಮಣ್ಣಿನಂಟಿಗೆ ಹೇಸಿ ತಾರೆಗಳ ಗೆಳೆತನವ ಬಯಸಿದವನು–
ಮೇಲು ಮೇಲಕೆ ಮೊಗವ ಚಾಚಿದವನು,
ಆದರೇಕೋ ನನ್ನ ಬಾಚಿ ತಬ್ಬದು ಬಾನು ಗಾಳಿ ತಡೆಯದು ತಾನು,
ಮತ್ತೆ ಬಿದ್ದೆನೆ ಹಾಳು ನೆಲದ ತೊಡೆಗೆ?

ಮರಳ ದಂಡೆಯ ಮೇಲೆ ಸಂಭ್ರಮವಿದೇನೆಂದೆ?
ನಾಡ ಮಕ್ಕಳ ಇಂಥ ಕೇಕೆ, ಹರ್ಷೋದ್ಗಾರ ಏತಕೆಂದೆ?
ಅರಿತೆನರಿತೆನು ಓಹೋ! ಸೃಷ್ಟಿಯಖಿಲಕೆ ನಾನು ದೃಷ್ಟಿದಾತ–
ಜಗದ ಸೊಟ್ಟನು ತಿದ್ದಿಕೊಟ್ಟ ಭಾನು,
ದಾರಿತಪ್ಪಿದ ಬದುಕ ಹಿಡಿದು ನಿಲ್ಲಿಸಿದವನು, ಜಗದ ತಂದೆ,
ಎಂದುಕೊಂಡೆ–
ನನ್ನ ಬರುವಿಕೆಗಾಗಿ ಕಾದು ನಿಂತಿದೆ ಮುಂದೆ
ಸಕಲ ಜನ ಪರಿವಾರ
ಹಿಡಿದು ಕೈಕೈಯಲ್ಲಿ ಬೆಳಕ ಹಾರ.
ಸಾಮಾನ್ಯನೆ ನಾನು? ಸಹರದಾಚೆಯ ರಾಯಭಾರಿ, ಸರದಾರ,
ಕಡಲ ಬೆನ್ನ ಸವಾರ!

ಗಹಗಹಿಸಿ ನಕ್ಕೆ;
ಕೆಂಡ–ಕಣ್ಣಿನ ಜನತೆ; ಕೊಡಲಿ, ಗುದ್ದಲಿ, ಸನಿಕೆ!
ಚಿಕ್ಕೆ ಬಳಗದ ತೆಕ್ಕೆಯೊಳಗೆ ಸಿಕ್ಕಿದ ಮುಗಿಲ
ನೆನೆದು ನಕ್ಕೆ!
ಗಳಿಗೆ ಗಳಿಗೆಗೂ ನನ್ನ ಬಾಳ ತುಳಿಯುತಲಿರುವ
ನೆರಳ ಸಪ್ಪಳ ಜಗಕೆ ಕೇಳಬೇಕೆ?
ನೆರಳ ಸಪ್ಪಳ ಜಗಕೆ ಕೇಳದೇಕೆ?
ನಾನಿಷ್ಟೆ ಲೋಕಕ್ಕೆ;
ತೇದಂತೆ ಕರಗುವ ಗಂಧದೊಂದು ಚಕ್ಕೆ!

❑

# ೨. ಪ್ರಬಂಧ
# ಕಳಚುವುದು ಹೇಗೆ?

**– ಪ್ರಸನ್ನ**

I don't know who I am or was, I know only my chaos

- Guan Gelman
Argentine Poet

ಯಂತ್ರಗಳನ್ನು ಬಲವಂತದಿಂದ ಧ್ವಂಸ ಮಾಡಬಹುದೆ? ಅಥವಾ ಎಲ್ಲೆಲ್ಲಿ ಕಾರ್ಖಾನೆಗಳಿವೆಯೋ ಅಲ್ಲಿಗೆ ಹೋಗಿ, ಪಿಕೆಟಿಂಗ್ ಮಾಡಿ, ಕಾರ್ಖಾನೆಗಳನ್ನು ಮುಚ್ಚಿಸಬಹುದೇ? ಅಥವಾ ವಿಧ್ವಂಸಕ ಕೃತ್ಯಗಳ ಮೂಲಕ – 'ಅರ್ಥಾತ್' ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಮೂಲಕ, ಯಂತ್ರಗಳನ್ನು ಉಡಾಯಿಸಬಹುದೆ? ಹಾಗೆ ಮಾಡಲಾಗದು. ಏಕೆಂದರೆ, ಇಡೀ ಮಾನವ ಜನಾಂಗವೇ ಯಂತ್ರನಾಗರೀಕತೆಯಲ್ಲಿ ಕರಗಿಹೋಗಿದೆ. ಮಾನವರೇ ಏಕೆ, ಪ್ರಾಣಿಸಂಕುಲಗಳು ಸಹ ಯಂತ್ರ ನಾಗರೀಕತೆಯ ಪ್ರಭಾವಕ್ಕೆ ಒಳಗಾಗಿದೆ.

ಮನುಷ್ಯನಂತೂ ಯಂತ್ರಗಳಿಲ್ಲದೆ ನಡೆಯಲಾರ, ಮಲಗಲಾರ, ಯೋಚಿಸಲಾರ, ರಂಜಿಸಲಾರ, ಪ್ರೀತಿಸಲಾರ, ಉಸಿರಾಡಲಾರ, ನಾವು ಬಿಡಿ! ನಮ್ಮ ಮಕ್ಕಳು ನಮಗಿಂತ ಮಿಗಿಲಾಗಿ, ಯಂತ್ರಗಳ ದಾಸರಾಗಿದ್ದಾರೆ; ನಾವು ಬಯಸಿ ದಾಸರಾದರೆ, ಅವರು, ಬಯಸದೆ, ತಿಳಿಯದೆ, ಯಂತ್ರ ನಾಗರೀಕತೆಯೊಳಗೆ ಮುಗ್ಧ ರೀತಿಯಲ್ಲಿ ಹುಟ್ಟಿದ್ದಾರೆ. ಇಂದಿನ ಮಕ್ಕಳಿಗೆ ನದಿ, ತೊರೆ, ಬೆಟ್ಟ, ಗುಡ್ಡ, ಕಾಡು ಮೇಡುಗಳಷ್ಟೇ ಸಹಜವಾದದ್ದು ಯಂತ್ರಚಾಲಿತ ವಾಹನಗಳು, ಕಂಪ್ಯೂಟರ್‌ಗಳು, ಕಾಂಕ್ರೀಟು ಹಾಗೂ ಗಾಜಿನ ಮನೆಗಳು. ಯಂತ್ರಗಳನ್ನು ಕಳಚುವುದು ಸುಲಭದ ಮಾತಲ್ಲ.

**ಪೆಟ್ಟುಕೊಟ್ಟು ಕಳಚಬೇಡಿ**

ಯಂತ್ರಗಳಿಗೆ ಕೊಡುವ ಪ್ರತಿಯೊಂದು ಪೆಟ್ಟೂ, ಅದನ್ನೂ ಅಪ್ಪಿ ಹಿಡಿದಿರುವ ಮಾನವ ಕೈಗಳ ಮೇಲೆ ಬೀಳುತ್ತದೆ. ಯಂತ್ರಗಳ ಮೇಲೆ

ನಡೆಸುವ ಪ್ರತಿಯೊಂದು ಬಲವಂತವು ಮಾನವರ ಮೇಲೆ ನಡೆಸುವ ಬಲವಂತವೇ ಆಗುತ್ತದೆ. ಕೋಟ್ಯಾಂತರ ಯಂತ್ರಚಾಲಕರು ಕೆಲಸ ಕಳೆದುಕೊಳ್ಳುತ್ತಾರೆ. ಅಪಾರವಾದ ನೋವು ಹಾಗೂ ರಾಜಕೀಯ ಹಿಂಸೆಗಳಿಗೆ ಚಳುವಳಿಯು ಕಾರಣವಾಗುತ್ತದೆ. ಪೆಟ್ಟು ಕೊಟ್ಟು ಯಂತ್ರಗಳನ್ನು ಕಳಚುವುದು ಖಂಡಿತಾ ಸಾಧ್ಯವಿಲ್ಲ.

## ಆದರೆ ಯಂತ್ರಗಳನ್ನು ಕಳಚುವುದು ಅಸಾಧ್ಯವೇನಲ್ಲ

ನಾವು ಅಷ್ಟಾಗಿ ಗಮನಿಸದ ಸರಳ ಸತ್ಯವೊಂದಿದೆ. ಅದೇಂದರೆ, ಯಂತ್ರಗಳು ನಮ್ಮನ್ನು ಹಿಡಿದಿಲ್ಲ, ನಾವೇ ಯಂತ್ರಗಳನ್ನು ಹಿಡಿದಿದ್ದೇವೆ; ಎಲ್ಲಿ ಅವು, ನಮ್ಮ ಕೈಬಿಟ್ಟು ಹೋಗುವವೋ ಎಂಬ ಹೆದರಿಕೆಯಿಂದ ಹಿಡಿದಿದ್ದೇವೆ. ನಿರ್ಜೀವವಾದ ಯಂತ್ರಗಳು, ತಂತಾನೆ ಯಾರನ್ನೂ ಹಿಡಿಯಲಾರವು, ಅಥವಾ ಯಾರನ್ನೂ ಬಿಡಲಾರವು. ಹಾಗಾಗಿ ಯಂತ್ರಗಳನ್ನು ಕಳಚುವುದೆಂದರೆ, ಯಂತ್ರಗಳ ಮೇಲಿನ ನಮ್ಮ ಹಿಡಿತವನ್ನು ಕಳಚುವುದು ಎಂದಷ್ಟೇ ಅರ್ಥ; ಅಂದರೆ ಯಂತ್ರಗಳ ಮೇಲಿನ ನಮ್ಮ ಅವಲಂಬನೆಯನ್ನು ಕಳಚುವುದು ಎಂದರ್ಥ. ಯಂತ್ರಗಳನ್ನು ಕಳಚಬೇಕಾಗಿರುವುದು, ನಮ್ಮ ಬದುಕಿನಲ್ಲಿ ಕಾರ್ಖಾನೆಗಳಲ್ಲಲ್ಲ.

ಯಂತ್ರಗಳ ಮೇಲಿನ ಅವಲಂಬನೆಯನ್ನು ಕಳಚಿದಾಗ, ಯಂತ್ರಗಳು ತಂತಾನೆ ಉದರಿಹೋಗುತ್ತವೆ. ಬೇಡಿಕೆ ಕುಸಿದಂತೆ, ಹೊಸ ಯಂತ್ರಗಳ ತಯಾರಿಕೆಯು ಕುಸಿಯತೊಡಗುತ್ತದೆ. ಒಂದು ದಿನ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಆಗ ಯಂತ್ರಗಳನ್ನು ಅಪ್ಪಿ ಹಿಡಿದಿರುವ ನಮ್ಮ ಕೈಗಳು ತೆರವಾಗಿ, ಕೈಕೆಲಸಗಳಿಗೆ ಅಳಬ್ಯವಾಗುತ್ತದೆ. ಕಾಲುಗಳು ನಡಿಗೆಗೆ ಲಭ್ಯವಾಗುತ್ತದೆ, ಕಣ್ಣು, ಕಿವಿಗಳು ನಿಜವಾದ ಮನರಂಜನೆ, ನಿಜವಾದ ಮಾತುಕತೆಗಳಿಗೆ ಲಭ್ಯವಾಗುತ್ತದೆ. ಮನಸ್ಸು ಪ್ರಕೃತಿಯತ್ತ ಹೊರಳುತ್ತದೆ. ನಾಲಿಗೆ ಸಹಜ ರುಚಿಗಳನ್ನು ಬೇಡುತ್ತದೆ. ಆತ್ಮವು ದೇವರನ್ನು ಧ್ಯಾನಿಸುತ್ತದೆ. ಮನುಷ್ಯನ ಸಹಜ ಜೀವನಕ್ಕೆ ಅಡ್ಡಿಬಾರದ ಕೆಲವು ಸರಳ ಯಂತ್ರಗಳು ಪ್ರಾಯಶಃ ಉಳಿಯುತ್ತವೆ. ಉಳಿಯಲಿ, ಇತ್ತ ಯಂತ್ರ ತಯಾರಕರಿಗೆ, ವೃತ್ತಿ ಬದಲಾವಣೆಗೆ ಸಮಯ ಸಿಕ್ಕುವುದರಿಂದ ಅವರೂ ನಿರ್ನಾಮವಾಗುವುದಿಲ್ಲ.

ಯಂತ್ರಗಳ ಅಡಿಯಾಳಾಗಿರುವ ನಾವು, ಕ್ರಮಕ್ರಮವಾಗಿ ಬಿಡುಗಡೆ ಪಡೆಯಬೇಕಾಗಿದೆ. ಆದರೆ ಸಣ್ಣದೊಂದು ತ್ಯಾಗದ ಅಗತ್ಯವಿದೆ; ಸುಲಭ

ಜೀವನ, ಐಶಾರಾಮಿ ಬದುಕು ಹಾಗೂ ಅತಿವೇಗದ ಹವ್ಯಾಸವನ್ನು ತ್ಯಾಗ ಮಾಡಬೇಕಾಗುತ್ತದೆ ನಾವು. ಯಾಕಾಗಬಾರದು? ಇಷ್ಟಕ್ಕೂ ಅವು, ತ್ಯಾಗ ಮಾಡಲಿಕ್ಕೆ ಅರ್ಹವಾದ ಸಂಗತಿಗಳೇ ಆದ್ದರಿಂದ, ತ್ಯಾಗ ಮಾಡುವುದರಲ್ಲಿ ಹಾನಿಯೇನಿದೆ? ಯಂತ್ರಗಳನ್ನು ಕಳಚುವ ಚಳುವಳಿಯು ನಮ್ಮ ಆರೋಗ್ಯ ಸುಧಾರಣೆಯ ಚಳುವಳಿಯೂ ಹೌದು.

**ಗಾಂಧೀಜಿಯವರ ನೆನಪು**

ಯಂತ್ರಗಳನ್ನು ಕಳಚಹೊರಟವರು ಗಾಂಧೀಜಿಯವರನ್ನು ನೆನೆಯದೆ ಗತ್ಯಂತರವಿಲ್ಲ. 'ಮನುಷ್ಯ ಯಂತ್ರಗಳ ಅಡಿಯಾಳಾಗುತ್ತಿದ್ದಾನೆ' ಎಂದು ಒಂದು ನೂರು ವರ್ಷದ ಹಿಂದೆ ಎಚ್ಚರಿಕೆ ನೀಡಿದ್ದರು ಗಾಂಧೀಜಿ. ಮಹಾನ್ ಲೇಖಕ ಟಾಲ್‌ಸ್ಟಾಯ್ ಕೂಡಾ ಐಶಾರಾಮಿ ಜೀವನ ಹಾಗೂ ಯಂತ್ರ ನಾಗರೀಕತೆಯ ವಿರುದ್ಧ ಎಚ್ಚರಿಕೆ ನೀಡಿದ್ದ. ಇನ್ನೂ ಅನೇಕರು ಎಚ್ಚರಿಕೆ ನೀಡಿದ್ದರು.

ಗಾಂಧೀಜಿಯವರನ್ನು ಇಲ್ಲಿ ನೆನೆಯಲಿಕ್ಕೆ ಮತ್ತೊಂದು ಕಾರಣವಿದೆ. ಗಾಂಧೀಜಿಯವರು ಪ್ರತಿಪಾದಿಸಿದ ಸತ್ಯಾಗ್ರಹ ತಂತ್ರವು ಯಂತ್ರಗಳನ್ನು ಕಳಚುವ ಅಂದೋಲನಕ್ಕೆ ಸೂಕ್ತವಾದ ಮಾರ್ಗವಾಗಿದೆ. ಸತ್ಯಾಗ್ರಹದ ಮೂಲ ಆಶಯವೆಂದರೆ, ನಾವು ಬದಲಾಗುವುದು ಹಾಗೂ ನಮ್ಮ ಬದಲಾವಣೆಯ ಮಾದರಿಯನ್ನು ಮುಂದಿಟ್ಟುಕೊಂಡು, ಇತರರಿಗೆ ಬದಲಾಗುವಂತೆ ಆಗ್ರಹಿಸುವುದು. ಗಾಂಧೀಜಿಯವರನ್ನು ನಾವು ನೆನೆಯಬೇಕಾದ್ದು, ಸತ್ಯಾಗ್ರಹವೆಂಬ ಅಹಿಂಸಾತ್ಮಕಸ್ತ್ರವನ್ನು ಅವರು ನೀಡಿದರು ಎಂಬ ಕಾರಣಕ್ಕಾಗಿ.

ಯಂತ್ರಗಳನ್ನು ಕಳಚುವ ಚಳುವಳಿಯೆಂದರೆ, ಇತ್ತ ವೈಯಕ್ತಿಕ ಬದುಕಿನಲ್ಲಿ ಯಂತ್ರಗಳ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುವ ನೈತಿಕ ಚಳುವಳಿಯೂ ಹೌದು. ಸಾಮಾಜಿಕ ಚಳುವಳಿಯೂ ಹೌದು. ಅರ್ಥಾತ್, ಅಂತರಂಗ ಶುದ್ಧಿ ಹಾಗೂ ಬಹಿರಂಗ ಶುದ್ಧಿಯ ಎರಡೂ ಚಳುವಳಿಗಳೂ ಮಿಳಿತವಾಗಿವೆ, ಯಂತ್ರಗಳನ್ನು ಕಳಚುವಲ್ಲಿ. ಈ ಅರ್ಥದಲ್ಲಿ ಅದು ಆಧ್ಯಾತ್ಮಿಕ ಚಳುವಳಿಯೂ ಹೌದು.

## ಚಳುವಳಿಯ ವಿಸ್ತಾರ

ಯಂತ್ರ ನಾಗರೀಕತೆ ತಲುಪದ ಜಾಗವೇ ಇಲ್ಲ: ಪರಿಸರ, ನೈತಿಕತೆ, ಧರ್ಮ, ರಾಜಕಾರಣ, ಕುಟುಂಬ ವ್ಯವಸ್ಥೆ, ಹಣಕಾಸು.... ಇತ್ಯಾದಿಯಾಗಿ, ಬದುಕಿನ ಎಲ್ಲ ಕ್ಷೇತ್ರಗಳನ್ನೂ ಅದು ಆವರಿಸಿಕೊಂಡಿದೆ. ಹಾಗಾಗಿ ಯಂತ್ರಗಳನ್ನು ಕಳಚುವ ಚಳುವಳಿಯೂ ಸಹ ಈ ಎಲ್ಲ ಕ್ಷೇತ್ರಗಳನ್ನೂ ಪ್ರವೇಶಿಸುವುದು, ಹಾಗೂ ಎಲ್ಲ ಕ್ಷೇತ್ರಗಳಲ್ಲಿ ಈಗಾಗಲೇ ನಡೆದಿರುವ ಇತ್ಯಾತ್ಮಕ ಚಳುವಳಿಗಳ ಜೊತೆ ಸಂಬಂಧ ಬೆಸೆಯುವುದು ಅಗತ್ಯವಾಗಿದೆ. ಅಥವಾ ಈ ಎಲ್ಲ ಕ್ಷೇತ್ರಗಳಲ್ಲಿ ನಡೆದಿರುವ ಚಳುವಳಿಗಳ ಸಮಗ್ರ ರೂಪವೇ ಯಂತ್ರಗಳನ್ನು ಕಳಚುವ ಚಳುವಳಿ ಎನ್ನಬಹುದಾಗಿದೆ.

ಪರಿಸರ ಚಳುವಳಿಯೆಂಬುದು, ಕಾರ್ಖಾನೆಗಳನ್ನು ಮುಚ್ಚಿಸುವ ದ್ವೇಷದ ರಾಜಕೀಯ ಮಾತ್ರವಾಗದೆ, ಪರಿಸರದಲ್ಲಿ ನಾವು ವೈಯಕ್ತಿಕವಾಗಿ ಸೃಷ್ಟಿಸುತ್ತಿರುವ ಪ್ರದೂಷನವನ್ನು ನಿವಾರಿಸುವ ಪ್ರಾಮಾಣಿಕ ಯತ್ನವಾಗಬೇಕು. ನಂತರದಲ್ಲಿ ಮಾತ್ರ ಇತರರನ್ನು ಆಗ್ರಹಿಸುವ ಚಳುವಳಿಯಾಗಬೇಕು.

ರಾಜಕಾರಣಿಗಳ ಬಟ್ಟೆ ಮಲೀನವಾಗಬೇಕು, ಕೈಕೆಸರಾಗಬೇಕು. ಆರ್ಥಿಕತೆ ಎಂಬುದು ದುಡ್ಡಿನ ದಳ್ಳಾಳಿತನವಾಗದೆ, ದುಡಿಮೆಗೆ ಸಿಕ್ಕುವ ಸೂಕ್ತ ಪ್ರತಿಫಲವಾಗಬೇಕು. ಕುಟುಂಬ ವ್ಯವಸ್ಥೆ ಎಂಬುದು ಪರಸ್ಪರ ಸಮಾನತೆ ಹಾಗೂ ಗೌರವಗಳ ಬುನಾದಿಯ ಮೇಲೆ ಕಟ್ಟಿದ ಮನೆಯಾಗಿರಬೇಕು. ಆಧುನೀಕೋತ್ತರ ಸಂದರ್ಭದಲ್ಲಿ ಸೋತು ಮಲಗಿರುವ ಎಲ್ಲ ಸಾಮಾಜಿಕ ಚಳುವಳಿಗಳಿಗೆ, ಯಂತ್ರಗಳನ್ನು ಕಳಚುವ ಚಳುವಳಿಯು ಹೊಸ ಜೀವ ನೀಡಬೇಕು. ಸೈದ್ಧಾಂತಿಕತೆಯ ಅತಿಯಾದ ಮೋಹವನ್ನು ತೊರೆದು, ಸರಳ ಉದ್ದೇಶದೊಂದಿಗೆ ಹೊರಡಬೇಕು ನಾವು; ಚಳುವಳಿಯು ಎಲ್ಲರನ್ನೂ ಒಳಗೊಳ್ಳಬೇಕು.

ಯಂತ್ರಗಳನ್ನು ಕಳಚುವ ಚಳುವಳಿಯೆಂಬುದು ಮನುಷ್ಯನ ಚೈತನ್ಯಶೀಲತೆಗೆ ತೆರೆದುಕೊಂಡ ಬಾಗಿಲಾಗಬೇಕು.

❑

# ೩. ಲೇಖನ

# ಜ್ಯೋತಿಷ್ಯ – ಅರ್ಥಪೂರ್ಣವೋ ಅರ್ಥರಹಿತವೋ?

**– ಡಾ. ಎಚ್. ನರಸಿಂಹಯ್ಯ (ತೆರೆದಮನ)**

ನಮಗೆಲ್ಲ ತಿಳಿದಿರುವಂತೆ ಜ್ಯೋತಿಷ್ಯದ ಪ್ರಕಾರ ಮನುಷ್ಯನ ನಡುವಳಿಕೆಗಳ ಮೇಲೆ ಗ್ರಹಗಳ ಪ್ರಭಾವ ವ್ಯಾಪಕವಾದದ್ದು. ಶತಮಾನಗಳಿಂದ ಜನಪ್ರಿಯವಾಗಿರುವ ಈ ನಂಬಿಕೆ ಎಲ್ಲ ದೇಶದ ಜನರ ಮನಸ್ಸಿನಲ್ಲಿ ಗಾಢವಾಗಿ ಬೇರೂರಿದೆ. ಪ್ರಕೃತಿಯ ಘಟನೆಗಳು ಆದಿಮಾನವನಿಗೆ ಭಯಭಕ್ತಿಯನ್ನುಂಟುಮಾಡಿದ್ದು, ಅವನ ಬಹುಪಾಲು ನಂಬಿಕೆಗಳು ಈ ಹಿನ್ನಲೆಯಲ್ಲಿಯೇ ರೂಪುಗೊಂಡವು. ಮಿಂಚು ಗುಡುಗುಗಳು ಅವನಿಗೆ ಸಾಕಷ್ಟು ಭಯವನ್ನುಂಟುಮಾಡಿರಬೇಕು. ಮಧ್ಯಾನ್ಹದಲ್ಲಿ ಗ್ರಹಣ ನಡೆದಾಗ ಕತ್ತಲು ಮುಸುಕಿದ್ದು ಎಂತಹ ಧೈರ್ಯಶಾಲಿಯಾದ ಆದಿಮಾನವನಿಗೂ ನಡುಕವನ್ನುಂಟುಮಾಡಿರಬೇಕು. ಭೂಕಂಪವು ಅವನಿಗೆ ಹೆಚ್ಚಿನ ದಿಗಿಲನ್ನು ತಂದಿರಬೇಕು. ಕನಸು, ರೋಗಗಳು, ಸಾವು ಇವೆಲ್ಲಾ ಅವನಿಗೆ ರಹಸ್ಯಗಳಾಗಿರಬೇಕು.

ಪ್ರಾಚೀನ ಜ್ಯೋತಿಷ್ಯದ ಉಗಮವು ಖಗೋಳಶಾಸ್ತ್ರದಲ್ಲಿ ಕಂಡುಬರುತ್ತದೆ. ಖಗೋಳಶಾಸ್ತ್ರವು ವಿಜ್ಞಾನವಾದ್ದರಿಂದ ಅದು ಬೆಳೆಯುತ್ತಾ ಬಂದಿದೆ. ವಿಜ್ಞಾನದ ಎಲ್ಲ ಪ್ರಯೋಗಗಳು, ತಾತ್ಕಾಲಿಕವಾಗಿದ್ದು, ಅಧಿಕಾರಮುಕ್ತವಾಗಿ, ಕುರುಡಾಗಿ ಅದು ಮಾತಾಡುವುದಿಲ್ಲ. ವಿಜ್ಞಾನದ ಎಲ್ಲಾ ಸಿದ್ಧಾಂತಗಳು, ನಿಯಮಗಳು ಹೊಸ ಸಂಶೋಧನೆಯ ಬೆಳಕಿನಲ್ಲಿ ಪುನರ್‌ರಚಿತವಾಗುತ್ತವೆ. ಯಾವುದೇ ಒಂದು ವಿಷಯ ವಿಜ್ಞಾನ ಎನಿಸಿಕೊಳ್ಳಬೇಕಾದರೆ ಅದು ವಸ್ತುನಿಷ್ಠತಡ, ಪುನರಾವೃತ್ತಿಯ ಸಾಮರ್ಥ್ಯ, ದೃಢತೆ, ವಿಶ್ವಮಾನ್ಯತೆ – ಈ ಎಲ್ಲ ರೀತಿಯ ಅಂಶಗಳನ್ನು ತೃಪ್ತಿಪಡಿಸಬೇಕಾಗುತ್ತದೆ. ವಿಜ್ಞಾನದ ಎಲ್ಲ ಶಾಖೆಗಳು ಅಪೂರ್ಣತೆಯಲ್ಲಿಯೇ ಆರಂಭವಾಗುತ್ತದೆ. ಇದಕ್ಕೆ ಕಾರಣ ಜ್ಞಾನದ ಮಿತಿ ಮತ್ತು ಆ ಕಾಲದಲ್ಲಿ ಬಳಕೆಯಲ್ಲಿದ್ದ ಒರಟಾದ ಉಪಕರಣಗಳು, ಕೆಲವು

ಸಂದರ್ಭಗಳಲ್ಲಿ ತಪ್ಪು ಗ್ರಹಿಕೆಗಳು ಕೂಡ ಈ ಬಗೆಯ ಅಪೂರ್ಣತೆಗೆ ಕಾರಣವಾಗುತ್ತವೆ. ಆದರೆ ನಿರಂತರ ಸತ್ಯಶೋಧನೆಯ ಹಂಬಲ ವಿಜ್ಞಾನದ ಮಹೋನ್ನತಿಯಾಗಿದೆ.

ವಿಜ್ಞಾನದ ಇತರ ಶಾಖೆಗಳಂತೆ ಪ್ರಾಚೀನ ಖಗೋಳಶಾಸ್ತ್ರ ಸಹ ಹಲವಾರು ತಪ್ಪುಗ್ರಹಿಕೆಗಳನ್ನು ಪಡೆದುಕೊಂಡಿತ್ತು. ನಕ್ಷತ್ರ ಖಚಿತವಾದ ಆಕಾಶ ಮತ್ತು ಚಂದ್ರ ಮೊದಲಿನಿಂದಲೂ ಮನುಷ್ಯನನ್ನು ಆಕರ್ಷಿಸಿದ್ದವು. ಕುತೂಹಲ ಮತ್ತು ಸೂಕ್ಷ್ಮ ನಿರೀಕ್ಷಣಾ ಶಕ್ತಿಯಿರುವ ಜನರು ಅವುಗಳ ಬಗ್ಗೆ ಮತ್ತಷ್ಟು ತಿಳಿಯಲು ಪ್ರಯತ್ನಿಸಿದರು. ಆಗ ವಿಷಯವನ್ನು ತಿಳಿಯಲು ಅವರಿಗೆ ಕಣ್ಣು ಮಾತ್ರ ಏಕೈಕ ಸಾಧನೆಯಾಗಿತ್ತು. ಪ್ರಾಚೀನ ಖಗೋಳಶಾಸ್ತ್ರ ಹಾಗೂ ಜ್ಯೋತಿಷ್ಯದ ಪ್ರಕಾರ ಒಂಬತ್ತು ಗ್ರಹಗಳಿವೆ. ಅವು ಸೂರ್ಯ, ಚಂದ್ರ, ರಾಹು, ಕೇತು, ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ. ಆದರೆ ಸೂರ್ಯ ಚಂದ್ರರು ಗ್ರಹಗಳಲ್ಲ, ಸೂರ್ಯ ನಕ್ಷತ್ರವಾದರೆ ಚಂದ್ರ ಉಪಗ್ರಹ. ಇದರ ಜೊತೆಗೆ ರಾಹು ಕೇತುಗಳು ಅಸ್ತಿತ್ವದಲ್ಲಿ ಇಲ್ಲದೆ ಇರುವುವು. ಅವು ಅವರ ಕಲ್ಪನೆಯ ಕೃತಕ ಬಿಂದುಗಳು. ಜ್ಯೋತಿಷ್ಯದ ಆಧಾರವಾಗಿರುವ ಒಂಬತ್ತು ಗ್ರಹಗಳಲ್ಲಿ ಎರಡು ಗ್ರಹಗಳೇ ಅಲ್ಲ, ಮತ್ತೆರೆಡು ಇಲ್ಲವೇ ಇಲ್ಲ. ಇಲ್ಲವೆ ಜ್ಯೋತಿಷಿಗಳಿಗೆ ಹೆಚ್ಚಾಗಿದೆ. ಈ ಎಲ್ಲ ಕಾರಣಗಳು ಜ್ಯೋತಿಷ್ಯಕ್ಕೆ ತಪ್ಪಾದ ದುರ್ಬಲ ಅಡಿಪಾಯವನ್ನು ಒದಗಿಸಿವೆ. ಈ ರೀತಿಯ ತಪ್ಪುಗ್ರಹಿಕೆಗಳ ಆಧಾರದಿಂದ ರಚಿತವಾಗಿರುವ ಜ್ಯೋತಿಷ್ಯವನ್ನು ವಿಜ್ಞಾನವೆಂದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ವಿಜ್ಞಾನದ ಪ್ರಕಾರ ಗ್ರಹಗಳು ಸೂರ್ಯನ ಭಾಗಗಳು. ಆದ್ದರಿಂದ ಅವುಗಳು ಸೂರ್ಯನ ರೀತಿಯ ಭೌತಿಕ ಸ್ವರೂಪವನ್ನೇ ಪಡೆದುಕೊಂಡಿವೆ. ಭೂತವಸ್ತುವಿನ ದೊಡ್ಡ ರಾಶಿಗಳಾಗಿರುವ ಗ್ರಹಗಳು ಭೂಮಿಯಿಂದ ಮಿಲಿಯನ್‌ಗಟ್ಟಲೆ ಮೈಲುಗಳ ದೂರದಲ್ಲಿವೆ. ಇವು ಮನುಷ್ಯನ ಜೀವನದ ಘಟನೆಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ಗ್ರಹಿಸುವುದು ಅಸಾಧ್ಯ. ಮನುಷ್ಯನ ಎಲ್ಲ ಗುಣಗಳನ್ನು ಗ್ರಹಗಳಿಗೆ ಆರೋಪಿಸುವುದು ಹಾಸ್ಯಾಸ್ಪದ. ಗ್ರಹಗಳ ಸ್ಥಾನಗಳು, ಶುಭ, ಅಶುಭ, ಸ್ನೇಹಪರ, ಶತ್ರುಗಳು, ಸೇಡಿನ ಭಾವನೆಯನ್ನು ಹೊಂದಿದವು ಎಂಬ ನಂಬಿಕೆ ಪ್ರಚಲಿತವಾಗಿವೆ.

ನಮ್ಮ ಪ್ರಾಚೀನ ಜನಾಂಗದಲ್ಲಿ ತಪ್ಪಾಗಿ, ಒರಟು ಒರಟಾಗಿ ರೂಪಗೊಂಡ ವಿಚಾರಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಈ

ಯುಗದಲ್ಲೂ ಹೆಚ್ಚಿನ ಪ್ರಭಾವವನ್ನು ಬೀರುತ್ತಿರುವುದು ದುರದೃಷ್ಟ. ಸತ್ಯದ ಶೋಧನೆಗೆ ವಿಜ್ಞಾನದ ಮಾರ್ಗಗಳು ಪ್ರಬಲವಾದ ಸಾಧನಗಳು. ಅವೈಜ್ಞಾನಿಕವಾದ ಎಲ್ಲ ವಿಚಾರಗಳನ್ನೂ ಈ ಮಾರ್ಗ ಪರಿಶೀಲಿಸಬಹುದು. ಈ ವಿಧಾನಗಳನ್ನು ಜ್ಯೋತಿಷ್ಯದ ಸತ್ಯಸಂಧತೆ ಅಥವಾ ಅಸತ್ಯವನ್ನು ನಿರ್ಧರಿಸಲು ಸಮರ್ಪಕವಾಗಿ ಉಪಯೋಗಿಸಿ ಕೊಳ್ಳಬಹುದು.

ಜಾತಕಗಳು ಜ್ಯೋತಿಷ್ಯದ ಆಧಾರಗಳ ಮೇಲೆ ರಚಿತವಾಗಿರುತ್ತವೆ. ವ್ಯಕ್ತಿಯು ಹುಟ್ಟಿದಾಗ ಕಂಡುಬರುವ ಗ್ರಹಗತಿಗಳ ಆಧಾರದಿಂದ ಜಾತಕಗಳನ್ನು ಬರೆಯಲಾಗುತ್ತದೆ. ವ್ಯಕ್ತಿಯ ಜೀವನದ ಎಲ್ಲ ಪ್ರಮುಖ ಘಟ್ಟಗಳು ಅದರಲ್ಲಿ ಸುರಕ್ಷಿತವಾಗಿ ಅಡಕವಾಗಿರುತ್ತದೆ ಎಂಬ ನಂಬಿಕೆ ಇದೆ. ಗ್ರಹಗಳ ಸ್ಥಾನವು ವಿದ್ಯಾಭ್ಯಾಸ, ಮದುವೆ, ವಿದೇಶ ಪ್ರಯಾಣ, ಅಪಘಾತ, ಸಾವು ಇವುಗಳನ್ನೆಲ್ಲಾ ನಿರ್ಧರಿಸುತ್ತದೆ ಎಂದು ನಂಬುವುದು ಅರ್ಥರಹಿತ. ವಧೂ–ವರರಿಗಿಂತ ಗ್ರಹಗಳ ಪಾತ್ರ ಮದುವೆಯ ವ್ಯವಹಾರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಕೆಲವು ಜಾತಕಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ಅವು ಭಾವಿ, ಅತ್ತೆ ಅಥವಾ ಮಾವನ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ ಎಂದು ತಿಳಿಸುತ್ತದೆ. ಆ ಗ್ರಹಗಳ ದುಷ್ಪರಿಣಾಮವನ್ನು ತಪ್ಪಿಸುವುದಕ್ಕಾಗಿ ತಂದೆ ಅಥವಾ ತಾಯಿ ಬದುಕಿಲ್ಲದೆ ಇರುವ ವಧೂ–ವರರನ್ನು ಹುಡುಕಲಾಗುತ್ತದೆ.

ವಧೂ–ವರರ ಜಾತಕಗಳು ಅತ್ಯಂತ ಸಮರ್ಪಕವಾಗಿ ಕೂಡಿ ಬಂದಿದ್ದನ್ನು ಗಮನಿಸಿಯೇ ಆದ ಎಷ್ಟೋ ಮದುವೆಗಳು ಯಶಸ್ವಿಯಾಗಿ ಇಲ್ಲದೆ ಇರುವುದಕ್ಕೆ ನಿದರ್ಶನಗಳಿವೆ. ಈ ಗುಂಪಿನಲ್ಲಿ ಜಾತಕ ಸೂಚಿಸುವುದಕ್ಕಿಂತ ಮುಂಚೆಯೇ ಕಂಡುಬರುವ ವಿಧವೆ–ವಧೂವರರು ದೊರೆಯುತ್ತಾರೆ. ಸಾಮಾನ್ಯವಾಗಿ ಪ್ರಸಿದ್ಧ ಜ್ಯೋತಿಷಿಗಳು ಬಹಳ ಮಟ್ಟಿನ 'ನಂಬಿಕೆ'ಗೆ ಅರ್ಹರೆಂದು ಭಾವಿಸಲಾಗುತ್ತದೆ. ಆದರೆ ಇವರ ಲೆಕ್ಕಾಚಾರಗಳು ಸುಳ್ಳಾಗುವುದು ಬೇಕಾದಷ್ಟು ಸಾರಿ ಕಂಡುಬರುತ್ತದೆ. ಪ್ರಸಿದ್ಧ ಜ್ಯೋತಿಷಿಗಳು ಒಪ್ಪಿದ ಜಾತಕಗಳ ಪ್ರಕಾರ ನಡೆದ ಮದುವೆಗಳಲ್ಲೂ ಅನಿರೀಕ್ಷಿತ ದುರಂತಗಳು, ಸಂಸಾರ ವಿರಸ, ತಪ್ಪು ತಿಳಿವಳಿಕೆ, ಅಸುಖವು ಕಂಡು ಬರುವುದರಿಂದ ಅವರನ್ನು ನಂಬಿಕೆಗೆ

ಅನರ್ಹರಾದ ಜ್ಯೋತಿಷಿಗಳ ಸಾಲಿನಲ್ಲಿಯೇ ಸೇರಿಸಬೇಕಾಗುತ್ತದೆ. ಜಗತ್ತಿನಲ್ಲಿಯೇ ಶೇ. ೯೦ಕ್ಕೆ ಹೆಚ್ಚು ಜನರ ಮದುವೆಗಳು ಯಾವುದೇ ಜಾತಕವಿಲ್ಲದೆ ನಡೆಯುತ್ತವೆ. ಅವರ ವಿವಾಹಗಳು ಉಳಿದವರಂತೆ ಸುಖವೋ ಅಥವಾ ಅಸುಖವೋ ಆಗಿರುತ್ತದೆ. ಹೀಗೆ ವಿಶ್ವಮಾನ್ಯತೆ ಇಲ್ಲದೆ ಇರುವ ಜ್ಯೋತಿಷ್ಯ ಎಂದಿಗೂ ವಿಜ್ಞಾನ ಆಗಲಾರದು.

ಪ್ರಕೃತಿಯ ವಿಕೋಪದ ಸಂದರ್ಭದಲ್ಲಿ ಕಾಣುವ ಸಾವಿನ ಸನ್ನಿವೇಶವನ್ನು ವಿಶ್ಲೇಷಿಸಿದಾಗ ಕೂಡ ಈಗಾಗಲೆ ದುರ್ಬಲವಾಗಿರುವ, ತಪ್ಪುದಾರಿಯಲ್ಲಿ ಹೋಗುತ್ತಿರುವ ಜ್ಯೋತಿಷ್ಯದ ಮೇಲೆ ಮಾರಕ ಪರಿಣಾಮವನ್ನುಂಟು ಮಾಡುತ್ತದೆ. ವಿಮಾನ ಅಪಘಾತದಲ್ಲಿ ಸತ್ತ ಎಲ್ಲ ದುರಾದೃಷ್ಟಶಾಲಿಗಳ ಜಾತಕವು ಒಂದೇ ಸೂಚನೆಯನ್ನು ಕೊಡುತ್ತದೆ ಎಂದು ಅಭಿಪ್ರಾಯ ಪಡುವುದು, ತೀರ ಅಸಂಗತ. ಇದೇ ರೀತಿ ಚಂಡಮಾರುತ ಅಥವಾ ಭೂಕಂಪಕ್ಕೆ ಬಲಿಯಾದ ಎಲ್ಲ ವ್ಯಕ್ತಿಗಳ ಜಾತಕದಲ್ಲೂ ಅವನ ಸಾವಿನ ದಿನ ಒಂದೇ ರೀತಿಯಲ್ಲಿ ಸೂಚಿತವಾಗಿರುತ್ತದೆ ಎಂದು ಹೇಳುವುದು ಅಷ್ಟೇ ಅಸಂಬದ್ಧವಾದುದು.

ಜ್ಯೋತಿಷ್ಯದ ಪ್ರಕಾರ ಚಂಡಮಾರುತಕ್ಕೆ ಅಥವಾ ಭೂಕಂಪಕ್ಕೆ ಬುದ್ಧಿವಂತಿಕೆ ಹಾಗೂ ಸಮಯೋಚಿತ ಬುದ್ಧಿ ಇರಬೇಕು. ಅವು ಯಾವ ಜಾತಕಗಳಲ್ಲಿ ಒಂದೇ ದಿನ ಸಾವಿನ ಭವಿಷ್ಯ ಬರೆದಿದೆಯೋ ಅಂತಹವರನ್ನು ಮಾತ್ರ ಹುಡುಕಿಕೊಂಡು ಮರಣಕ್ಕೆ ಕಾರಣವಾಗಬೇಕು. ಚಂಡಮಾರುತ ಬೀಸಿದ ಪ್ರದೇಶಗಳಲ್ಲಿ ಸುರಕ್ಷಿತವಾದ ಮನೆಗಳಲ್ಲಿ ವಾಸಮಾಡುವ ಶ್ರೀಮಂತರ ಅಥವಾ ಭೂಕಂಪಗಳಿಂದ ರಕ್ಷಿಸಲ್ಪಡುವ ಪ್ರದೇಶಗಳಲ್ಲಿ ಇರುವ ಪ್ರದೇಶದ ಜನರ ಜಾತಕಗಳು ಸಾವಿಗೀಡಾದ ಬಡವರಿಗಿಂತ ಉತ್ತಮ ಅದೃಷ್ಟವನ್ನು ಹೊಂದಿರಬೇಕು. ಅವಳಿ ಮಕ್ಕಳ ಜಾತಕಗಳು ಒಂದೇ ರೀತಿಯಲ್ಲಿ ಇರುತ್ತದೆಂಬುದು ತರ್ಕ ಒಪ್ಪುವ ಮಾತು. ಆದರೆ ಅನೇಕ ಸಂದರ್ಭಗಳಲ್ಲಿ ಇಬ್ಬರು ಅವಳಿ ಮಕ್ಕಳ ಮನೋಭಾವಗಳಲ್ಲಿ, ಆಸಕ್ತಿಗಳಲ್ಲಿ ಹಾಗೂ ಸಾಧನೆಗಳಲ್ಲಿ ಅಜಗಜಾಂತರವಿರುತ್ತದೆ. ಈ ಅಂಶ ಕೂಡ ಜ್ಯೋತಿಷ್ಯದ ಟೊಳ್ಳುತನವನ್ನು ವ್ಯಕ್ತಪಡಿಸಬಲ್ಲದು.

ಜ್ಯೋತಿಷಿಗಳ ಭವಿಷ್ಯವಾಣಿಯು ಓದಲು ತಮಾಷೆಯಾಗಿರುತ್ತದೆ. ಅವು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಇದ್ದು, ಒಂದಕ್ಕಿಂತ ಹೆಚ್ಚು

ಅರ್ಥಗಳನ್ನು ಕೊಡುತ್ತಿರುತ್ತವೆ. ದಿನಪತ್ರಿಕೆಗಳಲ್ಲಿ ಕಂಡುಬರುವ ಭವಿಷ್ಯದ ಸ್ವರೂಪ ಎಲ್ಲ ವಾರಗಳಲ್ಲೂ ಒಂದೇ ರೀತಿಯ ಸ್ಥೂಲವಿವರಣೆಯನ್ನು ಹೊಂದಿರುತ್ತವೆ. ಚುನಾವಣೆಗಳ ಬಗ್ಗೆ ಜ್ಯೋತಿಷಿಗಳು ಹೇಳುವ ಭವಿಷ್ಯವು ಪತ್ರಿಕಾ ಪ್ರತಿನಿಧಿಯು ನಡೆಸುವ ಚುನಾವಣೆಯ ಮೊದಲಿನ ಸಮೀಕ್ಷೆಯಷ್ಟೇ ಊಹೆಗೆ ಒಳಪಟ್ಟಿರುತ್ತದೆ. ಆದರೆ ಜ್ಯೋತಿಷಿ ತನ್ನ ಭವಿಷ್ಯದಲ್ಲಿ ಬುಧ, ಶನಿ, ರಾಹು, ಇತ್ಯಾದಿಗಳ ಪ್ರಭಾವವನ್ನು ಸೂಚಿಸಿರುತ್ತಾನೆ ಅಷ್ಟೇ.

ಇಬ್ಬರು ಜ್ಯೋತಿಷಿಗಳ ಅಭಿಪ್ರಾಯಗಳಲ್ಲಿ ಸಾಮಾನ್ಯವಾಗಿ ಯಾವ ಹೊಂದಿಕೆಯೂ ಇರುವುದಿಲ್ಲ. ಇಬ್ಬರಿಗೂ ತಮ್ಮದೆ ಆದ ಜ್ಯೋತಿಶ್ಯಾಸ್ತ್ರವಿರಬೇಕೆಂದು ತೋರುತ್ತದೆ. ಹೀಗಿದ್ದರೂ ಜ್ಯೋತಿಷ್ಯ ವಿಜ್ಞಾನದ ಪಟ್ಟ ಪಡೆದುಕೊಳ್ಳಬೇಕು.

ಇಬ್ಬರು ಜ್ಯೋತಿಷಿಗಳ ಭವಿಷ್ಯದಲ್ಲಿ ಭಿನ್ನಾಭಿಪ್ರಾಯ ಇರುವುದು ಇರಲಿ, ಒಬ್ಬನೇ ಜ್ಯೋತಿಷಿಯ ಭವಿಷ್ಯವು ಕೂಡ ಗೊಂದಲದಿಂದ ಕೂಡಿದ್ದು ಸತ್ಯಕ್ಕೆ ಬಹಳ ದೂರದಲ್ಲಿ ಇರುತ್ತದೆ. ಎಲ್ಲ ರೀತಿಯ ಸಾಧ್ಯತೆಗಳ ಬಗ್ಗೆಯೂ ಹಲವಾರು ಜ್ಯೋತಿಷಿಗಳು ಭವಿಷ್ಯ ನುಡಿದಿದ್ದಾಗ ಯಾರಾದರೂ ಒಬ್ಬರ ಮಾತು ನಿಜವಾಗಿ ನಡೆಯುವ ಸಂಗತಿಗಳೊಂದಿಗೆ ಸರಿಹೊಂದುವುದು ಆಶ್ಚರ್ಯವೇನೂ ಅಲ್ಲ. ಇದು ಜ್ಯೋತಿಷ್ಯದ ಅಧಿಕೃತತೆಯನ್ನು ಸೂಚಿಸುವುದಿಲ್ಲ. ಕೆಟ್ಟುಹೋದ ಗಡಿಯಾರ ಕೂಡ ದಿನಲ್ಲಿ ಎರಡು ಸಾರಿ ಸರಿಯಾದ ವೇಳೆ ಸೂಚಿಸುತ್ತದೆ. ಕೋತಿಯೊಂದು ಟೈಪ್‌ರೈಟರ್‌ನ ಅಚ್ಚಿನ ಮೊಳೆಯನ್ನು ಒತ್ತುವಂತೆ ಮಾಡಿದಾಗ ಅದು ಆಕಸ್ಮಿಕವಾಗಿ, ಯಾವುದೋ ಒಂದು ಪದ ಅಥವಾ ಷೇಕ್ಸ್‌ಪಿಯರ್‌ನ ದ್ವಿಪದಿಯೇ ಆಗಿಬಿಡಬಹುದು, ಹೀಗೆಂದ ಮಾತ್ರಕ್ಕೆ ಕೋತಿಗೆ ಟೈಪಿಂಗ್ ಕಲೆ ಅತವಾ ಷೇಕ್ಸ್‌ಪಿಯರ್‌ನ ಕಾವ್ಯಶಕ್ತಿಯ ಪರಿಜ್ಞಾನ ಇದೆಯೆಂದು ಅರ್ಥವಲ್ಲ.

ಕೆಲವು ಸಂದರ್ಭಗಳಲ್ಲಿ ಮುಂದಿನ ವರ್ಷದಲ್ಲಿ ಇಬ್ಬರು ಮಹಾನ್ ವ್ಯಕ್ತಿಗಳ ಸೂಚನೆಯಿದೆ ಎಂಬಂತಹ ಭವಿಷ್ಯವಾಣಿಯನ್ನು ನೋಡುತ್ತೇವೆ. ಒಂದು ವರ್ಷದಲ್ಲಿ ಇಬ್ಬರು ಸಾಯುವುದು ಖಚಿತ. ಒಂದಲ್ಲ ಒಂದು ರೀತಿಯಲ್ಲಿ ಎಲ್ಲರೂ ದೊಡ್ಡ ವ್ಯಕ್ತಿಗಳಾದ್ದರಿಂದ ಜ್ಯೋತಿಷಿಯ ಭವಿಷ್ಯ

ನಿಜವಾಗಿರಲೇಬೇಕು. ಹೆಣ್ಣುಮಕ್ಕಳಿಗೆ ಜನ್ಮವಿತ್ತ ತಾಯಿಯೊಬ್ಬಳಿಗೆ ಜ್ಯೋತಿಷಿಯೊಬ್ಬರು ಈ ಸಾರಿ ಗಂಡು ಮಗುವಿನ ಜನನವಾಗುತ್ತದೆ ಎಂಬ ಭವಿಷ್ಯ ನುಡಿದಿದ್ದರು. ಸಂಭ್ರಮದಲ್ಲಿದ್ದ ಆಕೆ ಮತ್ತು ಹೆಣ್ಣುಮಗುವಿನ ತಾಯಿಯಾದಳು. ಬೇಜಾರಿನಿಂದ ಅವಳು ಜ್ಯೋತಿಷ್ಯದ ಬಗ್ಗೆ ಅವನು ಗೋಡೆಯ ಮೇಲೆ 'ಹೆಣ್ಣುಮಗು' ಎಂದು ಬರೆದಿದ್ದನ್ನು ತೋರಿಸಿ, ಪ್ರಸವದ ಸಂದರ್ಭದಲ್ಲಿ ಸಂತೋಷವಾಗಿರಲೆಂದು ಉದ್ದೇಶಪೂರ್ವಕ ವಾಗಿಯೇ ತಾನು ಹೀಗೆ ಹೇಳಿದ್ದೆನೆಂದು ಉತ್ತರ ಕೊಟ್ಟನಂತೆ. ಜ್ಯೋತಿಷಿ ಮತ್ತು ಭವಿಷ್ಯ ಕೇಳಿದ ವ್ಯಕ್ತಿಗಳಲ್ಲಿಯೇ ಸಮಸ್ಯೆ ಇದ್ದಾಗ ಇಂತಹ ಜಾಣತನದ ತಂತ್ರಗಳು ಸಾಮಾನ್ಯವಾಗಿ ಉಪಯೋಗವಾಗುತ್ತದೆ. 'ಇಲ್ಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯ ಸಂಪಾದಕೀಯವೊಂದರಲ್ಲಿ ೧೯೭೭ರ ಚುನಾವಣೆಯ ನಂತರ ಕೇಳಿ ಬಂದ ವರದಿಯ ಪ್ರಸ್ತಾಪದ ಬಗ್ಗೆ ನೆನಪಿನಿಂದ ಹೇಳುತ್ತಿದ್ದೇನೆ. ಪತ್ರಿಕೆಗೆ, ಮುಂದಿನ ಪ್ರಧಾನಿ ಯಾರೆಂಬುದರ ಬಗ್ಗೆ ವಿಭಿನ್ನವಾದ ಹಲವಾರು ಸೂಚನೆಗಳು ಜ್ಯೋತಿಷಿಗಳಿಂದ ಬಂದಿತ್ತು. ಅವುಗಳಲ್ಲಿ ಸಂಪಾದಕರು ಗುಜರಾತ್ ರಾಜ್ಯದವರು ಪ್ರಧಾನಮಂತ್ರಿ ಆಗಬಹುದು ಎಂಬ ಸೂಚನೆಯನ್ನು ಆರಿಸಿಕೊಂಡಿದ್ದರು. ಅದರ ಪ್ರಕಾರ ಅವರು ಹೆಚ್ಚು ದಿನಗಳು ಅಧಿಕಾರದಲ್ಲಿ ಇರುವುದಿಲ್ಲ, ಗುಜರಾತ್ ಅಥವಾ ಉತ್ತರ ಪ್ರದೇಶದವರು ಪ್ರಧಾನಮಂತ್ರಿ ಆಗುತ್ತಾರೆ ಎಂದು ಚುನಾವಣೆಯ ನಂತರ ಹೇಳುವುದು ಸಾಮಾನ್ಯ ತಿಳಿವಳಿಕೆ. ಇದಕ್ಕೆ ಜ್ಯೋತಿಷ್ಯದ ಜ್ಞಾನ ಬೇಕಾಗುವುದಿಲ್ಲ. ಪ್ರಧಾನಮಂತ್ರಿಯ ಅಧಿಕಾರದ ಅವಧಿಯ ಬಗ್ಗೆ ಹೇಳಿದ ಭವಿಷ್ಯ ಯಾವ ರೀತಿ ಸುಳ್ಳಾಯಿತು ಎಂಬುದು ಜ್ಯೋತಿಷ್ಯದ ಅಸಮರ್ಥತೆಯ ಮತ್ತೊಂದು ನಿದರ್ಶನ. ಜ್ಯೋತಿಷ್ಯ, ಪ್ರದೇಶಗಳನ್ನು, ರಾಜಕೀಯಯ ಪಕ್ಷಗಳನ್ನು ಗುರುತಿಸಿಕೊಳ್ಳುವುದು ಗಮನಾರ್ಹ.

ತಪ್ಪು ಭವಿಷ್ಯ ಹೇಳುವವರು ನಕಲಿ ಜ್ಯೋತಿಷಿಗಳೆಂದು, ಜ್ಯೋತಿಷಿಗಳು ಹೇಳುವುದು ಉಂಟು. ನಿಖರವಾಗಿ ಯಾರೇ ಒಬ್ಬ ಜ್ಯೋತಿಷಿ ಭವಿಷ್ಯ ನುಡಿದು, ಭವಿಷ್ಯ ಸುಳ್ಳಾಗುವುದಕ್ಕೆ ತರ್ಕಬದ್ಧವಾಗಿ ಕಾರಣ ಕೊಟ್ಟರೆ ಸ್ವಲ್ಪಮಟ್ಟಿಗೆ ಜ್ಯೋತಷ್ಯಕ್ಕೆ ಬೆಲೆ ಕೊಡಬಹುದು. ವಿಜ್ಞಾನಕ್ಕೆ ಸಂಬಂಧಿಸಿದಂತೆ ಏನೇ ತಪ್ಪಾದರೂ, ಅದರ ಬಗ್ಗೆ ಆಳವಾದ ಪರಿಶೀಲನೆ ನಡೆದು ಸೋಲಿಗೆ ಕಾರಣವನ್ನು ವಿಶ್ಲೇಷಿಸಿ ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ.

ನಮಗೆಲ್ಲಾ ತಿಳಿದಿರುವಂತೆ ವಿಮಾನ ಅಪಘಾತದ ವಿವರವಾದ ತಪಾಸಣೆ ಅದರ ಮುಂದಿನ ಪ್ರಯಾಣದ ಬಗ್ಗೆ ಮತ್ತಷ್ಟು ಎಚ್ಚರಿಕೆ ತೆಗೆದುಕೊಳ್ಳುವಂತೆ ಸಹಾಯ ಆಗುತ್ತದೆ.

ಜೀವನದಲ್ಲಿ ಎಲ್ಲವೂ ಪೂರ್ವ ನಿರ್ಧಾರಿತವಾಗುತ್ತದೆಂಬ ವಿಧಿವಾದವನ್ನು ಜ್ಯೋತಿಷ್ಯ ತಿಳಿಸುತ್ತದೆ. ವಾಣಿಜ್ಯ ವಿಷಯಗಳಿಗೆ ಸಂಬಂಧಿಸಿದಂತೆ ಈ ನಿಯಮ ಅಷ್ಟೊಂದು ಕರಾರುವಕ್ಕಾಗಿ ಇರುವುದಿಲ್ಲ. ಆಗ ಬುದ್ಧಿವಂತ ಜ್ಯೋತಿಷಿಗಳು ಗ್ರಹಗಳ ಪ್ರಭಾವವನ್ನು ತರುತ್ತಾರೆ. ಈ ಅಂಶವನ್ನು ಜನರ ಶೋಷಣೆಗೆ ಜ್ಯೋತಿಷಿಗಳು ಉಪಯೋಗಿಸಿ ಕೊಳ್ಳುತ್ತಾರೆ. ಅವರು ನಿರಾಶೆಯಲ್ಲಿದ್ದಾಗ, ಸಮಸ್ಯೆಗಳಲ್ಲಿ ಇದ್ದಾಗ ಜ್ಯೋತಿಷಿಗಳನ್ನು ಮೊರೆಹೋಗುತ್ತಾರೆ. ಗ್ರಹಗಳ ಅನಿಷ್ಟ ಗತಿಯಿಂದ ಘೋರ ಪರಿಣಾಮಗಳನ್ನು ಜ್ಯೋತಿಷಿಗಳು ಅವರಿಗೆ ತಿಳಿಸುತ್ತಾರೆ. ಆ ಅಮಂಗಳ ನಿವಾರಣೆಯು ಶಾಂತಿ, ಪೂಜೆಗಳಿಂದ ಪರಿಹಾರ ವಾಗುತ್ತದೆಂಬ ಸಾಂತ್ವನವನ್ನು ಕೊಡುತ್ತಾರೆ. ಅದಕ್ಕಾಗಿ ಖರ್ಚಾಗುವ ಹೆಚ್ಚಿನ ಹಣದ ಬಗ್ಗೆ ಹೇಳಲು ಮರೆಯುವುದಿಲ್ಲ. ಅವರ ಮಾರ್ಗದರ್ಶನವನ್ನು ಬಯಸುವ ಯಾರೂ ಅವರ ಅಭಿಪ್ರಾಯಗಳನ್ನು ತಿರಸ್ಕರಿಸುವುದಿಲ್ಲ. ಜ್ಯೋತಿಷಿಗಳ ಮಧ್ಯಸ್ಥಿಕೆಗಾರರು 'ಅಲೌಕಿಕ' ಗ್ರಹಗಳ ಪರಿಣಾಮಗಳನ್ನು ಲೌಕಿಕ ಪ್ರಯೋಜನಗಳಿಗಾಗಿ ಹೆಚ್ಚೂ ಕಡಿಮೆ ಮಾಡಲು ಸಮರ್ಥರಾಗಿರುತ್ತಾರೆ. ಬಹಳ ಮುಖ್ಯವಾಗಿ ಜ್ಯೋತಿಷ್ಯ ಮುಗ್ಧ ಜನರನ್ನು ಭಯದಲ್ಲಿರಿಸಿ ಅವರ ಸುಲಿಗೆಗೆ ಕಾರಣವಾಗುತ್ತದೆ. ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ. ಜ್ಯೋತಿಷಿಗಳು ಹೇಳದೇ ಇದ್ದ ಹಲವಾರು ಮುಖ್ಯ ಘಟನೆಗಳು ಸಂಭವಿಸಿದ್ದನ್ನು ಗಮನಿಸಬೇಕು. ಜೂನ್೧೯೭೫ರಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಆಗುತ್ತದೆಂದು ಯಾವ ಜ್ಯೋತಿಷಿಯೂ ಭವಿಷ್ಯ ನುಡಿಯಲಿಲ್ಲ. ಚರಿತ್ರಾರ್ಹವಾದ ೧೯೭೭ರ ಚುನಾವಣೆಯ ಬಗ್ಗೆಯೂ ಯಾವುದೇ ಭವಿಷ್ಯ ಕೇಳಿಬರಲಿಲ್ಲ. ದೇಶದ ಇತಿಹಾಸದ ದೃಷ್ಟಿಯಿಂದ????? ಮಹತ್ತರ ಪರಿಣಾಮ ಬೀರಿದ ಈ ಎರಡು ಘಟನೆಗಳ ಬಗ್ಗೆ ಏನೂ ಹೇಳದೆ????? ಇದ್ದುದ್ದಕ್ಕೆ ಜ್ಯೋತಿಷಿಗಳು ಏನು ನೆಪ ಹೇಳುವರೊ ನನಗೆ ಗೊತ್ತಿಲ್ಲ. ಸಾವಿರಾರು ?????? ಸಾವು ನೋವುಗಳನ್ನು ಉಂಟುಮಾಡಿದ ಚಂಡಮಾರುತದ ಬಗ್ಗೆ ಜ್ಯೋತಿಷಿಗಳು ?????? ಏನೂ ಸೂಚಿಸಿರಲಿಲ್ಲ.

ದಿನನಿತ್ಯದ ಘಟನೆಗಳನ್ನು ವಿಶ್ಲೇಷಿಸಿದಾಗ ಜ್ಯೋತಿಷ್ಯದ ಅಧಿಕೃತ ನಿರಾಕರಣೆ ??????? ಮೇಲಿನ ಎಲ್ಲ ಉದಾಹರಣೆಗಳು ತಿಳಿಸಬಲ್ಲವು. ಅನೇಕ ಜನ ಶಿಕ್ಷಣವನ್ನು ???????? ವಿಜ್ಞಾನಿಗಳು, ಜ್ಯೋತಿಷ್ಯವನ್ನು ನಂಬುವುದು ಶೋಚನೀಯ ವಿಚಾರ. ಪ್ರಯೋಗಶಾಲೆಯಲ್ಲಿ ವಿಚಾರವಾದಿಯಾದ ವಿಜ್ಞಾನಿ ಜೀವನದ ಸಮಸ್ಯೆಗಳನ್ನು ಎದುರಿಸುವಾಗ ವಿಚಾರಕ್ಕೆ ಮಂಗಳ ಹಾಡುವುದು ಕಂಡು ಬರುತ್ತದೆ. ಜ್ಯೋತಿಷ್ಯವೂ ಉಳಿದ ಮೂಢ ನಂಬಿಕೆಗಳಂತೆ ಸ್ವತಂತ್ರ ಆಲೋಚನೆ ಮತ್ತು ಆತ್ಮ ವಿಶ್ವಾಸಕ್ಕೆ ಧಕ್ಕೆಯನ್ನು ತರುತ್ತದೆ. ಈ ರೀತಿಯ ಮೂಢನಂಬಿಕೆಗಳಿಂದ ಉಂಟಾಗುವ ಪರಿಸರ ಮಾಲಿನ್ಯವು ವಾಯು, ಜಲ ಮಾಲಿನ್ಯಗಳಿಗಿಂತ ಅಪಾಯಕಾರಿ.

ಖಗೋಳಶಾಸ್ತ್ರವು ವಿಜ್ಞಾನವಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಜ್ಯೋತಿಷ್ಯ ಮಾತ್ರ ತನ್ನ ಪುರಾತನ ನಂಬಿಕೆ ಹಾಗೂ ತಪ್ಪು ಗ್ರಹಿಕೆಗಳನ್ನೇ ಹೊಂದಿದೆ. ಈಗಲೂ ನವಗ್ರಹಗಳು ಜ್ಯೋತಷ್ಯದ ದಾರಿಯನ್ನು ತೋರಿಸುತ್ತವೆ. ಇವುಗಳಲ್ಲಿ ನಾಲ್ಕು ಗ್ರಹಗಳೇ ಅಲ್ಲ. ಯುರೇನಸ್, ನೆಪ್ಚೂನ್, ಪ್ಲೇಟೊ ಅಂತಹ ಹೊಸ ಗ್ರಹಗಳನ್ನು ವಿಜ್ಞಾನಿಗಳು ಕಂಡು ಹಿಡಿದರು. ಆದರೆ ಅವು ಇನ್ನೂ ತಮ್ಮನ್ನು ಗುರುತಿಸಲು ಜ್ಯೋತಿಷ್ಯಗಳನ್ನೇ ಕೇಳಿಕೊಳ್ಳುತ್ತಿವೆ. ಬಹುಮಂದಿ ಜ್ಯೋತಿಷಿಗಳಿಗೆ ಇವುಗಳ ಅಸ್ತಿತ್ವದ ವಿಚಾರವೇ ತಿಳಿದಿಲ್ಲ.

ನಮ್ಮ ದೇಶದಲ್ಲಿ ಸಾಮಾಜಿಕ ಕೆಳಸ್ತರದಿಂದ ಬಂದ ಜನರು ಶಿಕ್ಷಣವನ್ನು ಮೊದಲ ಬಾರಿಗೆ ಪಡೆದುಕೊಂಡಾಗ ಅವರಲ್ಲಿ ರೂಪುಗೊಳ್ಳುತ್ತಿರುವ ಮನೋಭಾವ ಕೂಡಾ ಅಪಾಯಕಾರಿ. ಕೀಳರಿಮೆಯಿಂದ ಬಳಲುತ್ತಿರುವ ಅವರು ತರ್ಕಹೀನವಾದ 'ಮುಂದುವರಿದ' ಶಿಕ್ಷಣ ಪಡೆದ ಜನರ ಮನೋಭಾವವನ್ನು ಅನುಕರಿಸುತ್ತಾರೆ. ಜ್ಯೋತಿಷ್ಯದಂತಹ ಪ್ರಗತಿ ವಿರೋಧಿ ನಂಬಿಕೆಗಳನ್ನು ಹೊಂದುವುದು ಸಾಮಾಜಿಕ ಅಂತಸ್ತಿನ ಗುರುತಾಗಿದೆ. ವ್ಯಕ್ತಿಯ ಒಳಿತಿಗಾಗಿ ಅಥವಾ ಸಮಾಜದ ಒಳಿತಿಗಾಗಿ ಈ ರೀತಿಯ ಮನೋಧರ್ಮ ಹೆಚ್ಚಿನ ಹಾನಿಯನ್ನುಂಟುಮಾಡುವ ಅವಿವೇಕವಾಗಿದೆ. ಈ ರೀತಿ ಹೊಸದಾಗಿ ಪರಿವರ್ತಿತರಾದವರು ಅಲ್ಲಿಯೇ ಶತಮಾನಗಳಿಂದ ಇದ್ದವರಿಗಿಂತ ಹೆಚ್ಚು ಅಭಿಮಾನವನ್ನು ಹೊಂದಿರುತ್ತಾರೆ.

ಜ್ಯೋತಿಷ್ಯದ ಬಗ್ಗೆ ಹಲವಾರು ಜನ ಮಹಾನ್ ವ್ಯಕ್ತಿಗಳು ತಿಳಿಸಿರುವ ಅಭಿಪ್ರಾಯಗಳು ಮಹತ್ವಪೂರ್ಣವಾಗಿವೆ. ಬುದ್ಧನು ತನ್ನ ವಿನಯ ಪೀಟಿಕಾ ಗ್ರಂಥದಲ್ಲಿ ಯಾರು ನಕ್ಷತ್ರಗಳ ಲೆಕ್ಕಾಚಾರದಂತಹ ತಂತ್ರಗಳಿಂದ ಜೀವನ ನಡೆಸುತ್ತಾರೋ ಇವರಿಂದ ದೂರವಿರಬೇಕು ಎಂದು ಎಚ್ಚರಿಸುತ್ತಾನೆ.

ನಕ್ಷತ್ರ ವೀಕ್ಷಣೆ ಮತ್ತು ಜ್ಯೋತಿಷ್ಯ, ಶಕುನಗಳ ಆಧಾರದಿಂದ ಶುಭ ಅಥವಾ ಅಶುಭವನ್ನು ತಿಳಿಸುವುದು. ಒಳಿತು, ಕೆಡುಗಳ ಬಗ್ಗೆ ಭವಿಷ್ಯ ನುಡಿಯುವುದು ಇಂತಹವುಗಳನ್ನೆಲ್ಲಾ ತ್ಯಜಿಸಬೇಕು ಎಂಬ ಅಭಿಪ್ರಾಯ ಬುದ್ಧನ ಉಪದೇಶಗಳಲ್ಲಿ ಕಂಡು ಬರುತ್ತದೆ. ಮನುಷ್ಯನ ಭವಿಷ್ಯದ ನಿರ್ಣಯಕ್ಕೆ ಅವನೇ ಕಾರಣ ಎಂದು ದೃಢವಾಗಿ ನಂಬಿದ್ದ ಸ್ವಾಮಿ ವಿವೇಕಾನಂದ ಅವರು ಜ್ಯೋತಿಷ್ಯದ ಬಗ್ಗೆ ಕಟುವಾದ ಅಭಿಪ್ರಾಯ ಪಡುತ್ತಾರೆ. ಪ್ರಭಾವ ಬೀರಿದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಜ್ಯೋತಿಷ್ಯ ಮತ್ತಿತರ ಸಂಗತಿಗಳು ಸಾಮಾನ್ಯವಾಗಿ ದುರ್ಬಲ ಮನಸ್ಸಿನ ಗುರುತುಗಳು. ಇಂತಹವುಗಳು ಬದುಕಿನಲ್ಲಿ ಪ್ರಾಮುಖ್ಯ ಪಡೆದುಕೊಂಡ ಕೂಡಲೇ ವೈದ್ಯರನ್ನು ಕಂಡು ಉತ್ತಮ ಆಹಾರ ಮತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂಬುದು ವಿವೇಕಾನಂದರ ಅಭಿಪ್ರಾಯ.

ಅಧ್ಯಾಪಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು, ಯಾವುದೇ ಶಿಕ್ಷಣ ಕ್ರಮದ ಮುಖ್ಯ ಉದ್ದೇಶವಾಗಬೇಕು. ಪ್ರಶ್ನಿಸದೆ, ಪರಿಶೀಲಿಸದೆ ಯಾವುದನ್ನೂ ಒಪ್ಪಿಕೊಳ್ಳಬಾರದು. ಅದು ಭಗವದ್ಗೀತೆ, ಬೈಬಲ್ ಅಥವಾ ಕುರಾನ್ ಆಗಿರಲಿ, ವೈಜ್ಞಾನಿಕವಾದ ಆಲೋಚನೆಗಳಿಗೆ ತೃಪ್ತಿಯನ್ನುಂಟು ಮಾಡಬೇಕು. ಸಮಾಜದ ಸುಧಾರಣೆ ಶಿಕ್ಷಣದ ಒಂದು ಉದ್ದೇಶ. ನಮ್ಮ ಶಿಕ್ಷಣ ಪದ್ಧತಿ ಅವಿದ್ಯಾವಂತ ಮೂಢನಂಬಿಕೆಯುಳ್ಳವರನ್ನು ವಿದ್ಯಾವಂತ ಮೂಢನಂಬಿಕೆಯುಳ್ಳವನನ್ನಾಗಿ ಪರಿವರ್ತಿಸುತ್ತದೆ. ಇವರಿಬ್ಬರಲ್ಲಿ ಯಾರು ಹೆಚ್ಚು ಅಪಾಯಕಾರಿ ಎಂಬುದು ನಮಗೆಲ್ಲ ಗೊತ್ತು.

ವಿಶ್ವವಿದ್ಯಾಲಯ ಹಾಗೂ ಉನ್ನತ ಶಿಕ್ಷಣ ಕೊಡುತ್ತಿರುವ ಸಂಸ್ಥೆಗಳು ಜ್ಯೋತಿಷ್ಯ, ಹಸ್ತಮುದ್ರಿಕ, ಪವಾಡದಂತಹ ಪ್ರಗತಿವಿರೋಧಿ ಅಂಶಗಳ ವೈಜ್ಞಾನಿಕ ತಪಾಸಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

ದೊರೆತಿರುವ ಆಧಾರಗಳ ಸಹಾಯದಿಂದ ನಾನು ಜ್ಯೋತಿಷ್ಯವನ್ನು ಕುರಿತು ವಿಶ್ಲೇಷಿಸುತ್ತೇನೆ. ಅದರಿಂದ ಜ್ಯೋತಿಷ್ಯವು ಸಂಪೂರ್ಣವಾಗಿ ಅವೈಜ್ಞಾನಿಕ ಎಂಬ ತೀರ್ಮಾನಕ್ಕೆ ಬರಬಹುದು. ವಿಜ್ಞಾನದ ವಿದ್ಯಾರ್ಥಿಯಾದ ನಾನು ಹೊಸ ಸಂಗತಿಗಳ ಸಹಾಯದಿಂದ ನನ್ನ ಅಭಿಪ್ರಾಯವನ್ನು ಬದಲಿಸಿಕೊಳ್ಳಲು ಸಿದ್ಧನಿದ್ದೇನೆ. ತೆರೆದ ಮನಸ್ಸು ನನ್ನದು. ಪ್ಯಾರಾಚೂಟ್‌ನಂತೆ ತೆರೆದಾಗ ಮಾತ್ರ ಅದು ಕಾರ್ಯ ನಿರ್ವಹಿಸುವುದು ಎಂದು ನಾನು ಬಲ್ಲೆ. ಆದರೆ ಇಲ್ಲಿ ತೆರೆದ ಮನಸ್ಸು ಎಂದರೆ ಖಾಲಿ ತಲೆ ಅಲ್ಲ ಎಂಬುದನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ.

❏

# ೪. ಪ್ರಬಂಧ
# ಶತಮಾನದ ಮಹಿಳಾ ವಿಜ್ಞಾನಿಗಳು

**– ನೇಮಿಚಂದ್ರ**

ಇಪ್ಪತ್ತನೇ ಶತಮಾನದ ಆದಿಭಾಗ, ಮೇರಿಕ್ಯೂರಿ ತನ್ನ ಜೀವಿತ ಕಾಲದಲ್ಲೇ ಕಥೆಯಾಗಿದ್ದಳು. ಯಾವ ಸುವ್ಯವಸ್ಥಿತ ಪ್ರಯೋಗಶಾಲೆಯೂ ಇಲ್ಲದೆ, ಕನಿಷ್ಠ ಸೌಕರ್ಯಗಳಿಲ್ಲದ ಮುರುಕು ಕೊಟ್ಟಿಗೆಯಲ್ಲಿ ಆಕೆ 'ರೇಡಿಯಂ' ಕಂಡು ಹಿಡಿದಿದ್ದು ಸಾಹಸಗಾಥೆಯಾಗಿತ್ತು. 'ರೇಡಿಯೋ ಆಕ್ಟಿವಿಟಿ' ಎಂಬ ಹೊಚ್ಚ ಹೊಸ ರಂಗಕ್ಕೆ ಜನ್ಮ ಕೊಟ್ಟಿದ್ದಳು. ವಿಜ್ಞಾನದ ಎರಡು ವಿಭಾಗಗಳಲ್ಲಿ ನೊಬೆಲ್ ಪಾರಿತೋಷಕ ಪಡೆದ ಮೊದಲ ವಿಜ್ಞಾನಿಯಾಗಿದ್ದಳು. ಮೇರಿಯ ಪ್ರಸಿದ್ಧಿ ದೇಶ–ವಿದೇಶಗಳಲ್ಲಿ ಹಬ್ಬಿತ್ತು. ಗೌರವ ಸೂಚಕ ಡಿಗ್ರಿಗಳು, ಪ್ರಶಸ್ತಿಗಳು ಎಣಿಕೆ ತಪ್ಪುವಂತಿದ್ದವು. ಆದರೆ 'ಫ್ರಾನ್ಸ್ ವಿಜ್ಞಾನದ ಅಕಾಡೆಮಿ' ಮೇರಿಯನ್ನು ಹೆಣ್ಣೆಂಬ ಒಂದೇ ಕಾರಣಕ್ಕೆ ಪ್ರವೇಶ ನೀಡಲು ನಿರಾಕರಿಸಿತು. 'ಫ್ರಾನ್ಸಿನ ವಿಜ್ಞಾನದ ಅಕಾಡೆಮಿಯೊಳಗೆ ಹೆಂಗಸರಿಗೆ ಸ್ಥಳವಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ನಿರ್ಲಜ್ಜೆಯಿಂದ ಘೋಷಿಸಿತು. ವಿಜ್ಞಾನ ಮತ್ತು ಮಾನವತಾವಾದದ ಶ್ರೇಷ್ಠ ಉದಾಹರಣೆಯಂತಿರುವ ಮೇರಿಕ್ಯೂರಿಗೆ ಪ್ರತಿಷ್ಠಿತ ವೈಜ್ಞಾನಿಕ ಸಂಸ್ಥೆಗಳು ಬಾಗಿಲು ಮುಚ್ಚಿದರೆ, ಮಹಿಳೆ ಮತ್ತು ವಿಜ್ಞಾನವನ್ನು ಕುರಿತು ಸಮಾಜದ ಅವೈಜ್ಞಾನಿಕ ಮನೋಭಾವ ಎಷ್ಟಿದೆ ಎಂಬುದನ್ನು ಊಹಿಸಬಹುದು.

ವಿಜ್ಞಾನ ಹೆಂಗಸರ ರಂಗವಲ್ಲ ಎಂಬ ಪೂರ್ವಾಗ್ರಹ ಆಕೆಯನ್ನು ವಿಜ್ಞಾನದ ಕಲಿಕೆಯಿಂದ ದೂರವಿಟ್ಟಿತು. ಇತಿಹಾಸದುದ್ದಕ್ಕೂ ಮಹಿಳೆಯನ್ನು ವಿಜ್ಞಾನದಿಂದ ಹೊರಗಿಡುವ ಪ್ರಯತ್ನ ನಡೆದದ್ದು ಸುಳ್ಳಲ್ಲ. ಒಮ್ಮೆ ಆಕೆಯ ಬುದ್ಧಿಮತ್ತೆಯನ್ನು ಸಂಶಯಿಸಿದರೆ ಮತ್ತೊಮ್ಮೆ ಗಣಿತ, ವಿಜ್ಞಾನ ಮಹಿಳೆಯರ ಆರೋಗ್ಯಕ್ಕೆ ಮಾರಕ ಎಂಬ ಕುರುಡು ನಂಬಿಕೆಯನ್ನು ಬಿತ್ತಿದರು. ಹಾಗೆಂದೇ ಚರಿತ್ರೆಯುದ್ದಕ್ಕೂ ಮಹಿಳಾ ವಿಜ್ಞಾನಿಗಳಲ್ಲಿ ಬಹುಮಂದಿ, ಸ್ವಂತ ಕಲಿಕೆಯಿಂದ ಗಣಿತ ಮತ್ತು ವಿಜ್ಞಾನಿಗಳ ಸಾಂಗತ್ಯದಲ್ಲಿ, ಸ್ನೇಹ– ಸಂಬಂಧದಲ್ಲಿ, ಪತ್ರಮಿತ್ರತ್ವದಲ್ಲಿ ತಮ್ಮ ಜ್ಞಾನವನ್ನು ಹಿಗ್ಗಿಸಿಕೊಂಡ ಮಹಿಳೆಯರ ಬಹಳ ಮಂದಿ ಇದ್ದಾರೆ.

ಬಹಳಷ್ಟು ಮಹಿಳೆಯರ ಪುರುಷ ವಿಜ್ಞಾನಿಗಳಿಗೆ ಸಹಾಯಕರಾಗಿ ಆರಂಭಿಸಿ ತಮ್ಮ ವಿಜ್ಞಾನದ ಆಸಕ್ತಿಯ ವಿಕಾಸವನ್ನು ಕಂಡುಕೊಂಡಿದ್ದಾರೆ. ಇತಿಹಾಸದಾಳಕ್ಕಿಳಿದು ನೋಡಿದರೆ, ಮಹಿಳಾ ವಿಜ್ಞಾನಿಗಳ ದೊಡ್ಡ ಪಟ್ಟಿಯೇ ಸಿದ್ಧವಾಗುತ್ತದೆ.

ಇಪ್ಪತ್ತನೆಯ ಶತಮಾನದಲ್ಲಿಯೂ ಮಹಿಳಾ ವಿಜ್ಞಾನಿಗಳ ಸ್ಥಿತಿ ಹೆಚ್ಚೇನೂ ಸುಧಾರಿಸಲಿಲ್ಲ. ಹೆಣ್ಣು ಮಕ್ಕಳ ವಿದ್ಯಾಭ್ಯಾಸವೆಂದರೆ, 'ಫಿನಿಷಿಂಗ್ ಸ್ಕೂಲ್'ಗಳಿಗೆ ಕಳುಹಿಸಿ ಒಳ್ಳೆಯ ಪತ್ನಿಯಾಗುವ, ತಾಯಿಯಾಗುವ ತರಪೇತು ನೀಡುವುದು ಎಂದು ಭಾವಿಸಿದ ಸಮಾಜ. ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಗೆ ತಯಾರು ಮಾಡುವ ಹೆಣ್ಣುಮಕ್ಕಳ ಶಾಲೆಗಳಿದ್ದುದ್ದು ಅಪರೂಪ. ಪದವಿ ಪಡೆದ ಅಗಾಧ ಪ್ರತಿಭೆಯ ಮಹಿಳಾ ವಿಜ್ಞಾನಿಗಳಿಗೆ ಮಹಿಳೆಯರೆಂಬ ಒಂದೇ ಕಾರಣಕ್ಕೆ ಕೆಲಸ ದೊರೆಯದೆ ಇದ್ದ ಪ್ರಸಂಗಗಳು ಎಣಿಕೆ ಇಲ್ಲದಷ್ಟು. ಪ್ರಯೋಗಶಾಲೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಸಿಗದೆ, ಸಣ್ಣ ಸಂಬಳದ ಕೆಳದರ್ಜೆಯ ಕೆಲಸಗಳನ್ನು ಹಿಡಿದವರು ಅನೇಕ ಮಂದಿ. ಸಂಶೋಧನಾ ರಂಗದಲ್ಲಿ ಸಂಬಳವಿಲ್ಲದೆ 'ಸ್ವಯಂಸೇವಕರಾಗಿ' ದುಡಿದ ಮಹಿಳೆಯರು ಬಹಳಷ್ಟು. ಮೂವತ್ತು ವರ್ಷಗಳ ಕಾಲ ವಿಜ್ಞಾನರಂಗದಲ್ಲಿ ಸಂಬಳವಿಲ್ಲದೆ ದುಡಿದ ಅದ್ಭುತ ದಾಖಲೆ ಮರಿಯಾ ಗೋಪರ್ಟ್ ಮೇಯರದು. ಮಹಿಳೆಯರ ಇಂಥಾ ದುಃಸ್ಥಿತಿ ಸುಧಾರಿಸಲು ಒಂದು ಮಹಾಯುದ್ಧವೇ ಬರಬೇಕಾಯಿತು. ನೊಬೆಲ್ ಪ್ರಶಸ್ತಿ ಪಡೆದ ಇಲ್ಲಿನ ಅನೇಕ ಮಹಿಳಾ ವಿಜ್ಞಾನಿಗಳಿಗೆ ಮೊಟ್ಟಮೊದಲಿಗೆ ಸಂಶೋಧನಾ ರಂಗದಲ್ಲಿ ಸ್ವಾಗತ ದೊರೆತದ್ದು ಎರಡನೆಯ ಮಹಾಯುದ್ಧದ ಸಮಯದಲ್ಲಿ. ಸೇನೆಗೆ, ರಕ್ಷಣಾ ದಳದ ಯೋಜನೆಗಳಿಗೆ ಪುರುಷರು ತೆರಳಿದಾಗ, ತಟ್ಟನೆ ಪ್ರಯೋಗಶಾಲೆಯಲ್ಲಿ ಪುರುಷ ವಿಜ್ಞಾನಿಗಳ ಸಂಖ್ಯೆ ಕಡಿಮೆಯಾಗಿತ್ತು. ಮೊಟ್ಟಮೊದಲಿಗೆ ಮಹಿಳಾ ವಿಜ್ಞಾನಿಗಳಿಗೆ ಅವಕಾಶ ಸಿಕ್ಕಿತ್ತು. ಲಿಂಗ ತಾರತಮ್ಯವನ್ನು ತೀವ್ರವಾಗಿ ಅನುಭವಿಸಿದ ಈ ವಿಜ್ಞಾನಿಗಳು, ಹೆಜ್ಜೆ ಹೆಜ್ಜೆಗೂ ಮಹಿಳಾ ಹಕ್ಕುಗಳಿಗಾಗಿ ಹೋರಾಡಿದರು.

ಶತಮಾನದ ಅಂಚಿನಲ್ಲಿರುವ ಈ ಸಂದರ್ಭದಲ್ಲಿ, ಈ ಶತಮಾನದ ಮಹಿಳಾ ವಿಜ್ಞಾನಿಗಳ ಹೋರಾಟ ಮತ್ತು ಸಾಧನೆಯ ಕಿರುನೋಟವನ್ನು ನೊಬೆಲ್ ಪ್ರಶಸ್ತಿ ಪಡೆದ ಹತ್ತು ಮಂದಿ ಮಹಿಳಾ ವಿಜ್ಞಾನಿಗಳ ಬದುಕಿನಲ್ಲಿ

ಕಾಣಬಹುದು. ನೊಬೆಲ್ ಪ್ರಶಸ್ತಿ ಪಡೆದ ಬಹಳಷ್ಟು ವಿಜ್ಞಾನಿಗಳು ವಿವಾಹಿತರು. ಮದುವೆ, ಮನೆ, ಮಕ್ಕಳು, ಸಂಸಾರ ಎಲ್ಲ ಜವಾಬ್ದಾರಿಗಳ ನಡುವೆಯೇ ತಮ್ಮ ಆಸಕ್ತಿಯ ವೈಜ್ಞಾನಿಕ ರಂಗದಲ್ಲಿ ಮುಂದುವರೆದು ಸಾಧನೆಯ ಶಿಖರವೇರಿದರು. ಇವರು ಬದುಕಿನಲ್ಲಿ ಆಯ್ದುಕೊಂಡ ಜೀವನಸಂಗಾತಿಯರು ಪತ್ನಿಯ ಮೇಧಾವಿತನವನ್ನು, ಪ್ರತಿಭೆಯನ್ನೂ ಗೌರವಿಸಿದವರು, ತಮ್ಮ ಪತ್ನಿಗೆ ಸಹಕಾರ ನೀಡಿದವರು. ಸುಖೀ ಕುಟುಂಬದೊಡನೆ, ಯಶಸ್ವಿ ಉದ್ಯೋಗವನ್ನು, ಸಂಶೋಧನೆಯನ್ನು ಜೊತೆಗೂಡಿಸಿದ ಈ ಮಹಿಳೆಯರ ಜೀವನ ಚಿತ್ರಗಳು 'ಎಲ್ಲವೂ ಸಾಧ್ಯ, ಅಸಾಧ್ಯವಾದುದ್ದೇನೂ ಇಲ್ಲ' ಎಂದು ಸಾರುತ್ತವೆ. ಇಂದಿನ ಪೀಳಿಗೆಗೆ ಸ್ಫೂರ್ತಿಯ ಸೆಲೆಯಾಗುತ್ತವೆ. ಅಡ್ಡ ನಿಂತ ಅಡೆತಡೆಗಳ ನಡುವೆಯೂ ಗೆದ್ದು ಸಾಗಬಹದುದೆಂಬ ಆತ್ಮ ವಿಶ್ವಾಸವನ್ನು ನೀಡುತ್ತವೆ.

## ಮೇರಿ ಕ್ಯೂರಿ (೧೮೬೭–೧೯೩೪)

ನೊಬೆಲ್ ಪ್ರಶಸ್ತಿ ಪಡೆದ ಮೊಟ್ಟಮೊದಲ ಮಹಿಳಾ ವಿಜ್ಞಾನಿ ಮೇರಿ ಕ್ಯೂರಿಯ ಕತೆ ಚಿರಪರಿಚಿತವಾಗಿದೆ. ವಿಜ್ಞಾನ ರಂಗದಲ್ಲಿ ಎರಡು ಬಾರಿ ನೊಬೆಲ್ ಪ್ರಶಸ್ತಿ ಪಡೆದ ಏಕೈಕ ವಿಜ್ಞಾನಿ ಈಕೆ. ಪರಾಡಳಿತದ ಪದತಳದಲ್ಲಿ ತುಳಿದ ಸಣ್ಣ ದೇಶ ಪೋಲೆಂಡಿನಲ್ಲಿ ಜನಿಸಿದ ಮೇರಿ, ಕಡು ಬಡತನದಲ್ಲಿ ಪರರ ಮನೆಯಲ್ಲಿ ದುಡಿದು ಗಳಿಸಿ, ಪ್ಯಾರಿಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದಳು. ಮೇಧಾವಿ ವಿಜ್ಞಾನಿ ಪಿಯರ್ ಕ್ಯೂರಿಯನ್ನು ವಿವಾಹವಾದ ಈಕೆ ತನ್ನ ಡಾಕ್ಟರಲ್ ಥೀಸಿಸ್‌ಗೆ ಹೊಚ್ಚ ಹೊಸ ರಂಗವಾದ 'ಯುರೇನಿಯಂ ಕಿರಣ'ಗಳ ಮೂಲ ಅಧ್ಯಯನವನ್ನು ಆಯ್ದುಕೊಂಡಳು. ಮೇರಿಗೆಂದೂ ವಿವಾಹ–ವಿಜ್ಞಾನಗಳ ನಡುವೆ ಆಯ್ದುಕೊಳ್ಳುವ ವಿಚಾರವೇ ಬಂದಿರಲಿಲ್ಲ. ಆಕೆಯಲ್ಲಿ ಶಕ್ತಿ ಇತ್ತು, ಛಲವಿತ್ತು. ವಿವಾಹವನ್ನು, ತಾಯ್ತನವನ್ನು, ವಿಜ್ಞಾನವನ್ನು ಎಲ್ಲವನ್ನೂ ತನ್ನ ಪ್ರೀತಿಯ ತೀವ್ರತೆಯಲ್ಲಿ ನಿಭಾಯಿಸಿ ಗೆಲ್ಲಬಲ್ಲ ಆತ್ಮವಿಶ್ವಾಸವಿತ್ತು.

ಆರ್ಥಿಕ ಮುಗ್ಗಟ್ಟಿನಲ್ಲಿ, ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಮೇರಿ ಕ್ಯೂರಿ 'ರೇಡಿಯಂ' ಕಂಡು ಹಿಡಿದಳು. 'ರೇಡಿಯೋ ಆಕ್ಟಿವಿಟಿ' ಎಂಬ ಹೊಚ್ಚ ಹೊಸ ರಂಗಕ್ಕೆ ಜನ್ಮ ಕೊಟ್ಟಳು. ಅಗಾಧ ಹಣದ ಸಾಧ್ಯತೆ ಇದ್ದ 'ರೇಡಿಯಂ' ಅನ್ನು ಮೇರಿಕ್ಯೂರಿ ಪೇಟೆಂಟ್ ಮಾಡದೆ, ಮಾನವ ಸೇವೆಗೆ

ಮೀಸಲೆಂದು ಅರ್ಪಿಸಿದಳು. ಪತ್ನಿಯ ಸಂಶೋಧನೆಯ ಮಹತ್ವದ ಸಾಧ್ಯತೆಯ ಅರಿವಾದೊಡನೆ, ತನ್ನ ಸ್ವಂತ ಸಂಶೋಧನೆಯನ್ನು ತೊರೆದು ಪಿಯರ್ ಕ್ಯೂರಿ ಆಕೆಗೆ ಜೊತೆಯಾಗಿದ್ದ. ಆ ಕ್ಷಣದಿಂದ ಅವರ ಜೊತೆ ಜೊತೆಯ ಸಂಶೋಧನೆಯ ದುಡಿಮೆಯಲ್ಲಿ ಯಾರು ಏನು ಮಾಡಿದರೆಂದು ಬೇರ್ಪಡಿಸಲಾರದಷ್ಟು ಐಕ್ಯತೆಯಿತ್ತು. ೧೯೦೩ರಲ್ಲಿ ಮೇರಿ ಮತ್ತು ಪಿಯರ್‌ಗೆ ಭೌತಶಾಸ್ತ್ರದ ನೋಬೆಲ್ ಪ್ರಶಸ್ತಿ ದೊರೆಯಿತು. ಆರ್ಥಿಕ ಸ್ಥಿತಿ ಸುಧಾರಿಸಿ ಬದುಕು ಹಸನಾದ ಹೊತ್ತಿನಲ್ಲಿ, ಪಿಯರ್ ರಸ್ತೆ ಅಪಘಾತದಲ್ಲಿ ಮೃತನಾದ. ಇಬ್ಬರು ಪುಟ್ಟ ಮಕ್ಕಳ ಜವಾಬ್ದಾರಿ ಹೊತ್ತು ಮೇರಿ ಮತ್ತೆ ತನ್ನ ಸಂಶೋಧನೆಗೆ ಹಿಂತಿರುಗಿದಳು. ಪತಿಯ ಮರಣದ ತರುವಾಯ ಸಾಧಿಸಿದ ಶ್ರೇಷ್ಠ ಸಂಶೋಧನೆಯನ್ನು ಗುರುತಿಸಿ ೧೯೧೧ರ ರಸಾಯನಶಾಸ್ತ್ರದ ನೋಬೆಲ್ ಪ್ರಶಸ್ತಿಯನ್ನು ಮೇರಿಗೆ ನೀಡಲಾಯಿತು. ೩೫ ವರ್ಷಗಳ ಕಾಲ ರೇಡಿಯಂ ಒಡನಾಟದಲ್ಲಿ ಮೇರಿ ಕ್ಯೂರಿ, ಅತಿಯಾಗಿ ವಿಕರಣಕ್ಕೆ ಒಡ್ಡಿಕೊಂಡ ಕಾರಣ ರಕ್ತದ ಕ್ಯಾನ್ಸರಿಗೆ ಬಲಿಯಾದಳು.

ಹೆಜ್ಜೆ ಮೂಡದ ಹಾದಿಯಲ್ಲಿ ಮೇರಿ ನಡೆದಿದ್ದಳು. ಸಿದ್ಧಜಾಡಿನ ಆರಾಮ, ಐಷರಾಮಗಳನ್ನು ತ್ಯಜಿಸಿ, ವಿಜ್ಞಾನದ ಅದ್ಭುತ ಅಸ್ಪರ್ಶಿತ ರಂಗವನ್ನು ಹೊಕ್ಕು ಯಶಸ್ವಿಯಾಗಿದ್ದಳು. ವಿಜ್ಞಾನದ ಉತ್ಕಟ ಪ್ರೇಮಿಗಳಿಗೆಲ್ಲ ಮೇರಿ ಕ್ಯೂರಿ ಆದರ್ಶವಾದಳು, ಮಾನವತಾವಾದಿಗಳಿಗೆ ದಾರಿದೀಪವಾದಳು. ಮೇರಿ ಕ್ಯೂರಿ ಪ್ರಕೃತಿಯಲ್ಲಿದ್ದ ಅತ್ಯಂತ ಶಕ್ತಿಶಾಲಿ ವಿಕಿರಣಶೀಲ ವಸ್ತುವನ್ನು ಕಂಡು ಹಿಡಿದಿದ್ದಳು. ಇಪ್ಪತ್ತನೇ ಶತಮಾನದ ಭೌತಶಾಸ್ತ್ರ ಮೇರಿ ಕ್ಯೂರಿಯ ಸಂಶೋಧನೆಯಿಂದ ವಿಕಾಸಗೊಂಡಿತು. ಪರಮಾಣು ರಚನೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಯಿತು. 'ಅಣುಯುಗ'ಕ್ಕೆ ನಾಂದಿಯಾಯಿತು.

**ಐರೀನ್ ಕ್ಯೂರಿ (೧೮೯೭–೧೯೫೬)**

ಪ್ರಸಿದ್ಧ ವಿಜ್ಞಾನಿಗಳಾದ ಮೇರಿಕ್ಯೂರಿ ಮತ್ತು ಪಿಯರ್ ಕ್ಯೂರಿಯ ಮಗಳು ಐರೀನ್. ಮೇರಿಕ್ಯೂರಿ ಮಗಳ ವಿಜ್ಞಾನ ಕುರಿತ ಆಸಕ್ತಿಯತ್ತ ವಿಶೇಷ ಗಮನ ಕೊಟ್ಟವಳು. ಮಗಳಿಗೆ ಯಾವ ಜಾತಿ–ಧರ್ಮಗಳನ್ನೂ ಬೋಧಿಸದ ಮೇರಿ ಕ್ಯೂರಿ, ಕಠಿಣ ಪರಿಶ್ರಮ ಮತ್ತು ಮಾನವತಾವಾದಕ್ಕಿಂತ ಮಿಗಿಲಾದ ಧರ್ಮವಿಲ್ಲವೆಂದು ನಂಬಿದವಳು.

ಮೊದಲ ಮಹಾಯುದ್ಧದ ಸಮಯ, ಯುದ್ಧರಂಗದಿಂದ ಹಿಂತಿರುಗಿದ ಗಾಯಾಳುಗಳ ಸಂಖ್ಯೆ ಅಪಾರವಿತ್ತು. ಆಸ್ಪತ್ರೆಗಳಲ್ಲಿ ಕ್ಷ–ಕಿರಣ ಸಲಕರಣೆಗಳಿಲ್ಲದೆ, ಗಾಯಗೊಂಡ ಸೈನಿಕರ ಮಾಂಸವನ್ನು ಬಗೆದು ಗುಂಡುಗಳಿಗೆ, ಸಿಡಿದ ಲೋಹದ ಚೂರುಗಳಿಗೆ ವೈದ್ಯರು ತಡಕಾಡುತ್ತಿದ್ದರು. ಇದನ್ನು ಕಂಡ ಮೇರಿ ತಟ್ಟನೆ ಪ್ಯಾರಿಸಿನ ಮೂಲೆ ಮೂಲೆಗಳಿಂದ ಕ್ಷ–ಕಿರಣ ಉಪಕರಣಗಳನ್ನು ಸಂಗ್ರಹಿಸಿ, ಅವುಗಳನ್ನು ಮೋಟಾರು ಕಾರುಗಳಿಗೆ ಜೋಡಿಸಿ, ಯುದ್ಧರಂಗಕ್ಕೆ ನುಗ್ಗಿದಳು. ಯುದ್ಧದ ಮುಂಚೂಣಿಯ ಆಸ್ಪತ್ರೆಗಳಲ್ಲಿ ನೋವಿನಿಂದ ನರಳಿದ ಗಾಯಾಳುಗಳ ದೇಹವನ್ನು ಕ್ಷ–ಕಿರಣಗಳಿಂದ ಪರೀಕ್ಷಿಸಿ, ವೈದ್ಯರಿಗೆ ಗುಂಡಿರುವ ಜಾಗವನ್ನು ತೋರಿಸುತ್ತಿದ್ದಳು. ಮೇರಿಯ ಕ್ಷ–ಕಿರಣಾಲಯದಲ್ಲಿ ಪರೀಕ್ಷಿಸಲ್ಪಟ್ಟ ಗಾಯಾಳುಗಳ ಸಂಖ್ಯೆ ಹತ್ತು ಲಕ್ಷ ದಾಟಿತ್ತು. ಮೇರಿ ಕ್ಯೂರಿ ಮಗಳು ಐರೀನ್‌ಳಿಗೆ ಶಾಲಾ ಪಾಠಗಳ ನಡುವೆಯೇ ಕ್ಷ–ಕಿರಣಗಳನ್ನು ಕುರಿತು ತರಬೇತಿ ನೀಡಿದಳು. ಕೊಲೆಗಡುಕ ಯುದ್ಧದ ಹಿಂಸಾಚಾರದ ನಡುವೆ ಕೇವಲ ಹದಿನೆಂಟರ ಬಾಲೆ ಐರೀನ್, ಕೊಂಚವೂ ಅಳುಕದೆ, ಗಾಯಗೊಂಡ ಯೋಧರ ಕಿತ್ತು ಹರಿದ ರಕ್ತಮಾಂಸದ ನಡುವೆ ಸಾವಧಾನವಾಗಿ, ಆತ್ಮವಿಶ್ವಾಸದಿಂದ ಕೆಲಸ ಮಾಡಿದಳು.

ಐರೀನ್, ತನ್ನಂತೆಯೇ ಯುದ್ಧವಿರೋಧಿ ಎಡಪಂಥೀಯನಾದ ಫ್ರೆಡರಿಕ್ ಜೋಲಿಯೋನನ್ನು ವಿವಾಹವಾದಳು. ಪಿಯರ್ ಮತ್ತು ಮೇರಿ ಕ್ಯೂರಿಯರಂತೆಯೇ ಶ್ರೇಷ್ಠ ಸಹಭಾಗಿತ್ವವನ್ನು ಹಂಚಿಕೊಂಡು, ಜೊತೆಯಲ್ಲಿ ಸಂಶೋಧನೆ ನಡೆಸಿದ ಐರೀನ್ ಮತ್ತು ಫ್ರೆಡರಿಕ್ 'ಕೃತಕ ವಿಕಿರಣ ಶೀಲತೆ'ಯನ್ನು ಕಂಡು ಹಿಡಿದರು. ಅವರ ಸಂಶೋಧನೆ ಯುರೇನಿಯಂನಂಥಾ ಭಾರದ ಮೂಲಧಾತುಗಳಷ್ಟೇ 'ವಿಕಿರಣಶೀಲ ಗುಣ'ವನ್ನು ಪಡೆದಿಲ್ಲ, ಯಾವುದೇ ಮೂಲಧಾತುವನ್ನೂ ವಿಕಿರಣಗೊಳಿಸಬಹುದು ಎಂದು ತೋರಿಸಿಕೊಟ್ಟಿತು. ಅವರ ಈ ಸಂಶೋಧನೆಗೆ ೧೯೩೫ರ ರಸಾಯನಶಾಸ್ತ್ರದ ನೋಬೆಲ್ ಪಾರಿತೋಷಕ ದೊರೆಯಿತು. ಮೇರಿ ಮತ್ತು ಪಿಯರ್ ಕ್ಯೂರಿಯರು ತಮ್ಮ ಸಂಶೋಧನೆಯ ಎಲ್ಲ ಫಲಿತಾಂಶವನ್ನೂ ವಿಜ್ಞಾನದ ಮುನ್ನಡೆಗೆಂದು ಮುಚ್ಚುಮರೆ ಇಲ್ಲದೆ ಪ್ರಕಟಿಸಿದ್ದರು. ಐರೀನ್ ಮತ್ತು ಫ್ರೆಡರಿಕ್‌ರಿಗೂ ಇದೇ ಆದರ್ಶವಾಗಿತ್ತು. ಆದರೆ ಏರುತ್ತಿದ್ದ ನಾಜೀ ಭಯದಲ್ಲಿ, ತಮ್ಮ

ಸಂಶೋಧನೆಯ ದುರುಪಯೋಗದ ಸಂಭವ ಕಂಡಾಗ, 'ಯುರೇನಿಯಂ ವಿದಲನ' ಮತ್ತು 'ಸರಪಳಿ ಕ್ರಿಯೆ'ಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಪ್ರಕಟಿಸದೆ ೧೯೩೯ರಲ್ಲಿ ಒಂದು ಮುದ್ರೆ ಒತ್ತಿದ ಲಕೋಟೆಯಲ್ಲಿರಿಸಿ ಪ್ಯಾರೀಸಿನ ವಿಜ್ಞಾನ ಅಕಾಡೆಮಿಯಲ್ಲಿ ಭದ್ರವಾಗಿಟ್ಟರು. ಮುಂದಿನ ಹತ್ತು ವರ್ಷಗಳು ಅವು ಗೋಪ್ಯವಾಗಿ ಉಳಿದವು. ಐರೀನ್ ಮತ್ತು ಫ್ರೆಡರಿಕ್ ಅಣುಶಕ್ತಿಯನ್ನು ಕೇವಲ ಶಾಂತಿಯುತ ಕಾರ್ಯಗಳಿಗೆ ಬಳಸಲು ಇಚ್ಛಿಸಿದ್ದರು.

ಐರೀನ್ 'ರೇಡಿಯಂ ಸಂಸ್ಥೆ'ಯನ್ನು ನಡೆಸುತ್ತಲೇ, ಶಾಂತಿಗಾಗಿ, ಅಣ್ವಸ್ತ್ರಗಳ ನಿಷೇಧಕ್ಕಾಗಿ, ಮಹಿಳಾ ಹಕ್ಕುಗಳಿಗಾಗಿ ಸತತವಾಗಿ ಹೋರಾಡಿದಳು. ಸ್ತ್ರೀವಾದಿಯಾದ ಐರೀನ್, 'ವಿಜ್ಞಾನ ಅಕಾಡೆಮಿ'ಯಲ್ಲಿ ಮಹಿಳೆಯರ ಸದಸ್ಯರ ಹಕ್ಕಿನ ಪರವಾಗಿ ವಾದಿಸಿದಳು. ಫ್ರೆಡರಿಕ್‌ಗೆ ವಿಜ್ಞಾನ ಅಕಾಡೆಮಿಗೆ ಪ್ರವೇಶ ದೊರೆತಿತ್ತು. ಆದರೆ ಐರೀನ್‌ಳಿಗೆ ಮಹಿಳೆ ಎಂಬ ಕಾರಣಕ್ಕೆ ಪ್ರವೇಶ ನಿರಾಕರಿಸಿದ್ದರು. ಪ್ರತಿ ಬಾರಿ ವಿಜ್ಞಾನ ಅಕಾಡೆಮಿಯ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿ, ಅದು ದೊರೆಯದಾಗ ಅಕಾಡೆಮಿಯ ಸ್ತ್ರೀವಿರೋಧಿ ನೀತಿಯತ್ತಮ ಲಿಂಗತಾರತಮ್ಯದತ್ತ ಐರೀನ್ ಸಾಕಷ್ಟು ಪ್ರಚಾರ ಮಾಡಿ ಗಬ್ಬಲವೆಬ್ಬಿಸುತ್ತಿದ್ದಳು.

ಮೊದಲ ಮಗಳು ಹುಟ್ಟುವಾಗಲೇ ಐರೀನ್‌ಗೆ ಕ್ಷಯರೋಗ ಅಂಟಿಕೊಂಡಿತ್ತು. ಕ್ಷಯರೋಗದೊಡನೆ ಗುದ್ದಾಡುತ್ತಲೇ, ವಿಜ್ಞಾನಿಯಾಗಿ, ತಾಯಿಯಾಗಿ, ಸಂಶೋಧಕಿಯಾಗಿ, ಸಾರ್ವಜನಿಕ ಮುಖಂಡಳಾಗಿ ಐರೀನ್ ದುಡಿದಳು. ಆದರೆ ಕಡೆಯಲ್ಲಿ ಐರೀನ್ ತಾಯಿಯಂತೆಯೇ ವಿಕಿರಣದ ದುಷ್ಪರಿಣಾಮಕ್ಕೆ ತುತ್ತಾಗಿ ರಕ್ತ ಕ್ಯಾನ್ಸರ್‌ನಿಂದ ಮೃತಳಾದಳು.

**ಗರ್ಟಿ ತೆರೇಸಾ ಕೋರಿ (೧೮೯೬–೧೯೫೭)**

ವೈದ್ಯರಂಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಮಹಿಳೆ ಗರ್ಟಿ ತೆರೇಸಾ ಕೋರಿ. ಅಗಾಧ ಪ್ರತಿಭೆ ಮತ್ತು ಸಾಧನೆಯ ನಂತರವೂ ಲಿಂಗ ತಾರತಮ್ಯದ ನೀತಿಯಿಂದಾಗಿ, ದಶಕಗಳ ಕಾಲ ಸಣ್ಣ ಕೆಲಸದಲ್ಲಿ, ಅಲ್ಪ ಸಂಬಳದಲ್ಲಿ ದುಡಿದ ಮಹಿಳಾ ವಿಜ್ಞಾನಿ. ಮೂವತ್ತೈದು ವರ್ಷಗಳ ಕಾಲ ತನ್ನ ಪತಿ ಕಾರ್ಲ್ ಕೋರಿಯೊಡನೆ ಸಹ ಸಂಶೋಧನೆ ನಡೆಸಿದ ಗರ್ಟಿ 'ಕೋರಿ ಚಕ್ರ'ವನ್ನು ಕಂಡು ಹಿಡಿದಳು. ನಮ್ಮ ದೇಹದಲ್ಲಿ ಶಕ್ತಿಯು

ಮಾಂಸಖಂಡಗಳಿಂದ ಪಿತ್ತ ಜನಕಾಂಗಕ್ಕೆ, ಪಿತ್ತಜನಕಾಂಗದಿಂದ ಮಾಂಸ ಖಂಡಗಳಿಗೆ ಚಲಿಸುವ ಬಗೆಯನ್ನು 'ಕೋರಿ ಚಕ್ರ' ವಿವರಿಸಿತ್ತು. ನಮ್ಮ ದೇಹದ ಜೀವಕೋಶಗಳು ಆಹಾರವನ್ನು ಶಕ್ತಿಯಾಗಿ ಪರಿವರ್ತಿಸುವ ಬಗೆಯನ್ನು ತಿಳಿಯುವತ್ತ ಅಡಿಪಾಯ ಹಾಕಿದ ವಿಜ್ಞಾನಿ ಗರ್ಟಿ ಕೋರಿ. ೧೯೨೦ರ ದಶಕದಲ್ಲಿ ಕೋರಿ ದಂಪತಿಗಳ ಅನ್ವೇಷಣೆ ಎಷ್ಟು ಕ್ರಾಂತಿಕಾರಿಯಾಗಿತ್ತು ಎಂದು ಊಹಿಸಲು, ಇಂದು ಕಷ್ಟವಾಗುತ್ತದೆ, ಕಾರಣ, ಅವರು ಕಂಡು ಹಿಡಿದಿದ್ದು ವಿಜ್ಞಾನದ ಅತ್ಯಂತ ಮೂಲಭೂತ ವಿಷಯವಾಗಿದ್ದು, ಇಂದು ಪ್ರೌಢಶಾಲಾ ವಿಜ್ಞಾನ ಪುಸ್ತಕಗಳಲ್ಲೂ ಅದನ್ನು ಓದುತ್ತೇವೆ. ಇದಲ್ಲದೆ, ಗರ್ಟಿ ಕೋರಿ ಕಿಣ್ವಗಳು ಮತ್ತು ಹಾರ್ಮೋನ್‌ಗಳ ಅಧ್ಯಯನ ಮಾಡಿದ ಮುಂಚೂಣಿಯ ವಿಜ್ಞಾನಿ.

ಜೆಕೋಸ್ಲವೇಕಿಯಾದ ಯೆಹೂದಿ ಕುಟುಂಬದಲ್ಲಿ ಜನಿಸಿದ ಗರ್ಟಿಯ, ಆರಂಭದ ವಿದ್ಯಾಭ್ಯಾಸ ಮನೆಯಲ್ಲೇ ನಡೆಯಿತು. ನಂತರ ಆಕೆಯನ್ನು ಹೆಣ್ಣು ಮಕ್ಕಳ 'ಫಿನಿಶಿಂಗ್ ಸ್ಕೂಲ್'ಗೆ ಕಳುಹಿಸಿದರು. ಇಲ್ಲಿ ಒಳ್ಳೆಯ ಪತ್ನಿಯಾಗುವ, ತಾಯಿಯಾಗುವ ತರಬೇತು ಸಿಗುತ್ತಿತ್ತು. ಗರ್ಟಿ ವಿಶ್ವವಿದ್ಯಾಲಯವನ್ನು ಸೇರಬಯಸಿದಳು. ವಿಶ್ವದ್ಯಾಲಯದಲ್ಲಿ ಪ್ರವೇಶ ಪಡೆಯಲು ಗಣಿತ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಲ್ಯಾಟಿನ್ ತಿಳಿದಿರಬೇಕಿತ್ತು. ಆ ಕಾಲದಲ್ಲಿ ಯಾವ ಹೆಣ್ಣುಮಕ್ಕಳ ಶಾಲೆಯಲ್ಲಿಯೂ ಇವನ್ನು ಹೇಳಿಕೊಡುತ್ತಿರಲಿಲ್ಲ. ಸ್ವಂತ ಅಧ್ಯಯನ ಮತ್ತು ಒಂದಿಷ್ಟು ಖಾಸಗಿ ಶಿಕ್ಷಣದ ಮೂಲಕ ತರಬೇತು ಪಡೆದು, ಬಹಳಷ್ಟು ಕಠಿಣವಾದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಪ್ರಾಗ್ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯನ್ನು ಸೇರಿದಳು.

ವೈದ್ಯಕೀಯ ಶಾಲೆಯಲ್ಲಿ ಗರ್ಟಿಗೆ, ಸಹಪಾಠಿ ಕಾರ್ಲ್ ಕೋರಿಯ ಪರಿಚಯವಾಯಿತು. ಗರ್ಟಿ ಮತ್ತು ಕಾರ್ಲ್ ಜೊತೆಯಲ್ಲಿಯೇ ವೈದ್ಯಕೀಯ ಅಧ್ಯಯನವನ್ನು ನಡೆಸಿದರು. ಎಂ.ಡಿ. ಪದವಿ ಪಡೆದು ೧೯೨೦ರಲ್ಲಿ ಗರ್ಟಿ ಮತ್ತು ಕಾರ್ಲ್ ವಿವಾಹವಾದರು. ಇದೇ ಸಮಯದಲ್ಲಿ ಗರ್ಟಿ ಕಾರ್ಲ್, ಜೊತೆಯಾಗಿ ಸಂಶೋಧನೆ ಆರಂಭಿಸಿದರು. ಅವರಿಗೆ ನಮ್ಮ ದೇಹ, ಶಕ್ತಿಯನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೇಗೆ ಕಳಿಸುತ್ತದೆ ಎಂದು ತಿಳಿಯುವ ಆಸಕ್ತಿಯಿತ್ತು. ಇವರು 'ಕೋರಿ ಚಕ್ರ'ವನ್ನು ಕಂಡುಹಿಡಿದರು.

ಗರ್ಟಿ ಮತ್ತು ಕಾರ್ಲ್ ಜೊತೆಯಾಗಿ ಐವತ್ತು ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದರು. ಒಂದು ಪ್ರಬಂಧದಲ್ಲಿ ಗರ್ಟಿಯ ಹೆಸರು ಮೊದಲು ನಮೂದಿತವಾಗಿದ್ದರೆ, ಮತ್ತೊಂದು ಪ್ರಬಂಧದಲ್ಲಿ ಕಾರ್ಲ್ ಹೆಸರು ಇರುತ್ತಿತ್ತು. ಅವರ ಸಂಶೋಧನೆ ಜೊತೆ ಜೊತೆಯಾಗಿ ನಡೆದದ್ದು. ಸಹಸಂಶೋಧನೆಯಲ್ಲಿ ಗರ್ಟಿಯ ಪಾತ್ರ ಪ್ರಮುಖವಾಗಿದ್ದರೂ, ಕೆಲಸ ಹುಡುಕುವಾಗ, ಕಾರ್ಲ್‌ಗೆ ಮಾತ್ರ ವಿಶ್ವವಿದ್ಯಾಲಯಗಳಿಂದ ಆಹ್ವಾನವಿರುತ್ತಿತ್ತು. ಬಹಳಷ್ಟು ವಿಶ್ವವಿದ್ಯಾಲಯಗಳು ಕಾರ್ಲ್‌ಗೆ ಕೆಲಸ ಕೊಡಲು ಸಿದ್ಧವಿದ್ದವು. ಆದರೆ ಗರ್ಟಿಗೆ ಕೆಲಸ ಕೊಡಲು ನಿರಾಕರಿಸಿದವು. ಕಾರ್ಲ್ ಆ ಎಲ್ಲ ಕೆಲಸಗಳನ್ನು ನಿರಾಕರಿಸಿದ. ಗರ್ಟಿಯನ್ನೂ ವಿಜ್ಞಾನಿಯೆಂದು ಗುರುತಿಸಿ ಆಕೆಗೊಂದು ಪ್ರಯೋಗ ಶಾಲೆಯನ್ನು ನೀಡಬೇಕೆಂಬ ಕಾರ್ಲ್‌ನ ಬೇಡಿಕೆಯನ್ನು ವಿಶ್ವವಿದ್ಯಾಲಯಗಳು ಮನ್ನಿಸಲು ಸಿದ್ಧವಿರಲಿಲ್ಲ. ಇದೇ ಸಂದರ್ಭದಲ್ಲಿ ಕಾರ್ಲ್‌ಕೋರಿಗೆ ಅಮೆರಿಕಾದ ರಾಶೆಸ್ಟರ್ ವಿಶ್ವವಿದ್ಯಾಲಯದಲ್ಲಿ ಒಳ್ಳೆಯ ನೌಕರಿ ದೊರೆಯಿತು. ಆದರೆ, ಕಾರ್ಲ್, ತನ್ನ ಪತ್ನಿ ಗರ್ಟಿಯೊಡನೆ ಕೆಲಸ ಮಾಡುವುದನ್ನು ನಿಲ್ಲಿಸಬೇಕೆಂಬ ನಿರ್ಬಂಧವಿತ್ತು. ಕಾರ್ಲ್ ಈ ಕೆಲಸವನ್ನು ನಿರಾಕರಿಸಿದಾಗ ಅವರಿಗೆ ಅಚ್ಚರಿ. ಗರ್ಟಿಯನ್ನು ಪಕ್ಕಕ್ಕೆ ಕರೆದೊಯ್ದು 'ನೀನು ನಿನ್ನ ಪತಿಯ ಹುದ್ದೆಯ ಅವಕಾಶಗಳನ್ನು ಹಾಳು ಮಾಡುತ್ತಿದ್ದೀಯ' ಎಂದು ಎಚ್ಚರಿಸಿದರು. ಹೆಂಡತಿಯೊಡನೆ ಸಹ ಸಂಶೋಧಕನಾಗಿ ಕೆಲಸ ಮಾಡುವುದರಲ್ಲಿ ಕಾರ್ಲ್‌ಗೆ ಯಾವ ವಿಪರೀತವೂ ಕಂಡಿರಲಿಲ್ಲ. ಕಡೆಗೆ ೧೯೩೧ರಲ್ಲಿ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಗರ್ಟಿ ಮತ್ತು ಕಾರ್ಲ್ ಇಬ್ಬರಿಗೂ ಕೆಲಸ ಸಿಕ್ಕಿತು. ಕಾರ್ಲ್ ಔಷಧ ಶಾಸ್ತ್ರ ವಿಭಾಗದ ಮುಖ್ಯಸ್ಥನಾದರೆ, ಗರ್ಟಿಗೆ ಪ್ರಯೋಗಶಾಲೆಯ ತಂತ್ರಜ್ಞನಿಗಿಂತ ಹೆಚ್ಚೇನೂ ಭಿನ್ನವಲ್ಲದ 'ಸಂಶೋಧನಾ ಸಹಾಯಕಿ' ಸಣ್ಣ ಹುದ್ದೆಯನ್ನು ನೀಡಿದರು. ಜೊತೆಯಲ್ಲಿ ದುಡಿದ, ಅತ್ಯಂತ ಪ್ರತಿಭಾಶಾಲಿ ಗರ್ಟಿಗೆ ನೀಡಿದ ಸಂಬಳ ಅತ್ಯಲ್ಪ. ಕಾರ್ಲ್‌ಗೆ ಆಕೆಯ ಐದರಷ್ಟು ಸಂಬಳವಿತ್ತು. ಆದರೆ ಲಿಂಗತಾರತಮ್ಯದ ಸದ್ಯದ ಪರಿಸ್ಥಿತಿಯಲ್ಲಿ ವಿಪರೀತ ಪೂರ್ವಗ್ರಹದ ಪರಿಸರದಲ್ಲಿ ಇದ್ದಕ್ಕಿಂತ ಹೆಚ್ಚೇನದನ್ನು ನಿರೀಕ್ಷಿಸುವಂತಿರಲಿಲ್ಲ.

ಇದೀಗ ಗರ್ಟಿ ಮತ್ತು ಕಾರ್ಲ್ ಒಂದಾದ ಮೇಲೊಂದು ಕಿಣ್ವಗಳನ್ನು ಕಂಡು ಹಿಡಿದರು. ಕಿಣ್ವಗಳು ರಾಸಾಯನಿಕ ಪ್ರತಿಕ್ರಿಯೆಗಳನ್ನು ಯಾವ

ರೀತಿಯಲ್ಲಿ ಹೊತ್ತಿಸಬಲ್ಲವು, ನಂದಿಸಬಲ್ಲವು ಎಂದು ತಿಳಿಯತೊಡಗಿದ್ದರು. ಇವರ ಸಂಶೋಧನೆ ಸಿಹಿಮೂತ್ರ ರೋಗ ಮತ್ತು ಇತರ ರೋಗಗಳ ಚಿಕಿತ್ಸೆಯನ್ನು ಬಹಳಷ್ಟು ಪ್ರಭಾವಿಸಿತು. ಗರ್ಟಿ ವಿಜ್ಞಾನ ಜಗತ್ತಿನ ಪ್ರಮುಖ ವಿಜ್ಞಾನಿಯಾದರೂ, ಆಕೆಯ ಸಣ್ಣ ಸಂಬಳದ ಸಣ್ಣ ಹುದ್ದೆಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಮಹಿಳಾ ವಿಜ್ಞಾನಿಗಳ ಇಂಥಾ ದುಃಸ್ಥಿತಿ ಸುಧಾರಿಸಲು ಮತ್ತೆ ಮಹಾಯುದ್ಧವೇ ಬರಬೇಕಾಯಿತು. ಎರಡನೇ ಮಹಾಯುದ್ಧದ ಸಮಯ, ಕಾರ್ಲ್ ರಕ್ಷಣಾದಳದ ಯೋಜನೆಗಳಲ್ಲಿ ತೊಡಗಬೇಕಾಗಿ ಬಂದಿತು. ಗರ್ಟಿ ಏಕಾಂಗಿಯಾಗಿ ತಮ್ಮ ಸಂಶೋಧನೆಯನ್ನು ಮುಂದುವರೆಸಿದಳು. ಇದೀಗ ಪ್ರಯೋಗ ಶಾಲೆಯಲ್ಲಿ ಪುರುಷ ವಿಜ್ಞಾನಿಗಳ ಸಂಖ್ಯೆ ಕಡಮೆಯಾಗಿತ್ತು. ಮೊಟ್ಟ ಮೊದಲಿಗೆ ಮಹಿಳಾ ವಿಜ್ಞಾನಿಗಳಿಗೆ ಅವಕಾಶ ದೊರೆತು. ಗರ್ಟಿಗೆ 'ಸಹ ಪ್ರೊಫೆಸರ್' ಹುದ್ದೆ ನೀಡಿದರು.

೧೯೫೦ರ ದಶಕದಲ್ಲೂ ಆಮೆರಿಕಾದ ವಿಶ್ವವಿದ್ಯಾಲಯಗಳಲ್ಲಿ ಮಹಿಳೆಯರು ಹಾಗೂ ಯಹೂದಿಗಳ ಸಾಕಷ್ಟು ತಾರತಮ್ಯದ ನೀತಿಗಳಿದ್ದವು. ಗರ್ಟಿಗೆ ವಿಜ್ಞಾನ ರಂಗದಲ್ಲಿಯ ಲಿಂಗ ತಾರತಮ್ಯದ ತೀವ್ರ ಅನುಭವವಿತ್ತು. ಕಾರ್ಲ್‌ನನ್ನು 'ರಾಷ್ಟ್ರೀಯ ವಿಜ್ಞಾನ ಅಕಾಡೆಮಿ'ಗೆ ಲಂಡನ್‌ನ 'ರಾಯಲ್ ಸೊಸೈಟಿ'ಗೆ ಚುನಾಯಿಸಿದ್ದರು. ಆದರೆ ಆ ಗೌರವ ಗರ್ಟಿಗೆ ದೊರೆತಿರಲಿಲ್ಲ. ೧೯೪೬ರಲ್ಲಿ ಕಾರ್ಲ್‌ಗೆ ಮಾತ್ರ ಪ್ರತಿಷ್ಠಿತ ಆಲ್ಬರ್ಟ್ ಲಾಸ್ಟರ್ ಪ್ರಶಸ್ತಿ ನೀಡಿದರು. ಗರ್ಟಿಗೆ ನೊಬಲ್ ಪ್ರಶಸ್ತಿ ದೊರೆತ ಮೇಲೂ, ಕಾರ್ಲ್‌ಗೆ ಮಾತ್ರ ಪ್ರಶಸ್ತಿ ಪುರಸ್ಕಾರ ನೀಡಿದ ಸಂಸ್ಥೆಗಳಿದ್ದವು.

೧೯೪೭ರ ವೈದ್ಯರಂಗದ ನೊಬೆಲ್ ಪ್ರಶಸ್ತಿಯನ್ನು ಗರ್ಟಿ ಮತ್ತು ಕಾರ್ಲ ಕೋರಿಗೆ ನೀಡಲಾಯಿತು. ನೊಬೆಲ್ ಪ್ರಶಸ್ತಿ ಪಡೆಯಲು ಇನ್ನೇನು ಹೊರಡಬೇಕು ಅನ್ನುವಾಗ, ವೈದ್ಯರು ಗರ್ಟಿಗೆ ವಿಚಿತ್ರ ಬಗೆಯ ಹಾನಿಕಾರಕ ರಕ್ತ ಹೀನತೆಯ ರೋಗವಿದೆ ಎಂದು ತಿಳಿಸಿದರು. ಇಂಥಾ ದುಃಖದ ಸುದ್ದಿ ತಿಳಿದ ನಂತರವೂ ಕೋರಿ ದಂಪತಿಗಳು ಸ್ಟಾಕ್ ಹೋಮ್‌ಗೆ ಹೋಗಿ ನೊಬೆಲ್ ಪ್ರಶಸ್ತಿ ಸ್ವೀಕರಿಸಲು ನಿರ್ಧರಿಸಿದರು. ನೋಬೆಲ್ ಭಾಷಣವನ್ನು ಇಬ್ಬರೂ ಹಂಚಿಕೊಂಡು ನೀಡಿದರು. 'ಈ ನೊಬೆಲ್ ಪ್ರಶಸ್ತಿಯಲ್ಲಿ ನನ್ನ ಪತ್ನಿಯ ಹೆಸರನ್ನು ಸೇರಿಸಿರುವುದು ನನಗೆ ಅತ್ಯಂತ ಸಮಾಧಾನದ ವಿಷಯವಾಗಿದೆ. ಮೂವತ್ತು ವರ್ಷಗಳ ಹಿಂದೆ ನಾವು ವೈದ್ಯಕೀಯ ಶಾಲೆಯ ವಿಧ್ಯಾರ್ಥಿಗಳಾದ್ದಾಗ ನಮ್ಮ ಸಹ ಸಂಶೋಧನೆ

ಆರಂಭವಾಯಿತು. ಅದು ಇಂದಿನವರೆಗೂ ಮುಂದುವರೆದು ಬಂದಿದೆ. ಒಬ್ಬರು ಇನ್ನೊಬ್ಬರಿಲ್ಲದೆ ಇಷ್ಟು ದೂರ ಬರಲು ಸಾಧ್ಯವಿರಲಿಲ್ಲ' ಎಂದು ಕಾರ್ಲ್ ಹೇಳಿದ. ಮುಂದಿನ ಹತ್ತು ವರ್ಷಗಳ ಕಾಲ ಗರ್ಟಿ ರಕ್ತದ ಪೂರೈಕೆಯಿಂದಾಗಿ, ಕಾರ್ಲ್‌ನ ಪ್ರೀತಿಯ ಆರೈಕೆಯಿಂದಾಗಿ, ತನ್ನ ಕೆಲಸದ ತೀವ್ರತೆಯಿಂದಾಗಿ, ಬದುಕಿದ್ದಳು. ೧೯೫೭ರಲ್ಲಿ ಅರವತ್ತೊಂದು ವರ್ಷದ ಗರ್ಟಿ ತನ್ನ ಮನೆಯಲ್ಲಿ, ಕಾರ್ಲ್‌ನೊಡನೆ ಏಕಾಂತದಲ್ಲಿದ್ದ ಸಮಯದಲ್ಲಿ ನಿಶ್ಯಬ್ಧವಾಗಿ ತೀರಿಕೊಂಡಳು.

**ಮರಿಯಾ ಗೋಪರ್ಟ್ ಮೇಯರ್ (೧೯೦೬–೧೯೭೨)**

ನೊಬೆಲ್ ಪ್ರಶಸ್ತಿಯ ಇತಿಹಾಸದಲ್ಲಿಯೇ ಸಂಬಳವಿಲ್ಲದೆ ಸ್ವಯಂಸೇವಕಳಾಗಿ ವಿಜ್ಞಾನರಂಗದಲ್ಲಿ ಮೂವತ್ತು ವರ್ಷಗಳ ಕಾಲ ದುಡಿದ ಅದ್ಭುತ ದಾಖಲೆ ಮರಿಯಾಳದು. ಮರಿಯಾ ತರಗತಿಗಳಲ್ಲಿ ಕಲಿಸಿದ್ದಳು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಳು. ವಿಶ್ವವಿದ್ಯಾಲಯದ ಆಯೋಗಗಳಲ್ಲಿ ಸೇವೆ ಸಲ್ಲಿಸಿದ್ದಳು, ನೂರಾರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಳು, ಆದರೆ ಇವು ಯಾವುದಕ್ಕೂ ಆಕೆಗೆ ಸಂಬಳ ಕೊಟ್ಟವರಿಲ್ಲ.

ಜರ್ಮನಿಯಲ್ಲಿ ಜನಿಸಿದ ಮರಿಯಾಳ ಬಹಳಷ್ಟು ವರ್ಷಗಳು ಗಾಟಿನ್‌ಗೇನ್‌ನಲ್ಲಿ ಕಳೆಯಿತು. ಇಲ್ಲಿ ಹಣದುಬ್ಬರದ ಕಾರಣವಾಗಿ, ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಗೆ ತಯಾರಿಸಲು ಹುಡುಗಿಯರಿಗೆ ಇದ್ದ ಒಂದೇ ಒಂದು ಶಾಲೆಯೂ ಮುಚ್ಚಿಹೋಗಿತ್ತು, ಸ್ವಂತ ಅಧ್ಯಯನದಿಂದ ಸಿದ್ಧವಾಗಿ, ನೂರಾರು ಹುಡುಗರ ನಡುವೆ ಪ್ರವೇಶ ಪರೀಕ್ಷೆ ತೆಗೆದುಕೊಂಡು ಮರಿಯಾ ಪಾಸಾದಳು.

'ಕ್ವಾಟಮ್ ಮೆಕಾನಿಕ್ಸ್' ಬಹುಶಃ ಇಪ್ಪತ್ತನೆ ಶತಮಾನದ ದೊಡ್ಡ ಭೌದ್ಧಿಕ ಸಾಧನೆ. ಕ್ವಾಟಂ ಮೆಕಾನಿಕ್ ಪರಮಾಣುಗಳು, ಬೀಜಗಳ ವರ್ತನೆಯನ್ನು ವಿವರಿಸುವ ಅದ್ಭುತ ರಂಗ. ಮರಿಯಾ ಗಣಿತವನ್ನು ಓದಲೆಂದು ವಿಶ್ವವಿದ್ಯಾಲಯ ಪ್ರವೇಶಿಸಿದ್ದಳು. ಆದರೆ 'ಕ್ವಾಟಂ ಮೆಕಾನಿಕ್ಸ್'ರುಚಿ ಹತ್ತಿ ಮರಿಯಾ ಭೌತಶಾಸ್ತ್ರಜ್ಞಳಾದಳು. ಈಕೆ ಕ್ಯಾಲಿಪೋರ್ನಿಯಾ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪಡೆದು ಬಂದಿದ್ದ ಜೋಸೆಫ್ ಮೇಯರ್‌ನನ್ನು ವಿವಾಹವಾದಳು. ಮರಿಯಾಳ

ಬದುಕಿನುದ್ದಕ್ಕೂ ಜೋಸೆಫ್ ಒತ್ತಾಸೆಯಾಗಿದ್ದು, ವಿಜ್ಞಾನ ರಂಗದಲ್ಲಿ ಮುಂದುವರೆಯುವಂತೆ ಪ್ರೋತ್ಸಾಹ, ಬೆಂಬಲ, ಸಹಕಾರ ಎಲ್ಲವನ್ನೂ ನೀಡಿದ.

೧೯೩೦ರಲ್ಲಿ ಮರಿಯಾ ಮತ್ತು ಜೋಸೆಫ್ ವಿವಾಹವಾಗಿ ಅಮೆರಿಕಾಗೆ ಬಂದಿಳಿದರು. ಮೇರಿ ಲ್ಯಾಂಡ್‌ನ ಬಾಲ್ಟಿಮೋರ್ ಎಂಬಲ್ಲಿ, ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ಜೋಸೆಫ್‌ಗೆ ಸಹಾಯಕ ಪ್ರೋಫೆಸರ್ ಕೆಲಸ ಸಿಕ್ಕಿತು. ಆದರೆ ಅಮೆರಿಕದಲ್ಲೂ ಮಹಿಳೆಯರಿಗೆ ವಿಶ್ವವಿದ್ಯಾಲಯದ ಉದ್ಯೋಗ ಹಿಡಿಯಲು ಸಾಧ್ಯವಿರಲಿಲ್ಲ. ಯಾವ ವಿಶ್ವವಿದ್ಯಾಲಯವೂ ಪ್ರೋಫೆಸರ್ ಹೆಂಡಿತಿಗೆ ಸಂಬಳದ ಕೆಲಸ ನೀಡಲು ಸಿದ್ಧವಿರಲಿಲ್ಲ. ಮರಿಯಾ ಸಂಬಳವಿಲ್ಲದೆಯೇ ಭೌತಶಾಸ್ತ್ರದ ಖುಷಿಗೆ ದುಡಿಯತೊಡಗಿದಳು. ೧೯೩೩ರಲ್ಲಿ ಮರಿಯಾಗೆ ಒಬ್ಬ ಮಗಳೂ, ಐದು ವರ್ಷಗಳ ನಂತರ ಒಬ್ಬ ಮಗನೂ ಹುಟ್ಟಿದ. ಇದೀಗ ಬದುಕು ಸ್ವಲ್ಪ ಸಂಕೀರ್ಣವಾಗಿತ್ತು. ಸಂಶೋಧನೆಯಲ್ಲಿ ಪೂರ್ಣ ತೊಡಗಿದ ಮರಿಯಾಗೆ, ತಾನು ಹೆಚ್ಚು ಸಮಯ ಮಕ್ಕಳೊಡನೆ, ಮನೆಯಲ್ಲಿ ಕಳೆಯಬೇಕು ಎನಿಸುತ್ತಿತ್ತು. ಮನೆ, ಮಕ್ಕಳು, ಮತ್ತು ಸಂಶೋಧನೆಯನ್ನು ತೂಗಿಸುವ ಕೆಲಸ ಸುಲಭದ್ದಿರಲಿಲ್ಲ. ಆದರೆ ಮರಿಯಾಗೆ ವಿಜ್ಞಾನವನ್ನು ಬಿಟ್ಟು ಮನೆಯಲ್ಲಿ ಉಳಿಯುವುದು ಊಹಿಸಿಕೊಳ್ಳಲು ಸಾಧ್ಯವಿರಲಿಲ್ಲ.

ಎರಡನೇ ಮಹಾಯುದ್ಧದ ದಿನಗಳು, ಈ ಯುದ್ಧ ಹೆಚ್ಚುಕಡಿಮೆ ಭೌತಶಾಸ್ತ್ರಜ್ಞರ ಯುದ್ಧದಂತಿತ್ತು. ಭೌತಶಾಸ್ತ್ರಜ್ಞರು ರಡಾರ್ ಕಂಡು ಹಿಡಿದಿದ್ದರು. ಜರ್ಮನಿಯ ಬಾಂಬ್ ದಾಳಿಯಿಂದ ಬ್ರಿಟನನ್ನು ರಡಾರ್ ರಕ್ಷಿಸಿತ್ತು. ಹಾಗೆಯೇ ಭೌತಶಾಸ್ತ್ರಜ್ಞರು ಮಹಾಯುದ್ಧವನ್ನು ಮುಗಿಸಿದ ಪರಮಾಣು ಬಾಂಬನ್ನೂ ಕಂಡು ಹಿಡಿದರು. ಈ ಯುದ್ಧದ ದಿನಗಳಲ್ಲಿ ಭೌತಶಾಸ್ತ್ರಜ್ಞರಿಗೆ ಎಷ್ಟು ಬೇಡಿಕೆ ಇತ್ತೆಂದರೆ, ಮಹಿಳೆಯಾದರೂ ಮರಿಯಾಗೂ ಒಂದು ಕೆಲಸ ಸಿಕ್ಕಿತು.

೧೯೪೫ರಲ್ಲಿ ಮರಿಯಾ ಮತ್ತು ಆಕೆಯ ಪತಿಗೆ ಶಿಕಾಗೋಗೆ ಬಂದಾಗ ಮರಿಯಾಗೆ ಮೊಟ್ಟ ಮೊದಲಿಗೆ ವಿಜ್ಞಾನ ರಂಗದಲ್ಲಿ ತೆರೆದ ಹೃದಯದ ಸ್ವಾಗತ ಸಿಕ್ಕಿತು. ಮರಿಯಾ ಚಿಕಾಗೋ ವಿಶ್ವವಿದ್ಯಾಲಯದ 'ನ್ಯೂಕ್ಲಿಯರ್ ಅಧ್ಯಯನ ಸಂಸ್ಥೆ'ಯನ್ನು ಸೇರಿ, ಎನ್ರಿಕೋ ಫರ್ಮಿಯ

ಮಾರ್ಗದರ್ಶನದಲ್ಲಿ ನ್ಯೂಕಿಯರ್ ಭೌತ ಶಾಸ್ತ್ರದಲ್ಲಿ ಆಸಕ್ತಳಾದಳು. ನಂತರ ಅರ್ಗೋನ್ ರಾಷ್ಟ್ರೀಯ ಪ್ರಯೋಗಶಾಲೆಯಲ್ಲಿ ಕೆಲಸ ಸಿಕ್ಕಿತು. ಮರಿಯಾಳ ಆಸಕ್ತಿ ಪರಮಾಣು ಬೀಜದಲ್ಲಿ ಪ್ರೋಟಾನ್‌ಗಳು, ನ್ಯೂಟ್ರಾನ್‌ಗಳು 'ಶೆಲ್ ಮಾದರಿ'ಯಲ್ಲಿ ಜೋಡಿಸಲ್ಪಟ್ಟಿವೆ ಎಂದು ಊಹಿಸಿ ಪರಮಾಣು ಬೀಜದೊಳಗಿನ ರಚನೆಗೆ 'ಮಾದರಿ'ಯನ್ನು ಮುಂದಿಟ್ಟ ಈಕೆಯ ಈ ಮಹತ್ತರದ ಅನ್ವೇಷಣೆ ಕ್ರಾಂತಿಕಾರಿಯಾಗಿತ್ತು. ಈ ಕ್ರಾಂತಿಕಾರಿ ಅನ್ವೇಷಣೆಯ ಹತ್ತು ವರ್ಷಗಳ ನಂತರ, ಐವತ್ತಮೂರು ವರ್ಷದ ವಯಸ್ಸಿನಲ್ಲಿ ಮರಿಯಾಗೆ ಸಂಬಳದ ಪ್ರೊಫೆಸರ್ ಹುದ್ದೆ ದೊರಕಿತ್ತು. ಮರಿಯಾ ೧೯೬೩ರಲ್ಲಿ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆದಳು.

## ಡರೋತಿ ಕ್ರೊಫುಟ್ ಹಾಜ್ಕಿನ್ (೧೯೧೦–೧೯೯೪)

ಅಸಾಧ್ಯವನ್ನು ಸಾಧ್ಯವಾಗಿಸುವ ಛಲದ ವಿಜ್ಞಾನಿ ಡರೋತಿ ಕ್ರೊಫುಟ್ ಹಾಜ್ಕಿನ್. ವಿಜ್ಞಾನದ ಸರಹದ್ದಿನಲ್ಲಿ ದುಡಿದ ಈ ವಿಜ್ಞಾನಿ, ಒಂದಾದ ಮೇಲೊಂದು ಮಹತ್ತರದ ಅನ್ವೇಷಣೆಗಳನ್ನು ಮಾಡಿದಳು. ವೈದ್ಯಕೀಯವಾಗಿ ಪ್ರಮುಖವಾಗಿದ್ದ ಸ್ಫಟಿಕಗಳ ಸಂಕೀರ್ಣ 'ಪರಮಾಣು ರಚನೆ'ಯನ್ನು ಕಂಡು ಹಿಡಿದಳು. ಎರಡನೇ ಮಹಾಯುದ್ಧದ ಸಮಯದಲ್ಲಿ ಪೆನ್ಸಿಲಿನ್‌ನ ರಚನೆಯನ್ನು ಕಂಡು ಹಿಡಿದಳು. ನಂತರದ ದಿನಗಳಲ್ಲಿ ಹಾನಿಕರ ರಕ್ತಹೀನತೆಯ ರೋಗ 'ಅನೀಮಿಯಾ'ವನ್ನು ವಾಸಿ ಮಾಡುವ ವಿಟಮಿನ್ ಬಿ೧೨ರ ಸಂಕೀರ್ಣ ರಚನೆಯನ್ನು ಕಂಡು ಹಿಡಿದು, ಸಿಹಿ ಮೂತ್ರ ರೋಗಿಗಳಿಗೆ ಜೀವದಾನ ಮಾಡಿದ ಇನ್ಸುಲಿನ್‌ನ ರಚನೆಯನ್ನೂ ತೆರೆದಿಟ್ಟಳು. ಇತರರು 'ಇದು ಅಸಾಧ್ಯ' ಎಂದು ಕೈಬಿಟ್ಟ ಯೋಜನೆಗಳನ್ನು ಡರೋತಿ ಎತ್ತಿಕೊಂಡಿದ್ದಳು. ಅಗಾಧ ಕಲ್ಪನೆ, ಸತತ ಶ್ರಮ, ಮಿಂಚಿದ ಪ್ರತಿಭೆಯಿಂದ ಡರೋತಿ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿದು ಸ್ಫಟಿಕಶಾಸ್ತ್ರದ (ಅಡಿಥಿಣಚಿಟಟಠಡಿಚಿಬಿಥಿ) ತಾಂತ್ರಿಕ ಸಾಮರ್ಥ್ಯವನ್ನು ಬಹಳಷ್ಟು ಹಿಗ್ಗಿಸಿ ಬೆಳೆಸಿದಳು. ಎಲ್ಲಕ್ಕಿಂತ ಮುಖ್ಯವಾಗಿ ಸ್ಫಟಿಕಶಾಸ್ತ್ರವನ್ನು ಅತ್ಯಮೂಲ್ಯವಾದ ವೈಜ್ಞಾನಿಕ ಸಲಕರಣೆಯಾಗಿ ಪರಿವರ್ತಿಸಿದಳು. ಪರಮಾಣು ರಚನೆಯ ಸಹಾಯದಿಂದ ಜೀವಶಾಸ್ತ್ರೀಯ ಕ್ರಿಯೆಯನ್ನು ವಿವರಿಸಲು, ಸಮಕಾಲೀನ ವಿಜ್ಞಾನದ ಪ್ರಮುಖ ಗುಣಲಕ್ಷಣಗಳನ್ನು ಸ್ಥಾಪಿಸಲು ಸಹಾಯ ಮಾಡಿದಳು.

ಡರೋತಿ ಅತ್ಯಂತ ತೀವ್ರತರದ ಕೀಲು ವಾತದ ಕೀಲುರಿತ ರೋಗಕ್ಕೆ ಬಲಿಯಾಗಿ ಆಕೆಯ ಕೈ ಮತ್ತು ಪಾದಗಳು ತಿರುಚಿಕೊಳ್ಳುತ್ತಾ ನಿಧಾನವಾಗಿ ಹೆಳವು ಮಾಡಿದರೂ, ದೈಹಿಕ ನೋವಿನ ನಡುವೆಯೇ ದುಡಿದಳು. ಪ್ರತಿಯೊಂದು ಪ್ರಯೋಗವನ್ನು ಅತ್ಯಂತ ನಿಖರವಾಗಿ ನಡೆಸಿದಳು. ಆಕ್ಸ್‌ಫರ್ಡ್‌ನಲ್ಲಿ ಡರೋತಿಗೆ ತನ್ನ ಸಂಶೋಧನೆಗೆ ದೊರೆತದ್ದು ನೆಲ ಮಾಳಿಗೆಯಲ್ಲಿದ್ದ ಒಂದು ಹಳೆಯ ಪ್ರಯೋಗಶಾಲೆ. ಅದರ ತುಂಬಾ ಮಧ್ಯಕಾಲೀನ ಪುರಾತತ್ವ ವಸ್ತುಗಳು, ಸರೀಸೃಪಗಳ ಅಸ್ತಿಪಂಜರಗಳು. ನೆಲದಿಂದ ಮೇಲೆ ಅಷ್ಟೆತ್ತರದಲ್ಲಿದ್ದ ಪುರಾತನ ಕಿಟಿಕಿಗಳು. ಇಂಥಾ ಕೋಣೆಯಲ್ಲಿ ಡರೋತಿ ಕೀಲುರಿತದ ಒಂದು ಕೈಯಲ್ಲಿ ತನ್ನ ಅಮೂಲ್ಯ ಸ್ಫಟಿಕಗಳನ್ನು ಹಿಡಿದು, ಇನ್ನೊಂದು ಕೈಯಲ್ಲಿ ಏಣಿಯನ್ನು ಹಿಡಿದು ಮೇಲಿನ ಕಿಟಕಿಯನ್ನು ತಲುಪಿ, ಆ ಬೆಳಕಿನಲ್ಲಿ ಸೂಕ್ಷ್ಮದರ್ಶಕದ ಅಡಿಯಲ್ಲಿ ಸ್ಫಟಿಕಗಳನ್ನು ಅಧ್ಯಯನ ಮಾಡುತ್ತಿದ್ದಳು.

ಡರೋತಿ, ಚರಿತ್ರಕಾರ ಥಾಮಸ್ ಹಾಜ್ಕಿನ್ ಅವರನ್ನು ವಿವಾಹವಾದಳು. ಮೊದಲಿನಿಂದಲೂ ಥಾಮಸ್‌ಗೆ ತಮ್ಮಿಬ್ಬರಲ್ಲಿ ಡರೋತಿ ಹೆಚ್ಚು ಪ್ರತಿಭಾವಂತಳು, ಸೃಜನಶೀಲಳು ಎಂದು ತಿಳಿದಿತ್ತು. ಆಕೆಗೆ ಸಂಪೂರ್ಣ ಸಹಕಾರ ಪ್ರೋತ್ಸಾಹ ನೀಡಿದ. ಅವರಿಗೆ ಮೂರು ಜನ ಮಕ್ಕಳು. ಡರೋತಿ ಸಂಶೋಧನೆಯಲ್ಲಿ ಮುಳುಗಿ ಸಂಜೆ ಪ್ರಯೋಗಶಾಲೆಗೆ ಹೋದಾಗ, ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಥಾಮಸ್ ವಹಿಸುತ್ತಿದ್ದ. ತನ್ನ ಉದ್ಯೋಗ, ಸಂಶೋಧನೆ, ಮದುವೆ, ಮನೆ, ಮಕ್ಕಳನ್ನು ನಿಭಾಯಿಸುವುದು ಡರೋತಿಗೆ ಕಷ್ಟವೆನಿಸಲಿಲ್ಲ.

೧೯೪೦. ಬ್ರಿಟನ್ ಯುದ್ಧದ ನಡುವಿತ್ತು. ಪೆನ್ಸಿಲಿನ್ ಕಂಡು ಹಿಡಿಯುವ ಮೊದಲು ಒಂದು ಗುಲಾಬಿಯ ಮುಳ್ಳು ಗೀಚಿದ್ದೂ ಕೂಡ ಜೀವಕ್ಕೆ ಅಪಾಯಕಾರಿಯಾಗಬಹುದಿತ್ತು. ಇದೀಗ ಯುದ್ಧದ ಸಮಯದಲ್ಲಿ ಲಕ್ಷಾಂತರ ಜನ ಗಾಯಗೊಳ್ಳುವ ಸಾಧ್ಯತೆ ಇದ್ದ ಕಾರಣ, ಬ್ಯಾಕ್ಟೀರಿಯಾದ ಸೋಂಕು ತಡೆಗಟ್ಟಬಲ್ಲ ಔಷಧಿಯ ತೀವ್ರ ಅಗತ್ಯವಿತ್ತು. ಪೆನ್ಸಿಲಿನ್‌ನ ಅಣುರಚನೆಯನ್ನು ಕಂಡು ಹಿಡಿದರೆ, ಅದನ್ನು ಸುಲಭವಾಗಿ ದೊಡ್ಡ ಪ್ರಮಾಣದಲ್ಲಿ ತಯಾರಿಸಬಹುದು ಎಂಬುದು ಆಕೆಯ ಉದ್ದೇಶವಾಗಿತ್ತು. ಅತ್ಯಂತ ಜಟಿಲವಾಗಿ, ಬಿಡಿಸಲಾಗದ ಒಗಟಿನಂತಿದ್ದ ಪೆನ್ಸಿಲಿನ್ ಅಣುರಚನೆಯನ್ನು ಕಂಡು ಹಿಡಿದಳು.

ದೇಹದಲ್ಲಿ ಕೆಂಪು ರಕ್ತಕಣಗಳನ್ನು ತಯಾರಿಸಲು ಬೇಕಾದ ವಿಟಮಿನ್ ಬಿ೧೨ ದೊರೆಯದ ಜನ, ಹಾನಿಕಾರ ರಕ್ತಹೀನತೆಯಿಂದ ಸಾಯುತ್ತಾರೆ. ಆದರೆ ಬಿ೧೨ ರಚನೆ ವಿಪರೀತ ಸಂಕೀರ್ಣದ್ದು; ಇದರ ಸಂಪೂರ್ಣ ರಚನೆ ತಿಳಿದು ಬಂದರೆ, ಈ ಜೀವ ಉಳಿಸುವ ವಿಟಮಿನ್ ಅನ್ನು ಅಗಾಧ ಪ್ರಮಾಣದಲ್ಲಿ ತಯಾರಿಸಬಹುದಿತ್ತು. ನೂರಾರು ಪರಮಾಣುಗಳಿರುವ ವಿಟಮಿನ್ ರಚನೆಯನ್ನು ಕಂಡು ಹಿಡಿಯುವುದು ಸುಲಭದ ಮಾತಾಗಿರಲಿಲ್ಲ. ಡರೋತಿಯ ಸೂಕ್ಷ್ಮ ಅರಿವು, ಒಳನೋಟ, ಮೂರು ಆಯಾಮಗಳಲ್ಲಿ ಪರಮಾಣುಗಳ ಜೋಡಣೆಯನ್ನು ಊಹಿಸುವಲ್ಲಿದ್ದ ಅಗಾಧ ಕಲ್ಪನೆ ಅಷ್ಟೇ ಮುಖ್ಯವಾದ ಆಕೆಯ ಗಣಿತದ ಮೇಲಿನ ಹಿಡಿತ, ಆಕೆಯ ಈ ಮಹತ್ತರದ ಸಾಧನೆಗೆ ಕಾರಣವಾಗಿದ್ದವು.

೧೯೬೪ರಲ್ಲಿ ಡರೋತಿಗೆ ರಸಾಯನ ಶಾಸ್ತ್ರದ ನೊಬೆಲ್ ಪ್ರಶಸ್ತಿ ದೊರೆಯಿತು. ಇದೀಗ ಡರೋತಿ ತನ್ನ ಸಂಶೋಧನೆಯ ಬದುಕಿನ ಅತ್ಯಂತ ಕಠಿಣ ಸಂಶೋಧನೆಯಾದ ಇನ್ಸುಲಿನ್ ೭೭೭ ಪರಮಾಣುಗಳೊಡನೆ ದುಡಿಯುತ್ತಿದ್ದಳು. ಇನ್ಸುಲಿನ್ ರಚನೆ ಅದೆಷ್ಟು ಸಂಕೀರ್ಣ ಮತ್ತು ಅನಿಯಮಿತವಿತ್ತು ಎಂದರೆ ಅದನ್ನು ಕಂಡು ಹಿಡಿಯುವುದು ಸುಲಭದ್ದಾಗಿರಲಿಲ್ಲ. ೧೯೩೦ರ ದಶಕದಲ್ಲಿಯೇ ಆರಂಭಿಸಿದ ಇನ್ಸುಲಿನ್ ಕುರಿತ ಶೋಧನೆ ಕಡೆಗೂ ಮುಗಿದು ೧೯೬೯ರಲ್ಲಿ ಡರೋತಿ ಇನ್ಸುಲಿನ್ ರಚನೆ ಕಂಡು ಹಿಡಿದಳು.

೧೯೬೦ ಮತ್ತು ೭೦ರ ದಶಕದುದ್ದಕ್ಕೂ ಡರೋತಿ ಶಾಂತಿ ಸಂಸ್ಥೆಗಳಲ್ಲಿ ಕೆಲಸ ಮಾಡಿದಳು. 'ಅಸ್ತ್ರಗಳ ನಿಷೇಧ ಮತ್ತು ವಿಶ್ವಶಾಂತಿ ನಮ್ಮ ಮೊದಲ ಆದ್ಯತೆಯಾಗಬೇಕು' ಎಂದು ಡರೋತಿ ನಂಬಿದ್ದಳು. ಕೀಲುರಿತ್ ವ್ಯಾಧಿಯಿಂದ ಹೆಳವಳಾಗಿ ಗಾಲಿ ಕುರ್ಚಿಗೆ ಅಂಟಿದರೂ ಬದುಕಿನ ಕೊನೆಯವರೆಗೂ ವೈಜ್ಞಾನಿಕ ಹಾಗೂ ಶಾಂತಿ ಸಭೆಗಳಿಗೆ ದೇಶ ವಿದೇಶಗಳಿಗೆ ಪ್ರವಾಸ ಮಾಡಿ ಭಾಗವಹಿಸಿದಳು.

❑

# ಮಾದರಿ ಪ್ರಶ್ನೆಪತ್ರಿಕೆ
# ಸ್ವರೂಪ

## ಭಾಗ – ೧

1. ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ 1x12=12
   (ಪ್ರತಿ ಭಾಗದಿಂದ 3 ಪ್ರಶ್ನೆಗಳು; ಎಲ್ಲ ಪ್ರಶ್ನೆಗಳಿಗೂ ಪೂರ್ಣ ವಾಕ್ಯದಲ್ಲಿ ಉತ್ತರ ಕಡ್ಡಾಯ)
2. ಗ್ರಹಿಸಿ – ಉತ್ತರಿಸಿ.
   ಓದು ಪಠ್ಯ ಆಧರಿಸಿದ ಭಾಗ ಮತ್ತು 5 ಪ್ರಶ್ನೆಗಳು 5x2=10

## ಭಾಗ–೨

1. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.
   (3 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರಿಸಬೇಕು) 2x3=6

   ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.
   (2 ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಬೇಕು) 1x6=6
2. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.
   (3 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರಿಸಬೇಕು) 2x3=6

   ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.
   (2 ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಬೇಕು) 1x6=6
3. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.
   (3 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರಿಸಬೇಕು) 2x3=6

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.

(2 ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಬೇಕು) 1x6=6

4. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ.

(3 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರಿಸಬೇಕು) 2x3=6

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ.

(2 ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಬರೆಯಬೇಕು) 1x6=6

# ಮಾದರಿ ಪ್ರಶ್ನೆಪತ್ರಿಕೆ

# ಬಿ.ಎಸ್ಸಿ. ೨ನೇ ಸೆಮೆಸ್ಟರ್

**ಅವಧಿ: 3 ಗಂಟೆಗಳು** **ಅಂಕಗಳು: 70**

## ಭಾಗ – ೧

1. ಒಂದು ವಾಕ್ಯದಲ್ಲಿ ಉತ್ತರಿಸಿ. 1x12=12

1) ಪಾಪಸ್ಸಿನ ಕಳ್ಳಿ ಹೇಗೆ ಕಾಣುತ್ತಿತ್ತು?
2) ನಿರೂಪಕಿ ಪ್ರೀತಿಯಿಂದ ನೆಟ್ಟು ಬೆಳೆಸಿದ ಗಿಡ ಯಾವುದು?
3) ಅಬ್ದುಲ್ ಕಲಾಂ ಪ್ರಕಾರ ಕನಸು ಎಂದರೆ ಯಾವುದು?
4)
5)
6)
7)
8)
9)
10)
11) ಮನುಷ್ಯ ಯಂತ್ರಗಳಿಲ್ಲದೆ ಬಾಳಬಹುದೇ?
12) ಪ್ರಾಚೀನ ಜ್ಯೋತಿಷ್ಯದ ಉಗಮವು ಯಾವುದರಲ್ಲಿದೆ?

2. ಗ್ರಹಿಸಿ – ಉತ್ತರಿಸಿ. 5x2=10

ಓದು ಪಠ್ಯ ಆಧರಿಸಿದ ಭಾಗ

1)
2)
3)
4)
5)

## ಭಾಗ–೨

1. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 2x3=6

1) ಕಲ್ಕಿ ಸೃಷ್ಟಿಸಿದ ಭೀಕರತೆ ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ?

2) ಜ್ಞಾಪಕಶಕ್ತಿಯನ್ನು ಕುರಿತು ನಿರೂಪಕಿ ಪಡುವ ಅಭಿಪ್ರಾಯಗಳಾವುವು?

3) ಆರೋಗ್ಯವಂತರಾಗಿರಲು ಕಲಾಂ ನೀಡುವ ಸಲಹೆಗಳಾವುವು?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. 1x6=6

1) ಪ್ರೇಮ ಮತತು ವಿವಾಹಕ್ಕೆ ಸಂಬಂಧಿಸಿದ ನಿರೂಪಕಿಯ ಗೊಂದಲಗಳನ್ನು ವಿವರಿಸಿ.

2) ಕಲಾಂ ಹೇಳುವ ಕನಸುಗಳ ಸ್ವರೂಪವನ್ನು ವಿವರಿಸಿ.

2. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 2x3=6

1)

2)

3)

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. 1x6=6

1)

2)

3. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 2x3=6

1)

2)

3)

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. 1x6=6

1)

2)

4. ಅ) ಕೆಳಗಿನವುಗಳಲ್ಲಿ ಯಾವುದೇ 2 ಪ್ರಶ್ನೆಗಳಿಗೆ ಐವತ್ತು ಪದಗಳಿಗೆ ಮೀರದಂತೆ ಉತ್ತರ ಬರೆಯಿರಿ. 2x3=6

1) ಕವಿಯ ಆಶೆ ಕನಸುಗಳಾವುವು?

2) ಯಂತ್ರಗಳನ್ನು ಕಳಚುವುದು ಹೇಗೆ?

3) ಜಾತಕ ಸಂಬಂಧಿ ವಿವಾಹಗಳ ಬಗ್ಗೆ ಎಚ್ಚೆಸ್ ಅಭಿಪ್ರಾಯವೇನು?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. 1x6=6

1) ಯಂತ್ರಗಳ ಅವಲಂಬನೆ ಉಚಿತವೇ? ಚರ್ಚಿಸಿ.
2) ಜ್ಯೋತಿಷಿಗಳ ಭವಿಷ್ಯವಾಣಿ ಕುರಿತು ನಿರೂಪಕರ ಅಭಿಪ್ರಾಯವನ್ನು ವಿವರಿಸಿ.

# ಮಾದರಿ ಪ್ರಶ್ನೆಪತ್ರಿಕೆ

# ಬಿ.ಎಸ್ಸಿ. ೨ನೇ ಸೆಮೆಸ್ಟರ್

**ಅವಧಿ: 3 ಗಂಟೆಗಳು** **ಅಂಕಗಳು: 70**

## ಭಾಗ – ೧

1. ಒಂದು ವಾಕ್ಯದಲ್ಲಿ ಉತ್ತರಿಸಿ. 1x12=12
   1) ನನ್ನ ಚತುರಂಗ ಬಲದ ಬಲುಹನ್ನು ನರರಲ್ಲಿ ಯಾರು ತಾಳಲು ಸಮರ್ಥರು ಎಂದವರು ಯಾರು?
   2) ಧರ್ಮಯುದ್ಧವೇ ಜರುಗಲಿ ಎಂದವರು ಯಾರು?
   3) ಭರತ–ಬಾಹುಬಲಿಗಳ ದೃಷ್ಟಯುದ್ಧ ಗೆದ್ದವರು ಯಾರು?
   4) ಬಾಹುಬಲಿಯು ಭರತನನ್ನು ಮೆಲ್ಲಗೆ ನೆಲದ ಮೇಲಿಳಿಸಲು ಕಾರಣವೇನು?
   5) ವಿಶ್ವಸಂಸ್ಥೆ ಕರೆ ನೀಡಿದ ಅಂತರಾಷ್ಟ್ರೀಯ ಶಾಂತಿ ವರ್ಷ ಯಾವುದು?
   6) ಜೀವನಾವಶ್ಯಕ ವಸ್ತುಗಳು ಯಾವುವು?
   7) ಅಳಿದುಳಿದ ಜನಸಮುದಾಯ ಶಿಲಾಯುಗಕ್ಕೆ ಮರಳುವುದು ಯಾವಾಗ?
   8) ತನ್ನ ತೋಳತೀಟೆಯನ್ನು ಕಳೆದುಕೊಳ್ಳಲು ಕಾರಣವಾಯಿತೆಂದು ಭಾವಿಸಿದವನು ಯಾರು?
   9) ಮನೋಬಲ ಭುಜಬಲ ವಿದ್ಯಾಬಲಗಳನ್ನು ಮೆರೆದ ಪರಾಕ್ರಮಿಗಳ ಸ್ಥಿತಿ ಏನಾಯಿತು?
   10) ತ್ರೈಲೋಕ್ಯ ಕಂಟಕವೆಂಬ ತನ್ನ ಭಾರಿ ಆನೆಯನ್ನೇರಿ ಬಂದವನು ಯಾರು?
   11) ಮಾಯಾಯುಧ ಹಾಗೂ ದಿವ್ಯಾಯುಧ ಪ್ರಯೋಗದಲ್ಲಿ ತೊಡಗಿದ ಇಬ್ಬರು ಕಲಿಗಳು ಯಾರ್ಯಾರು?
   12)

2. ಗ್ರಹಿಸಿ – ಉತ್ತರಿಸಿ. 5x2=10

   ಓದು ಪಠ್ಯ ಆಧರಿಸಿದ ಭಾಗ
   1)
   2)
   3)
   4)